ಭಾನುವಾರ, ಮೇ 23, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 143 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ನಮ್ಮ ಬದುಕು ಉಳಿದರೆ ಸಾಕು, ನಮ್ಮ ನೋವಷ್ಟೇ ದೊಡ್ಡದು ಎಂದು ತಳಮಳಿಸುವ ಪ್ರವೃತ್ತಿ ಹೆಚ್ಚುತ್ತಿರುವ ಸಾಂಕ್ರಾಮಿಕದ ಈ ಕಾಲಘಟ್ಟದಲ್ಲಿ ಮಹತ್ವದ ಸಾಹಿತ್ಯ ಕೃತಿಗಳ ಮರುಚಿಂತನೆ ನಮಗೆ ಹೇಳುವ ಪಾಠವಾದರೂ ಯಾವುದನ್ನು?



ನೇಪಾಳ ಸಂಸತ್ ವಿಸರ್ಜನೆ 7

24ರಿಂದ 2 ದಿನ ಈಶ್ವರಪ್ಪ ವಿಡಿಯೊ ಸಂವಾದ

ಕೇರಳ: ಶೈಲಜಾ ಟೀಚರ್ ಕೈಬಿಟ್ಟದ್ದು ಸರಿಯೆ? 7

ಹಳ್ಳಿಗಳಲ್ಲೂ ಕೋವಿಡ್: ತುರ್ತು ಕ್ರಮಕ್ಕೆ ಸಭೆ 4

ಆರೋಗ್ಯ ಕೇಂದ್ರಗಳು ಬಲು ದೂರ • ಹಲವೆಡೆ ಸಿಬ್ಬಂದಿ ಕೊರತೆ • ಸಾರಿಗೆ ಸಮಸ್ಯೆ

ಗ್ರಾಮೀಣರಿಗೆ ಸಿಗದ ಆರೋಗ್ಯ ಭಾಗ್ಯ

• ಶಶಿಕಾಂತ ಎಸ್. ಶೆಂಬೆಳ್ಳಿ / ಎಂ. ಮಹೇಶ

ವಿಜಯನಗರ/ ಬೆಳಗಾವಿ: 'ನಮ್ಮ ಊರು ಸುತ್ತ ಯಾವುದೇ ದವಾಖಾನಿ ಇಲ್ರಿ. ಏನೇ ತುರ್ತು ಇದ್ರೂ 20 ಕಿ.ಮೀ ದೂರದಾಗ ಇರುವ ಹೊಳಲು ಹೋಬಳಿಗೆ ಹೋಗಬೇಕ್ರಿ. ಅಲ್ಲೂ ಡಾಕ್ಟರ್ ಸಿಗ್ತಾರ ಅನ್ನೋ ಖಾತ್ರಿ ಇಲ್ಲ. ಇದ್ರೂ ಚಿಕಿತ್ಸೆ ಸಿಗೋದ ಅನುಮಾನ. ಹಂಗಾಗಿ ಬೇರೆ ಊರಿನ ದೊಡ್ಡ ಖಾಸಗಿ ಆಸ್ಪತ್ರೆಗೆ ಹೋಗ್ತಾರ್ರಿ'

ಇದು ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಅಂಚಿನಲ್ಲಿರುವ ಹರವಿ ಗ್ರಾಮದ ಬಸವರಾಜ ಅವರ ಮಾತು.

ಹೂವಿನಹಡಗಲಿ ತಾಲ್ಲೂಕೊಂದೇ ಅಲ್ಲ, ಇದು ರಾಜ್ಯದ ನೂರಾರು ಹಳ್ಳಿಗಳಲ್ಲಿ ಇರುವಂತಹ ಸ್ಥಿತಿಯ ಚಿತ್ರಣದ ಒಂದು ಉದಾಹರಣೆಯಷ್ಟೆ. ಗ್ರಾಮೀಣ ಜನರಿಗೆ ಸಮರ್ಪಕ ಆರೋಗ್ಯ ಸೇವೆಯು ಮರೀಚಿಕೆಯಾಗಿಯೇ ಉಳಿದಿರುವುದನ್ನು ಇಂತಹ ಹಳ್ಳಿಗಳಲ್ಲಿನ ಸ್ಥಿತಿಯು ಸಾರಿ ಹೇಳುತ್ತಿದೆ.

ಅವಳಿ ಜಿಲ್ಲೆಗಳಾದ ಬಳ್ಳಾರಿ–ವಿಜಯನಗರ, ಹಾವೇರಿ–ಗದಗ ಜಿಲ್ಲೆಗಳಲ್ಲೂ ಇಂತಹುದೇ ಸಮಸ್ಯೆ ಇದೆ. ಉತ್ತಮ ಚಿಕಿತ್ಸಾ ಸೌಲಭ್ಯ ಸಿಗದ ಕಾರಣ ಈ ಜಿಲ್ಲೆಯವರು ದಾವಣಗೆರೆ, ಹುಬ್ಬಳ್ಳಿ, ಬೆಂಗಳೂರಿಗೆ ಹೋಗಿ ಚಿಕಿತ್ಸೆ ಪಡೆದುಕೊಳ್ಳುವ ಅನಿವಾರ್ಯ ಇದೆ.

ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಹಳ್ಳಿ ಕೊಟ್ಟಲಗಿಯ ಸ್ಥಿತಿ ನೋಡಿ, ಅಲ್ಲಿನ ಜನರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗಬೇಕೆಂದರೆ 20 ಕಿ.ಮೀ. ಪ್ರಯಾಣಿಸಬೇಕು. ಕೋವಿಡ್ ಲಾಕ್‌ಡೌನ್ ಕಾರಣದಿಂದ ಸಾರಿಗೆ ವ್ಯವಸ್ಥೆ ಇಲ್ಲ. ದ್ವಿಚಕ್ರವಾಹನದಲ್ಲಿ ಹೋಗಲು ಪೊಲೀಸರ ಭಯ.

ಪ್ರಾಥಮಿಕ ಆರೋಗ್ಯ ಕೇಂದ್ರ ತಲುಪಲು ಅವರು ಪಡುವ ಪಡಿಪಾಟಲು ಒಂದೆರಡಲ್ಲ. ಸ್ವಂತ ವಾಹನ ಇಲ್ಲದವರು ಪರರ ಸಹಾಯ ಪಡೆಯಬೇಕು. ಲಾಕ್‌ಡೌನ್ ಇಲ್ಲದ ಸಾಮಾನ್ಯ ದಿನಗಳಲ್ಲೂ ಯಾವಾಗಲೋ ಒಮ್ಮೆ ಬರುವ ಬಸ್ ಹಿಡಿದು ಆಸ್ಪತ್ರೆ ತಲುಪಬೇಕು. ಹೇಗೋ ಬಂದು ಸೇರಿದರೆ, ಸಿಬ್ಬಂದಿ ಕೊರತೆ. ಪರಿಣಾಮ ತಕ್ಷಣಕ್ಕೆ ಚಿಕಿತ್ಸೆ ದೊರೆಯುವುದಿಲ್ಲ. ಸಾಮಾನ್ಯ ಚಿಕಿತ್ಸೆಯಷ್ಟೇ ಅಲ್ಲಿ ಲಭ್ಯ.

6ನೇ ಪುಟ ನೋಡಿ

ಒಳನೋಟ

ಮರೀಚಿಕೆಯಾದ ಆರೋಗ್ಯ ಸೇವೆ

ಪ್ರತಿಕ್ರಿಯಿಸಿ: 9606038256
feedback@prajavani.co.in



ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳ ಮೇಲೆ ಒತ್ತಡ ಹೆಚ್ಚುತ್ತಿರುವುದು ನಿಜ. ಈ ಸವಾಲು ಎದುರಿಸಲು ಗ್ರಾಮೀಣ ಪ್ರದೇಶದ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ತೀರ್ಮಾನಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲೂ ಆಮ್ಲಜನಕ ಸಹಿತ ಐಸಿಯು ಹಾಸಿಗೆ ಒದಗಿಸಲಾಗುವುದು

ಡಾ.ಸಿ.ಎನ್. ಅಶ್ವತ್ಥನಾರಾಯಣ, ಉಪ ಮುಖ್ಯಮಂತ್ರಿ ಹಾಗೂ ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷ



ಮೊದಲ ಹಂತದಲ್ಲಿ ಕೋವಿಡ್ ಲಸಿಕೆ ಕುರಿತು ಅಪಪ್ರಚಾರ, ಅನುಮಾನ ಇದ್ದುದು ನಿಜ. ಎರಡನೇ ಅಲೆಯ ಬಳಿಕ ಹೆಚ್ಚಿನ ಜನರು ಲಸಿಕೆ ಪಡೆಯುತ್ತಿದ್ದಾರೆ. ರಾಜ್ಯದಲ್ಲಿ ಈವರೆಗೆ 1.15 ಕೋಟಿ ಡೋಸ್ ಲಸಿಕೆ ನೀಡಲಾಗಿದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಾರ್ಯಪಡೆ ರಚಿಸಿದ್ದು ಅವುಗಳಿಗೆ, ಗ್ರಾಮೀಣ ಪ್ರದೇಶದಲ್ಲಿ ಪರೀಕ್ಷೆ, ಕೋವಿಡ್ ರೋಗಿಗಳ ಚಿಕಿತ್ಸೆಯ ಜವಾಬ್ದಾರಿ ನೀಡಲಾಗಿದೆ.

ಡಾ. ಕೆ. ಸುಧಾಕರ್, ಆರೋಗ್ಯ ಸಚಿವ

ಇನ್ನಷ್ಟು ಸುದ್ದಿಗಳು 6



ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಕಕಮರಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರ –ಪ್ರಜಾವಾಣಿ ಚಿತ್ರ

ಯುದ್ಧ ಕಾಲದಲ್ಲಿ ಸಿದ್ಧತೆ ಆರಂಭ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ದೊಡ್ಡ ಆಸ್ಪತ್ರೆಗಳ ಮೇಲಿನ ಒತ್ತಡ ತಗ್ಗಿಸಲು ಎಲ್ಲ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳನ್ನು ಕೋವಿಡ್ ಆಸ್ಪತ್ರೆಗಳನ್ನಾಗಿ ಪರಿವರ್ತಿಸುವಂತೆ ಪ್ರಧಾನಿ ನರೇಂದ್ರ ಮೋದಿ ನಿರ್ದೇಶನ ನೀಡಿದ್ದಾರೆ. ಆದರೆ, ರಾಜ್ಯದಲ್ಲಿ ವೈದ್ಯರು, ಸಿಬ್ಬಂದಿ, ಉಪಕರಣಗಳ ಕೊರತೆಯಿಂದ ಬಳಲುತ್ತಿರುವ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳ ಬಲವರ್ಧನೆಗೆ ಸರ್ಕಾರ ನಡೆಸಿರುವ ಪ್ರಯತ್ನ 'ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸ' ಎಂಬಂತಾಗಿದೆ.

ರಾಜ್ಯದ ಎಲ್ಲ ದೊಡ್ಡ ಸರ್ಕಾರಿ ಆಸ್ಪತ್ರೆಗಳು, ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಮಟ್ಟದ ಆಸ್ಪತ್ರೆಗಳು ಕೋವಿಡ್ ರೋಗಿಗಳಿಂದ ತುಂಬಿ ತುಳುಕುತ್ತಿವೆ. ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನೂ ಕೋವಿಡ್ ಆಸ್ಪತ್ರೆಗಳನ್ನಾಗಿ ಪರಿವರ್ತಿಸಿ, ಅವುಗಳ ಅಧೀನದಲ್ಲಿ ಕೋವಿಡ್ ಆರೈಕೆ ಕೇಂದ್ರಗಳನ್ನೂ ತೆರೆಯುವಂತೆ ಕೇಂದ್ರ ಸರ್ಕಾರ ಮಾರ್ಗಸೂಚಿ ಹೊರಡಿಸಿದೆ.

ರಾಜ್ಯದಲ್ಲಿ 204 ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು 2,508 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಈ ಪೈಕಿ ಕೋವಿಡ್ ರೋಗಿಗಳ ಸಂಖ್ಯೆ ಹೆಚ್ಚುತ್ತಿರುವ ಕೆಲವು ಕಡೆಗಳಲ್ಲಿ ಸಮುದಾಯ ಆರೋಗ್ಯ ಕೇಂದ್ರಗಳನ್ನೂ ಕೋವಿಡ್ ಆಸ್ಪತ್ರೆಗಳನ್ನಾಗಿ ಪರಿವರ್ತಿಸಲಾಗಿದೆ. ಹಲವು ಕಡೆಗಳಲ್ಲಿ ಈ ಪ್ರಕ್ರಿಯೆ ಈಗಷ್ಟೇ ಆರಂಭವಾಗಿದೆ.

6ನೇ ಪುಟ ನೋಡಿ

ಕಪ್ಪು ಶಿಲೀಂಧ್ರ ಸೋಂಕು ಚಿಕಿತ್ಸೆಗೆ ಹತ್ತು ತೊಡಕು

ಚಿಕಿತ್ಸೆ ಸಿಗದೇ ರೋಗಿಗಳ ಅಲೆದಾಟ: ಸಂಬಂಧಿಕರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಪ್ಪು ಶಿಲೀಂಧ್ರ (ಮ್ಯೂಕರ್‌ಮೈಕೊಸಿಸ್) ಸೋಂಕಿತರ ಸಂಖ್ಯೆ ಹೆಚ್ಚುತ್ತಿದ್ದು, ಚಿಕಿತ್ಸೆಗಾಗಿ ರೋಗಿಗಳು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನೊಂದೆಡೆ ಅಗತ್ಯದಷ್ಟು ಔಷಧ ಪೂರೈಕೆ ಆಗದಿರುವುದರಿಂದ ಖಾಸಗಿ ಆಸ್ಪತ್ರೆಗಳು ರೋಗಿಗಳನ್ನು ದಾಖಲಿಸಿಕೊಳ್ಳಲು ಹಿಂದೇಟು ಹಾಕುತ್ತಿವೆ.

ಕೋವಿಡ್ ಎರಡನೇ ಅಲೆಯಲ್ಲಿ ರೋಗಿಗಳ ಏರಿಕೆ ಕಂಡ ಬಳಿಕ ಆಸ್ಪತ್ರೆಗಳಲ್ಲಿ ಐಸಿಯು ಹಾಗೂ ಆಮ್ಲಜನಕ ಸೌಲಭ್ಯ ಇರುವ ಹಾಸಿಗೆಗಳ ಕೊರತೆ ಎದುರಾಗಿ, ರೋಗಿಗಳು ಪರದಾಟ ಮುಂದುವರಿದಿದೆ. ಹಾಸಿಗೆ ಸಿಗದೇ ಕೆಲವರು ಮಾರ್ಗಮಧ್ಯದಲ್ಲಿಯೇ ಕೊನೆಯುಸಿರೆಳೆದಿದ್ದಾರೆ. ಈ ಅನಾಹುತಗಳಿಂದ ಪಾರಾಗಿ ಕೋವಿಡ್ ಗೆದ್ದು ಬಂದ ಕೆಲವರ ಮೇಲೆ ಕಪ್ಪು ಶಿಲೀಂಧ್ರ ಸೋಂಕು ಆಕ್ರಮಣ ಮಾಡುತ್ತಿರುವುದು ಆತಂಕಕ್ಕೆ ಕಾರಣವಾಗಿದೆ.

ರೋಗನಿರೋಧಕ ಶಕ್ತಿ ಕಡಿಮೆ ಇರುವವರಲ್ಲಿ ಕಾಣಿಸಿಕೊಳ್ಳುವ ಈ ಸೋಂಕು, ಮೂಗಿನಲ್ಲಿ ಉತ್ಪತ್ತಿಯಾಗಿ ಕಣ್ಣು ಹಾಗೂ ಮಿದುಳಿಗೆ ಹರಡುತ್ತಿದೆ. ಚಿಕಿತ್ಸೆ ವಿಳಂಬವಾದಲ್ಲಿ ಸೋಂಕು ಮಿದುಳನ್ನು ವ್ಯಾಪಿಸಿಕೊಂಡು, ವ್ಯಕ್ತಿಯ ಜೀವವನ್ನು ಕಸಿದುಕೊಳ್ಳುತ್ತದೆ.

ರಾಜ್ಯದ ವಿವಿಧ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ 200ಕ್ಕೂ ಅಧಿಕ ಮಂದಿ ಈ ಸೋಂಕಿಗೆ ಒಳಗಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. 20ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದು, ಹಲವರು ದೃಷ್ಟಿ ಕಳೆದುಕೊಂಡಿದ್ದಾರೆ. ರಾಜ್ಯದಲ್ಲಿ 400ಕ್ಕೂ ಅಧಿಕ ಪ್ರಕರಣಗಳು ವರದಿಯಾಗಿವೆ. ಈ ಪ್ರಕರಣಗಳು ವರದಿಯಾದ ಬಳಿಕ ಸರ್ಕಾರಕ್ಕೆ ಮಾಹಿತಿ ಒದಗಿಸಬೇಕೆಂದು ಸೂಚಿಸಲಾಗಿದ್ದರೂ ಖಾಸಗಿ ಆಸ್ಪತ್ರೆಗಳು ವಿವರ ಸಲ್ಲಿಸುತ್ತಿಲ್ಲ. ಇದರಿಂದಾಗಿ ಕ್ರೋಡಿಕೃತ ಮಾಹಿತಿ ಸಂಗ್ರಹ ಪ್ರಕ್ರಿಯೆ ನಡೆಯುತ್ತಿಲ್ಲ. ಈವರೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿಯೇ 250ಕ್ಕೂ ಅಧಿಕ ಪ್ರಕರಣಗಳು ವರದಿಯಾಗಿವೆ.

ಹಾಸಿಗೆ ಸಮಸ್ಯೆ: ಕೋವಿಡ್‌ನಿಂದ ಚೇತರಿಸಿಕೊಂಡು ಶಿಲೀಂಧ್ರ ಸೋಂಕಿಗೆ ಒಳಗಾದವರಿಗೆ ಚಿಕಿತ್ಸೆ ಒದಗಿಸಲು ಸರ್ಕಾರಿ ವ್ಯವಸ್ಥೆಯಡಿ ಬೌರಿಂಗ್ ಆಸ್ಪತ್ರೆ, ಮೈಸೂರು ವೈದ್ಯಕೀಯ ಕಾಲೇಜು, ಶಿವಮೊಗ್ಗ ವೈದ್ಯಕೀಯ ಕಾಲೇಜು, ಕಲಬುರ್ಗಿಯ ಜಿಮ್ಸ್, ಹುಬ್ಬಳ್ಳಿಯ ಕಿಮ್ಸ್, ಮಂಗಳೂರಿನ ವೆನ್ಲಾಕ್, ಉಡುಪಿಯ ಕೆಎಂಸಿ ಆಸ್ಪತ್ರೆಯನ್ನು ಗುರುತಿಸಲಾಗಿದೆ. ಜಿಲ್ಲಾ ಆಸ್ಪತ್ರೆಗಳಲ್ಲಿ ಕೂಡ ದಾಖಲಿಸಿಕೊಳ್ಳಲಾಗುತ್ತಿದೆ. ಆದರೆ, ಸೋಂಕಿಗೆ ಒಳಗಾಗುವವರ ಸಂಖ್ಯೆ ಹೆಚ್ಚಳವಾದ ಪರಿಣಾಮ ಹಾಸಿಗೆಗಳ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿದೆ.

5ನೇ ಪುಟ ನೋಡಿ

ಸರ್ಕಾರಿ ಆಸ್ಪತ್ರೆಗಳಲ್ಲೂ ಔಷಧ ಅಭಾವ

'ಲಿಪೋಸೋಮಲ್ ಆಂಫೊಟೆರಿಸಿನ್ ಬಿ' ಔಷಧವು ವ್ಯಕ್ತಿಯೊಬ್ಬನಿಗೆ ಒಂದು ದಿನಕ್ಕೆ ನಾಲ್ಕು ಸೀಸೆಗಳು ಬೇಕಾಗುತ್ತವೆ. ಇದನ್ನು ಕನಿಷ್ಠ 15 ದಿನ ನೀಡಬೇಕಾಗುತ್ತದೆ. ಒಂದು ಸೀಸೆಗೆ ₹ 5 ಸಾವಿರದಿಂದ ₹ 7 ಸಾವಿರ ದರ ಇದೆ. ಹೀಗಾಗಿ, 'ರೆಮ್‌ಡಿಸಿವಿರ್' ಔಷಧದಂತೆಯೇ ಇದನ್ನೂ ಕೂಡ ಸರ್ಕಾರವು ರೋಗಿಗಳ ಅಗತ್ಯಕ್ಕೆ ಅನುಸಾರ ಹಂಚಿಕೆ ಮಾಡಬೇಕು ಎಂದು ಖಾಸಗಿ ಆಸ್ಪತ್ರೆಗಳು ಆಗ್ರಹಿಸುತ್ತಿವೆ. ಆದರೆ, ಈಗ ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಅಭಾವ ಸೃಷ್ಟಿಯಾಗಿದೆ. ಇದೇ ಕಾರಣಕ್ಕೆ ಕೆಲ ಖಾಸಗಿ ಆಸ್ಪತ್ರೆಗಳು ಹೊಸ ದಾಖಲಾತಿಯನ್ನು ನಿರಾಕರಿಸಲಾರಂಭಿಸಿವೆ.

'ರೋಗಿಗಳ ಸಂಖ್ಯೆ ಹೆಚ್ಚಳವಾದ ಪರಿಣಾಮ ಔಷಧದ ಕೊರತೆ ಎದುರಾಗಿದೆ. ಸದ್ಯ ಇರುವುದರಲ್ಲಿಯೇ ನಿರ್ವಹಿಸಲಾಗುತ್ತಿದೆ. ಔಷಧ ಪೂರೈಕೆಯಲ್ಲಿ ವ್ಯತ್ಯಾಸವಾದಲ್ಲಿ ರೋಗಿಗಳಿಗೆ ಸಮಸ್ಯೆಯಾಗಲಿದೆ' ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಬೌರಿಂಗ್ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.

ಶಿಲೀಂಧ್ರ ಸೋಂಕಿನ ಬಗ್ಗೆ ಕೆಲವರು ವದಂತಿಗಳನ್ನು ಹರಡುತ್ತಿದ್ದಾರೆ. ಈ ಬಗ್ಗೆ ಭಯಭೀತರಾಗುವ ಅಗತ್ಯವಿಲ್ಲ. ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಸೂಚನೆ ನೀಡಲಾಗಿದೆ

ಡಾ.ಕೆ. ಸುಧಾಕರ್, ಆರೋಗ್ಯ ಸಚಿವ

ರಾಜ್ಯಕ್ಕೆ 1,270 ಆಂಫೊಟೆರಿಸಿನ್-ಬಿ ವಯಲ್ಸ್ ಹಂಚಿಕೆ

ಬೆಂಗಳೂರು: ಕಪ್ಪು ಶಿಲೀಂಧ್ರ ರೋಗದ ಚಿಕಿತ್ಸೆಗೆ ವಿವಿಧ ರಾಜ್ಯಗಳಿಗೆ ಹೆಚ್ಚುವರಿಯಾಗಿ ಒಟ್ಟು 23,680 ಅಂಫೊಟೆರಿಸಿನ್-ಬಿ ವಯಲ್ಸ್‌ಗಳನ್ನು ಕೇಂದ್ರ ಸರ್ಕಾರ ಶನಿವಾರ ಹಂಚಿಕೆ ಮಾಡಿದೆ. ಅದರಲ್ಲಿ ರಾಜ್ಯಕ್ಕೆ 1,270 ಹಂಚಿಕೆ ಮಾಡಲಾಗಿದೆ.

ವಿವಿಧ ರಾಜ್ಯಗಳಲ್ಲಿರುವ ರೋಗಿಗಳ ಸಂಖ್ಯೆ ಆಧರಿಸಿ ಈ ಹಂಚಿಕೆ ಮಾಡಲಾಗಿದೆ. ಕೇಂದ್ರ ಸರ್ಕಾರದ ಮಾಹಿತಿ ಪ್ರಕಾರ ಇಡೀ ದೇಶದಲ್ಲಿ ಸದ್ಯ ಒಟ್ಟು 8,848 ಪ್ರಕರಣಗಳಿವೆ. ರಾಜ್ಯದಲ್ಲಿ 500 ಪ್ರಕರಣಗಳ ಆಧಾರದಲ್ಲಿ 1,270 ವಯಲ್ಸ್ ಹಂಚಿಕೆ ಮಾಡಲಾಗಿದೆ.

ಕಪ್ಪು ಶಿಲೀಂಧ್ರ ಪ್ರಕರಣಗಳು ಅತೀ ಹೆಚ್ಚು ಗುಜರಾತ್‌ನಲ್ಲಿ 2,281 ಇದ್ದು, ಆ ರಾಜ್ಯಕ್ಕೆ 5,800 ವಯಲ್ಸ್ ಹಂಚಿಕೆ ಮಾಡಲಾಗಿದೆ. ಮಹಾರಾಷ್ಟ್ರದಲ್ಲಿ 2,000 (5090), ಆಂಧ್ರಪ್ರದೇಶ 910 (2,310), ಮಧ್ಯಪ್ರದೇಶ 720 (1830), ರಾಜಸ್ಥಾನ 700 (1780), ತೆಲಂಗಾಣ 350 (890), ಹರಿಯಾಣ 250 (640) ರೋಗಿಗಳು (ಆವರಣದಲ್ಲಿ ಹಂಚಿಕೆ ಮಾಡಿದ ವಯಲ್ಸ್ ಪ್ರಮಾಣ) ಇದ್ದಾರೆ. ಕರ್ನಾಟಕವೂ ಸೇರಿದಂತೆ ಈ ಎಂಟು ರಾಜ್ಯಗಳಿಗೆ ಒಟ್ಟು ಔಷಧ ಪ್ರಮಾಣದ ಶೇ 75ರಷ್ಟನ್ನು ಹಂಚಿಕೆ ಮಾಡಲಾಗಿದೆ. ಉಳಿದ ಶೇ 25ರಷ್ಟನ್ನು ರೋಗಿಗಳ ಸಂಖ್ಯೆಯನ್ನು ಪರಿಶೀಲಿಸಿದ ಬಳಿಕ ಹಂಚಿಕೆ ಮಾಡಲಾಗುವುದು ಎಂದು ತಿಳಿಸಲಾಗಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ಕೇಂದ್ರ ರಾಸಾಯನಿಕ ಸಚಿವ ಡಿ.ವಿ.ಸದಾನಂದ ಗೌಡ, 'ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಪ್ಪು ಶಿಲೀಂಧ್ರ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಬಗ್ಗೆ ಸಮಗ್ರವಾಗಿ ಪರಿಶೀಲಿಸಿದ ಬಳಿಕ ಈ ಹಂಚಿಕೆ ಮಾಡಲಾಗಿದೆ' ಎಂದು ತಿಳಿಸಿದ್ದಾರೆ.

ರಾಜ್ಯ ಕೋವಿಡ್ ಅಂಕಿ–ಅಂಶ

23,98,925 ▲	ಒಟ್ಟು ಸೋಂಕಿತರು (23,67,742 ನಿನ್ನೆಯ ವಿವರ)
4,83,204 ▼	ಸಕ್ರಿಯ ಪ್ರಕರಣಗಳು
18,91,042 ▲	ಗುಣಮುಖರಾದವರು
24,658 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	31,183	▼
ಗುಣಮುಖ	61,766	▲
ಸಾವು	451	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಒಳ ಪುಟಗಳು



ಇಂದಿನ ಪಾಡ್‌ಕಾಸ್ಟ್ ವಿಶೇಷ

ಪ್ರಜಾವಾಣಿ ಕನ್ನಡ ಧ್ವನಿ

ವೈದ್ಯ ಮಿತ್ರ ಕಥಾ ಸಾಗರ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಾಮರಾಜನಗರ ಕೋವಿಡ್ ಆಸ್ಪತ್ರೆಯಲ್ಲಿ 24 ಮಂದಿ ಸಾವಿನ ಪ್ರಕರಣ

ತಲಾ ₹ 2 ಲಕ್ಷ ಪರಿಹಾರ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜನಗರ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಮೇ 2 ಮತ್ತು 3ರಂದು ಮೃತಪಟ್ಟಿರುವ 24 ಮಂದಿಯ ಕುಟುಂಬಗಳಿಗೆ ತಲಾ ₹ 2 ಲಕ್ಷದಂತೆ ಒಟ್ಟು ₹ 48 ಲಕ್ಷ ಪರಿಹಾರವನ್ನು ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಶುಕ್ರವಾರ ಬಿಡುಗಡೆ ಮಾಡಲಾಗಿದೆ.

ಈ ಪ್ರಕರಣದಲ್ಲಿ ಹೈಕೋರ್ಟ್‌ಗೆ ನೀಡಿದ್ದ ಭರವಸೆಯಂತೆ ಪರಿಹಾರದ ಮೊತ್ತವನ್ನು ಕಂದಾಯ ಇಲಾಖೆ ಚಾಮರಾಜನಗರ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದೆ. 24 ಮಂದಿ ಮೃತರ ಸಂಪೂರ್ಣ ವಿವರಗಳನ್ನು ಚಾಮರಾಜನಗರ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದು, ಕಾನೂನುಬದ್ಧ ವಾರಸುದಾರರನ್ನು ಖಚಿತಪಡಿಸಿಕೊಂಡು ಪರಿಹಾರ ಪಾವತಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಮೃತಪಟ್ಟ ಎಲ್ಲ ವ್ಯಕ್ತಿಗಳ ಅಧಿಕೃತ ವಾರಸುದಾರರಿಗೆ ಪರಿಹಾರ ಪಾವತಿಸಿರುವ ಕುರಿತು ಹೈಕೋರ್ಟ್‌ಗೆ ಅನುಸರಣಾ ವರದಿ ಸಲ್ಲಿಸಲು ಪೂರಕವಾಗಿ ವಿವರವಾದ ಮಾಹಿತಿಯುಳ್ಳ ವರದಿಯನ್ನು ಅಡ್ವೊಕೇಟ್ ಜನರಲ್ ಕಚೇರಿಗೆ ಕಳುಹಿಸುವಂತೆ ಜಿಲ್ಲಾಧಿಕಾರಿಗೆ ಸೂಚಿಸಲಾಗಿದೆ.

ಮೇ 2 ಮತ್ತು 3ರಂದು ಚಾಮರಾಜನಗರ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ 24 ರೋಗಿಗಳು ಮೃತಪಟ್ಟಿದ್ದರು. ಆಮ್ಲಜನಕದ ಕೊರತೆ ಇದಕ್ಕೆ ಕಾರಣ ಎಂಬ ಆರೋಪವಿದೆ. ಈ ಕುರಿತು ಹೈಕೋರ್ಟ್ ವಿಚಾರಣೆ ನಡೆಸುತ್ತಿದೆ. ಮೃತರ ಕುಟುಂಬಗಳಿಗೆ ತಲಾ ₹ 2 ಲಕ್ಷ ತುರ್ತು ಪರಿಹಾರ ನೀಡುವುದಾಗಿ ರಾಜ್ಯ ಸರ್ಕಾರ ಮೇ 20ರಂದು ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿತ್ತು.

'ಮೃತ ಶಿಕ್ಷಕರ ಕುಟುಂಬಕ್ಕೆ ಪರಿಹಾರ ನೀಡಿ'

'ಕೋವಿಡ್‌ನಿಂದ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಿಕ್ಷಕರು, ನೌಕರರು ಮೃತಪಟ್ಟಿದ್ದರೆ, ಅವರ ಅವಲಂಬಿತರಿಗೆ ತಕ್ಷಣ ಪರಿಹಾರ (₹ 30 ಲಕ್ಷ ವಿಮೆ) ಮಂಜೂರು ಮಾಡಬೇಕು' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತ ವಿ. ಅನ್ಬುಕುಮಾರ್ ಅವರು ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.

'ವಿವಿಧ ಜಿಲ್ಲೆಗಳಲ್ಲಿ ಕೋವಿಡ್ ಮತ್ತು ಇತರ ಕರ್ತವ್ಯದ ಮೇಲೆ ಸಕ್ಷಮ ಪ್ರಾಧಿಕಾರದಿಂದ (ಜಿಲ್ಲಾಧಿಕಾರಿ) ನಿಯೋಜನೆಗೊಂಡು ಇಲಾಖೆಯ ಅಧಿಕಾರಿಗಳು, ನೌಕರರು ಮತ್ತು ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹೀಗೆ ಕರ್ತವ್ಯದ ಸಮಯದಲ್ಲಿ ಕೋವಿಡ್‌ನಿಂದ ಮೃತಪಟ್ಟಿದ್ದರೆ ನಿಯಮಾನುಸಾರ ಪರಿಹಾರ ಮಂಜೂರು ಮಾಡಬೇಕಾಗಿರುವುದು ನಿಮ್ಮ ಜವಾಬ್ದಾರಿ' ಎಂದು ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ. ಪರಿಹಾರ ನೀಡಿರುವ ಬಗ್ಗೆ ಮಾಹಿತಿಯನ್ನೂ ಒದಗಿಸಬೇಕು ಎಂದೂ ಕೋರಿದ್ದಾರೆ.

ಈ ಸಂಬಂಧ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೂ ಪತ್ರ ಬರೆದಿರುವ ಅವರು, 'ಜಿಲ್ಲಾ ವ್ಯಾಪ್ತಿಯಲ್ಲಿ ಕೋವಿಡ್ ಕರ್ತವ್ಯ ನಿರ್ವಹಿಸುತ್ತಿರುವ ಸಮಯದಲ್ಲಿ ಮೃತರಾದ ನೌಕರರ ಕುಟುಂಬಕ್ಕೆ ₹ 30 ಲಕ್ಷ ವಿಮೆ ಮೊತ್ತವನ್ನು ಪಾವತಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು' ಎಂದು ಸೂಚಿಸಿದ್ದಾರೆ.

'ಕೋವಿಡ್‌ನಿಂದ ಮೃತಪಟ್ಟ ಇಲಾಖೆಯ ಸಿಬ್ಬಂದಿಗೆ ಪರಿಹಾರ ನೀಡುವಂತೆ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ನಿರಂತರವಾಗಿ ಮನವಿ ಮಾಡಿತ್ತು. ಇದಕ್ಕೆ ಮಣಿದು ಇಲಾಖೆ ಈ ಕ್ರಮ ತೆಗೆದುಕೊಂಡಿದೆ' ಎಂದು ಸಂಘದ ಅಧ್ಯಕ್ಷ ಶಂಭುಲಿಂಗನಗೌಡ ಪಾಟೀಲ ಮತ್ತು ಚಂದ್ರಶೇಖರ ನುಗ್ಗಲಿ ಹೇಳಿದ್ದಾರೆ.

ಜೂನ್ ಮೊದಲ ವಾರ ಮುಂಗಾರು ಪ್ರವೇಶ

ಇದೇ 26ರಿಂದ ಮತ್ತೆ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಇದೇ 26ರಿಂದ ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ಮತ್ತೆ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ತೌತೆ ಚಂಡಮಾರುತದ ಪ್ರಭಾವದಿಂದ ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ಒಂದು ವಾರ ಧಾರಾಕಾರ ಮಳೆ ಸುರಿದಿತ್ತು. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಭಾನುವಾರ (ಮೇ 23) ಹೆಚ್ಚು ಮಳೆಯಾಗುವ ಮುನ್ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಮುಂದುವರಿಸಲಾಗಿದೆ.

ಉಳಿದ ಜಿಲ್ಲೆಗಳಲ್ಲಿ ಮೇ 25ರವರೆಗೆ ಮಳೆ ತಗ್ಗಲಿದೆ. ಆದರೆ, ಗುಡುಗು, ಸಿಡಿಲು ಹೆಚ್ಚಾಗಿ ಇರಲಿದ್ದು, ಕೆಲವೆಡೆ ಸಾಧಾರಣ ಮಳೆಯಾಗಬಹುದು. 26ರಿಂದ ಕರಾವಳಿ ಹಾಗೂ ಒಳನಾಡಿನಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ ಎಂದೂ ತಿಳಿಸಿದೆ.

'ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಎರಡೂ ದಿನ ಹೆಚ್ಚು ಮಳೆಯಾಗುವ ಸಾಧ್ಯತೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ' ಎಂದು ಇಲಾಖೆ ಮಾಹಿತಿ ನೀಡಿದೆ.

ಜೂನ್ ಮೊದಲ ವಾರ ಮುಂಗಾರು: 'ಜೂನ್ ಮೊದಲ ವಾರ ರಾಜ್ಯಕ್ಕೆ ನೈರುತ್ಯ ಮುಂಗಾರು ಪ್ರವೇಶಿಸುವ ಸಾಧ್ಯತೆ ಇದೆ. ಈಗಿನ ಮಾಹಿತಿಯಂತೆ ನೈರುತ್ಯ ಮಾರುತಗಳು ಕೇರಳಕ್ಕೆ ಜೂನ್ 1ರಂದು ಪ್ರವೇಶಿಸಿದರೆ, ರಾಜ್ಯಕ್ಕೆ 5ರಂದು ಪ್ರವೇಶಿಸಬಹುದು. ಹಾಗಾಗಿ ಜೂನ್ ಆರಂಭದಲ್ಲೂ ಹೆಚ್ಚು ಮಳೆ ನಿರೀಕ್ಷಿಸಬಹುದು' ಎಂದು ಹವಾಮಾನ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಬಂಗಾಳ, ಒಡಿಶಾಗೆ 'ಯಾಸ್' ಚಂಡಮಾರುತ ಎಚ್ಚರಿಕೆ

ನವದೆಹಲಿ (ಪಿಟಿಐ): 'ಯಾಸ್' ಚಂಡಮಾರುತವು ಭಾರಿ ಬಿರುಗಾಳಿಯ ಸ್ವರೂಪ ಪಡೆದು ಮೇ 26ರಂದು ಒಡಿಶಾ ಮತ್ತು ಪಶ್ಚಿಮ ಬಂಗಾಳ ಕರಾವಳಿಯನ್ನು ಹಾದುಹೋಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಶನಿವಾರ ತಿಳಿಸಿದೆ.

ಪೂರ್ವ- ಮಧ್ಯ ಬಂಗಾಳಕೊಲ್ಲಿ ಮತ್ತು ಉತ್ತರ ಅಂಡಮಾನ್ ಸಮುದ್ರದ ಮೇಲೆ ಶನಿವಾರ ಕಡಿಮೆ ಒತ್ತಡದ ಪ್ರದೇಶ ರೂಪುಗೊಂಡಿದೆ. ಇದು ತೀವ್ರ ಸ್ವರೂಪದ ಚಂಡಮಾರುತವಾಗಿ ರೂಪುಗೊಳ್ಳುವ ಸಾಧ್ಯತೆ ಇದೆ.

'ಈಗ ನಿರ್ಮಾಣವಾಗಿರುವ ಕಡಿಮೆ ಒತ್ತಡದ ಪ್ರದೇಶದಲ್ಲಿ ಮೇ 23ರ ಬೆಳಗಿನ ಹೊತ್ತಿಗೆ ವಾಯುಭಾರ ಕುಸಿತವಾಗಬಹುದು. ನಂತರ ಅದು ವಾಯವ್ಯ ದಿಕ್ಕಿಗೆ ತೆರಳುವ ಸಾಧ್ಯತೆ ಇದೆ. ಮೇ 24ರಂದು ಅದು ಚಂಡಮಾರುತದ ರೂಪ ಪಡೆದು, ಮುಂದಿನ 24 ಗಂಟೆಗಳಲ್ಲಿ ತೀವ್ರ ಸ್ವರೂಪ ಪಡೆಯಬಹುದು. 26ರ ಬೆಳಿಗ್ಗೆ ಪಶ್ಚಿಮ ಬಂಗಾಳ, ಉತ್ತರ ಒಡಿಶಾ ಮತ್ತು ಬಾಂಗ್ಲಾದೇಶ ಕರಾವಳಿಯಲ್ಲಿ ಗಂಟೆಗೆ 90ರಿಂದ 100 ಕಿ.ಮೀ. ವೇಗದಲ್ಲಿ ಗಾಳಿ ಬೀಸಬಹುದು. ಸಂಜೆಯ ವೇಳೆಗೆ ಗಾಳಿಯ ವೇಗ ಗಂಟೆಗೆ 110 ಕಿ.ಮೀ. ವರೆಗೂ ತಲುಪುವ ಸಾಧ್ಯತೆ ಇದೆ ಎಂದು ಇಲಾಖೆ ತಿಳಿಸಿದೆ.

ಹೆಚ್ಚು ಹಾನಿಗೆ ಒಳಗಾಗಬಹುದು ಎಂದು ನಿರೀಕ್ಷಿಸಲಾಗಿರುವ ಪ್ರದೇಶಗಳಲ್ಲಿ ಭಾರತೀಯ ನೌಕಾಪಡೆಯ ಹಡಗು ಹಾಗೂ ವಿಮಾನಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇಡಲಾಗಿದೆ ಎಂದು ವಕ್ತಾರರು ತಿಳಿಸಿದ್ದಾರೆ. ಒಡಿಶಾ ಹಾಗೂ ಪಶ್ಚಿಮ ಬಂಗಾಳದಲ್ಲಿ ಪ್ರವಾಹ ಪರಿಹಾರದ ಎಂಟು ತಂಡಗಳು, ಮುಳುಗು ತಜ್ಞರ ನಾಲ್ಕು ತಂಡಗಳು ಸನ್ನದ್ಧ ಸ್ಥಿತಿಯಲ್ಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಂಡಮಾರುತಕ್ಕೆ ಒಳಗಾಗಲಿರುವ ಪ್ರದೇಶದ ವೈಮಾನಿಕ ಸಮೀಕ್ಷೆ ನಡೆಸಲು ಅನುಕೂಲವಾಗುವಂತೆ, ನೌಕಾಪಡೆಯ ವಿಶಾಖಪಟ್ಟಣದಲ್ಲಿರುವ ವಾಯುನೆಲೆ ಐಎನ್‌ಎಸ್ ದೆಗಾ ಹಾಗೂ ಚೆನ್ನೈನ ಐಎನ್‌ಎಸ್ ರಜಲಿಯಲ್ಲಿ ವಿಮಾನಗಳನ್ನು ಸನ್ನದ್ಧ ಸ್ಥಿತಿಯಲ್ಲಿಡಲಾಗಿದೆ ಎಂದು ನೌಕಾಪಡೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ





ನೂಕುನುಗ್ಗಲು ಪಂಜಾಬ್‌ನ ಜಲಂಧರ್‌ನಲ್ಲಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಜನರು ಶನಿವಾರ ಅಂತರ ಮರೆತು ಮುಗಿಬಿದ್ದಿದ್ದರು –ಪಿಟಿಐ ಚಿತ್ರ

'ಭಾರತೀಯ ಮಾದರಿ' ಉಲ್ಲೇಖ ತೆಗೆಯಲು ಕೇಂದ್ರದ ಸೂಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಾಮಾಜಿಕ ಜಾಲತಾಣ ವೇದಿಕೆಗಳಿಗೆ ಪತ್ರ ಬರೆದ ಕೇಂದ್ರ ಸರ್ಕಾರ
- ಆಡಳಿತ ಮತ್ತು ವಿರೋಧ- ಪಕ್ಷಗಳ ನಡುವೆ ಆರೋಪ–ಪ್ರತ್ಯಾರೋಪ
- ಭಾರತದ ಕುರಿತು ತಪ್ಪು ಮಾಹಿತಿ ರವಾನೆ: ಮಾಹಿತಿ ತಂತ್ರಜ್ಞಾನ ಸಚಿವಾಲಯ

ನವದೆಹಲಿ: 'ಭಾರತೀಯ ಮಾದರಿ ಕೊರೊನಾ ವೈರಾಣು' ಎಂದು ಉಲ್ಲೇಖಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಮಾಡಿದ್ದ ಎಲ್ಲಾ ಪೋಸ್ಟ್‌ಗಳನ್ನು ಕೂಡಲೇ ತೆಗೆಯುವಂತೆ ಸಾಮಾಜಿಕ ಜಾಲತಾಣ ವೇದಿಕೆಗಳಿಗೆ ಕೇಂದ್ರ ಸರ್ಕಾರ ಶನಿವಾರ ಪತ್ರ ಬರೆದಿದೆ. ಸರ್ಕಾರದ ಈ ಕ್ರಮವು ಆಡಳಿತ ಮತ್ತು ವಿರೋಧಪಕ್ಷಗಳ ನಡುವೆ ಆರೋಪ–ಪ್ರತ್ಯಾರೋಪಗಳಿಗೂ ಕಾರಣವಾಗಿದೆ.

'ಭಾರತೀಯ ಮಾದರಿ ಕೊರೊನಾ ವೈರಾಣು' ಎಂದು ಉಲ್ಲೇಖಿಸುವುದರಿಂದ ಜಾಗತಿಕ ಮಟ್ಟದಲ್ಲಿ ಭಾರತದ ಕುರಿತು ತಪ್ಪು ಮಾಹಿತಿ ರವಾನೆಯಾಗುತ್ತದೆ. ರೂಪಾಂತರಿತ 'ಬಿ.1.617' ವೈರಾಣುವನ್ನು ವಿಶ್ವ ಆರೋಗ್ಯ ಸಂಸ್ಥೆಯು ಸಹ 'ಭಾರತೀಯ ವೈರಾಣು ಮಾದರಿ' ಎಂದು ಎಲ್ಲಿಯೂ ಕರೆದಿಲ್ಲ' ಎಂದು ಮಾಹಿತಿ ತಂತ್ರಜ್ಞಾನ ಸಚಿವಾಲಯ ಹೇಳಿದೆ.

ಆದರೆ, ಕೇಂದ್ರ ಸರ್ಕಾರದ ಈ ನಡೆಯ ಬಗ್ಗೆ ವಿಪಕ್ಷ ಕಾಂಗ್ರೆಸ್ ಕುಹಕವಾಡಿದೆ. 'ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರಪತಿಯವರು ಭಾರತೀಯ ಮಾದರಿ ವೈರಾಣುವಿನ ಬಗ್ಗೆ ಭಯಗೊಂಡಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ಕಮಲ್‌ನಾಥ್ ವ್ಯಂಗ್ಯವಾಡಿದ್ದಾರೆ.

'ಮೊದಲು ಇದು ಚೀನಾ ವೈರಸ್ ಆಗಿತ್ತು. ಈಗ ಅದು ಭಾರತೀಯ ಮಾದರಿಯಾಗಿ ರೂಪಾಂತರಗೊಂಡಿದೆ. ನಮ್ಮ ವಿಜ್ಞಾನಿಗಳು ಇದನ್ನು ಭಾರತೀಯ ಮಾದರಿ ಕೊರೊನಾ ವೈರಾಣು ಎನ್ನುತ್ತಿದ್ದಾರೆ. ಆದರೆ, ಬಿಜೆಪಿ ಮಾತ್ರ ಒಪ್ಪಿಕೊಳ್ಳುತ್ತಿಲ್ಲ. ಇದು ಯಾವ ರೀತಿಯ ಟೂಲ್‌ಕಿಟ್ ಎಂಬುದು ತಿಳಿಯುತ್ತಿಲ್ಲ' ಎಂದು ಅವರು ವ್ಯಂಗ್ಯವಾಡಿದ್ದಾರೆ.

ಕಾಂಗ್ರೆಸ್ ಹೇಳಿಕೆಗೆ ತಿರುಗೇಟು ನೀಡಿರುವ ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್, 'ಇಂಥ ಹೇಳಿಕೆಗಳ ಮೂಲಕ ಕಾಂಗ್ರೆಸ್ ನಾಯಕರು ದೇಶವನ್ನು ಅಪಮಾನಿಸುವುದರ ಜತೆಗೆ ಕೋವಿಡ್ ವಿರುದ್ಧದ ಹೋರಾಟವನ್ನು ದುರ್ಬಲಗೊಳಿಸುತ್ತಿದ್ದಾರೆ' ಎಂದಿದ್ದಾರೆ.

ಬಿಜೆಪಿ ಸಾಮಾಜಿಕ ಮಾಧ್ಯಮ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಅವರು, 'ಭಾರತೀಯ ಮಾದರಿ' ಎಂಬುದು ಕಾಂಗ್ರೆಸ್ ಟೂಲ್‌ಕಿಟ್‌ನಲ್ಲಿ ಅಲ್ಲದೆ ಬೇರೆಲ್ಲೂ ಇಲ್ಲ' ಎಂದಿದ್ದಾರೆ.

'15 ದಿನಗಳಲ್ಲಿ ಅಸ್ಥಿ ಪಡೆಯದಿದ್ದರೆ ಸರ್ಕಾರದಿಂದಲೇ ವಿಸರ್ಜನೆ'

ಪ್ರಜಾವಾಣಿ ವಾರ್ತೆ


ಆರ್. ಅಶೋಕ

ಬೆಂಗಳೂರು: 'ಕೋವಿಡ್‌ನಿಂದ ಪ್ರಾಣ ಕಳೆದುಕೊಂಡವರ ಅಸ್ಥಿಯನ್ನು ಮೃತರ ಸಂಬಂಧಿಕರು ಪಡೆಯದೇ ಇರುವುದರಿಂದ ಇದು ಚಿತಾಗಾರಗಳಲ್ಲಿಯೇ ಉಳಿದುಕೊಂಡಿದೆ. ಸಂಬಂಧಿಕರು ಈ ಚಿತಾಭಸ್ಮವನ್ನು ಪಡೆಯದೆ ಹೋದರೆ, 15 ದಿನಗಳ ನಂತರ ಸರ್ಕಾರವೇ ಗೌರವಪೂರ್ವಕವಾಗಿ ವಿಸರ್ಜನೆ ಮಾಡಲಿದೆ' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದ್ದಾರೆ.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಾಮಾನ್ಯವಾಗಿ ಒಂದೆರಡು ದಿನಗಳ ನಂತರ ಅವರ ಸಂಬಂಧಿಗಳು ಬಂದು ಅಸ್ಥಿ ತೆಗೆದುಕೊಂಡು ಹೋಗುತ್ತಾರೆ. ಆದರೆ ಕೆಲ ಪ್ರಕರಣಗಳಲ್ಲಿ ಸಂಬಂಧಿಕರು ಈವರೆಗೆ ಬಂದಿಲ್ಲ. ಸಂಬಂಧಿಸಿದವರಿಗೆ ಕರೆ ಮಾಡಿ ಸಂಪರ್ಕಿಸಲು ಪ್ರಯತ್ನಿಸಲಾಗಿದ್ದು, ಅವರ ಫೋನ್ ಸ್ವಿಚ್ಡ್ ಆಫ್ ಆಗಿದೆ' ಎಂದರು.

ಕೋವಿಡ್ ಅಪಾಯ ಲೆಕ್ಕಿಸದೆ ವ್ಯಾಪಾರ ನಡೆಸಿದರೂ ತಣಿಸಲಾಗುತ್ತಿಲ್ಲ ಹಸಿವು

ಬೀದಿ ಬದಿ ವರ್ತಕರಿಗೆ ಅರೆಹೊಟ್ಟೆ

• ವಿಜಯಕುಮಾರ್ ಎಸ್.ಕೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ಹಲವು ಕುಟುಂಬಗಳನ್ನು ಬೀದಿಗೆ ತಳ್ಳಿದ್ದರೆ, ಬೀದಿಯಲ್ಲೇ ಬದುಕು ಕಟ್ಟಿಕೊಳ್ಳುವ ಬೀದಿ ಬದಿ ಮತ್ತು ತಳ್ಳುಗಾಡಿಯ ವ್ಯಾಪಾರಿಗಳಿಗೆ ಅರೆಹೊಟ್ಟೆಯೇ ಗತಿಯಾಗಿದೆ.

ಕೋವಿಡ್ ವ್ಯಾಪಕವಾಗುತ್ತಿದ್ದರೂ, ಲಾಕ್‌ಡೌನ್ ಇದ್ದರೂ ಹೊಟ್ಟೆಪಾಡಿಗಾಗಿ ಈ ವ್ಯಾಪಾರಿಗಳು ಬೀದಿಯಲ್ಲೇ ನಿಲ್ಲಬೇಕಾದ ಅನಿವಾರ್ಯ ಇದೆ. ಸೋಂಕಿಗೆ ಹೆದರಿ ವ್ಯಾಪಾರ ನಿಲ್ಲಿಸಿದರೆ ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿ.

ಬೀದಿ ಬದಿಯಲ್ಲಿ ವ್ಯಾಪಾರ ನಡೆಸಲು ಬೆಳಗ್ಗೆ 6ರಿಂದ 10 ಗಂಟೆ ತನಕ ಅವಕಾಶವನ್ನು ಸರ್ಕಾರ ನೀಡಿದೆ. ಬೆಳಿಗ್ಗೆ ಮಾರುಕಟ್ಟೆಗೆ ಹೋಗಿ ತರಕಾರಿ, ಹೂವು, ಹಣ್ಣು ತಂದು ಅವುಗಳನ್ನು ವಿಂಗಡಿಸಿ ಜೋಡಿಸಿಕೊಳ್ಳುವಷ್ಟರಲ್ಲಿ 8 ಗಂಟೆ ದಾಟಲಿದೆ. ಗಡಿಯಾರದ ಮುಳ್ಳು 9 ದಾಟುತ್ತಿದ್ದಂತೆಯೇ ಪೊಲೀಸ್ ಇಲಾಖೆಯ ಗಸ್ತು ವಾಹನಗಳ ಸೈರನ್ ಮೊಳಗಲು ಆರಂಭವಾಗುತ್ತದೆ.

'ಸಾಲ ಮಾಡಿಕೊಂಡು ತಂದ ತರಕಾರಿಯನ್ನು ಮಾರಾಟ ಮಾಡಿ ಅಂದೇ ಸಾಲವನ್ನು ಮರುಪಾವತಿಸಬೇಕು. ಉಳಿದ ಹಣದಲ್ಲಿ ಜೀವನ ನಡೆಸಬೇಕು. ಆದರೆ, ಒಂದೆರಡು ಗಂಟೆಯಲ್ಲಿ ತಂದ ತರಕಾರಿಯನ್ನೆಲ್ಲ ಮಾರಾಟ ಮಾಡಲು ಆಗುವುಲ್ಲ. ಉಳಿದ ತರಕಾರಿಯಲ್ಲಿ ಬಹುತೇಕ ಹಾಳಾಗಿ ಹೋಗುತ್ತದೆ. ಮರುದಿನ ಮಾರಾಟ ಮಾಡೋಣವೆಂದರೆ ಬಾಡಿರುತ್ತವೆ. ಇರುವ ಒಂದೆರಡು ಗಂಟೆ ಅವಕಾಶದಲ್ಲಿ ಎಷ್ಟು ತರಕಾರಿ ತಾನೆ ಮಾರಾಟ ಮಾಡಲು ಸಾಧ್ಯ' ಎಂದು ವಿಜಯನಗರದ ಬೀದಿ ಬದಿ ವ್ಯಾಪಾರಿ ಬಾಬು ಪ್ರಶ್ನಿಸಿದರು.

ಪ್ರಜಾವಾಣಿ ವಿಶೇಷ

'ತಳ್ಳು ಗಾಡಿಗಳನ್ನು ಬೀದಿ ಬೀದಿಗೆ ತೆಗೆದುಕೊಂಡು ಹೋಗಲು ಸಂಜೆ 6 ಗಂಟೆ ತನಕ ಅವಕಾಶ ಇದೆ. ಆದರೆ, ಬಹುತೇಕ ವ್ಯಾಪಾರಿಗಳು ವಯಸ್ಸಾದವರು, ಮಹಿಳೆಯರೇ ಆಗಿದ್ದಾರೆ. ಈ ಸಾಹಸ ಮಾಡುವುದು ಕಷ್ಟ. ಆದರೂ, ಕೆಲವರು ಹೊಟ್ಟೆಪಾಡಿಗಾಗಿ ಶ್ರಮ ವಹಿಸುತ್ತಿದ್ದಾರೆ. ನಗರದಲ್ಲಿ ಅಲ್ಲಲ್ಲಿ ತಳ್ಳುಗಾಡಿಗಳಿವೆ. ಆದರೆ, ಈಗ ಅವುಗಳನ್ನು ತಳ್ಳಿಕೊಂಡು ಹೋಗುವ ವ್ಯಾಪಾರಿಗಳ ಸಂಖ್ಯೆ ಕಡಿಮೆ. ತಳ್ಳುಗಾಡಿಗಳನ್ನು ನಿಂತಲ್ಲೇ ನಿಲ್ಲಿಸಿಕೊಂಡು ವ್ಯಾಪಾರ ಮಾಡುವವರೇ ಹೆಚ್ಚು. ತಳ್ಳಿಕೊಂಡು ಹೋಗುವ ಸ್ಥಿತಿಯಲ್ಲೂ ಆ ಗಾಡಿಗಳು ಇರುವುದಿಲ್ಲ' ಎಂದು ವಿವರಿಸಿದರು.

'ತರಕಾರಿ ಮಾತ್ರವಲ್ಲದೆ ಬೀದಿ ಬದಿಯಲ್ಲಿ ಬಟ್ಟೆ, ಇನ್ನಿತರ ವಸ್ತುಗಳನ್ನು ಮಾರಾಟ ಮಾಡುವ ವ್ಯಾಪಾರಿಗಳ ಸಂಖ್ಯೆಯೂ ಹೆಚ್ಚು. ಅವರಿಗೆ ತಿಂಗಳಿಂದ ವ್ಯಾಪಾರವೇ ಇಲ್ಲ. ಈ ನಡುವೆ ದಿನಸಿ ಪದಾರ್ಥಗಳ ಬೆಲೆ ದುಪ್ಪಟ್ಟಾಗಿದೆ. ಸರ್ಕಾರ ₹2 ಸಾವಿರ ನೆರವು ನೀಡುವುದಾಗಿ ತಿಳಿಸಿದೆ. ಅದನ್ನು ಪಡೆಯುವುದು ಹೇಗೆ ಎಂಬುದು ಇನ್ನೂ ಗೊತ್ತಿಲ್ಲ. ಕೊಟ್ಟರೂ ಅದು ಯಾವುದಕ್ಕೂ ಸಾಕಾಗದು' ಎಂದರು.


ತಳ್ಳುಗಾಡಿಗಳಲ್ಲಿ ಬೀದಿಯಲ್ಲಿ ಹಣ್ಣಿನ ವ್ಯಾಪಾರ ನಡೆಯುತ್ತಿರುವುದು –ಪ್ರಜಾವಾಣಿ ಚಿತ್ರ

ಶಿವಾಜಿನಗರದ ವರ್ತಕರ ಕಣ್ಣೀರು

ಶಿವಾಜಿನಗರದ ಬೀದಿ ಬದಿ ವ್ಯಾಪಾರಿಗಳ ಪರಿಸ್ಥಿತಿಯೇ ಬೇರೆ ಇದೆ. ಇಲ್ಲಿ ಬಟ್ಟೆ, ಚಪ್ಪಲಿ, ಚಾಪೆ, ಬೆಲ್ಟ್, ಟೋಪಿ, ಖರ್ಜೂರ, ಇನ್ನಿತರ ತಿನಿಸು ಮಾರಾಟ ಮಾಡಿಕೊಂಡು ಜೀವನ ಮಾಡುವವರೇ ಶೇ 70ರಷ್ಟಿದ್ದಾರೆ.

'ಬೆಳಗಿನ ವೇಳೆಯೂ ಈ ಅಂಗಡಿಗಳನ್ನು ತೆರೆಯಲು ಅವಕಾಶ ಇಲ್ಲ. ತೆರೆದರೂ ಬಟ್ಟೆ, ಚಪ್ಪಲಿ ಖರೀದಿ ಮಾಡುವ ಮನಸ್ಥಿತಿಯಲ್ಲಿ ಜನರಿಲ್ಲ. ಹೀಗಾಗಿ, ಈ ವ್ಯಾಪಾರಿಗಳ ಕುಟುಂಬಗಳು ಹೊಟ್ಟೆಗಿಲ್ಲದೆ ಕಣ್ಣೀರಿನಲ್ಲಿ ಕೈತೊಳೆಯುತ್ತಿವೆ' ಎಂದು ಶಿವಾಜನಗರ ಬೀದಿ ಬದಿ ವ್ಯಾಪಾರಿಗಳ ಸಂಘದ ಕಾರ್ಯದರ್ಶಿ ಜಮೀರ್ ತಿಳಿಸಿದರು.

'ಅಂದಿನ ದುಡಿಮೆಯೇ ಊಟಕ್ಕೆ ಗತಿಯಾಗಿತ್ತು. ಒಂದು ತಿಂಗಳಿಂದ ದುಡಿಮೆ ಇಲ್ಲ. ಒಂದೊಂದು ಕುಟುಂಬದಲ್ಲಿ 5ರಿಂದ 10 ಜನರಿದ್ದಾರೆ. ಹೊಟ್ಟೆಗಿಲ್ಲದೆ ಪರದಾಡುತ್ತಿದ್ದಾರೆ' ಎಂದು ವಿವರಿಸಿದರು.

ಕೋವಿಡ್: ವ್ಯಾಪಾರಿಗಳ ಸರಣಿ ಸಾವು

ಬೀದಿ ಬದಿ ವ್ಯಾಪಾರಿಗಳನ್ನೂ ಕೋವಿಡ್ ಕಾಡುತ್ತಿದೆ. ಗಾಂಧಿ ಬಜಾರ್ ಒಂದರಲ್ಲೇ 10ಕ್ಕೂ ಹೆಚ್ಚು ವ್ಯಾಪಾರಿಗಳು ಎರಡನೇ ಅಲೆಯಲ್ಲಿ ಕೊರೋನಾ ಸೋಂಕಿನಿಂದ ಮೃತಪಟ್ಟಿದ್ದಾರೆ.

'ಒಂದೇ ಕುಟುಂಬದ ಮೂವರು, ಅತ್ತೆ- ಅಳಿಯನನ್ನು ಕೋವಿಡ್ ಬಲಿ ಪಡೆಯಿತು. 39 ವರ್ಷದ ವ್ಯಾಪಾರಿಯೊಬ್ಬರು ಪ್ರಾಣ ಕಳೆದುಕೊಂಡರು. ಕೋವಿಡ್‌ಗೆ ಹೆದರಿ ಮನೆಯಲ್ಲಿದ್ದರೆ ಹಸಿವಿನಿಂದ ಸಾಯಬೇಕಾಗುತ್ತದೆ. ಮುನ್ನುಗ್ಗಿ ಬಂದರೆ ಕೋವಿಡ್ ಬಿಡುತ್ತಿಲ್ಲ. ಬೀದಿ ಬದಿ ವ್ಯಾಪಾರಿಗಳ ಸ್ಥಿತಿ ಅತ್ಯಂತ ಶೋಚನೀಯವಾಗಿದೆ' ಎಂದು ಗಾಂಧಿ ಬಜಾರ್ ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷೆ ವನಜಾ ಹೇಳಿದರು. 'ಇನ್ನೂ ಸಾಕಷ್ಟು ಮಂದಿ ಸೋಂಕು ತಗುಲಿ ಆಸ್ಪತ್ರೆಯಲ್ಲಿದ್ದಾರೆ. ಹಣ ಇಲ್ಲದೆ ಪರದಾಡುತ್ತಿದ್ದಾರೆ. ಇನ್ನೊಂದೆಡೆ ಮನೆಯಲ್ಲಿರುವ ಕುಟುಂಬದ ಸದಸ್ಯರು ಹೊಟ್ಟೆಗೆ ಹಿಟ್ಟಿಲ್ಲದೆ ಪರಿತಪಿಸುತ್ತಿದ್ದಾರೆ. ದಾನಿಗಳು 50 ಜನರಿಗೆ ದಿನಸಿ ಕಿಟ್ ನೀಡಿದ್ದಾರೆ' ಎಂದು ವಿವರಿಸಿದರು.

ಪರಿಹಾರಕ್ಕೆ ಒತ್ತಾಯ

'ಬೀದಿ ಬದಿ ವ್ಯಾಪಾರಿಗಳ ಸ್ಥಿತಿ ಚಿಂತಾಜನಕವಾಗಿದೆ. ಹಲವರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಇವರಿಗೆ ನೆರವು ನೀಡಬೇಕು ಎಂಬ ಮನವಿಯನ್ನು ಸರ್ಕಾರ ಪರಿಗಣಿಸಿಯೇ ಇಲ್ಲ' ಎಂದು ಬೀದಿಬದಿ ವ್ಯಾಪಾರಿಗಳ ಸಂಘಟನೆ ಸದಸ್ಯ ವಿನಯ್ ಶ್ರೀನಿವಾಸ್ ಹೇಳಿದರು.

'ಮಾರುಕಟ್ಟೆ ಅಥವಾ ಮನೆಗಳ ಬಳಿ ಕೋವಿಡ್ ಪರೀಕ್ಷೆಗೆ ವ್ಯವಸ್ಥೆ ಮಾಡಬೇಕು. ಉಚಿತ ಲಸಿಕೆ, ಉಚಿತ ಚಿಕಿತ್ಸೆಗೆ ಆದ್ಯತೆ ನೀಡಬೇಕು. ಕೇರಳ ಮಾದರಿಯಲ್ಲಿ ಪೌಷ್ಟಿಕ ಆಹಾರಕ್ಕೆ ಬೇಕಿರುವ ಎಲ್ಲಾ ಪದಾರ್ಥ ನೀಡಬೇಕು. ಮೇ ಮತ್ತು ಜೂನ್ ತಿಂಗಳಿಗೆ ತಲಾ ₹10 ಸಾವಿರ ಪರಿಹಾರ ನೀಡಬೇಕು' ಎಂದು ಅವರು ಒತ್ತಾಯಿಸಿದರು.

ಭಾವಪೂರ್ಣ ಶ್ರದ್ಧಾಂಜಲಿ



ಜನನ 18-06-1928 | ಮರಣ 12-05-2021

ಶ್ರೀ ಬಿ.ಎಸ್. ಸಣ್ಣಯ್ಯ ನವರು

ಕನ್ನಡ ವಿದ್ವಾಂಸರು ಮತ್ತು ಹಸ್ತಪ್ರತಿ ತಜ್ಞರು
ಉಪ ನಿರ್ದೇಶಕರು (ಪ್ರಭಾರ), ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ (ನಿವೃತ್ತಿ 1988)
ಹಸ್ತಪ್ರತಿ ವಿಭಾಗದ ಮುಖ್ಯಸ್ಥರು, ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಶ್ರವಣಬೆಳಗೊಳ (1993-2020 ನಿವೃತ್ತಿ)

ಸದಾ ನಮ್ಮೆಲ್ಲರ ಪ್ರೀತಿಯ "ಅಣ್ಣ"ನಾಗಿ, ಮಾರ್ಗದರ್ಶಕರಾಗಿ ಶ್ರಮಜೀವಿಯಾಗಿ, ಸರಳ ಸಜ್ಜನರಾಗಿ, ನಮ್ಮ ಮನದಲ್ಲಿ ಎಂದೆಂದಿಗೂ ಆದರ್ಶಪ್ರಾಯರಾಗಿದ್ದೀರಿ, ನಿಮಗೆ ಭಾವಪೂರ್ಣ ಶ್ರದ್ಧಾಂಜಲಿ

ಇಂತಿ ದುಃಖತಪ್ತರು
ಮಗ, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಮತ್ತು ಕುಟುಂಬವರ್ಗದವರು ಹಾಗೂ ಬಂಧು-ಮಿತ್ರರು

ವೈಕುಂಠ ಸಮಾರಾಧನೆ




ಶ್ರೀಮತಿ ಭಾಗೀರಥಿ (ಭಾಗ್ಯಮ್ಮ)

ಜನನ: 01-04-1956 – ನಿಧನ: 13-05-2021
ಶ್ರೀ ಟಿ. ವಿ. ಮುನಿರಾಜುರವರ ಧರ್ಮಪತ್ನಿ
ಥಣಿಸಂದ್ರ, ಡಾ. ಶಿವರಾಮಕಾರಂತನಗರ ಅಂಚೆ, ಬೆಂಗಳೂರು-560077
ಇವರು ದಿನಾಂಕ: 13.5.2021ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.
ತತ್ಸಂಬಂಧವಾದ ಪುಣ್ಯಾಹ ಮತ್ತು ವೈಕುಂಠ ಸಮಾರಾಧನೆಯನ್ನು ದಿನಾಂಕ: 23.5.2021, ಭಾನುವಾರ ಬೆಳಿಗ್ಗೆ 9.45 ರಿಂದ 10.45 ಗಂಟೆಯೊಳಗೆ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವೆಲ್ಲರೂ ಇದನ್ನೇ ವೈಯಕ್ತಿಕ ಆಮಂತ್ರಣವೆಂದು ಪರಿಗಣಿಸಿ, ಕೋವಿಡ್ ಪರಿಸ್ಥಿತಿಯಿಂದಾಗಿ ತಮ್ಮ ಮನೆಯಿಂದಲೇ ಮೃತರ ಆತ್ಮಕ್ಕೆ ಶಾಂತಿ ಕೋರಬೇಕೆಂದು ವಿನಂತಿಸುತ್ತೇವೆ.

ಇಂತಿ ದುಃಖತಪ್ತರು
ಟಿ.ವಿ.ಮುನಿರಾಜು, ಮಕ್ಕಳು, ಅಳಿಯಂದಿರು ಹಾಗೂ ಕುಟುಂಬವರ್ಗದವರು.

ಭಾವಪೂರ್ಣ ಶ್ರದ್ಧಾಂಜಲಿ



ವೈ. ವಿ. ಪಾರ್ಥಸಾರಥಿ

ಬಿನ್ ಲೇಟ್ ವೈ. ವಿ. ವೆಂಕಟಸ್ವಾಮಿ
ಹೈಕೋರ್ಟ್‌ನ ಹೆಸರಾಂತ ಮಾಜಿ ಸರ್ಕಾರಿ ವಕೀಲರು.
(72 ವರ್ಷ ವಯಸ್ಸು)
ಇವರು ದಿನಾಂಕ 22-5-2021 ಶನಿವಾರ ನಿಧನರಾಗಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇವೆ.

ಇಂತಿ ದುಃಖತಪ್ತರು: ಧರ್ಮಪತ್ನಿ ಶ್ರೀಮತಿ ಉಮಾದೇವಿ, ಮಕ್ಕಳು ಮತ್ತು ವೈ. ಹೆಚ್. ಕುಟುಂಬದವರು.

ನೈಋತ್ಯ ರೈಲ್ವೆ

ಮುಕ್ತ ಟೆಂಡರ್ ಪ್ರಕಟಣೆ ಸಂಖ್ಯೆ. ಬಿ/ಇ.29/2021-22/ಓಟ/02
ಭಾರತದ ರಾಷ್ಟ್ರಪತಿಗಳ ಪರವಾಗಿ, ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ರೈಲ್ವೆ ನಿಲ್ದಾಣಗಳಲ್ಲಿ (26 ನಿಲ್ದಾಣಗಳು) ಬೆಳಕಿನ ವ್ಯವಸ್ಥೆಯ ಹಂತಗಳ ಸುಧಾರಣೆ ಮತ್ತು ಬೆಂಗಳೂರು ದಂಡು ನಿಲ್ದಾಣದ ಮುಖ್ಯದ್ವಾರದ ಬೆಳಕಿನ ವ್ಯವಸ್ಥೆಯ ಸುಧಾರಣೆ.	ರೂ. 1,21,07,422/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21-06-2021 ರಂದು 11:00 ಗಂಟೆಗಳವರೆಗೆ.
ಅರ್ಹತಾ ಅಗತ್ಯಗಳು ಮತ್ತು ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡುವುದು ಒಳಗೊಂಡಂತೆ ಟೆಂಡರ್ ಪ್ರಕಟಣೆಯ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.
ವಿಭಾಗೀಯ ರೈಲ್ವೆ ವ್ಯವಸ್ಥಾಪಕರು (ವಿದ್ಯುತ್), ನೈಋತ್ಯ ರೈಲ್ವೆ, ಬೆಂಗಳೂರು – 560023.
ಪಿಯುಬಿ/17/ಎಎಎಸ್/ಪಿಆರ್‌ಬಿ/ಎಸ್‌ಬಿಸಿ/2021-22

ಕೋವಿಡ್ ಪರೀಕ್ಷೆ ಹೆಚ್ಚಳಕ್ಕೆ ಸೂಚನೆ

ಬೆಂಗಳೂರು: 'ನಗರದಲ್ಲಿ ಕೋವಿಡ್ ಪರೀಕ್ಷಾ ಪ್ರಮಾಣ ಹೆಚ್ಚಿಸಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕೊಳೆಗೇರಿ ಹಾಗೂ ವಸತಿ ಸಮುಚ್ಚಯದ ಪ್ರದೇಶದಲ್ಲಿ ವಿವಿಧ ಸಂಘ- ಸಂಸ್ಥೆಗಳ ಸಮನ್ವಯದೊಂದಿಗೆ ಪರೀಕ್ಷೆ ನಡೆಸಲು ಸೂಚಿಸಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸೋಂಕು ದೃಢಪಟ್ಟ ನಂತರ ಮನೆ ಆರೈಕೆಗೆ ವ್ಯವಸ್ಥೆ ಇಲ್ಲದಿದ್ದರೆ, ತಕ್ಷಣ ಕೋವಿಡ್ ಆರೈಕೆ ಕೇಂದ್ರಕ್ಕೆ ದಾಖಲಾಗಬೇಕು. ನಂತರ, ತುರ್ತು ಚಿಕಿತ್ಸೆ ಅಗತ್ಯ ಬಿದ್ದರೆ ಆಸ್ಪತ್ರೆಗೆ ದಾಖಲಿಸಲು ಇದರಿಂದ ಸಹಾಯವಾಗಲಿದೆ' ಎಂದು ಹೇಳಿದರು.

'ಪರೀಕ್ಷೆ ಮಾಡಿಸಿಕೊಳ್ಳಲು ಯಾವುದೇ ಹಿಂಜರಿಕೆ ಬೇಡ. ಸಿಬ್ಬಂದಿ ಸೋಂಕು ಪರೀಕ್ಷೆ ಮಾಡಲು ಮನೆಗೆ ಬರಲಿದ್ದಾರೆ. ಸಾರ್ವಜನಿಕರು ಪರೀಕ್ಷೆ ಮಾಡಿಸಿಕೊಂಡು ಸಹಕರಿಸಬೇಕು' ಎಂದರು.

ತರಳಬಾಳು ಕೇಂದ್ರದಿಂದ ಆಹಾರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್.ಟಿ.ನಗರದ ತರಳಬಾಳು ಕೇಂದ್ರವು ಕೋವಿಡ್ ಬಿಕ್ಕಟ್ಟಿನ ಸಮಯದಲ್ಲಿ ಜೀವದ ಹಂಗು ತೊರೆದು ಕೆಲಸ ಮಾಡುತ್ತಿರುವವರ ಹಸಿವು ನೀಗಿಸುವ ಕಾರ್ಯಕ್ಕೆ ಮುಂದಾಗಿದೆ.

ವೈದ್ಯರು, ಶುಶ್ರೂಷಕಿಯರು ಹಾಗೂ ಆಸ್ಪತ್ರೆಯ ಇತರ ಸಿಬ್ಬಂದಿ ಸೇರಿ ಒಟ್ಟು 400 ಮಂದಿಗೆ ನಿತ್ಯ ಆಹಾರದ ಪೊಟ್ಟಣ ಹಾಗೂ ನೀರಿನ ಬಾಟಲ್‌ಗಳನ್ನು ಒದಗಿಸುತ್ತಿದೆ.

'ಏಳು ದಿನಗಳ ಹಿಂದೆ ಈ ಕಾರ್ಯವನ್ನು ಶುರುಮಾಡಿದ್ದೆವು. ವಿಕ್ಟೋರಿಯಾ ಆಸ್ಪತ್ರೆಯ ಎದುರು ನಿತ್ಯ 400 ಜನರಿಗೆ ಆಹಾರದ ಪೊಟ್ಟಣಗಳನ್ನು ವಿತರಿಸುತ್ತಿದ್ದೇವೆ. ಬೆಳಿಗ್ಗೆ 6ರಿಂದ 10ಗಂಟೆಯವರೆಗೆ ಕೋವಿಡ್ ರೋಗಿಗಳನ್ನು ನೋಡಲು ಅವರ ಸಂಬಂಧಿಕರಿಗೆ ಅವಕಾಶ ಮಾಡಿಕೊಡಲಾಗಿದೆ. ಆಸ್ಪತ್ರೆಯ ಸುತ್ತಮುತ್ತ ಹೋಟೆಲ್ ಇಲ್ಲದಿರುವುದರಿಂದ ಅವರೆಲ್ಲಾ ಉಪಹಾರಕ್ಕೆ ಪರದಾಡುವಂತಾಗಿದೆ. ಹೀಗಾಗಿ ಪಲಾವ್, ಮೊಸರನ್ನ, ಇಡ್ಲಿ, ಚಟ್ನಿ ಹೀಗೆ ನಿತ್ಯ ಒಂದೊಂದು ಬಗೆಯ ಉಪಹಾರ ನೀಡುತ್ತಿದ್ದೇವೆ' ಎಂದು ತರಳಬಾಳು ಕೇಂದ್ರದ ಕಾರ್ಯದರ್ಶಿ ಬಾತಿ ವಿಶ್ವನಾಥ್ ತಿಳಿಸಿದರು.

'ಆಹಾರ ತಯಾರಿಸಲು ಆರು ಜನರನ್ನು ನಿಯೋಜಿಸಲಾಗಿದೆ. ಸಿದ್ಧಪಡಿಸಿದ ಆಹಾರವನ್ನು ಪೊಟ್ಟಣಗಳಲ್ಲಿ ತುಂಬಿ ಅದನ್ನು ಕ್ಯಾಂಟರ್ ಮೂಲಕ ಆಸ್ಪತ್ರೆಗೆ ಸಾಗಿಸುತ್ತೇವೆ. ನಾಲ್ಕು ಜನರ ತಂಡವು ಇವುಗಳನ್ನು ವೈದ್ಯರು, ಶುಶ್ರೂಷಕಿಯರು, ಆಂಬುಲೆನ್ಸ್ ಚಾಲಕರು, ಆಸ್ಪತ್ರೆ ಸಿಬ್ಬಂದಿ, ಆಸ್ಪತ್ರೆಯ ಸನಿಹದಲ್ಲೇ ಕಾರ್ಯ ನಿರ್ವಹಿಸುತ್ತಿರುವ ಪೊಲೀಸರಿಗೆ ವಿತರಿಸುತ್ತಾರೆ. ದಿನವೊಂದಕ್ಕೆ ₹25 ರಿಂದ 30 ಸಾವಿರ ಹಣ ಖರ್ಚಾಗುತ್ತದೆ. ಅದನ್ನು ನಾವೇ ಭರಿಸುತ್ತೇವೆ' ಎಂದರು.

'ಸಿರಿಗೆರೆಯ ಶ್ರೀ ತರಳಬಾಳು ಬೃಹನ್ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಈ ಕಾರ್ಯವನ್ನು ಕೈಗೊಂಡಿದ್ದು ಲಾಕ್‌ಡೌನ್ ಮುಗಿಯುವವರೆಗೂ ಮುಂದುವರಿಸಲಿದ್ದೇವೆ. ನಗರದ ಇತರ ಸರ್ಕಾರಿ ಆಸ್ಪತ್ರೆಗಳಿಗೂ ಭೇಟಿ ನೀಡಿ ಅಲ್ಲಿನ ಸಿಬ್ಬಂದಿಗೆ ಆಹಾರ ವಿತರಿಸುವ ಆಲೋಚನೆ ಇದೆ' ಎಂದೂ ಅವರು ಹೇಳಿದರು.



ತರಳಬಾಳು ಕೇಂದ್ರದಿಂದ ಆಹಾರದ ಪೊಟ್ಟಣ ವಿತರಿಸುತ್ತಿರುವುದು

'ಪರಿಹಾರದಲ್ಲಿ ಪರರಾಜ್ಯ ಮಾದರಿಯಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕ್ಕ-ಪಕ್ಕದ ರಾಜ್ಯಗಳಲ್ಲಿ ಶ್ರಮಿಕ ವರ್ಗದವರಿಗೆ, ಬಡವರಿಗೆ ಸೂಕ್ತ ಪ್ಯಾಕೇಜ್ ಘೋಷಿಸಿ ನಂತರ ಲಾಕ್‌ಡೌನ್ ಮುಂದುವರಿಸಲಾಗಿದೆ. ಕರ್ನಾಟಕ ಸರ್ಕಾರವೂ ಇದೇ ಮಾದರಿಯನ್ನು ಅನುಸರಿಸಬೇಕು' ಎಂದು ಕರ್ನಾಟಕ ಗಡಿ ಹೋರಾಟ ಸಮಿತಿ ಸಲಹೆ ನೀಡಿದೆ.

'ಕೇರಳ, ತಮಿಳುನಾಡು, ಆಂಧ್ರಪ್ರದೇಶ, ದೆಹಲಿ ಸರ್ಕಾರಗಳು ಅಡುಗೆ ಅನಿಲ, ವಿದ್ಯುತ್, ನೀರನ್ನು ಉಚಿತವಾಗಿ ನೀಡುತ್ತಿರುವುದಲ್ಲದೆ, 50 ಕೆ.ಜಿ ಅಕ್ಕಿ ಸೇರಿದಂತೆ ಪ್ರತಿ ಕುಟುಂಬಕ್ಕೆ ₹4 ಸಾವಿರ ನಗದು ಕೊಡುತ್ತಿವೆ. ರಾಜ್ಯವೂ ಈ ರೀತಿ ಪರಿಹಾರ ಘೋಷಿಸಿ ಲಾಕ್‌ಡೌನ್ ಮುಂದುವರಿಸಬೇಕು' ಎಂದು ಸಮಿತಿಯ ರಾಜ್ಯಘಟಕದ ಅಧ್ಯಕ್ಷ ಪ್ರೊ.ಬಿ.ಕೆ.ಆರ್. ರಾವ್ ಬೈಂದೂರ್ ಒತ್ತಾಯಿಸಿದ್ದಾರೆ.

ನಗರದಲ್ಲಿ ಇಂದು

ಇತ್ತೀಚೆಗೆ ನಿಧನರಾದ ಗಣ್ಯರಿಗೆ ನುಡಿನಮನ: ಅಧ್ಯಕ್ಷತೆ–ಪೀಟರ್ ಮಚಾದೊ, ಪುಷ್ಪಾರ್ಚನೆ–ಸೈಮನ್ ಬಾರ್ತಲೋಮಿಯೊ, ಭಾಗವಹಿಸುವವರು–ಸಿ.ಸೋಮಶೇಖರ್, ವೆಂಕಟಸ್ವಾಮಿ, ಹರಿಪ್ರಸಾದ್, ಸಿ.ರಾಯಪ್ಪ, ವಿನೋದ್ ಪೌಲ್, ಸಿ.ಮರಿಜೋಸೆಫ್, ವ.ಚ.ಚನ್ನೇಗೌಡ, ರೀಟಾರೀನಿ, ಆಯೋಜನೆ–ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

'ಮುದ್ದಣ ಕವಿಯ ಶ್ರೀರಾಮಾಶ್ವಮೇಧಂ' ಕಾವ್ಯ–ಗಮಕ–ವ್ಯಾಖ್ಯಾನ: ಆಯೋಜನೆ–ಕರ್ನಾಟಕ ಸಾಹಿತ್ಯ ಅಕಾಡೆಮಿ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

ಕನ್ನಡ ವೈದ್ಯಕೀಯ ಸಾಹಿತ್ಯ ಸಮ್ಮೇಳನದ ಸಮಾರೋಪ: ಅತಿಥಿ–ವಿಶ್ವವಾಣಿ ಪತ್ರಿಕೆಯ ಸಂಪಾದಕ ವಿಶ್ವೇಶ್ವರ್ ಭಟ್, ಸಮ್ಮೇಳನಾಧ್ಯಕ್ಷರು–ಪಿ.ಎಸ್.ಶಂಕರ್, ಅಧ್ಯಕ್ಷತೆ–ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕುಲಪತಿ ಎಸ್. ಸಚ್ಚಿದಾನಂದ, ಆಯೋಜನೆ–ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

ಶಿವಾಜಿನಗರ ಕೇಂದ್ರೀಯ ವಿದ್ಯಾಲಯ: 100 ಹಾಸಿಗೆಗಳ ಸಿಸಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಪೂರ್ವ ವಲಯದಲ್ಲಿನ ಶಿವಾಜಿನಗರದಲ್ಲಿರುವ ಎಂಇಜಿ ಕೇಂದ್ರೀಯ ವಿದ್ಯಾಲಯದಲ್ಲಿ ಭಾರತೀಯ ಸೇನೆಯ ಸಹಯೋಗದೊಂದಿಗೆ ರೂಪಿಸಲಾದ 100 ಹಾಸಿಗೆಗಳ ಕೋವಿಡ್ ರೋಗಿಗಳ ಆರೈಕೆ ಕೇಂದ್ರವನ್ನು (ಸಿಸಿಸಿ) ವಸತಿ ಸಚಿವ ವಿ. ಸೋಮಣ್ಣ ಶನಿವಾರ ಉದ್ಘಾಟಿಸಿದರು.

'ಈ ಭಾಗದ ಬಡವರು ಹಾಗೂ ಮಧ್ಯಮವರ್ಗಗಳ ಕುಟುಂಬದವರಿಗೆ ಕೋವಿಡ್ ಚಿಕಿತ್ಸೆ ಒದಗಿಸಲು ಈ ಕೇಂದ್ರ ನೆರವಾಗಲಿದೆ' ಎಮದು ಸೋಮಣ್ಣ ತಿಳಿಸಿದರು.

'ಅಲ್ ಅಮೀನ್ ಆಸ್ಪತ್ರೆಯಲ್ಲಿ ಶೇ 30ರಷ್ಟು ಹಾಸಿಗೆಗಳನ್ನು ಒದಗಿಸಲು ಆಡಳಿತ ಮಂಡಳಿ ಒಪ್ಪಿದೆ. ಈಗ ಆರಂಭವಾಗಿರುವ ಆರೈಕೆ ಕೇಂದ್ರಕ್ಕೆ ಬರುವವರಲ್ಲಿ ತುರ್ತು ಆರೈಕೆ ಅಗತ್ಯ ಇರುವವರನ್ನು ಅಲ್ಲಿಗೆ ದಾಖಲಿಸಬೇಕು' ಎಂದು ವೈದ್ಯರಿಗೆ ಸೂಚಿಸಿದರು.

'ಈ ಆಸ್ಪತ್ರೆಯ 100 ಹಾಸಿಗೆಗಳಲ್ಲಿ 45 ಹಾಸಿಗೆಗಳಿಗೆ ಆಮ್ಲಜನಕ ಪೂರೈಕೆ ಇರುತ್ತದೆ. ನುರಿತ ವೈದ್ಯರು, ಶುಶ್ರೂಷಕರು ಹಾಗೂ ಸಿಬ್ಬಂದಿ ಮಾತ್ರವಲ್ಲದೆ, ಆಂಬುಲೆನ್ಸ್ ಸೌಕರ್ಯವನ್ನು ಹೊಂದಿದೆ' ಎಂದು ತಿಳಿಸಿದರು.

'ಕೋವಿಡ್ ವ್ಯಾಪಿಸಿರುವ ಈ ಸಮಯದಲ್ಲಿ ಭಾರತೀಯ ಸೇನೆಯವರು ಸೇವಾ ಮನೋಭಾವದಿಂದ ಈ ಕೇಂದ್ರ ಆರಂಭಿಸಲು ಒತ್ತಾಸೆಯಾಗಿ ನಿಂತಿದ್ದಾರೆ. ಈ ಕೇಂದ್ರಕ್ಕೆ ಅಗತ್ಯವಿರುವ ಹೆಚ್ಚುವರಿ ಸೌಲಭ್ಯವನ್ನು ಬಿಬಿಎಂಪಿ ಒದಗಿಸಲಿದೆ' ಎಂದರು.

ಸಂಸದ ಪಿ.ಸಿ.ಮೋಹನ್, ಶಾಸಕ ರಿಜ್ವಾನ್ ಅರ್ಷದ್, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಪೂರ್ವ ವಲಯದ ನೋಡಲ್ ಅಧಿಕಾರಿ ಮನೋಜ್ ಕುಮಾರ್ ಮೀನಾ, ಭಾರತೀಯ ಸೈನ್ಯದ ಮೇಜರ್ ಜನರಲ್ ಜೆ.ವಿ.ಪ್ರಸಾದ್, ಬ್ರಿಗೇಡಿಯರ್ ಟಿ.ಪಿ.ಎಸ್. ವಾರ್ಡ್ವ, ಪಾಲಿಕೆಯ ಜಂಟಿ ಆಯುಕ್ತರಾದ ಪಲ್ಲವಿ ಇದ್ದರು.


ಶಿವಾಜಿನಗರದ ಎಂಇಜಿ ಕೇಂದ್ರೀಯ ವಿದ್ಯಾಲಯದ ಕೋವಿಡ್ ಆರೈಕೆ ಕೇಂದ್ರವನ್ನು ವಿ.ಜೆ. ಪ್ರಸಾದ್, ಪಿ.ಸಿ. ಮೋಹನ್, ವಿ. ಸೋಮಣ್ಣ, ರಿಜ್ವಾನ್ ಅರ್ಷದ್, ಗೌರವ್ ಗುಪ್ತ ಶನಿವಾರ ಪರಿಶೀಲಿಸಿದರು ಪ್ರಜಾವಾಣಿ ಚಿತ್ರ

ನಿಯಮಬಾಹಿರ ವರ್ಗಾವಣೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ವೃಂದ ಮತ್ತು ನೇಮಕಾತಿ ನಿಯಮ 2020ರಲ್ಲಿ ಅವಕಾಶ ಇಲ್ಲದಿದ್ದರೂ ರಸ್ತೆ ಮೂಲ ಸೌಕರ್ಯ ವಿಭಾಗದ ಪ್ರಭಾರ ಅಧೀಕ್ಷಕ ಎಂಜಿನಿಯರ್ ಎಸ್.ವಿ.ರಾಜೇಶ್ ಅವರನ್ನು ಮುಖ್ಯ ಎಂಜಿನಿಯರ್ (ಪಶ್ಚಿಮ) ಹುದ್ದೆಗೆ ವರ್ಗ ಮಾಡಿದ್ದ ಆದೇಶವನ್ನು ಬಿಬಿಎಂಪಿ ರದ್ದು ಪಡಿಸಿದೆ.

ಮುಖ್ಯ ಎಂಜಿನಿಯರ್ (ಜಾಗೃತ ಮತ್ತು ಪಿಪಿಇಡಿ) ಎ.ಬಿ.ದೊಡ್ಡಯ್ಯ ಅವರು ಮುಂದಿನ ಆದೇಶದವರೆಗೆ ಪಶ್ಚಿಮ ವಲಯದ ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿ ಪ್ರಭಾರ ನೆಲೆಯಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ಬಿಬಿಎಂಪಿ ಶುಕ್ರವಾರ ಆದೇಶ ಮಾಡಿದೆ.

ಬಿಬಿಎಂಪಿಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮೀರಿ ಬಡ್ತಿ ಮತ್ತು ವರ್ಗಾವಣೆ ಮಾಡಿದ ಬಗ್ಗೆ 'ಪ್ರಜಾವಾಣಿ' ಗುರುವಾರದ (ಮೇ 20) ಸಂಚಿಕೆಯಲ್ಲಿ 'ಮುಖ್ಯ ಎಂಜಿನಿಯರ್ ವರ್ಗಾವಣೆ ಪಾಲಿಕೆಗೆ ಅಧಿಕಾರ ಇದೆಯೇ?' ವರದಿ ಪ್ರಕಟಿಸಿ ಗಮನ ಸೆಳೆದಿತ್ತು.

ಹೊಸ ವೃಂದ ಮತ್ತು ನೇಮಕಾತಿ ನಿಯಮದ ಪ್ರಕಾರ 'ಎ' ಗುಂಪಿನ ಅಧಿಕಾರಿಗಳ ಹಾಗೂ ₹ 74 ಸಾವಿರಕ್ಕಿಂತ ಹೆಚ್ಚು ಮೂಲ ವೇತನ ಹೊಂದಿರುವ ಅಧಿಕಾರಿಗಳ ನೇಮಕಾತಿ ಹಾಗೂ ವರ್ಗಾವಣೆಯ ಅಧಿಕಾರವನ್ನು ಸರ್ಕಾರ ಬಿಬಿಎಂಪಿಯಿಂದ ಹಿಂಪಡೆದು ತನ್ನ ತೆಕ್ಕೆಯಲ್ಲೇ ಇಟ್ಟುಕೊಂಡಿದೆ. 'ಬಿ' ಮತ್ತು 'ಸಿ' ಗುಂಪಿನ ಅಧಿಕಾರಿಗಳನ್ನು ಹಾಗೂ 'ಡಿ' ಗುಂಪಿನ ಸಿಬ್ಬಂದಿಯನ್ನು ಮಾತ್ರ ಆಯುಕ್ತರು ಅಥವಾ ಅವರು ಸೂಚಿಸಿದ ಅಧಿಕಾರಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಗುಜರಾತ್: ಧಾರ್ಮಿಕ ಸ್ವಾತಂತ್ರ್ಯ (ತಿದ್ದುಪಡಿ) ಮಸೂದೆಗೆ ಅಸ್ತು

ಅಹಮದಾಬಾದ್ (ಪಿಟಿಐ): ಮತಾಂತರ ಉದ್ದೇಶದಿಂದ ಬಲವಂತವಾಗಿ ಮದುವೆಯಾಗುವ ಪ್ರಕರಣಗಳಲ್ಲಿ ಆರೋಪ ಸಾಬೀತಾದಲ್ಲಿ ಗರಿಷ್ಠ 10 ವರ್ಷ ಸಜೆ ವಿಧಿಸಲು ಅವಕಾಶವಿರುವ ಮಸೂದೆಗೆ ಗುಜರಾತ್ ರಾಜ್ಯಪಾಲರು ಅಂಕಿತ ಹಾಕಿದ್ದಾರೆ.

ಗುಜರಾತ್ ಧಾರ್ಮಿಕ ಸ್ವಾತಂತ್ರ್ಯ (ತಿದ್ದುಪಡಿ) ಮಸೂದೆ 2021 ಅನ್ನು ರಾಜ್ಯ ವಿಧಾನಸಭೆ ಈ ವರ್ಷದ ಏಪ್ರಿಲ್ 1ರಂದು ಅಂಗೀಕರಿಸಿ, ರಾಜ್ಯಪಾಲರ ಅನುಮೋದನೆಗೆ ಕಳುಹಿಸಲಾಗಿತ್ತು.

ಈ ಮಸೂದೆಯ ಪ್ರಕಾರ, ಮತಾಂತರ ಉದ್ದೇಶದಿಂದ ಮದುವೆ ಪ್ರಕರಣಗಳಲ್ಲಿ ಕನಿಷ್ಠ 3ರಿಂದ ಐದು ವರ್ಷ ಸಜೆ ಹಾಗೂ ₹ 2 ಲಕ್ಷ ದಂಡ ವಿಧಿಸಲು ಅವಕಾಶವಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS
Business to Business
Business
WANTED VENDORS With Anil Lathes and CNC Jober for Turning Bushes near Peenya. Contact: 9886789567.

EDUCATIONAL
Colleges
NEMMADI MANE Foundation Provides Free Commerce Education to Meritorious/ Poor Girls PUC/ Post Graduation, 9341494200.

DH ಪ್ರಜಾವಾಣಿ
BOOK YOUR REMEMBRANCE & OBITUARIES ADVERTISEMENTS IN DECCAN HERALD & PRAJAVANI
Please contact us at :
Santhosh Kumar : 9880856233
Jerry : 9731810277
Ravichandra : 9901641752
Vishal : 9845114560
Tanveer : 9886213331
E-mail: dhclassified@deccanherald.co.in

RENTAL PROPERTIES
Accommodation Available
Flats
SFF 2BHK for rent at RR Nagar with lift & car parking 9533339694 / 9246369439

REAL ESTATE SELLING
Farm House/ Land/ Resorts
Hesaraghatta
FARM HOUSE 750 sft (proposed) sale fruits bearing trees 9 guntas, 45 lacs Hesaraghatta 9945080017
Sites
Vishweshwariah Layout
WANTED/ AVAILABLE BDA Sites Vishweshwaraiah Layout, Kempegowda Layout 20x30, 30x40, 40x60, 50x80.Contact Genuine Buyers/Sellers: 8892901567/ 9341733480

Residential/ Commercial
Ramamurthy Nagar
RESIDENTIAL PROPERTY 4380 Sft for Sale Plot size : 73'0 x 60'0 (73'0 Road facing) West facing NRI Layout - 11th Main Near : Sundra Anjaneya Temple Rama murthy Nagar : 098454 84682.

BUILDERS ESSENTIAL
Water Proofing Materials
LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology- 9880916988
Water Proofing
WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

WEEKEND CORNER
Gayathri Associates
ಆಹಾರ ಸಾಮಗ್ರಿಗಳ ಸಗಟು ವಿತರಣೆಗೆ ಹಾಗು ಹೋಟೆಲು ಉದ್ಯಮ, ಉಪಹಾರ ಗೃಹ ಆಧಾರಿತ ಸಾಂಸ್ಥಿಕ ಸೇವೆಗಳಿಗೆ **ಗಾಯತ್ರಿ ಅಸೋಸಿಯೇಟ್ಸ್** ಹೆಸರಾಂತ ಸಂಸ್ಥೆಯಾಗಿದ್ದು, ಕಳೆದ ಎರಡು ದಶಕಗಳಿಂದ ಅತ್ಯುನ್ನತ ವಿತರಣೆಗೆ ಹೆಸರು ಮಾಡಿದೆ. ನಾವು ಕೋವಿಡ್ ಪರಿಹಾರ ಕಾರ್ಯಗಳಿಗೆ ಬಳಸುವ ಆಹಾರ ಸಾಮಗ್ರಿ ಕಿಟ್ಸ್ ಗಳನ್ನು ಸಗಟು ಬೆಲೆಯಲ್ಲಿ, ಗ್ರಾಹಕರ ಅವಶ್ಯಕತೆಗೆ ತಕ್ಕಂತೆ ವಿವಿಧ ಪ್ರಮಾಣಗಳಲ್ಲಿ ಸರಬರಾಜು ಮಾಡುತ್ತಿದ್ದೇವೆ ಹಾಗು ಈ ಎಲ್ಲ ಕಿಟ್ಸ್ ಗಳನ್ನು ಸರಕಾರದಿಂದ ನಿರ್ದೇಶಿಸಲ್ಪಟ್ಟ ಕರೋನ ಪ್ರಮಾಣಿತ ಕಾರ್ಯಾಚರಣಾ ವಿಧಾನಗಳ ಅಡಿಯಲ್ಲಿಯೇ (SOP) ಹಾಗು ಅತ್ಯುತ್ತಮ ಕಾಳಜಿ ವಹಿಸಿ ಪ್ಯಾಕಿಂಗ್ ಮಾಡಿ ಸರಬರಾಜು ಮಾಡುತ್ತಿದ್ದೇವೆ.
Contact/ what's app 9448488536/ 9844083318/ 9535439421
Santosh.ga@rediffmail.com
FASSAI License number - 11221333000743

MATRIMONIAL
Matrimonial Bureaus
LIMRA MUSLIM INTERNATIONAL MATRIMONY: Doctors, Engineers & Graduates Hyderabad, Mumbai, UK, USA & All Karnataka Branches. Oswal Tower, Ground Floor, Dharwad. E-mail: mulladwd@gmail.com, 7349211919

OTHERS
For Sale
FOR SALE Smith & Vesson .22 Revolver Brand new with box and wax paper and catalog First owner. License owners may Contact:7760001010
IMMEDIATE SALE Leather Sofa ,Boxcot Diwan Teak Dining Dressing Curtains kids Bike. 9845414482 7019263843

JOB OPPORTUNITIES
General
GOLDEN OPPORTUNITY for Unemployed Techies, Teachers, Retired Bankers, Homemakers on Fixed Income with Huge Incentives. Dial:9341838235
Teachers/ Professors
INNOVATIVE INTERNATIONAL SCHOOL AND COLLEGE, Ramasandra, Kengeri Hobli, Bengaluru-60, Phone- 9036751500. REQUIRED: LECTURERS- English, Economics, Computer Science (P.G With B.ED) PGT- English (P.G With B.ED) TGT- Kannada, Hindi (Graduate+ D.ED/B.ED) Send Your Resume Before 28/05/2021 iipschool2014@gmail.com

ಚುರುಕುಗೊಂಡ ಪೊಲೀಸರ ತಪಾಸಣೆ ● ರಸ್ತೆಗೆ ಇಳಿದ ಪೊಲೀಸ್ ಕಮಿಷನರ್ ಕಮಲ್ ಪಂತ್

ಲಾಕ್‌ಡೌನ್: ಒಂದೇ ದಿನ 2,209 ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಲಾಕ್‌ಡೌನ್ ಜಾರಿಯಲ್ಲಿದ್ದು, ಶನಿವಾರ ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಅನಗತ್ಯವಾಗಿ ಸಂಚರಿಸುತ್ತಿದ್ದವರ 2,209 ವಾಹನಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಕಠಿಣ ನಿಯಮಗಳು ಜಾರಿಯಲ್ಲಿದ್ದರೂ ಹಲವರು ಅನಗತ್ಯವಾಗಿ ಸುತ್ತಾಡುತ್ತಿದ್ದಾರೆ. ಇದೇ ಕಾರಣಕ್ಕೆ ಪೊಲೀಸ್ ಕಮಿಷನರ್ ಕಮಲ್ ಪಂತ್, ಶನಿವಾರ ರಸ್ತೆಗೆ ಇಳಿದು ಪೊಲೀಸರ ಜೊತೆ ವಾಹನಗಳ ತಪಾಸಣೆ ನಡೆಸಿದರು. ಅನಗತ್ಯವಾಗಿ ಸುತ್ತಾಡುತ್ತಿದ್ದ ಆಸ್ಪತ್ರೆಯೊಂದರ ವ್ಯವಸ್ಥಾಪಕನ ಕಾರನ್ನೂ ಜಪ್ತಿ ಮಾಡಿಸಿದರು.

ಮೆಜೆಸ್ಟಿಕ್, ಬಳ್ಳಾರಿ ರಸ್ತೆ, ಕಾರ್ಪೊರೇಷನ್ ವೃತ್ತ, ಮೈಸೂರು ರಸ್ತೆ, ತುಮಕೂರು ರಸ್ತೆಯಲ್ಲಿ ತಪಾಸಣೆ ಚುರುಕಿನಿಂದ ನಡೆಯಿತು. ಆಯಾ ವಿಭಾಗದ ಡಿಸಿಪಿಗಳು ಸಹ ಸ್ಥಳದಲ್ಲಿದ್ದರು.

ಸುದ್ದಿಗಾರರ ಜೊತೆ ಮಾತನಾಡಿದ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್, 'ಲಾಕ್‌ಡೌನ್ ವೇಳೆ ಕಠಿಣ ನಿಯಮಗಳನ್ನು ಜಾರಿಗೆ ತರಲಾಗಿದೆ. ದಯವಿಟ್ಟು ಸಾರ್ವಜನಿಕರು ಸಹಕರಿಸಬೇಕು. ಅನಗತ್ಯವಾಗಿ ಯಾರಾದರೂ ರಸ್ತೆಗೆ ಬಂದರೆ ವಾಹನ ಜಪ್ತಿ ಮಾಡಲಾಗುವುದು' ಎಂದರು.

'ಜೂನ್ 7ರ ಬೆಳಿಗ್ಗೆ 6 ಗಂಟೆವರೆಗೆ ಲಾಕ್‌ಡೌನ್ ಮುಂದುವರಿಸಲಾಗಿದೆ. ನಗರದಲ್ಲಿ ಎಂದಿನಂತೆ ಭದ್ರತೆ ಇರಲಿದೆ. ಚೆಕ್‌ಪೋಸ್ಟ್‌ಗಳಲ್ಲಿ ವಾಹನಗಳ ತಪಾಸಣೆ ಮುಂದುವರಿಯಲಿದೆ. ಯಾರಾದರೂ ನಿಯಮ ಉಲ್ಲಂಘನೆ ಮಾಡಿದರೆ ಕಾನೂನಿನಡಿ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚನೆ ನೀಡಲಾಗಿದೆ' ಎಂದೂ ಹೇಳಿದರು.

'ಜನರು ಪರಿಸ್ಥಿತಿ ಅರ್ಥ ಮಾಡಿಕೊಳ್ಳಬೇಕು. ಅಗತ್ಯವಿದ್ದರೆ ಮಾತ್ರ ಮನೆಯಿಂದ ಹೊರಗೆ ಬರಬೇಕು. ನೀಡಿರುವ ವಿನಾಯಿತಿಯನ್ನು ದುರುಪಯೋಗ ಪಡಿಸಿಕೊಂಡು ಎಲ್ಲಿಯೂ ಬೇಕಾಬಿಟ್ಟಿಯಾಗಿ ಗುಂಪು ಸೇರಬಾರದು. ಅಗತ್ಯಬಿದ್ದರೆ ವಿಪತ್ತು ನಿರ್ವಹಣಾ ಕಾಯ್ದೆಯಡಿಯೂ ಪ್ರಕರಣ ದಾಖಲಿಸಿಕೊಳ್ಳಲಾಗುವುದು' ಎಂದೂ ಅವರು ತಿಳಿಸಿದರು.



ನಗರದ ನೃಪತುಂಗ ರಸ್ತೆಯಲ್ಲಿ ಶನಿವಾರ ಅನಗತ್ಯವಾಗಿ ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ಮಹಿಳೆಯರಿಬ್ಬರನ್ನು ಪೊಲೀಸರು ತಡೆದು ಪರಿಶೀಲನೆ ನಡೆಸಿದರು

ಜಪ್ತಿ ಮಾಡಿದ ವಾಹನಗಳು

1,880	ದ್ವಿಚಕ್ರ ವಾಹನಗಳು
136	ಮೂರು ಚಕ್ರ ವಾಹನ
193	ನಾಲ್ಕು ಚಕ್ರ ವಾಹನ

'20 ಎಫ್‌ಐಆರ್ ದಾಖಲು'

'ನಿಯಮ ಉಲ್ಲಂಘಿಸಿದ್ದವರ ವಿರುದ್ಧ ಶನಿವಾರ ಒಂದೇ ದಿನದಲ್ಲೇ 20 ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆಯಾ ಠಾಣೆ ಪೊಲೀಸರು, ಪ್ರಕರಣದ ಆರೋಪಿಗಳನ್ನು ವಶಕ್ಕೆ ಪಡೆದು ತನಿಖೆ ಮುಂದುವರಿಸಿದ್ದಾರೆ' ಎಂದೂ ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದರು.



ನಗರದ ಹಲವೆಡೆ ಜೋರು ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಶನಿವಾರ ಜೋರು ಮಳೆ ಸುರಿದು, ಕೆಲವೆಡೆ ರಸ್ತೆಗಳು ಜಲಾವೃತವಾದವು.

ಕೆಲದಿನಗಳಿಂದ ನಗರದಲ್ಲಿ ಮೋಡ ಕವಿದ ವಾತಾವರಣವಿದೆ. ಬಿಡುವು ಕೊಟ್ಟು ಮಳೆಯೂ ಸುರಿಯುತ್ತಿದೆ.

ಶುಕ್ರವಾರವೂ ಹಲವೆಡೆ ಮಳೆಯಾಗಿತ್ತು. ಶನಿವಾರ ಸಂಜೆ ಕೆಲವೆಡೆ ಅರ್ಧ ಗಂಟೆಗೂ ಹೆಚ್ಚು ಕಾಲ ಅಬ್ಬರದ ಮಳೆಯಾಯಿತು.

ರಾಜಾಜಿನಗರ, ಬಸವೇಶ್ವರನಗರ, ವಿಜಯನಗರ, ಮಹಾಲಕ್ಷ್ಮಿ ಲೇಔಟ್, ನಂದಿನಿ ಲೇಔಟ್, ಮೆಜೆಸ್ಟಿಕ್, ಗಾಂಧಿನಗರ, ಮಲ್ಲೇಶ್ವರ, ವಿಲ್ಸನ್ ಗಾರ್ಡನ್, ಶಾಂತಿನಗರ, ಲಾಲ್‌ಬಾಗ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಬಿರುಸಿನ ಮಳೆ ಆಯಿತು.

ಹೆಬ್ಬಾಳ, ಆರ್.ಟಿ.ನಗರ, ಸಂಜಯನಗರ, ಶಿವಾಜಿನಗರ, ಅಶೋಕನಗರ, ಎಂ.ಜಿ.ರಸ್ತೆ, ಕೋರಮಂಗಲ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಸಾಧಾರಣ ಮಳೆ ಸುರಿಯಿತು.

ಮಳೆ ಜೋರಾದ ಸ್ಥಳಗಳಲ್ಲಿರುವ ಪ್ರಮುಖ ರಸ್ತೆಗಳಲ್ಲಿ ಎರಡು ಅಡಿಯಷ್ಟು ನೀರು ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು. ಲಾಕ್‌ಡೌನ್ ಇದ್ದಿದ್ದರಿಂದ ವಾಹನಗಳ ಸಂಖ್ಯೆ ಕಡಿಮೆ ಇತ್ತು.

'ನಗರದಲ್ಲಿ ಕೆಲದಿನಗಳಿಂದ ಮಳೆ ಆಗುತ್ತಿದೆ. ರಸ್ತೆಯಲ್ಲಿ ನೀರು ನಿಂತಿದ್ದ ದೂರುಗಳು ಬಿಟ್ಟರೆ, ಬೇರೆ ಯಾವ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.



ವಿಲ್ಸನ್ ಗಾರ್ಡನ್ ಬಿಟಿಎಸ್ ರಸ್ತೆಯಲ್ಲಿ ಶನಿವಾರ ಹರಿಯುತ್ತಿದ್ದ ನೀರಿನಲ್ಲೇ ಸವಾರರೊಬ್ಬರು ದ್ವಿಚಕ್ರ ಚಲಾಯಿಸಿಕೊಂಡು ಹೋದರು – ಪ್ರಜಾವಾಣಿ ಚಿತ್ರ

'ಒಳನೋಟಗಳನ್ನು ಸೂಕ್ಷ್ಮವಾಗಿ ಗ್ರಹಿಸುತ್ತಿದ್ದ ಅನಂತಕುಮಾರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನಂತಕುಮಾರ್ ರಾಜಕೀಯ ನೇತಾರರಷ್ಟೇ ಅಲ್ಲ; ಅವರೊಬ್ಬ ಧೀಮಂತ ವ್ಯಕ್ತಿಯಾಗಿದ್ದರು. ಪರರ ಕಷ್ಟಗಳಿಗೆ ಮರುಗುವ ಹಾಗೂ ಸ್ಪಂದಿಸುವ ಗುಣ ಅವರದ್ದಾಗಿತ್ತು. ತಮ್ಮ ಭೇಟಿಯಾಗಲು ಬರುವವರು ಏನು ಮಾತನಾಡುತ್ತಾರೆ, ಅದರ ಒಳನೋಟಗಳೇನು ಎಂಬುದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು' ಎಂದು ಶಿಕ್ಷಣ ತಜ್ಞ ಎಚ್.ಎಸ್.ನಾಗರಾಜ ಅಭಿಪ್ರಾಯಪಟ್ಟರು.

ಅನಂತಕುಮಾರ್ ಪ್ರತಿಷ್ಠಾನ ಆನ್‌ಲೈನ್ ಮೂಲಕ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಅನಂತ ಪಥ' ಮಾಸ ಪತ್ರಿಕೆಯ 11ನೇ ಸಂಚಿಕೆ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ಅನಂತಕುಮಾರ್ ಇಡೀ ಸಮಾಜವೇ ಹೆಮ್ಮೆಪಡುವಂತಹ ನಾಯಕರಾಗಿದ್ದರು. ಪ್ರಖರ ವಾಗ್ಮಿಯಾಗಿದ್ದ ಅವರು ನೋವಾಗದ ರೀತಿಯಲ್ಲಿ ಜನರ ತಪ್ಪುಗಳನ್ನು ತಿದ್ದುತ್ತಿದ್ದರು. ವ್ಯಕ್ತಿಯೊಬ್ಬರು ನೂರು ವರ್ಷಗಳಲ್ಲಿ ಮಾಡಲಾಗದ ಸಾಧನೆಯನ್ನು ಕೇವಲ 58 ವರ್ಷಗಳಲ್ಲಿ ಮಾಡಿ ತೋರಿಸಿದರು. ಅವರ ಸರಳತೆ ಮತ್ತು ಸಜ್ಜನಿಕೆ ಎಲ್ಲರಿಗೂ ಮಾದರಿ' ಎಂದು ಒಡನಾಟ ಸ್ಮರಿಸಿದರು.

'ಅನಂತಕುಮಾರ್ ಸಾಮಾನ್ಯ ಕುಟುಂಬದಿಂದ ಬಂದಂತಹ ವ್ಯಕ್ತಿ. ದೇಶದ ನೀತಿ ನಿರೂಪಣೆಯಲ್ಲಿ ತಮ್ಮದೇ ಛಾಪು ಮೂಡಿಸಿದ್ದರು. ಅವರ ವ್ಯಕ್ತಿತ್ವ ಹಾಗೂ ನಾಯಕತ್ವದ ಗುಣಗಳು ಇತರರಿಗೆ ಸ್ಫೂರ್ತಿಯಾಗಬೇಕು' ಎಂದು ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ತಿಳಿಸಿದರು.

'ಅನಂತ ಪಥ'ದ ಮುಖ್ಯ ಸಂಪಾದಕ ಟಿ.ಎಸ್.ಗೋಪಾಲ್, ಐಶ್ವರ್ಯಾ ಅನಂತಕುಮಾರ್ ಇದ್ದರು.

ಪತ್ರಕರ್ತರಿಗೆ ನೆರವು ನೀಡಿ: ಸಿ.ಎಂ.ಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಹಾಗೂ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಗ್ರಾಮೀಣ ಮತ್ತು ನಗರ ಪ್ರದೇಶದ ಪತ್ರಕರ್ತರಿಗೆ ತಲಾ ₹10 ಸಾವಿರ ನೆರವು ನೀಡಬೇಕು ಎಂದು ಕಾರ್ಯನಿರತ ಪತ್ರಕರ್ತರ ಸಂಘ ಮುಖ್ಯಮಂತ್ರಿಗೆ ಮನವಿ ಮಾಡಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಈ ಕುರಿತು ಮನವಿ ಪತ್ರ ಸಲ್ಲಿಸಿರುವ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಲಾಕ್‌ಡೌನ್‌ನಿಂದ ಮಾಧ್ಯಮಗಳು ಸಂಕಷ್ಟಕ್ಕೆ ಸಿಲುಕಿವೆ. ಇದೇ ವೃತ್ತಿಯನ್ನು ಅವಲಂಬಿಸಿರುವ ಪತ್ರಕರ್ತರ ಬದುಕು ಕೂಡ ತೊಂದರೆಗೆ ಒಳಗಾಗಿದೆ. ಗ್ರಾಮೀಣ ಪತ್ರಕರ್ತರೂ ತೀವ್ರ ಕಷ್ಟಕ್ಕೆ ಈಡಾಗಿದ್ದಾರೆ ಎಂದು ಹೇಳಿದ್ದಾರೆ.

ಕಷ್ಟದಲ್ಲಿರುವ ಪತ್ರಕರ್ತರಿಗೆ ಆರ್ಥಿಕ ನೆರವು ನೀಡಬೇಕು. ಜಿಲ್ಲಾ, ತಾಲ್ಲೂಕು, ಗ್ರಾ.ಪಂ ಮಟ್ಟದಲ್ಲಿ ಕೆಲಸ ಮಾಡುವ ಪತ್ರಕರ್ತರ ಕುಟುಂಬ ನಿರ್ವಹಣೆಗೆ ಅಗತ್ಯವಾದ ಪಡಿತರ ನೀಡುವ ವ್ಯವಸ್ಥೆ ಆಗಬೇಕು ಎಂದು ಒತ್ತಾಯಿಸಿದ್ದಾರೆ.

ಪತ್ರಕರ್ತರನ್ನು ಕೊರೊನಾ ಕಾಲದ ಮುಂಚೂಣಿ ಯೋಧರು ಎಂದು ಘೋಷಿಸಿ, ಲಸಿಕೆ ಹಾಕಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ಅವರು ಧನ್ಯವಾದ ಸಲ್ಲಿಸಿದ್ದಾರೆ.

'ಪುಸ್ತಕಗಳನ್ನು ಅಗತ್ಯ ವಸ್ತುಗಳೆಂದು ಪರಿಗಣಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜ್ಞಾನಾರ್ಜನೆಗೆ ಸಹಾಯಕವಾಗಿರುವ ಪುಸ್ತಕಗಳನ್ನು ಅಗತ್ಯ ವಸ್ತುಗಳು ಎಂದು ಪರಿಗಣಿಸಿ, ಅವುಗಳ ಮಾರಾಟಕ್ಕೆ ಅವಕಾಶ ನೀಡಬೇಕು' ಎಂದು ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘವು ಸರ್ಕಾರವನ್ನು ಆಗ್ರಹಿಸಿದೆ.

ಈ ಸಂಬಂಧ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಹಾಗೂ ಕಾರ್ಯದರ್ಶಿ ಆರ್. ದೊಡ್ಡೇಗೌಡ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

'ಕೋವಿಡ್ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಜಾರಿ ಸೇರಿದಂತೆ ವಿವಿಧ ಕಟ್ಟುನಿಟ್ಟಾದ ನಿಯಮಗಳನ್ನು ಜಾರಿಗೆ ತರುತ್ತಿರುವುದು ಶ್ಲಾಘನೀಯ. ಆಹಾರ ಪದಾರ್ಥಗಳು, ಮದ್ಯ, ಮಾಂಸ ಸೇರಿದಂತೆ ಕೆಲವೊಂದನ್ನು ಅಗತ್ಯ ವಸ್ತುಗಳು ಎಂದು ಪರಿಗಣಿಸಿ, ಮಾರಾಟಕ್ಕೆ ಅವಕಾಶ ನೀಡಲಾಗಿದೆ. ಕೋವಿಡ್ ಹಾಗೂ ಲಾಕ್‌ಡೌನ್ ಕಾರಣ ಜನರು ಮನೆಯಲ್ಲಿಯೇ ಇರಬೇಕಾಗಿದೆ. ಪರಿಣಾಮ ಖಿನ್ನತೆ, ಒಂಟಿತನ, ಜಿಗುಪ್ಸೆ ಮೊದಲಾದ ಮಾನಸಿಕ ಸಮಸ್ಯೆಗಳನ್ನು ಎದುರಿಸುವ ಸಾಧ್ಯತೆ ಇರುತ್ತದೆ. ಇದಕ್ಕೆ ಪುಸ್ತಕಗಳು ಪರಿಹಾರ ಒದಗಿಸಲಿವೆ. ಹಾಗಾಗಿ, ಪುಸ್ತಕವನ್ನು ಕೂಡ ಅಗತ್ಯ ವಸ್ತುಗಳ ಪಟ್ಟಿಯಲ್ಲಿ ಸೇರಿಸಬೇಕು' ಎಂದು ಅವರು ಕೋರಿದ್ದಾರೆ.

'ಕೇಂದ್ರ ಸರ್ಕಾರದ ಜತೆಗೆ ಕೇರಳ, ದೆಹಲಿ ಸೇರಿದಂತೆ ವಿವಿಧ ರಾಜ್ಯ ಸರ್ಕಾರಗಳು ಕೂಡ ಪುಸ್ತಕವನ್ನು ಅಗತ್ಯ ವಸ್ತುಗಳ ಪಟ್ಟಿಯಲ್ಲಿ ಸೇರಿಸಿವೆ. ಪುಸ್ತಕಗಳ ಮಾರಾಟಕ್ಕೆ ಅವಕಾಶ ನೀಡಲಾಗಿದೆ. ಲಾಕ್‌ಡೌನ್ ಅವಧಿಯಲ್ಲಿ ಮಕ್ಕಳು, ಹಿರಿಯರು ಸೇರಿದಂತೆ ವಿವಿಧ ವಯೋಮಾನದವರಿಗೆ ಸಮಯ ಕಳೆಯಲು ಪುಸ್ತಕಗಳು ಸಹಕಾರಿ. ಆದ್ದರಿಂದ ಕೋವಿಡ್ ನಿಯಂತ್ರಣ ನಿಯಮಗಳನ್ನು ಅನುಸರಿಸಿ, ಮಳಿಗೆಗಳಲ್ಲಿ ಪುಸ್ತಕ ಮಾರಾಟಕ್ಕೆ ಅವಕಾಶ ನೀಡಬೇಕು' ಎಂದು ಬೇಡಿಕೆ ಮುಂದಿಟ್ಟಿದ್ದಾರೆ.

'ಪುಸ್ತಕೋದ್ಯಮದಡಿ ದಿನಗೂಲಿ ನೌಕರರು, ಬೈಂಡಿಂಗ್, ಡಿಟಿಪಿ ಮಾಡುವವರು, ವಿನ್ಯಾಸಗಾರರು ಸಾವಿರಾರು ಸಂಖ್ಯೆಯಲ್ಲಿದ್ದಾರೆ. ಸಂಕಷ್ಟಕ್ಕೆ ಸಿಲುಕಿರುವ ಅವರಿಗೂ ನೆರವಿನ ಪ್ಯಾಕೇಜ್ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

ಲಸಿಕೆ: ನೋಡಲ್ ಅಧಿಕಾರಿಗಳ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಮುಂಚೂಣಿ ಕಾರ್ಯಕರ್ತರಿಗೆ ಕೋವಿಡ್ ಲಸಿಕೆ ನೀಡಬೇಕು ಎಂದು ಸರ್ಕಾರ ಆದೇಶಿಸಿದ್ದು, ಇದಕ್ಕೆ ಪೂರಕವಾಗಿ ಬಿಬಿಎಂಪಿಯು ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಿದೆ.

18ರಿಂದ 44 ವರ್ಷದ ಕೊರೊನಾ ಮುಂಚೂಣಿ ಕಾರ್ಯಕರ್ತರು ಲಸಿಕೆ ಪಡೆಯಲು ಅರ್ಹರು. ಮುಂಚೂಣಿ ಕಾರ್ಯಕರ್ತರಲ್ಲಿ ಯಾವ ವರ್ಗದವರು ಬರುತ್ತಾರೆ, ಅದಕ್ಕೆ ಸಂಬಂಧಿಸಿದ ಅಧಿಕಾರಿಗಳು ಹಾಗೂ ಅವರ ದೂರವಾಣಿ ಸಂಖ್ಯೆಯ ಮಾಹಿತಿಯನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ (https://bbmp.gov.in) ಅಪ್‌ಲೋಡ್ ಮಾಡಲಾಗಿದೆ.

'ಶಿಕ್ಷಕರಿಗೆ ಆರೋಗ್ಯ ಭದ್ರತೆ ಒದಗಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರೊನಾ ಸೋಂಕು ಕಾಣಿಸಿಕೊಂಡಾಗಿನಿಂದಲೂ ಶಿಕ್ಷಕರನ್ನು ಕೋವಿಡ್ ಸಂಬಂಧಿತ ಅನೇಕ ಕೆಲಸಗಳಿಗೆ ನಿಯೋಜನೆ ಮಾಡಲಾಗಿದೆ. ಈ ಪೈಕಿ ಅನೇಕರು ಕೋವಿಡ್ ಸಾಂಕ್ರಾಮಿಕ ರೋಗದಿಂದ ಮೃತಪಟ್ಟಿದ್ದಾರೆ. ಹೀಗಾಗಿ ಶಿಕ್ಷಕರಿಗೆ ಆರೋಗ್ಯ ಭದ್ರತೆ ಒದಗಿಸಬೇಕು' ಎಂದು ಅಖಿಲ ಭಾರತ ಡೆಮಾಕ್ರಟಿಕ್ ವಿದ್ಯಾರ್ಥಿಗಳ ಸಂಘಟನೆ (ಎಐಡಿಎಸ್‌ಓ) ಆಗ್ರಹಿಸಿದೆ.

'ಕೆಲವು ಶಿಕ್ಷಕರು ಚುನಾವಣಾ ಕರ್ತವ್ಯದ ವೇಳೆ ನಿಧನರಾಗಿದ್ದಾರೆ. ಅಂತಹ ಶಿಕ್ಷಕರ ಕುಟುಂಬಕ್ಕೆ ಕೂಡಲೇ ಪರಿಹಾರ ಒದಗಿಸಬೇಕು. ಅವರ ಮಕ್ಕಳ ಜೀವನೋಪಾಯದ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು. ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸಬೇಕು' ಎಂದೂ ಎಐಡಿಎಸ್‌ಓ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

14 ರೈಲುಗಳ ಸಂಚಾರ ರದ್ದು

ಬೆಂಗಳೂರು: ಯಾಸ್ ಚಂಡಮಾರುತದ ಕಾರಣಕ್ಕೆ ಬೆಂಗಳೂರಿನಿಂದ ಹೊರ ರಾಜ್ಯದ ವಿವಿಧ ನಗರಗಳಿಗೆ ಪ್ರಯಾಣ ಬೆಳೆಸಬೇಕಿದ್ದ ಮತ್ತು ಅಲ್ಲಿಂದ ಮರಳಬೇಕಿದ್ದ 14 ರೈಲುಗಳ ಸಂಚಾರವನ್ನು ನೈರುತ್ಯ ರೈಲ್ವೆ ರದ್ದುಪಡಿಸಿದೆ.

ಗುವಾಹಟಿ, ಮುಜಾಫರ್‌ಪುರ, ಬಾಗಲ್‌ಪುರ, ಕಾಮಕ್ಯ, ಹೌರಾ, ವಾಸ್ಕೋಡ ಗಾಮ, ಅಗರ್ತಲಾ, ಭುವನೇಶ್ವರ ನಗರಗಳಿಗೆ ಮೇ 29ರವರೆಗೆ ಸಂಚರಿಸಬೇಕಿದ್ದ ರೈಲುಗಳ ಸಂಚಾರವನ್ನು ರದ್ದುಪಡಿಸಲಾಗಿದೆ ಎಂದು ನೈರುತ್ಯ ರೈಲ್ವೆ ಪ್ರಕಟಣೆಯು ತಿಳಿಸಿದೆ.

ನಿಧನ ವಾರ್ತೆ

ಎನ್. ರಾಮರೆಡ್ಡಿ



ಬೆಂಗಳೂರು: ವಾಟಿಕಾ ಕ್ಲಬ್ ಆ್ಯಂಡ್ ರೆಸಾರ್ಟ್‌ನ ಮಾಲೀಕ ಎನ್.ರಾಮರೆಡ್ಡಿ (69) ಅನಾರೋಗ್ಯ ಸಮಸ್ಯೆಯಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು.

ತಾವರೆಕೆರೆಯ ಸುದ್ದಗುಂಟೆ ಬಳಿ ವಾಸವಿದ್ದ ಇವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ. ಭಾನುವಾರ ಬೆಳಿಗ್ಗೆ 9.30ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅವರ ಸಮಾಜ ಸೇವೆಯನ್ನು ಗುರುತಿಸಿ ವಿವಿಧ ಸಂಘ ಸಂಸ್ಥೆಗಳು ಅವರನ್ನು ಗೌರವಿಸಿವೆ. ಯುರೋಪಿನಲ್ಲಿ 2011ರಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಅವರಿಗೆ 'ಹೆಮ್ಮೆಯ ಕನ್ನಡಿಗ' ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

ಮುನಿರಾಜು



ಹೆಸರಘಟ್ಟ: ಕೊಡಗಿ ತಿರುಮಲಾಪುರ ಗ್ರಾಮದ ಬಿಜೆಪಿ ಮುಖಂಡ ಮುನಿರಾಜ್ (52) ಅವರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ ಮತ್ತು ಇಬ್ಬರು ಮಕ್ಕಳಿದ್ದರು.

ತೀವ್ರ ಉಸಿರಾಟದ ತೊಂದರೆಯಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟರು. ತಾವರೆಕೆರೆ ಸಮೀಪದ ಗಿಡ್ಡೇನಹಳ್ಳಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ಶುಕ್ರವಾರ ನಡೆಯಿತು.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001.
ಫೋನ್: +91 80 4544 800; ಫ್ಯಾಕ್ಸ್: +91 80 3985 6862
ಇಮೇಲ್: contactus.India@diageo.com ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

[ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಪಟ್ಟಿ ಮಾಡುವಿಕೆಯ ಹೊಣೆಗಾರಿಕೆಗಳು ಮತ್ತು ಬಹಿರಂಗ ಪಡಿಸುವಿಕೆಯ ಅವಶ್ಯಕತೆಗಳು) ನಿಬಂಧನೆಗಳು, 2015 ರ ನಿಬಂಧನೆ 47(1) (ಬಿ)]

ಮಾರ್ಚ್ 31, 2021ಕ್ಕೆ ಅಂತ್ಯವಾದ ತ್ರೈಮಾಸಿಕ ಮತ್ತು ವರ್ಷಕ್ಕೆ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಪರಿಶೋಧಿಸಿದ ಆರ್ಥಿಕ ಫಲಿತಾಂಶಗಳ ವಿವರಣೆ

(ಐಎನ್‌ಆರ್ ದಶಲಕ್ಷಗಳಲ್ಲಿ ಪ್ರತಿ ಷೇರಿನ ಡೇಟಾದ ಆದಾಯವನ್ನು ಹೊರತುಪಡಿಸಿ)

ಕ್ರ. ಸಂಖ್ಯೆ	ವಿವರಗಳು	ಪ್ರತ್ಯೇಕಿತ				ಕ್ರೋಢೀಕೃತ			
		ಮಾರ್ಚ್ 31, 2021 ಕೊನೆಗೊಂಡ ತ್ರೈಮಾಸಿಕ	ಮಾರ್ಚ್ 31, 2020 ಕೊನೆಗೊಂಡ ತ್ರೈಮಾಸಿಕ	ಮಾರ್ಚ್ 31, 2021 ಕೊನೆಗೊಂಡ ವರ್ಷಕ್ಕೆ	ಮಾರ್ಚ್ 31, 2020 ಕೊನೆಗೊಂಡ ವರ್ಷಕ್ಕೆ	ಮಾರ್ಚ್ 31, 2021 ಕೊನೆಗೊಂಡ ತ್ರೈಮಾಸಿಕ	ಮಾರ್ಚ್ 31, 2020 ಕೊನೆಗೊಂಡ ತ್ರೈಮಾಸಿಕ	ಮಾರ್ಚ್ 31, 2021 ಕೊನೆಗೊಂಡ ವರ್ಷಕ್ಕೆ	ಮಾರ್ಚ್ 31, 2020 ಕೊನೆಗೊಂಡ ವರ್ಷಕ್ಕೆ
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	76,721	64,223	2,71,764	2,85,892	76,781	64,190	2,74,185	2,88,237
2.	ಅವಧಿಯ (ತೆರಿಗೆಯ ಮೊದಲು ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	3,234	1,597	6,204	11,334	2,905	1,169	6,043	10,937
3.	ಅವಧಿಯ ತೆರಿಗೆಯ ಮೊದಲು (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	2,470	1,610	4,690	11,347	2,810	1,835	5,400	11,603
4.	ಅವಧಿಯ ತೆರಿಗೆಯ ನಂತರ (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	1,673	239	3,103	7,047	2,033	493	3,621	6,206
5.	ಅವಧಿಯ ಒಟ್ಟಾರೆ ವ್ಯಾಪಕ ಆದಾಯ ಅವಧಿಯ [ಲಾಭ/(ನಷ್ಟ) (ತೆರಿಗೆಯ ನಂತರ) ಮತ್ತು ಇತರ ವ್ಯಾಪಕ ಆದಾಯ (ತೆರಿಗೆಯ ನಂತರ)ಗಳನ್ನು ಒಳಗೊಂಡಿರುವ]	1,730	240	3,160	6,773	2,082	507	3,684	5,986
6.	ಈಕ್ವಿಟಿ ಷೇರು ಬಂಡವಾಳ	1,453	1,453	1,453	1,453	1,453	1,453	1,453	1,453
7.	ಮೀಸಲುಗಳು (ಮೌಲ್ಯಮಾಪಿತ ಮೀಸಲುಗಳನ್ನು ಹೊರತುಪಡಿಸಿ ಹಿಂದಿನ ವರ್ಷದ ಪರಿಶೋಧಿತ ಆಯವ್ಯಯ ಪಟ್ಟಿಯಲ್ಲಿ ತೋರಿಸಲಾಗಿದೆ			39,815	36,644			39,745	35,827
8.	ಪ್ರತಿ ಷೇರಿನ ಗಳಿಕೆ (ಪ್ರತಿ ಷೇರಿಗೆ ರೂ. 2/–) [ಸೂಚನೆ (ಸಿ) ಅನ್ನು ನೋಡಿ]								
	1. ಮೂಲ :	2.30	0.33	4.27	9.70	2.94	0.82	5.41	9.29
	2. ದುರ್ಬಲೀಕೃತ :	2.30	0.33	4.27	9.70	2.94	0.82	5.41	9.29

ಸೂಚನೆಗಳು:

ಎ) ಮೇಲಿನದು 2015ರ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಫೈಲ್ ಮಾಡಿರುವ ತ್ರೈಮಾಸಿಕ/ವರ್ಷದ ಆರ್ಥಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಂಶವಾಗಿದೆ. ತ್ರೈಮಾಸಿಕ/ವರ್ಷದ ಆರ್ಥಿಕ ಫಲಿತಾಂಶಗಳ ವಿವರವಾದ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಲಭ್ಯವಿರುತ್ತದೆ.

ಬಿ) ಅಸಾಧಾರಣ ಮತ್ತು/ಅಥವಾ ಅಸಾಮಾನ್ಯ ಐಟಂಗಳನ್ನು, ಕಂಪನಿಗಳ (ಭಾರತೀಯ ಅಕೌಂಟಿಂಗ್ ಸ್ಟಾಂಡರ್ಡ್ಸ್) ನಿಯಮಗಳು, 2015 ಕಂಪನಿ ಕಾಯಿದೆ 2013 ಮತ್ತು ನೀತಿಗಳ ವಿಭಾಗ 133 ಅಡಿಯಲ್ಲಿ ಶಿಫಾರಸು ಅನುಗುಣವಾಗಿ ಲಾಭ ಹೇಳಿಕೆ ಮತ್ತು ನಷ್ಟದಲ್ಲಿ ಸರಿಹೊಂದಿಸಲ್ಪಡುತ್ತದೆ.

ಸಿ) ಏಕೀಕೃತ ಹಣಕಾಸು ಅಡಿಯಲ್ಲಿ ಎಲ್ಲಾ ಅವಧಿಗಳಲ್ಲಿ ಬಾಕಿ ಇರುವ ಈಕ್ವಿಟಿ ಷೇರುಗಳ ಲೆಕ್ಕಹಾಕುವಲ್ಲಿ, ಕಂಪನಿಯು ಯುಎಸ್‌ಎಲ್ ಬೆನಿಫಿಟ್ ಟ್ರಸ್ಟ್‌ನಲ್ಲಿ ಹೊಂದಿರುವ (ಕಂಪೆನಿಯ ಏಕೈಕ ಫಲಾನುಭವಿಯಾಗಿರುವ) ಸ್ವಂತ ಷೇರುಗಳನ್ನು ಕಡಿಮೆ ಮಾಡಿದೆ.

ನಿರ್ದೇಶಕರ ಮಂಡಳಿಯ ನಿಮಿತ್ಯ ಮತ್ತು ಅವರ ಪರವಾಗಿ

ಸಹಿ/–
ಆನಂದ್ ಕ್ರಿಪಾಲು
ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಸ್ಥಳ : ಮುಂಬಯಿ
ದಿನಾಂಕ : ಮೇ 21, 2021

ಕೋವಿಡ್ ಆರೈಕೆ ಕೇಂದ್ರಗಳಲ್ಲಿರುವ (ಸಿಸಿಸಿ) ರೋಗಿಗಳಲ್ಲೂ ಕುಸಿಯುತ್ತಿದೆ ಆಮ್ಲಜನಕ ಮಟ್ಟ

ಕಾಡಲಿದೆಯೇ ಆಮ್ಲಜನಕ ಹಾಸಿಗೆ ಕೊರತೆ

• ಗುರು ಪಿ.ಎಸ್.

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿನ 22 ಕೋವಿಡ್ ಆರೈಕೆ ಕೇಂದ್ರಗಳಲ್ಲಿ (ಸಿಸಿಸಿ) ಸಾಮಾನ್ಯ ಹಾಸಿಗೆಗಳಿಗೆ ಅಷ್ಟೊಂದು ಬೇಡಿಕೆ ಇಲ್ಲ. ಆದರೆ, ಆಮ್ಲಜನಕ ವ್ಯವಸ್ಥೆ ಹೊಂದಿರುವ ಹಾಸಿಗೆಗಳು ಬಹುತೇಕ ಭರ್ತಿಯಾಗಿವೆ.

ಮನೆಯಲ್ಲಿ ಪ್ರತ್ಯೇಕ ಕೊಠಡಿ, ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಹೊಂದಿರದವರು, ಮನೆಯಲ್ಲಿ ಇತರೆ ಆರೋಗ್ಯ ಸಮಸ್ಯೆ ಹೊಂದಿರುವವರು ಇದ್ದರೆ ಅಲ್ಲಿನ ಕೊರೊನಾ ಸೋಂಕಿತರು ಮನೆ ಆರೈಕೆಯಲ್ಲಿ ಇರುವಂತಿಲ್ಲ. ಕಡ್ಡಾಯವಾಗಿ ಅವರು ಸಮೀಪದ ಕೋವಿಡ್ ಆರೈಕೆ ಕೇಂದ್ರಕ್ಕೆ ದಾಖಲಾಗಬೇಕು ಎಂದು ಬಿಬಿಎಂಪಿ ಆದೇಶಿಸಿದೆ. ಈ ನಿಯಮ ಕಟ್ಟುನಿಟ್ಟಾಗಿ ಜಾರಿಗೆ ಬಂದರೆ ಸಿಸಿಸಿಗಳಲ್ಲಿ ಹಾಸಿಗೆ ಕೊರತೆ ಉದ್ಭವಿಸಲಿದೆ ಎಂದು ಈ ಕೇಂದ್ರಗಳ ನೋಡಲ್ ಅಧಿಕಾರಿಗಳೇ ಹೇಳುತ್ತಾರೆ.

ಸದ್ಯ, ನಗರದಲ್ಲಿ 2.90 ಲಕ್ಷ ಸಕ್ರಿಯ ಪ್ರಕರಣಗಳು ಇವೆ. ಈ ಪೈಕಿ ಶೇ 85ಕ್ಕಿಂತ ಹೆಚ್ಚು ಜನ ಮನೆ ಆರೈಕೆಯಲ್ಲಿದ್ದಾರೆ. ಇವರಲ್ಲಿ ಶೇ 10ರಷ್ಟು ಜನ ಸಿಸಿಸಿಗಳಿಗೆ ಬಂದರೂ ಕನಿಷ್ಠ 29 ಸಾವಿರ ಹಾಸಿಗೆಗಳು ಬೇಕಾಗುತ್ತವೆ. ಆದರೆ, ಈ ಕೇಂದ್ರಗಳಲ್ಲಿ ಸುಮಾರು 2,500 ಹಾಸಿಗೆಗಳಿದ್ದರೆ, ಇವುಗಳಲ್ಲಿ ಆಮ್ಲಜನಕ ವ್ಯವಸ್ಥೆ ಹೊಂದಿರುವ ಹಾಸಿಗೆಗಳ ಸಂಖ್ಯೆ 1000 ಮಾತ್ರ.

ಕುಸಿಯುತ್ತಿದೆ ಆಮ್ಲಜನಕ ಮಟ್ಟ: 'ಕಳೆದ ಬಾರಿ ಆರೋಗ್ಯ ಸ್ಥಿತಿ ಸ್ಥಿರವಾಗಿದ್ದವರು ಬಂದು, ಒಂದೆರಡು ದಿನ ಇದ್ದು ಗುಣಮುಖರಾಗಿ ಹೋಗುತ್ತಿದ್ದರು. ಈ ಬಾರಿ ಆಮ್ಲಜನಕ ಮಟ್ಟ 90–95 ಇದ್ದರೂ, ಆರೈಕೆ ಕೇಂದ್ರಗಳಿಗೆ ಬಂದ ನಂತರ ಈ ಮಟ್ಟ ಕೆಲವರಲ್ಲಿ ಕುಸಿಯುತ್ತಿದೆ. ಕೆಲವರ ಸ್ಥಿತಿ ಗಂಭೀರವಾಗುತ್ತಿದೆ. ಆಮ್ಲಜನಕ ಹಾಸಿಗೆಗಳ ಸಂಖ್ಯೆ ಹೆಚ್ಚು ಅಗತ್ಯವಿದೆ' ಎಂದು ಸಿಸಿಸಿ ಒಂದರ ನೋಡಲ್ ಅಧಿಕಾರಿಯೊಬ್ಬರು ಹೇಳಿದರು.

ಪ್ರಜಾವಾಣಿ ವಿಶೇಷ

'ನಿಯಮದ ಪ್ರಕಾರ, ಆಮ್ಲಜನಕ ಮಟ್ಟ 93ಕ್ಕಿಂತ ಮೇಲ್ಪಟ್ಟವರನ್ನು ಮಾತ್ರ ಸಿಸಿಸಿಗಳಿಗೆ ದಾಖಲು ಮಾಡಿಕೊಳ್ಳಬೇಕು. ಆದರೆ, ನಾವು 85 ಇದ್ದರೂ ಮಾನವೀಯತೆಯ ದೃಷ್ಟಿಯಿಂದ ದಾಖಲು ಮಾಡಿಕೊಳ್ಳುತ್ತಿದ್ದೇವೆ. ಇಂಥವರಿಗೆ ಆಮ್ಲಜನಕ ಪೂರೈಕೆ ಅತಿ ಅವಶ್ಯಕ' ಎಂದು ಮತ್ತೊಂದು ಕೇಂದ್ರದ ಅಧಿಕಾರಿಯೊಬ್ಬರು ಹೇಳಿದರು.

'ಒಬ್ಬ ವ್ಯಕ್ತಿಗೆ 5 ಲೀಟರ್‌ವರೆಗೆ ಆಮ್ಲಜನಕ ಪೂರೈಸಬಹುದು. ಅದರ ನಂತರವೂ ಅವರಿಗೆ ಈ ವ್ಯವಸ್ಥೆ ಅಗತ್ಯವಿದ್ದರೆ ಆಸ್ಪತ್ರೆಗೆ ದಾಖಲಿಸುವುದು ಅಗತ್ಯವಾಗಿರುತ್ತದೆ. ಸದ್ಯ, ಗುಣಮುಖ ಹೊಂದುತ್ತಿರುವವರ ಪ್ರಮಾಣವೂ ಹೆಚ್ಚಾಗುತ್ತಿರುವುದರಿಂದ ಸದ್ಯಕ್ಕೆ ಹಾಸಿಗೆಗಳ ಕೊರತೆ ಎದುರಾಗದು' ಎಂದು ಶಾಂತಿನಗರದ ಸರ್ಕಾರಿ ಬಾಲಕರ ಕಲಾ ಕಾಲೇಜು ಕೇಂದ್ರದ ಅಧಿಕಾರಿಯೊಬ್ಬರು ಹೇಳಿದರು.

'ನಮ್ಮ ಕೇಂದ್ರದಲ್ಲಿ 51 ಹಾಸಿಗೆಗಳು ಖಾಲಿ ಇದ್ದರೆ, 46 ಭರ್ತಿಯಾಗಿವೆ. ಆಮ್ಲಜನಕ ಮಟ್ಟ ಕುಸಿದವರಿಗೆ ತಕ್ಷಣಕ್ಕೆ ಆಮ್ಲಜನಕ ಪೂರೈಸಿ ಅವರ ಆರೋಗ್ಯ ಸ್ಥಿರಗೊಳಿಸುತ್ತಿದ್ದೇವೆ. ಆರೋಗ್ಯ ಸ್ಥಿತಿ ಸ್ಥಿರವಾಗಿದ್ದ ಕೆಲವರಲ್ಲಿಯೂ ಇಲ್ಲಿಗೆ ಬಂದ ನಂತರ ಆಮ್ಲಜನಕ ಮಟ್ಟ ಕುಸಿಯುತ್ತಿದೆ. ಬಹಳಷ್ಟು ಜನ ಸಿಸಿಸಿಗಳನ್ನು ಆಸ್ಪತ್ರೆಗಳೆಂದೇ ಭಾವಿಸಿ ಬರುತ್ತಾರೆ. ಈ ಕೇಂದ್ರಗಳಲ್ಲಿ ಐಸಿಯು ವ್ಯವಸ್ಥೆ ಇರುವುದಿಲ್ಲ ಎಂಬುದು ಅನೇಕರಿಗೆ ತಿಳಿದಿಲ್ಲ' ಎಂದು ವಿಜಿನಾಪುರದ ಒಯೊ ನವ್ಯಶ್ರೀ ಇಂಟರ್‌ನ್ಯಾಷನಲ್ ಹೋಟೆಲ್ ಸಿಸಿಸಿಯ ಬಿಬಿಎಂಪಿ ನೋಡಲ್ ಅಧಿಕಾರಿ ಡಾ. ವೈಭವಿ ಬಿ. ಪ್ರಸಾದ್ ಹೇಳಿದರು.

'ಸಿಸಿಸಿಗಳು ಆಸ್ಪತ್ರೆ ಹತ್ತಿರದಲ್ಲಿರಲಿ'

'ಸಿಸಿಸಿಗಳಿಗೆ ಬಂದ ನಂತರ ಕೆಲವರ ಆರೋಗ್ಯ ಸ್ಥಿತಿ ಗಂಭೀರವಾಗುತ್ತಿದೆ. ಈ ಕೇಂದ್ರಗಳಲ್ಲಿ ವೆಂಟಿಲೇಟರ್ ಅಥವಾ ಐಸಿಯುದಂತಹ ವ್ಯವಸ್ಥೆ ಇರುವುದಿಲ್ಲ. ಅದಕ್ಕಾಗಿ, ಇಂತಹ ಕೇಂದ್ರಗಳನ್ನು ಆಸ್ಪತ್ರೆಗಳ ಬಳಿಯಲ್ಲಿಯೇ ಸ್ಥಾಪಿಸುವುದು ಉತ್ತಮ' ಎಂದು ಅಧಿಕಾರಿಯೊಬ್ಬರು ಸಲಹೆ ನೀಡಿದರು.

'ನಗರದಲ್ಲಿ ದಿನದಿಂದ ದಿನಕ್ಕೆ ಸಿಸಿಸಿಗಳ ಸಂಖ್ಯೆ ಹೆಚ್ಚುತ್ತಿರುವುದು ಸ್ವಾಗತಾರ್ಹ. ಆದರೆ, ಕಟ್ಟಡ ಅಥವಾ ಜಾಗ ಸಿಕ್ಕಿತು ಎಂಬ ಮಾತ್ರಕ್ಕೆ ಎಲ್ಲೆಂದರಲ್ಲಿ ಇಂತಹ ಕೇಂದ್ರ ಸ್ಥಾಪಿಸುವ ಬದಲು ಆಸ್ಪತ್ರೆಯ ಬಳಿಯಲ್ಲಿಯೇ ಮಾಡಬೇಕು. ಅಲ್ಲದೆ, ಶೌಚಾಲಯ ವ್ಯವಸ್ಥೆ, ನಿರಂತರ ವಿದ್ಯುತ್ ಮತ್ತು ನೀರು ಪೂರೈಕೆ ವ್ಯವಸ್ಥೆ ಇರುವಂತೆ ನೋಡಿಕೊಳ್ಳಬೇಕು' ಎಂದರು.



ಹಜ್ ಭವನದಲ್ಲಿರುವ ಆರೈಕೆ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಕೀಯ ಸಿಬ್ಬಂದಿ –ಪ್ರಜಾವಾಣಿ ಚಿತ್ರ

'ಆಮ್ಲಜನಕ ಹಾಸಿಗೆ ಕೊರತೆ ಬಾಧಿಸದು'

'ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಆರೈಕೆ ಕೇಂದ್ರಗಳಲ್ಲಿ ಹಾಸಿಗೆಯ ಕೊರತೆ ಇಲ್ಲ. ಸಾವಿರಕ್ಕೂ ಹೆಚ್ಚು ಆಮ್ಲಜನಕ ಸಹಿತ ಹಾಸಿಗೆಗಳ ಪೈಕಿ 300ರಿಂದ 400 ಹಾಸಿಗೆಗಳು ಈಗಲೂ ಖಾಲಿ ಇವೆ' ಎಂದು ಸಿಸಿಸಿಗಳ ಉಸ್ತುವಾರಿ ಮತ್ತು ಬಿಬಿಎಂಪಿ ಜಂಟಿ ಆಯುಕ್ತ ಸರ್ಫ್‌ರಾಜ್ ಖಾನ್ 'ಪ್ರಜಾವಾಣಿ'ಗೆ ತಿಳಿಸಿದರು.

'ಸಿಸಿಸಿಗಳಿಗೆ ಬರುವವರ ಸಂಖ್ಯೆ ಹೆಚ್ಚಿದರೂ ಅದಕ್ಕೆ ಬೇಕಾದ ವ್ಯವಸ್ಥೆ ಮಾಡಲಾಗಿದೆ. ಈಗಿರುವ ಕೇಂದ್ರಗಳಲ್ಲಿಯೇ ಹೆಚ್ಚುವರಿಯಾಗಿ ಇನ್ನೂ ಒಂದೂವರೆ ಸಾವಿರದಷ್ಟು ಹಾಸಿಗೆಗಳ ಸಂಖ್ಯೆ ಹೆಚ್ಚಿಸಬಹುದಾಗಿದೆ' ಎಂದರು.

'ಬಹುತೇಕ ಸಿಸಿಸಿಗಳು ನೇರ ಚಿಕಿತ್ಸಾ ಕೇಂದ್ರಗಳಂತೆಯೂ (ಟ್ರಯಾಜ್ ಸೆಂಟರ್) ಕಾರ್ಯನಿರ್ವಹಿಸುತ್ತಿವೆ. ಆರೈಕೆ ಮತ್ತು ತುರ್ತು ಚಿಕಿತ್ಸೆ ಅಗತ್ಯವಿರುವವರಿಗೆ ಇಲ್ಲಿ ಸೇವೆ ಸಿಗುತ್ತಿದೆ. ಬಹುತೇಕರು ಇಲ್ಲಿ ಚಿಕಿತ್ಸೆ ಪಡೆದು ಮನೆಗೆ ತೆರಳುತ್ತಿದ್ದಾರೆ. ಗಂಭೀರ ಸ್ಥಿತಿ ಇರುವವರನ್ನು ತಕ್ಷಣಕ್ಕೆ ಆಸ್ಪತ್ರೆಗೆ ಕಳುಹಿಸಲಾಗುತ್ತಿದೆ' ಎಂದೂ ಅವರು ಮಾಹಿತಿ ನೀಡಿದರು.

'ಲಾಕ್‌ಡೌನ್ ಅವಧಿ ಮುಗಿಯುವಷ್ಟರಲ್ಲಿ ಸೋಂಕು ಹರಡುವಿಕೆಯ ಸರಪಳಿ ತುಂಡಾಗುವ ಸಾಧ್ಯತೆ ಇದೆ. ಆಗ ಪ್ರಕರಣಗಳ ಸಂಖ್ಯೆಯೂ ಕಡಿಮೆಯಾಗಲಿದ್ದು, ಗುಣಮುಖ ಹೊಂದುವವರ ಸಂಖ್ಯೆ ಹೆಚ್ಚಾಗಲಿದೆ. ಆಗ ಹೆಚ್ಚು ಹಾಸಿಗೆಗಳ ಅಗತ್ಯ ಬೀಳುವುದಿಲ್ಲ' ಎಂದೂ ಅವರು ವಿವರಿಸಿದರು.

ನಗರದಲ್ಲಿರುವ ಆರೈಕೆ ಕೇಂದ್ರಗಳ ವಿವರ

ಆರೈಕೆ ಕೇಂದ್ರ	ಸಾಮಾನ್ಯ ಹಾಸಿಗೆ	ಆಮ್ಲಜನಕದ ಹಾಸಿಗೆ	ಒಟ್ಟು
ಮಂಗಳ ರೈತ ಭವನ, ಹೆಬ್ಬಾಳ	3	52	55
ಡಾ. ಬಿ.ಆರ್. ಅಂಬೇಡ್ಕರ್ ಕಾಲೇಜು, ಕೆ.ಜಿ. ಹಳ್ಳಿ	0	100	100
ಸರ್ಕಾರಿ ಬಾಲಕರ ಕಲಾ ಕಾಲೇಜು, ಶಾಂತಿನಗರ	94	81	175
ಸರ್ಕಾರಿ ಯುನಾನಿ ವೈದ್ಯಕೀಯ ಕಾಲೇಜು, ಬಸವೇಶ್ವನಗರ	30	45	75
ಬಾಷ್, ಆಡುಗೋಡಿ	48	27	75
ಕೋರಮಂಗಲ ಒಳಾಂಗಣ ಕ್ರೀಡಾಂಗಣ	157	43	200
ಬ್ಲಾಸಮ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಬೊಮ್ಮನಹಳ್ಳಿ	50	0	50
ಸಮಾಜ ಕಲ್ಯಾಣ ಇಲಾಖೆ ಹಾಸ್ಟೆಲ್, ಎಚ್‌ಎಸ್‌ಆರ್ ಬಡಾವಣೆ	50	0	50
ಕ್ಯಾಪಿಟಲ್ ವುಡ್‌ಹೋಸ್ಟ್ ರೆಸಾರ್ಟ್, ಅಂಜನಾಪುರ	0	12	12
ಬಸವ ಭವನ, ಬೊಮ್ಮನಹಳ್ಳಿ	30	3	33
ಕಾರ್ಮಿಕ ಭವನ, ಬಾಗಲಕುಂಟೆ	99	8	107
ಒಯೊ ನವ್ಯಶ್ರೀ ಹೋಟೆಲ್, ವಿಜಿನಾಪುರ	75	23	98
ಎಚ್‌ಎಲ್, ವಿಜಿನಾಪುರ	135	43	178
ಒಕ್ವೆವಿಯಾ ಹೋಟೆಲ್, ಕೈಕೊಂಡಹಳ್ಳಿ	30	0	39
ಕೀ ಹೌಸ್ ಹೋಟೆಲ್, ಕೆ.ಜಿ. ಹಳ್ಳಿ	50	0	50
ಥಿಂಕ್ ಹೋಟೆಲ್, ವೈಟ್‌ಫೀಲ್ಡ್	50	0	50
ಒಯೊ ಟೌನ್ ಹೌಸ್, ಕಸ್ತೂರಿ ನಗರ	50	0	50
ಜ್ಞಾನಭಾರತಿ	335	35	370
ಸರ್ಕಾರಿ ಪದವಿಪೂರ್ವ ಬಾಲಕಿಯರ ಹಾಸ್ಟೆಲ್, ಯಲಹಂಕ	40	10	50
ಜಿಕೆವಿಕೆ ಕೃಷಿ ವಿಶ್ವವಿದ್ಯಾಲಯ	280	100	380
ಹಜ್ ಭವನ, ನಾಗವಾರ	0	100	100
ಕೇಂದ್ರೀಯ ವಿದ್ಯಾಲಯ, ಶಿವಾಜಿನಗರ	55	45	100

ಸುದ್ದಿ 2 ನಿಮಿಷ

ಹೊಸ ದಾಖಲೆ ಬರೆದ 'ಜ್ಞಾನ'

ರಾಮನಗರ: ಸಂಗೀತ ಕ್ಷೇತ್ರದ ಬಾಲಪ್ರತಿಭೆ ಜ್ಞಾನ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆದುಕೊಂಡಿದ್ದಾಳೆ.

ಐದು ವರ್ಷದ ಜ್ಞಾನ ತನ್ನ ಗಾಯನದ ಮೂಲಕ ಈವರೆಗೆ ವಿವಿಧ ಸಂಘ–ಸಂಸ್ಥೆಗಳಿಂದ 112 ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದ್ದು, ಕನ್ನಡದಲ್ಲಿ ಈ ಸಾಧನೆ ಮಾಡಿದ ಕಿರಿಯ ಗಾಯಕಿ ಎಂಬ ಗೌರವಕ್ಕೆ ಪಾತ್ರಳಾಗಿದ್ದಾಳೆ.

ಜ್ಞಾನ 'ಜೀ' ವಾಹಿನಿಯ ಸರಿಗಮಪ, 'ಡಾನ್ಸ್ ಕರ್ನಾಟಕ ಡಾನ್ಸ್' ಮೊದಲಾದ ರಿಯಾಲಿಟಿ ಶೋಗಳ ಮೂಲಕ ಈಗಾಗಲೇ ಜನಪ್ರಿಯಳಾಗಿದ್ದಾಳೆ. ಈಕೆಯ ತಾಯಿ ರೇಖಾ ಗುರುರಾಜ್ ರಾಮನಗರ ತಾಲ್ಲೂಕಿನ ಅನುಮಾನಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಸಂಗೀತ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ಬಾಲಕಿ ಕಳೆದ ವರ್ಷ ರಾಮನಗರ ನಗರಸಭೆಯ ಸರ್ವೇಕ್ಷಣ್ ಅಭಿಯಾನದ ರಾಯಭಾರಿ ಗೌರವ ಸಹ ಪಡೆದುಕೊಂಡಿದ್ದಳು.



ಮೃತದೇಹ ಸಾಗಿಸಲು ಹೆಚ್ಚಿನ ಹಣ: ಆಂಬುಲೆನ್ಸ್ ಜಪ್ತಿ

ಬೆಂಗಳೂರು: ಕೋವಿಡ್‌ನಿಂದ ತೀರಿಕೊಂಡ ಮಹಿಳೆಯೊಬ್ಬರ ಮೃತದೇಹವನ್ನು ಸಾಗಿಸಲು ಹೆಚ್ಚಿನ ಹಣಕ್ಕೆ ಬೇಡಿಕೆ ಇಟ್ಟಿದ್ದ ಆಂಬುಲೆನ್ಸ್ ಚಾಲಕನನ್ನು ತಹಶೀಲ್ದಾರ್ ನೇತೃತ್ವದ ತಂಡ ವಶಕ್ಕೆ ಪಡೆದು, ತಾವರೆಕೆರೆ ಪೊಲೀಸರ ಸುಪರ್ದಿಗೆ ನೀಡಿದೆ.

ನಗರದಲ್ಲಿ ಮೃತಪಟ್ಟ ಮಹಿಳೆಯ ಮೃತದೇಹವನ್ನು ಅಂತ್ಯಕ್ರಿಯೆ ಸ್ಥಳಕ್ಕೆ ತೆಗೆದುಕೊಂಡು ಹೋಗಲು ಆಂಬುಲೆನ್ಸ್ ಚಾಲಕ ಹೆಚ್ಚಿನ ಹಣಕ್ಕೆ ಬೇಡಿಕೆ ಇಟ್ಟಿದ್ದ. ಈ ಬಗ್ಗೆ ಮಹಿಳೆಯ ಸಂಬಂಧಿಕರು, ನಿಯಂತ್ರಣ ಕೊಠಡಿಗೆ ದೂರು ನೀಡಿದ್ದರು. ವಿಷಯ ತಿಳಿಯುತ್ತಿದ್ದಂತೆ ತಹಶೀಲ್ದಾರ್ ಶಿವಪ್ಪ ಲಮಾಣಿ, ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ನಾಗವೇಣಿ, ಕಂದಾಯ ಅಧಿಕಾರಿ ದೀಪಕ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ, ಆಂಬುಲೆನ್ಸ್ ಪತ್ತೆ ಮಾಡಿದೆ.

'ಅಂತ್ಯಕ್ರಿಯೆ ಸ್ಥಳದಲ್ಲಿ ಶೋಧ ನಡೆಸಿ ಆಂಬುಲೆನ್ಸ್ ಪತ್ತೆ ಮಾಡಲಾಯಿತು. ಅದನ್ನು ಜಪ್ತಿ ಮಾಡಿ ಚಾಲಕನನ್ನು ವಶಕ್ಕೆ ಪಡೆದು ಪೊಲೀಸರಿಗೆ ಒಪ್ಪಿಸಲಾಗಿದೆ. ತಾವರೆಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದು ತಂಡದ ಸದಸ್ಯರೊಬ್ಬರು ಹೇಳಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	16.68 ಕೋಟಿ ▲	2.65 ಕೋಟಿ ▲
ಸಕ್ರಿಯ ಪ್ರಕರಣ	1.56 ಕೋಟಿ	28.08 ಲಕ್ಷ ▼
ಗುಣಮುಖ	14.77 ಕೋಟಿ ▲	2.34 ಕೋಟಿ ▲
ಸಾವು	34.64 ಲಕ್ಷ ▲	2.99 ಲಕ್ಷ ▲

ದಿನದ ಏರಿಕೆ

	ವಿಶ್ವ	ಭಾರತ
ಹೊಸ ಪ್ರಕರಣ	6.21 ಲಕ್ಷ ▼	2,34,084 ▲
ಗುಣಮುಖ	7.21 ಲಕ್ಷ ▼	3,40,622 ▲
ಸಾವು	12,778 ▼	3,590 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 77,598 ▼ ಬ್ರೆಜಿಲ್; 29,014 ▼ ಅಮೆರಿಕ; 12,800 ▼ ಫ್ರಾನ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 58.59 ▼ ಅಮೆರಿಕ; 11.07 ▲ ಬ್ರೆಜಿಲ್; 2.86 ▼ ಫ್ರಾನ್ಸ್

(*ರಾತ್ರಿ 12 ಗಂಟೆಯರ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು: 87,300 ▲ ಮಹಾರಾಷ್ಟ್ರ; 23,013 ▲ ದೆಹಲಿ; 20,046 ▲ ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 55.53 ಮಹಾರಾಷ್ಟ್ರ ▲; 23.22 ಕೇರಳ ▲; 18.06 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಚಿತ್ರಾವಳಿ



ಮಂತ್ರ ಫಾರ್ ಚೇಂಜ್ ಹಾಗೂ ಸೂರಿಯ ಫೌಂಡೇಷನ್ ಸಹಯೋಗದಲ್ಲಿ ಜಯನಗರದ ಮಾಧವನ್ ಪಾರ್ಕ್ ಬಳಿ ಆಂಬುಲೆನ್ಸ್ ಚಾಲಕರು ಹಾಗೂ ಬಡವರಿಗೆ ಔಷಧ ಕಿಟ್‌ಗಳನ್ನು ವಿತರಿಸಲಾಯಿತು. ಮಂತ್ರ ಸಂಸ್ಥೆಯ ಪುನೀತ್, ಸೂರಿಯ ಫೌಂಡೇಷನ್‌ನ ಶರವಣ ಹಾಗೂ ತಂಡದ ಸದಸ್ಯರು ಇದ್ದಾರೆ



ನಗರದ ಹಳೇಗುಡ್ಡದ ಹಳ್ಳಿಯಲ್ಲಿರುವ ಬಿಬಿಎಂಪಿ ಸಮುದಾಯ ಭವನವನ್ನು 80 ಆಮ್ಲಜನಕ ಹಾಸಿಗೆಯ ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗಿದ್ದು, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಶನಿವಾರ ಉದ್ಘಾಟಿಸಿದರು. ಶಾಸಕ ಜಮೀರ್ ಅಹಮದ್ ಇದ್ದರು – ಪ್ರಜಾವಾಣಿ ಚಿತ್ರ



ಮಹಾಲಕ್ಷ್ಮೀ ಬಡಾವಣೆ ವ್ಯಾಪ್ತಿಯ ನಂದಿನಿ ಬಡಾವಣೆಯ ದಿನಪತ್ರಿಕೆ ವಿತರಕರು ಹಾಗೂ ಏಜೆಂಟರಿಗೆ ಶ್ರೀಮಂಜುನಾಥ ಟ್ರಸ್ಟ್ ವತಿಯಿಂದ ಆರೋಗ್ಯ ಕಿಟ್ ವಿತರಿಸಲಾಯಿತು. ಟ್ರಸ್ಟ್‌ನ ಅಧ್ಯಕ್ಷ ಅವಿನ್ ಆರಾಧ್ಯ, ಸದಸ್ಯರಾದ ವಿಜಯ ಕುಮಾರ್, ಬೋರೇಗೌಡ, ವಿತರಕ ಆನಂದ್ ಹಾಗೂ ಇತರರು ಇದ್ದರು.

ಕಸ ನಿರ್ವಹಣೆ: ನೋಂದಣಿಯಾಯಿತು ಕಂಪನಿ

ಬಿಬಿಎಂಪಿ ಸಿಬ್ಬಂದಿ ಅಧಿಕೃತ ಹಸ್ತಾಂತರ ಪ್ರಕ್ರಿಯೆ ಚಾಲ್ತಿಯಲ್ಲಿ • ಜುಲೈನಿಂದಲೇ ಕಾರ್ಯ ನಿರ್ವಹಣೆ?

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕಸ ನಿರ್ವಹಣೆಗೆ ಪ್ರತ್ಯೇಕ ಕಂಪನಿ ಸ್ಥಾಪಿಸುವ ಪ್ರಮುಖ ಪ್ರಕ್ರಿಯೆ ಪೂರ್ಣಗೊಂಡಿದೆ. ಸರ್ಕಾರ 'ಬೆಂಗಳೂರು ಕಸ ನಿರ್ವಹಣೆ ಕಂಪನಿ'ಯನ್ನು (ಬೆಂಗಳೂರು ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಲಿಮಿಟೆಡ್) ಕಾರ್ಪೊರೇಟ್ ಕಂಪನಿಗಳ ಕಾಯ್ದೆ ಅಡಿ ನೋಂದಣಿ ಮಾಡಿದೆ.

ಕೇಂದ್ರ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಈ ಕುರಿತ ಪ್ರಮಾಣಪತ್ರವನ್ನು ಶನಿವಾರ (ಮೇ 22) ನೀಡಿದೆ. ಕಸ ನಿರ್ವಹಣೆ ಕಂಪನಿಗೆ ಕಾರ್ಪೊರೇಟ್ ಗುರುತು ಸಂಖ್ಯೆ (U37100KA2021SGC147734), ಪ್ಯಾನ್ ಸಂಖ್ಯೆ ಹಾಗೂ ಟ್ಯಾನ್ ಸಂಖ್ಯೆಗಳನ್ನು ಸಚಿವಾಲಯವು ನೀಡಿದೆ. ಇದರೊಂದಿಗೆ ಬಿಬಿಎಂಪಿ ವ್ಯಾಪ್ತಿಯ ಕಸ ವಿಲೇವಾರಿ ಹೊಣೆಗೆ ಕಾರ್ಪೊರೇಟ್ ಕಂಪನಿಯನ್ನು ರಚಿಸುವ ಮಹತ್ತರ ಘಟ್ಟ ಪೂರ್ಣಗೊಂಡಿದೆ.

ಹಸ್ತಾಂತರ ಪ್ರಕ್ರಿಯೆ: ಪ್ರಸ್ತುತ ಬಿಬಿಎಂಪಿಯ ಕಸ ವಿಲೇವಾರಿ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಂಪನಿಯ ತೆಕ್ಕೆಗೆ ಬರಲಿದ್ದಾರೆ. ಕಸ ನಿರ್ವಹಣೆಗೆ ಬಳಕೆಯಾಗುತ್ತಿರುವ ಪರಿಕರಗಳು, ಕಸ ಸಂಸ್ಕರಣಾ ಕೇಂದ್ರಗಳು, ಆಟೊಟಿಪ್ಪರ್‌ಗಳು, ಕಸ ವರ್ಗಾವಣೆಗೆ ಬಳಸುವ ಕಾಂಪ್ಯಾಕ್ಟರ್‌ಗಳು, ಒಣ ತ್ಯಾಜ್ಯ ಸಂಗ್ರಹ ಕೇಂದ್ರಗಳನ್ನು ಕಂಪನಿಗೆ ಹಸ್ತಾಂತರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

'ಕಸ ನಿರ್ವಹಣೆಯ ಪರಿಕರಗಳ ವಿವರ ಹಾಗೂ ಸಿಬ್ಬಂದಿಯ ಪಟ್ಟಿಯನ್ನು ಸರ್ಕಾರ ಕೇಳಿದೆ. ಕಸ ನಿರ್ವಹಣೆಗಯ ಗುತ್ತಿಗೆಗಳು, ಈ ಕುರಿತ ಆಸ್ತಿಗಳು ಹಾಗೂ ಬಾಧ್ಯತೆಗಳ ವಿವರಗಳನ್ನೂ ಒದಗಿಸಬೇಕಿದೆ' ಎಂದು ಬಿಬಿಎಂಪಿಯ ವಿಶೇಷ ಆಯುಕ್ತ (ಕಸ ನಿರ್ವಹಣೆ) ಡಿ.ರಂದೀಪ್ 'ಪ್ರಜಾವಾಣಿ' ತಿಳಿಸಿದರು.

'ಏಳು ಕಸ ಸಂಸ್ಕರಣಾ ಕೇಂದ್ರಗಳಲ್ಲಿರುವ ಸ್ವತ್ತುಗಳು, 13 ಬಯೋಮೀಥೇನ್ ಘಟಕಗಳು. ವಿವಿಧ ವಾರ್ಡ್‌ಗಳಲ್ಲಿರುವ ಒಣ ಕಸ ಸಂಗ್ರಹ ಕೇಂದ್ರಗಳೂ ಸೇರಿದಂತೆ ಕಸ ನಿರ್ವಹಣೆಗೆ ಸಂಬಂಧಿಸಿದ ಸಮಗ್ರ ಆಸ್ತಿಗಳ ವಿವರ ಹಾಗೂ ಕಸ ವಿಲೇವಾರಿ ಸಿಬ್ಬಂದಿಯ ವಿವರಗಳನ್ನು ಕೇಳಿದ್ದೇವೆ. ಸಿಬ್ಬಂದಿ ಹಾಗೂ ಸ್ವತ್ತುಗಳ ಹಸ್ತಾಂತರ ಪ್ರಕ್ರಿಯೆಯನ್ನು ಶೀಘ್ರವೇ ಪೂರ್ಣಗೊಳ್ಳಲಿದೆ. ಮುಂಬರುವ ಜುಲೈ ತಿಂಗಳಿನಿಂದಲೇ ಕಂಪನಿ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸಬೇಕೆಂಬ ಆಶಯದೊಂದಿಗೆ ಸಿದ್ಧತೆಗಳು ನಡೆದಿವೆ' ಎಂದು ನಗರಾಭಿವೃದ್ಧಿ ಇಲಾಖೆಯ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಗುತ್ತಿಗೆ ಮುಂದುವರಿಕೆ: 'ವಾರ್ಡ್‌ವಾರು ಕಸ ನಿರ್ವಹಣೆಗೆ ಬಿಬಿಎಂಪಿ ಮಾಡಿಕೊಂಡಿರುವ ಗುತ್ತಿಗೆಗಳು ಸದ್ಯಕ್ಕೆ ಮುಂದುವರಿಯಲಿವೆ. ಕಸ ನಿರ್ವಹಣೆಯ ಗುಣಮಟ್ಟವನ್ನು ಒಂದು ವರ್ಷ ನೋಡಿ ನಂತರ ಗುತ್ತಿಗೆ ಮುಂದುವರಿಸಬೇಕೋ ಬೇಡವೋ ಎಂಬುದನ್ನು ಕಂಪನಿ ನಿರ್ಧರಿಸಲಿದೆ' ಎಂದು ಅವರು ತಿಳಿಸಿದರು.

ಬಿಬಿಎಂಪಿ ಸುದ್ದಿ

ಕಂಪನಿಯಡಿ ಕಾರ್ಯ ನಿರ್ವಹಿಸಲು ಹಿಂದೇಟು?

ಬಿಬಿಎಂಪಿಯ ಕಸ ನಿರ್ವಹಣೆ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಂಜಿನಿಯರ್‌ಗಳು ಸೇರಿದಂತೆ ಬಹುತೇಕ ಸಿಬ್ಬಂದಿ ಕಸ ನಿರ್ವಹಣೆಯ ಕಾರ್ಪೊರೇಟ್ ಕಂಪನಿ ಅಡಿ ಕಾರ್ಯ ನಿರ್ವಹಿಸಲು ಹಿಂದೇಟು ಹಾಕುತ್ತಿದ್ದಾರೆ.

'ಸಿವಿಲ್ ಎಂಜಿನಿಯರ್‌ಗಳನ್ನೂ ಪರಿಸರ ಎಂಜಿನಿಯರ್ ಆಗಿ ಬಳಸಿಕೊಳ್ಳಲಾಗುತ್ತಿದೆ. ಬಿಬಿಎಂಪಿಯಲ್ಲಿ ಅವರಿಗೆ ಸೇವಾ ಹಿರಿತನ ಸಿಗುತ್ತದೆ. ಕಂಪನಿ ನೌಕರರಾದರೆ ಸರ್ಕಾರಿ ಸೌಲಭ್ಯಗಳನ್ನು ಕಳೆದುಕೊಳ್ಳಬೇಕಾಗುತ್ತದೆ ಎಂಬ ಆತಂಕ ಕೆಲವರಲ್ಲಿದೆ. ಹಾಗಾಗಿ ಕಂಪನಿ ಅಡಿ ಕಾರ್ಯ ನಿರ್ವಹಿಸಲು ಸಿಬ್ಬಂದಿ ಹಿಂಜರಿಕೆ ಹೊಂದಿದ್ದಾರೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

'ಕಂಪನಿಯ ತೆಕ್ಕೆಗೆ ಬಂದರೂ ಬಿಬಿಎಂಪಿ ನೌಕರರಾಗಿಯೂ ಮುಂದುವರಿಯುವುದಕ್ಕೂ ಅವಕಾಶ ಇದೆ. ಎರವಲು ಸೇವೆ ಎಂದು ಪರಿಗಣಿಸಿ ಅವರನ್ನು ನಿಯುಕ್ತಿ ಮಾಡಬಹುದು' ಎಂದು ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಬಿಬಿಎಂಪಿಯ ಈಗಿನ ಸಿಬ್ಬಂದಿಯನ್ನು ಬಳಸುವುದಲ್ಲದೇ ಕಂಪನಿಯು ಪ್ರತ್ಯೇಕ ಸಿಬ್ಬಂದಿಯನ್ನೂ ನೇಮಿಸಿಕೊಳ್ಳಲಿದೆ.

ರಾಜಕೀಯ ಹಸ್ತಕ್ಷೇಪಕ್ಕಿಲ್ಲ ಅವಕಾಶ

ಕಸ ನಿರ್ವಹಣೆಯ ಕಾರ್ಪೊರೇಟ್ ಕಂಪನಿಯ ಆಡಳಿತ ನಿರ್ವಹಣೆಗೆ ಪ್ರತ್ಯೇಕ ಕಾರ್ಯಕಾರಿ ತಂಡವನ್ನು ರಚಿಸಲಿದೆ. ಈ ತಂಡವು ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ), ಮುಖ್ಯ ಆರ್ಥಿಕ ಅಧಿಕಾರಿ (ಸಿಎಫ್‌ಒ), ವ್ಯವಸ್ಥಾಪಕರು ಹಾಗೂ ಇತರ ಸಿಬ್ಬಂದಿಯನ್ನು ಒಳಗೊಂಡಿರಲಿದೆ. ಕಾರ್ಯಕಾರಿ ತಂಡದ ನೇಮಕ ಇನ್ನಷ್ಟೇ ಆಗಬೇಕಿದೆ.

'ಪ್ರಸ್ತುತ ಪ್ರತಿ ವಾರ್ಡ್‌ನಲ್ಲೂ ರಾಜಕೀಯ ಪ್ರಭಾವಿಗಳು ಹಾಗೂ ಗುತ್ತಿಗೆದಾರರ ನಡುವೆ ಅಪವಿತ್ರ ನಂಟು ಇದೆ. ಅವರೇ ಕಸ ನಿರ್ವಹಣೆಯ ಪ್ರಕ್ರಿಯೆಯನ್ನು ನಿಯಂತ್ರಿಸುತ್ತಿದ್ದಾರೆ. ಇದರಿಂದ ಕಸ ವಿಲೇವಾರಿ ಪ್ರಕ್ರಿಯೆಯಲ್ಲಿ ಅನಿರೀಕ್ಷಿತ ತೊಡಕುಗಳು ಎದುರಾಗುತ್ತಿವೆ. ಇದನ್ನು ಮಟ್ಟಹಾಕುವ ಉದ್ದೇಶದಿಂದಲೇ ಕಂಪನಿಯ ಕಾರ್ಯಕಾರಿ ತಂಡವು ರಾಜಕೀಯ ಹಸ್ತಕ್ಷೇಪ ಮುಕ್ತವಾಗಿರುವಂತೆ ನೋಡಿಕೊಳ್ಳಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಸಿಇಒ ಅವರನ್ನು ನಿರ್ದಿಷ್ಟ ಅವಧಿಗೆ ನೇಮಿಸಲಾಗುತ್ತದೆ. ಅವರು ಕಂಪನಿಯ ಆಡಳಿತ ಮಂಡಳಿಗೆ ಮಾತ್ರ ಉತ್ತರದಾಯಿಯಾಗಿರುತ್ತಾರೆ. ರಾಜಕೀಯ ಹಸ್ತಕ್ಷೇಪವನ್ನು ತಡೆಯುವ ಉದ್ದೇಶದಿಂದ ಕಾರ್ಯಕಾರಿ ತಂಡದ ಭಾಗವಾಗುವವರು ಕೆಲವೊಂದು ಅರ್ಹತೆ ಹೊಂದಿರುವುದನ್ನು ಕಡ್ಡಾಯಪಡಿಸಲಾಗಿದೆ. ಈ ಕಾರ್ಯಕಾರಿ ತಂಡದಲ್ಲಿ ಯಾವುದೇ ಬದಲಾವಣೆ ಮಾಡುವುದಿದ್ದರೂ ಅದಕ್ಕೆ ತಾಂತ್ರಿಕ ಸಮಿತಿಯ ಅನುಮೋದನೆ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ.

- ಅವರು ಸರ್ಕಾರಿ ಅಥವಾ ಸಾರ್ವಜನಿಕ ಕ್ಷೇತ್ರದ ನೌಕರ ಆಗಿರಬಾರದು.
- ಕಂಪನಿಯಲ್ಲಿ 15 ವರ್ಷ ಕರ್ಯನಿರ್ವಹಿಸಿದ ಅನುಭವ ಹೊಂದಿರಬೇಕು (ಕಸ ನಿರ್ವಹಣೆ ಕಂಪನಿಯಲ್ಲಿ ಕಾರ್ಯನಿರ್ವಹಿಸಿದವರಿಗೆ ಆದ್ಯತೆ)
- ಪರಿಸರ ವಿಜ್ಞಾನ ಅಥವಾ ಪರಿಸರ ಎಂಜಿನಿಯರಿಂಗ್‌ನಲ್ಲಿ ಅಥವಾ ತತ್ಸಂಬಂಧಿ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು.
- ವಾಯು ಮಾಲಿನ್ಯ ತಡೆ, ಜಲ ಮಾಲಿನ್ಯ ತಡೆ, ಕಸ ನಿರ್ವಹಣೆ , ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವ ಹೊಂದಿರಬೇಕು

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

11,12,058 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
2,61,115 ▲	8,40,086 ▲	10,856 ▲

ದಿನದ ಏರಿಕೆ

ಹೊಸ ಪ್ರಕರಣ	8,214 ▼
ಗುಣಮುಖ	35,030 ▲
ಸಾವು	200 ▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಲಾರಿ ಚಕ್ರ ಹರಿದು ಸವಾರ ಸಾವು

ಬೆಂಗಳೂರು: ಹೆಬ್ಬಾಳ ಠಾಣೆ ವ್ಯಾಪ್ತಿಯಲ್ಲಿ ಲಾರಿ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಬೈಕ್‌ನ ಹಿಂಬದಿ ಸವಾರ ರಂಗನಾಥ್ (45) ಎಂಬುವರು ಮೃತಪಟ್ಟಿದ್ದಾರೆ.

'ಕೆ.ಆರ್.ಪುರ ನಿವಾಸಿ ರಂಗನಾಥ್, ಬಟ್ಟೆ ವ್ಯಾಪಾರಿ. ಸ್ನೇಹಿತ ಮಂಜುನಾಥ್ ಜೊತೆ ಶನಿವಾರ ಬೆಳಿಗ್ಗೆ ಯಶವಂತಪುರ ಮಾರುಕಟ್ಟೆಗೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ವೀರಣ್ಣನಪಾಳ್ಯ ಮೇಲ್ಸೇತುವೆ ಬಳಿ ಬೈಕ್ ಹಾಗೂ ಲಾರಿ ನಡುವೆ ಅಪಘಾತ ಆಗಿತ್ತು. ರಸ್ತೆಯಲ್ಲಿ ಬಿದ್ದಿದ್ದ ರಂಗನಾಥ್ ಅವರ ತಲೆ ಮೇಲೆಯೇ ಲಾರಿ ಚಕ್ರ ಹರಿದಿತ್ತು. ತೀವ್ರ ರಕ್ತಸ್ರಾವವಾಗಿ ರಂಗನಾಥ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಲಾರಿ ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದರು.

ಆರೈಕೆಯಲ್ಲಿರುವವರ ಮನೆಗೆ ಕೆಂಪು ಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪೀಡಿತರಾಗಿದ್ದು ಮನೆಯಲ್ಲಿಯೇ ಆರೈಕೆ (ಹೋಂ ಐಸೊಲೇಷನ್) ಪಡೆಯುತ್ತಿರುವವರ ನಿವಾಸದ ಮುಂದೆ ಕೆಂಪು ಪಟ್ಟಿ ಅಂಟಿಸಲು ಸರ್ಕಾರ ನಿರ್ಧರಿಸಿದೆ.

'ಮನೆ ಆರೈಕೆಯಲ್ಲಿರುವ ಸೋಂಕಿತರು ಹೊರಗಡೆ ತಿರುಗಾಡುತ್ತಿರುವುದೂ ಪ್ರಕರಣಗಳ ಸಂಖ್ಯೆ ಹೆಚ್ಚಾಗುವುದಕ್ಕೆ ಕಾರಣವಾಗಿದೆ. ಇದನ್ನು ತಡೆಯಲು ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಅರಣ್ಯ ಸಚಿವ ಮತ್ತು ಕೋವಿಡ್ ಸಹಾಯವಾಣಿಗಳು ಹಾಗೂ ಕೋವಿಡ್ ವಾರ್ ರೂಮ್ ಉಸ್ತುವಾರಿ ಅರವಿಂದ ಲಿಂಬಾವಳಿ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸೋಂಕಿತರ ಮನೆಯ ಅಕ್ಕ-ಪಕ್ಕದಲ್ಲಿರುವವರಿಗೂ ಇದರಿಂದ ಮಾಹಿತಿ ತಿಳಿಯಲಿದೆ. ಅವರು ಎಚ್ಚರಿಕೆಯಿಂದಿರಲು ಸಾಧ್ಯವಾಗುತ್ತದೆ' ಎಂದು ಅವರು ಹೇಳಿದರು.

'ಇಂತಹ ಕ್ರಮಗಳಿಂದ ಸೋಂಕಿತರಿಗೆ ಅವಮಾನ ಅಥವಾ ಮುಜುಗರ ಉಂಟಾಗಬಾರದು ಎಂದು ಹೈಕೋರ್ಟ್ ಹೇಳಿರುವುದೂ ಸರ್ಕಾರದ ಗಮನದಲ್ಲಿದೆ. ಸ್ವಯಂ ಸೇವಕರು ಈ ಬಗ್ಗೆ ನೆರೆ ಹೊರೆಯವರಿಗೆ ಮಾಹಿತಿ ನೀಡುವುದಲ್ಲದೆ ಹೇಗಿರಬೇಕು ಎಂಬ ಬಗ್ಗೆ ಜಾಗೃತಿ ಮೂಡಿಸಲಿದ್ದಾರೆ. ಮುಜುಗರ, ಅವಮಾನಕ್ಕೆ ಆಸ್ಪದವಾಗದಂತೆ ತಿಳಿವಳಿಕೆ ಮೂಡಿಸುತ್ತಾರೆ' ಎಂದರು.

ನಗರದಲ್ಲಿ ಸಕ್ರಿಯ ಪ್ರಕರಣಗಳ ಪೈಕಿ 1.58 ಲಕ್ಷ ಜನ ಮನೆ ಆರೈಕೆಯಲ್ಲಿದ್ದಾರೆ ಎಂದು ಕೋವಿಡ್ ವಾರ್ ರೂಮ್ ಅಂಕಿ ಅಂಶಗಳು ಹೇಳುತ್ತವೆ.

'ಮನೆ ಆರೈಕೆಯಲ್ಲಿರುವವರ ಮೇಲೆ ನಿಗಾ ಇಡಲು ನಗರದಲ್ಲಿ ಮಾತ್ರವಲ್ಲದೆ, ಇಡೀ ರಾಜ್ಯದಲ್ಲಿ ತಂಡಗಳನ್ನು ರಚಿಸಲಾಗುವುದು. ನಗರಗಳು ಆಯಾ ವಿಧಾನಸಭಾ ಕ್ಷೇತ್ರಗಳಲ್ಲಿ ಈ ಕಾರ್ಯಕ್ಕಾಗಿ ಸ್ವಯಂ ಸೇವಕರನ್ನು ಆರೋಗ್ಯ ಕಾರ್ಯಕರ್ತರೊಂದಿಗೆ ಕಳುಹಿಸಲಾಗುವುದು' ಎಂದು ಸಚಿವರು ತಿಳಿಸಿದರು.

'ಮನೆ ಆರೈಕೆಯಲ್ಲಿರುವವರ ಪೈಕಿ ಶೇ 25ರಷ್ಟು ಮಂದಿ ತಪ್ಪು ವಿಳಾಸ ಮತ್ತು ತಪ್ಪು ದೂರವಾಣಿ ಸಂಖ್ಯೆ ನೀಡಿರುವುದು ಗಮನಕ್ಕೆ ಬಂದಿದೆ. ಕೆಲವರ ದೂರವಾಣಿ ಸ್ಥಗಿತಗೊಂಡಿದೆ. ತಂಡವು ಇಂಥವರನ್ನು ಪತ್ತೆ ಹಚ್ಚುವ ಕಾರ್ಯ ಮಾಡಲಿದೆ' ಎಂದು ಅವರು ತಿಳಿಸಿದರು.

ಕಾಳಸಂತೆಯಲ್ಲಿ ಆಮ್ಲಜನಕ ಮಾರಾಟ: ಇಬ್ಬರ ಬಂಧನ

ಬೆಂಗಳೂರು: ಆಮ್ಲಜನಕ ಸಿಲಿಂಡರ್ ಅಕ್ರಮವಾಗಿ ದಾಸ್ತಾನು ಮಾಡಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಶೇಷಾದ್ರಿಪುರದ ಶಿವಗಣೇಶ್ (49) ಹಾಗೂ ಬ್ಯಾಟರಾಯನಪುರ ಭರತ್ ಬಂಧಿತರು. ಇವರಿಂದ ಆಮ್ಲಜನಕದ 4 ಸಿಲಿಂಡರ್ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಬೆಂಗಳೂರು ಗ್ಯಾಸ್ ಏಜೆನ್ಸಿ ನಡೆಸುತ್ತಿರುವ ಭರತ್, ಹಲವು ದಿನಗಳಿಂದ ಈ ಕೃತ್ಯ ಎಸಗುತ್ತಿದ್ದ. ಏಜೆಂಟ್ ಶಿವಗಣೇಶ್ ಸಹ ಪ್ರತ್ಯೇಕವಾಗಿ ಆಮ್ಲಜನಕ ಸಿಲಿಂಡರ್ ದಂಧೆ ನಡೆಸುತ್ತಿದ್ದ. ಸೋಂಕಿತರು ಹಾಗೂ ಅವರ ಸಂಬಂಧಿಕರನ್ನು ಸಂಪರ್ಕಿಸಿ ಮಾರುಕಟ್ಟೆ ಗಿಂತ ದುಬಾರಿ ಬೆಲೆಗೆ ಸಿಲಿಂಡರ್ ಮಾರುತ್ತಿದ್ದ' ಎಂದೂ ತಿಳಿಸಿದರು.

'ಆರೋಪಿಗಳ ವಿರುದ್ಧ ಶೇಷಾದ್ರಿಪುರ ಹಾಗೂ ಬ್ಯಾಟರಾಯನಪುರ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ' ಎಂದೂ ಪೊಲೀಸರು ಹೇಳಿದರು.

2018ರ ಪ್ರಕರಣ ಭೇದಿಸಿದ ಪೊಲೀಸರು • ಹಣ ಹಂಚಿಕೊಂಡು ಕಾರು, ಚಿನ್ನ ಖರೀದಿಸಿದ್ದ ಆರೋಪಿಗಳು

ಚಾಲಕನ ಕೊಂದು ₹ 75 ಲಕ್ಷ ದೋಚಿದ್ದ ಆರೋಪಿಗಳ ಸೆರೆ


ಪ್ರಜಾವಾಣಿ ವಾರ್ತೆ



ಮಧುಸೂದನ್



ಎಂ.ಬಿ. ಪ್ರಸನ್ನ



ಎನ್. ಕುಮಾರ್



ಯು. ಮಹೇಶ್

ಬೆಂಗಳೂರು: ಎಟಿಎಂ ಯಂತ್ರಕ್ಕೆ ಹಣ ತುಂಬುವ ವಾಹನದ ಚಾಲಕನನ್ನು ಕೊಂದು ₹ 75 ಲಕ್ಷ ಸಮೇತ ಪರಾರಿಯಾಗಿದ್ದ ನಾಲ್ವರು ಆರೋಪಿಗಳನ್ನು ಗೋವಿಂದಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಎನ್. ಕುಮಾರ್ (23), ಕೆ. ಮಧುಸೂದನ್ (23), ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ಎಂ.ಬಿ. ಪ್ರಸನ್ನ (31) ಹಾಗೂ ಆಂಧ್ರಪ್ರದೇಶ ಅನಂತಪುರ ಜಿಲ್ಲೆಯ ಯು. ಮಹೇಶ್ (22) ಬಂಧಿತರು. ಅವರಿಂದ ₹ 3.50 ಲಕ್ಷ ನಗದು, ಮೂರು ದ್ವಿಚಕ್ರ ವಾಹನಗಳು, ಎರಡು ಕಾರುಗಳು ಹಾಗೂ 121 ಗ್ರಾಂ ಚಿನ್ನದ ಆಭರಣ ಜಪ್ತಿ ಮಾಡಲಾಗಿದೆ' ಎಂದು ಪೂರ್ವ ವಿಭಾಗದ ಡಿಸಿಪಿ ಎಸ್.ಡಿ. ಶರಣಪ್ಪ ಹೇಳಿದರು.

'ಕೆ.ಜಿ.ಹಳ್ಳಿ ಠಾಣೆ ವ್ಯಾಪ್ತಿಯಲ್ಲಿ 2018ರಲ್ಲಿ ಚಾಲಕ ಅಬ್ದುಲ್ ಶಾಹೀದ್ ಸಮೇತ ₹ 75 ಲಕ್ಷ ದರೋಡೆ ಆಗಿತ್ತು. ಚಾಲಕನೇ ಹಣ ಕದ್ದುಕೊಂಡು ಹೋಗಿರುವ ಅಯಾಮದಲ್ಲಿ ತನಿಖೆ ನಡೆದಿತ್ತು. ಚಾಲಕನ ಸುಳಿವು ಸಿಗದಿದ್ದರಿಂದ ತನಿಖೆ ಅರ್ಧಕ್ಕೆ ನಿಂತಿತ್ತು. ಇದೇ ಪ್ರಕರಣವನ್ನು ಹೊಸದಾಗಿ ರಚನೆಗೊಂಡ ಗೋವಿಂದಪುರ ಠಾಣೆಗೆ ವರ್ಗಾಯಿಸಲಾಗಿತ್ತು. ಇನ್‌ಸ್ಪೆಕ್ಟರ್ ಆರ್. ಪ್ರಕಾಶ್ ನೇತೃತ್ವದ ತಂಡ, ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದ ಘಟನೆಯ ದೃಶ್ಯಗಳನ್ನು ಪರಿಶೀಲಿಸಿತ್ತು.'

'ಆರೋಪಿ ಎನ್.ಕುಮಾರ್ ಘಟನಾ ಸ್ಥಳದಲ್ಲಿ ಓಡಾಡಿದ್ದ ದೃಶ್ಯ ಗಮನಿಸಿದ್ದ ತಂಡ, ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ದರೋಡೆ ಹಾಗೂ ಕೊಲೆ ರಹಸ್ಯ ಬಾಯ್ಬಿಟ್ಟ. ನಂತರವೇ ಉಳಿದ ಆರೋಪಿಗಳನ್ನು ಬಂಧಿಸಲಾಯಿತು' ಎಂದೂ ಹೇಳಿದರು.

ಅಪರಾಧ ಸುದ್ದಿ

ಹಣದ ಆಮಿಷವೊಡ್ಡಿ ಚಾಲಕನ ಕರೆದೊಯ್ದರು; 'ಆರೋಪಿಗಳಾದ ಕುಮಾರ್ ಹಾಗೂ ಪ್ರಸನ್ನ, ಸೇಫ್ ಗಾರ್ಡ್ ರೈಡರ್ಸ್ ಸೆಕ್ಯುರಿಟಿ ಏಜೆನ್ಸಿಯಲ್ಲಿ ಕೆಲ ವರ್ಷ ಚಾಲಕರಾಗಿ ಕೆಲಸ ಮಾಡಿದ್ದರು. ಅದಕ್ಕೆ ರಾಜೀನಾಮೆ ನೀಡಿದ್ದ ಅವರು, ಹಣದ ಸಮೇತ ವಾಹನ ಕದ್ದು ಪರಾರಿಯಾಗಲು ಯು. ಮಹೇಶ್ ಜೊತೆ ಸೇರಿ ಸಂಚು ರೂಪಿಸಿದ್ದರು' ಎಂದೂ ಶರಣಪ್ಪ ತಿಳಿಸಿದರು.

'ಚಾಲಕ ಅಬ್ದುಲ್ ಶಾಹೀದ್ ಅವರು ₹ 75 ಲಕ್ಷ ಸಮೇತ ವಾಹನದಲ್ಲಿ ಹೊರಟಿದ್ದಾಗ ಆರೋಪಿಗಳು ಹಿಂಬಾಲಿಸಿದ್ದರು. ಕಸ್ಟೋಡಿಯನ್ ಹಾಗೂ ಸೆಕ್ಯುರಿಟಿ ಸಿಬ್ಬಂದಿ, ಯಂತ್ರದಲ್ಲಿ ಹಣ ತುಂಬಲೆಂದು ವಾಹನದಿಂದ ಇಳಿದು ಘಟಕದೊಳಗೆ ಹೋಗಿದ್ದರು. ಅದೇ ಸಂದರ್ಭದಲ್ಲೇ ಅಬ್ದುಲ್‌ನನ್ನು ಮಾತನಾಡಿಸಿದ್ದ ಆರೋಪಿಗಳು, 'ವಾಹನ ಸಮೇತ ಎಲ್ಲರೂ ಹೊರಟು ಹೋಗೋಣ. ಹಣದಲ್ಲಿ ನಿನಗೂ ಪಾಲು ಕೊಡುತ್ತೇವೆ' ಎಂದಿದ್ದರು. ಅದನ್ನು ನಂಬಿದ್ದ ಅಬ್ದುಲ್, ಹಣವಿದ್ದ ವಾಹನ ಸಮೇತ ಆರೋಪಿಗಳ ಜೊತೆ ಹೋಗಿದ್ದ' ಎಂದೂ ವಿವರಿಸಿದರು.

ಸಕಲೇಶಪುರ ಘಾಟ್‌ನಲ್ಲಿ ಚಾಲಕನ ಕೊಲೆ: 'ಚಾಲಕನನ್ನು ಸಕಲೇಶಪುರಕ್ಕೆ ಕರೆದೊಯ್ದಿದ್ದ ಆರೋಪಿಗಳು, ಅಲ್ಲಿಯೇ ಅವರನ್ನು ಕೊಂದು ಘಾಟ್‌ನಲ್ಲಿ ಮೃತದೇಹ ಎಸೆದು ಪರಾರಿಯಾಗಿದ್ದರು. ಮೃತದೇಹ ಸಿಕ್ಕ ಬಗ್ಗೆ ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು' ಎಂದು ಶರಣಪ್ಪ ಹೇಳಿದರು.

'ಶ್ರೀರಂಗಪಟ್ಟಣದ ವಸತಿಗೃಹಕ್ಕೆ ಹೋಗಿದ್ದ ಆರೋಪಿಗಳು, ₹ 75 ಲಕ್ಷವನ್ನು ಸಮ ಪ್ರಮಾಣದಲ್ಲಿ ಹಂಚಿಕೊಂಡು ತಮ್ಮ ಊರುಗಳಿಗೆ ತೆರಳಿದ್ದರು. ನಂತರ, ಕಾರು ಖರೀದಿಸಿ ಚಾಲಕರಾಗಿ ವೃತ್ತಿ ಆರಂಭಿಸಿದ್ದರು. ಕೆಲವರು ಚಿನ್ನ ಖರೀದಿಸಿದ್ದರು' ಎಂದೂ ವಿವರಿಸಿದರು.



ಹಿರಿಯೂರು ತಾಲ್ಲೂಕಿನ ಜವನಗೊಂಡನಹಳ್ಳಿಯಲ್ಲಿರುವ ಫಾರ್ಮಸಿಸ್ಟ್ ವಿವೇಕಾನಂದ ಅವರ ಮನೆಯ ಮೇಲೆ ಶುಕ್ರವಾರ ರಾತ್ರಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ವೆಂಕಟೇಶ್ ನೇತೃತ್ವದ ತಂಡ ದಾಳಿ ನಡೆಸಿ, ಸರ್ಕಾರಿ ಆಸ್ಪತ್ರೆಯ ಔಷಧ, ಸಿರಿಂಜ್ ವಶಪಡಿಸಿಕೊಂಡಿರುವುದು.

ಫಾರ್ಮಸಿಸ್ಟ್ ಮನೆಯಲ್ಲಿ ಸರ್ಕಾರಿ ಆಸ್ಪತ್ರೆಯ ಔಷಧ: ಬಂಧನ

ಪ್ರಜಾವಾಣಿ ವಾರ್ತೆ

ಜವನಗೊಂಡನಹಳ್ಳಿ (ಹಿರಿಯೂರು): ಗ್ರಾಮದಲ್ಲಿ ಅನಧಿಕೃತವಾಗಿ ಖಾಸಗಿಯಾಗಿ ಕ್ಲಿನಿಕ್ ನಡೆಸುತ್ತಿದ್ದ ಸರ್ಕಾರಿ ಆಸ್ಪತ್ರೆಯೊಂದರ ಫಾರ್ಮಸಿಸ್ಟ್ ಒಬ್ಬರನ್ನು ಶುಕ್ರವಾರ ರಾತ್ರಿ ಅಧಿಕಾರಿಗಳ ತಂಡ ದಾಳಿ ನಡೆಸಿ ಬಂಧಿಸಿದೆ. ಸರ್ಕಾರಿ ಆಸ್ಪತ್ರೆಗೆ ಸೇರಿದ ಸಾವಿರಾರು ರೂಪಾಯಿ ಮೌಲ್ಯದ ಸಿರಿಂಜ್, ಔಷಧಗಳನ್ನು ವಶಕ್ಕೆ ಪಡೆದಿದೆ.

ಹಿರಿಯೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಫಾರ್ಮಸಿಸ್ಟ್ ಆಗಿರುವ ವಿವೇಕಾನಂದ ಬಂಧಿತ ಆರೋಪಿ. ತಾಲ್ಲೂಕು ಆರೋಗ್ಯಾಧಿಕಾರಿ ಡಾ.ವೆಂಕಟೇಶ್ ಅವರಿಗೆ ವಿವೇಕಾನಂದ ಅನಧಿಕೃತವಾಗಿ ಕ್ಲಿನಿಕ್ ನಡೆಸುತ್ತಿರುವ ಮಾಹಿತಿ ಬಂದ ಕಾರಣ ತಹಶೀಲ್ದಾರ್ ಜಿ.ಎಚ್. ಸತ್ಯನಾರಾಯಣ, ಸಿಪಿಐ ರಾಘವೇಂದ್ರ, ಗ್ರಾಮಾಂತರ ಠಾಣೆ



ವಿವೇಕಾನಂದ

ಎಸ್‌ಐ ಶಶಿಕಲಾ ಅವರೊಂದಿಗೆ ಶುಕ್ರವಾರ ರಾತ್ರಿ 11.30ಕ್ಕೆ ಕ್ಲಿನಿಕ್ ಮೇಲೆ ದಾಳಿ ನಡೆಸಲಾಯಿತು.

ಆರೋಪಿಯನ್ನು ಬಂಧಿಸಿರುವ ಗ್ರಾಮಾಂತರ ಠಾಣೆ ಪೊಲೀಸರು, 'ದಾಳಿಯ ವೇಳೆ ಸರ್ಕಾರಿ ಆಸ್ಪತ್ರೆಯ ಔಷಧಗಳು, ಸಿರಿಂಜ್‌ಗಳು ಲಭ್ಯವಾಗಿವೆ. ಆರೋಪಿಯು ಅಧಿಕೃತ ವೈದ್ಯರಲ್ಲದಿದ್ದರೂ ಅನಧಿಕೃತವಾಗಿ ಕ್ಲಿನಿಕ್ ನಡೆಸುತ್ತಿರುವುದು, ಸರ್ಕಾರಿ ಆಸ್ಪತ್ರೆಯ ಔಷಧಗಳನ್ನು ದುರು-ಪಯೋಗಪಡಿಸಿಕೊಂಡು ಜನರಿಗೆ ಮಾರುವ ಮೂಲಕ ಹಣ ಗಳಿಸಿ ಸರ್ಕಾರಕ್ಕೆ ವಂಚಿಸಿರುವುದು ಕಂಡು ಬಂದಿದೆ. ಆರೋಪಿಯಿಂದ ₹ 1,36,860 ನಗದು ವಶ ಪಡಿಸಿಕೊಳ್ಳ-ಲಾಗಿದೆ' ಎಂದು ತಿಳಿಸಿದ್ದಾರೆ.

ಹೂ ಮಾರಾಟಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಬೆಳೆಗಾರರ ಒತ್ತಾಯ

ಪಾತಾಳಕ್ಕೆ ಕುಸಿದ ರಾಜ್ಯದ ಪುಷ್ಪೋದ್ಯಮ

• ಮನೋಹರ್ ಎಂ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಈಗ ಹೂವುಗಳಿಗೆ ಬಲು ಬೇಡಿಕೆ ಇರಬೇಕಿದ್ದ ಕಾಲ. ಶುಭ ಸಮಾರಂಭಗಳ ಮೆರುಗು ಹೆಚ್ಚಿಸುತ್ತಿದ್ದ ಬಣ್ಣ ಬಣ್ಣದ ಹೂಗಳ ಬೇಡಿಕೆಯಲ್ಲಿ ಹೆಚ್ಚು ಪೂರೈಕೆಯಾ-ಗುತ್ತಿದ್ದುದು ರಾಜ್ಯದಿಂದ. ಆದರೆ, ಕೊರೊನಾ ಹಾಗೂ ಲಾಕ್‌ಡೌನ್‌ಗಳ ಹೊಡೆತದಿಂದಾಗಿ ರಾಜ್ಯದ ಪುಷ್ಪೋದ್ಯಮ ನೆಲಕಚ್ಚಿದೆ.

ಶುಭ ಸಮಾರಂಭಗಳೆಲ್ಲ ಸರಳವಾಗಿ ನೆರವೇರುತ್ತಿವೆ. ಧಾರ್ಮಿಕ ಕಾರ್ಯಕ್ರಮಗಳು, ದೇವಸ್ಥಾನಗಳಲ್ಲಿ ಅಲಂಕಾರಗಳು ಸೇರಿದಂತೆ ಹೂವು ಹೆಚ್ಚಾಗಿ ಬಳಕೆಯಾಗುತ್ತಿ-ದ್ದ ಕಾರ್ಯಕ್ರಮಗಳೂ ನಡೆಯುತ್ತಿಲ್ಲ. ಅಗತ್ಯ ಸೇವೆಗಳಲ್ಲಿ ಹೂವು ಮಾರಾಟಕ್ಕೆ ಅವಕಾ-ಶವಿದ್ದರೂ, ರಾಜ್ಯದಲ್ಲಿ ಹೂ ಬೆಳೆಗಾರರಿಗೆ ಸಮರ್ಪಕವಾದ ಮಾರುಕಟ್ಟೆಯ ವ್ಯವಸ್ಥೆಯೇ ಇಲ್ಲ. ಶುಭ ಸಮಾರಂಭಗಳಿಗೆ ಹೂವುಗಳನ್ನು ಪೂರೈಸಲು ಸರ್ಕಾರ ಪರ್ಯಾಯ ವ್ಯವ-ಸ್ಥೆಗಳನ್ನು ಕಲ್ಪಿಸಬೇಕು ಎಂದು ಹೂವು ಬೆಳೆಗಾರರು ಒತ್ತಾಯಿಸುತ್ತಿದ್ದಾರೆ.

'ಹೂವು ದೀರ್ಘಕಾಲದವ-ರೆಗೆ ಸಂಗ್ರಹಿಸಿ ಇಡುವಂತಹದ್ದಲ್ಲ. ಮಾರುಕಟ್ಟೆಗೆ ತಂದರೂ ಅದನ್ನು ಕೊಳ್ಳುವವರಿಲ್ಲ. ಬೆಳಿಗ್ಗೆ 10ರವರೆಗೆ ಎಷ್ಟರಮಟ್ಟಿಗೆ ವ್ಯಾಪಾರ ನಡೆಯುತ್ತದೆ? ಬರುವ ಗ್ರಾಹಕರು ಬೆರಳೆಣಿಕೆಯ-ಷ್ಟು. ದರ ಪಾತಾಳಕ್ಕೆ ಕುಸಿದಿದೆ. ಬೆಳೆಗೆ ಹಾಕಿದ ಬಂಡವಾಳವೂ ಬರುತ್ತಿಲ್ಲ' ಎಂದು ಗುಲಾಬಿ ಬೆಳೆಗಾರ ಜನಾರ್ದನ್ ಅಸಹಾಯಕತೆ ತೋಡಿಕೊಂಡರು.



ಬೆಲೆ ಸಿಗದ ಕಾರಣ ಅಲಂಕಾರಿಕ ಜರ್ಬೆರಾ ಹೂಗಳನ್ನು ತಿಪ್ಪೆಯಲ್ಲಿ ರಾಶಿ ಹಾಕಲಾಗಿದೆ

1 ಲಕ್ಷಕ್ಕೆ ಕುಸಿದ ಪಾಲಿಹೌಸ್ ಹೂಗಳ ಪೂರೈಕೆ

ಪಾಲಿಹೌಸ್‌ಗಳಲ್ಲಿ (ಹಸಿರು ಮನೆ) ಬೆಳೆದ ಈ ಹೂಗಳನ್ನು ಅಲಂಕಾರಕ್ಕೆ ಹೆಚ್ಚಾಗಿ ಬಳಸುತ್ತಾರೆ. ಇಂತಹ ಹೂಗಳನ್ನು ಹೆಬ್ಬಾಳದಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರವು (ಐಎಫ್‌ಎಬಿ) ದೇಶದ ಪ್ರಮುಖ ಭಾಗಗಳಿಗೆ ಸರಬರಾಜು ಮಾಡುತ್ತದೆ. ಈ ಕೇಂದ್ರದಿಂದ ಪ್ರತಿ ದಿನ 3ರಿಂದ 5 ಲಕ್ಷ ಹೂಗಳು ಪೂರೈಕೆಯಾಗುತ್ತಿತ್ತು. ಕೊರೊನಾ ಕಾರಣದಿಂದ ಈಗ ದಿನಕ್ಕೆ 1 ಲಕ್ಷ ಹೂಗಳು ಮಾತ್ರ ಪೂರೈಕೆಯಾಗುತ್ತಿವೆ ಎಂದು ಐಎಫ್‌ಎಬಿ ಮೂಲಗಳು ತಿಳಿಸಿವೆ.

'ಶುಭ ಸಮಾರಂಭಗಳು ಸರಳವಾಗಿ ನಡೆಯುತ್ತಿ-ದ್ದರೂ ಹೂವಿನ ಅಲಂಕಾರಗಳು ಅಲ್ಲಲ್ಲಿ ನಡೆಯುತ್ತಿವೆ. ಸದ್ಯ ರಾಜ್ಯದ ವಿವಿಧ ಜಿಲ್ಲೆಗಳು, ಹೈದರಾಬಾದ್, ತಮಿಳುನಾಡು, ಆಂಧ್ರಪ್ರದೇಶದ ವಿವಿಧ ಭಾಗಗಳಿಂದ ಹೂವಿಗೆ ಬೇಡಿಕೆ ಇದೆ. ವಾರದಿಂದ ಹೂ ಸರಬರಾಜು ಚೇತರಿಕೆ ಕಾಣುತ್ತಿದೆ. ಪ್ರತಿ ಹೂವು ಸರಾಸರಿ ₹5ರಂತೆ ಮಾರಾಟವಾಗುತ್ತಿದೆ. ಕಳೆದ ವರ್ಷದಿಂದ ಕೊರೊನಾ ಕಾರಣದಿಂದ ಶೇ 30ರಷ್ಟು ಹೂವಿನ ಉತ್ಪಾದನೆಯೂ ಕಡಿಮೆಯಾಗಿದೆ' ಎಂದು ಐಎಫ್‌ಎಬಿ ಹಿರಿಯ ಅಧಿಕಾರಿ-ಯೊಬ್ಬರು ತಿಳಿಸಿದರು.

'ಈಗ ಮಾರುಕಟ್ಟೆಗೆ ಹೂವು ತರುತ್ತಿಲ್ಲ. ತೋಟದಲ್ಲೇ ಹೂವು ಉದುರುತ್ತಿದೆ. ಉತ್ತಮವಾಗಿ ಬೆಳೆದಿರುವ ಹೂಗಳಿಗೆ ಕನಿಷ್ಠ ಬೆಲೆಯೂ ಸಿಗದೆ ಇರುವುದರಿಂದ ಕಣ್ಣೀರು ಬರುತ್ತದೆ. ಸದ್ಯಕ್ಕೆ ಕೊರೊನಾ ಮುಗಿಯುವಂತಿಲ್ಲ. ಹಾಗಾಗಿ, ಗಿಡಗಳನ್ನು ಕಟಾವು ಮಾಡಲು ನಿರ್ಧರಿಸಿದ್ದೇನೆ' ಎಂದೂ ಅವರು ತಿಳಿಸಿದರು.

ಹೂ ಮಾರಾಟಕ್ಕೆ ವ್ಯವಸ್ಥೆ ಇಲ್ಲ: ಎರಡನೇ ಅಲೆಯ ಪರಿಣಾಮ ಕೆ.ಆರ್. ಮಾರುಕಟ್ಟೆಯಲ್ಲಿ ಹೂವಿನ ವ್ಯಾಪಾರ ಸಂಪೂರ್ಣ ಸ್ಥಗಿತವಾಗಿದೆ. ನಾಲ್ಕು ಗಂಟೆ ಮಾತ್ರ ಹೂವು ಮಾರಾಟಕ್ಕೆ ಸರ್ಕಾರ ಅವಕಾಶ ನೀಡಿದೆ. ಪರ್ಯಾಯ ವ್ಯವಸ್ಥೆಗಳನ್ನೂ ಸೂಚಿಸಿಲ್ಲ' ಎಂದು ಕೆ.ಆರ್.ಮಾರುಕಟ್ಟೆ ವರ್ತಕರ ಸಂಘದ ಅಧ್ಯಕ್ಷ ದಿವಾಕರ್ ಬೇಸರ ವ್ಯಕ್ತಪಡಿಸಿದರು.

'ಕೆ.ಆರ್.ಮಾರುಕಟ್ಟೆಯಿಂದ ಪ್ರತಿದಿನ 50 ಸಾವಿರ ಕೆ.ಜಿ.ಗಳಷ್ಟು ವಿವಿಧ ಬಗೆಯ ಹೂಗಳು ಮಾರಾಟ ಆಗುತ್ತಿದ್ದವು. 140 ಹೂವಿನ ವರ್ತಕರು ಇದರಿಂದ ಜೀವನ ನಡೆಸುತ್ತಿದ್ದರು. ಈಗ ಮಳಿಗೆಗಳನ್ನು ಮುಚ್ಚಿ ಬೀದಿಗಳಲ್ಲಿ ಮಾರಾಟಕ್ಕೆ ನಿಂತಿದ್ದಾರೆ. ಲಾಕ್‌ಡೌನ್‌ಗೆ ಹೆದರಿ ಬಹುತೇಕ ಬೆಳೆಗಾರರು ಹೂವು ಪೂರೈಸುತ್ತಿಲ್ಲ. ಬರುವ ಹೂವೂ ಮಾರಾಟವಾಗುತ್ತಿಲ್ಲ. ಅವುಗಳನ್ನು ಕಸದ ಬುಟ್ಟಿಗೆ ಸುರಿಯುತ್ತಿದ್ದಾರೆ. ಸರ್ಕಾರ ನಿಯಮಗಳನ್ನು ಸಡಿಲಿಸಿ, ಹೂವಿನ ಮಾರಾಟಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಿದರೆ ಅನುಕೂಲ' ಎಂದು ಮನವಿ ಮಾಡಿದರು.

'ಹೂ ಬೆಳೆಗಾರರಿಗೆ ಸಹಾಯಧನ ಸಾಲದು'

ಹೂವು ಬೆಳೆಗಾರರಿಗೆ ಸರ್ಕಾರ ಕೋವಿಡ್ ಪರಿಹಾರ ಧನವಾಗಿ ಪ್ರತಿ ಹೆಕ್ಟೇರ್‌ಗೆ ₹10 ಸಾವಿರ ನೀಡುವುದಾಗಿ ಘೋಷಿಸಿದೆ. ಈ ಸಹಾಯಧನದಿಂದ ತೆರೆದ ಭೂಮಿಯಲ್ಲಿ ಹೂ ಬೆಳೆಯುವವರಿಗೆ ಸಹಾಯವಾಗಬಹುದು. ಅಲಂಕಾರಿಕ ಹೂ ಬೆಳೆಯುವವರು ಪಾಲಿಹೌಸ್ ನಿರ್ಮಾಣಕ್ಕೆ ಲಕ್ಷಾಂತರ ಬಂಡವಾಳ ಹಾಕಿರುತ್ತಾರೆ. ಪಾಲಿಹೌಸ್ ನಿರ್ವಹಣೆಗೆ ಒಂದು ದಿನಕ್ಕೆ ₹4 ಸಾವಿರ ಖರ್ಚು ಬರುತ್ತದೆ' ಎಂದು ದಕ್ಷಿಣ ಭಾರತ ಹೂವು ಬೆಳೆಗಾರರ ಸಂಘದ ಅಧ್ಯಕ್ಷ ಅರವಿಂದ್ ತಿಳಿಸಿದರು.

'ಶುಭ ಸಮಾರಂಭಗಳು ನಡೆಯದೇ ಇರುವುದರಿಂದ ಅಲಂಕಾರಿಕ ಹೂಗಳಿಗೆ ಬೇಡಿಕೆಯೇ ಇಲ್ಲ. ಪಾಲಿಹೌಸ್‌ಗಳಲ್ಲಿ ಸೊಂಪಾಗಿ ಬೆಳೆದ ಹೂಗಳನ್ನು ಮಾರಾಟ ಮಾಡಲು ಸಾಧ್ಯವಾಗದೆ, ಬೆಳೆಗಾರ ರಸ್ತೆಗೆ ಚೆಲ್ಲುತ್ತಿದ್ದಾನೆ. ಪರಿಹಾರ ಘೋಷಿಸುವ ಮುನ್ನ ಸರ್ಕಾರ ಪಾಲಿಹೌಸ್ ಬೆಳೆಗಾರರ ಸ್ಥಿತಿಗತಿಯನ್ನೂ ಅವಲೋಕಿಸಬೇಕಿತ್ತು' ಎಂದೂ ಹೇಳಿದರು.

ಅಂಕಿಅಂಶ

₹3 ಕೋಟಿ
ಪಾಲಿಹೌಸ್ ಹೂಗಳ ವಹಿವಾಟು (ದಿನಕ್ಕೆ)

₹8 ಕೋಟಿ
ಇತರೆ ಹೂಗಳ ವಹಿವಾಟು (ದಿನಕ್ಕೆ)

₹400 ಕೋಟಿ
ಪುಷ್ಪೋದ್ಯಮದ ಮಾಸಿಕ ವಹಿವಾಟು

ಚೀನಾ ಕೊರೊನಾ ವೈರಸ್ ದೇಶದಲ್ಲಿ ಹಬ್ಬಿಸಿದ್ದು ಕಾಂಗ್ರೆಸ್!

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಭಾರತಕ್ಕೆ ಚೀನಾ ಕೋವಿಡ್ ನೀಡಿದೆ. ಕಾಂಗ್ರೆಸ್ ಅದನ್ನು ದೇಶದ ಎಲ್ಲೆಡೆ ಹಬ್ಬಿಸಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಬರೆದ ಬಹಿರಂಗ ಪತ್ರದಲ್ಲಿ ಆರೋಪಿಸಿದ್ದಾರೆ.



ಕೆ.ಎಸ್.ಈಶ್ವರಪ್ಪ

'ತಾವೂ ಸೇರಿ ಡಿ.ಕೆ. ಶಿವಕುಮಾರ್, ಯು.ಟಿ. ಖಾದರ್, ಜಯರಾಮ್ ರಮೇಶ್, ವೇಣುಗೋಪಾಲ್, ಮನಿಷ್ ತಿವಾರಿ ಮತ್ತಿತರ ಕಾಂಗ್ರೆಸ್ ಮುಖಂಡರು ಲಸಿಕೆಗೆ ಕುರಿತು ಆರಂಭದಲ್ಲೇ ಅಪಪ್ರಚಾರ ಮಾಡಿದಿರಿ. ಮೊದಲು ಪ್ರಧಾನಿ ಹಾಕಿಸಿಕೊಳ್ಳಬೇಕು. ಲಸಿಕೆ ಹಾಕಿಸಿಕೊಂಡರೆ ಪುರುಷತ್ವ ನಾಶವಾಗುತ್ತದೆ. ಮುಸ್ಲಿಮರ ಸಂತತಿ ತಡೆಯಲು ಬಳಸುತ್ತಿದ್ದಾರೆ ಎಂದೆಲ್ಲ ಜನರಿಗೆ ತಪ್ಪು ಸಂದೇಶ ನೀಡಿದ ಪರಿಣಾಮ ಜನರು ಹಿಂದೇಟು ಹಾಕಿದ್ದರು. ಇದು ಸೋಂಕು ಹರಡಲು ಪ್ರಮುಖ ಕಾರಣ' ಎಂದು ದೂರಿದ್ದಾರೆ.

'ಕೋವಿಡ್ ವಿಷಯದಲ್ಲಿ ಕಾಂಗ್ರೆಸ್ ಸಲ್ಲದ ರಾಜಕಾರಣ ಮಾಡುತ್ತಿದೆ. ಕೇಂದ್ರ, ರಾಜ್ಯ ಸರ್ಕಾರಗಳು ಕೋವಿಡ್ ನಿಯಂತ್ರಿಸಲು ಶ್ರಮಿಸುತ್ತಿದ್ದರೆ. ಕಾಂಗ್ರೆಸ್ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಅಪಪ್ರಚಾರ ಮಾಡುತ್ತಾ, ಸಹಕಾರ ನೀಡದ ಪರಿಣಾಮ ಸೋಂಕಿನ ಪ್ರಮಾಣ ಹೆಚ್ಚಳವಾಗಿದೆ' ಎಂದು ಕುಟುಕಿದ್ದಾರೆ.

'ಸಿದ್ದರಾಮಯ್ಯ ಅವರೇ, ಈಗ ಹಕ್ಕುಚ್ಯುತಿ ಮಂಡನೆಯ ಪ್ರಶ್ನೆ ಎತ್ತಿದ್ದೀರಿ. ಸಂವಿಧಾನ ಆಧಾರ ಇದೆ ಎಂದು ಹೇಳುತ್ತಿದ್ದೀರಾ? ತಾವೇ ಮುಖ್ಯಮಂತ್ರಿಯಾಗಿದ್ದಾಗ ನಾನು ವಿಧಾನಪರಿಷತ್‌ನ ವಿರೋಧ ಪಕ್ಷದ ನಾಯಕನಾಗಿದ್ದೆ. ಆಗ ರಾಜ್ಯದಲ್ಲಿ ಬರಗಾಲವಿತ್ತು. ಎಲ್ಲಾ ಜಿಲ್ಲೆಗಳಿಗೆ ಪ್ರವಾಸ ಮಾಡಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ ನಡೆಸಲು ನಿರ್ಧರಿಸಿದ್ದೆ. ಆಗ ವಿರೋಧ ಪಕ್ಷದ ನಾಯಕರಿಗೆ ಸಭೆ ನಡೆಸಲು ಸರ್ಕಾರದ ಅನುಮತಿ ಇಲ್ಲ ಎಂದು ಅಧಿಕಾರಿಗಳು ಉತ್ತರ ನೀಡಿದ್ದರು. ಕಾಂಗ್ರೆಸ್ ಸರ್ಕಾರಕ್ಕೆ ಒಂದು ಸಂವಿಧಾನ, ಬಿಜೆಪಿ ಸರ್ಕಾರಕ್ಕೆ ಮತ್ತೊಂದು ಸಂವಿಧಾನ ಇದೆಯೇ? ನಾನು ಪ್ರವಾಸಿ ಮಂದಿರಗಳಲ್ಲಿ ಕುಳಿತು ಬರಗಾಲದ ಪರಿಸ್ಥಿತಿಯ ಮಾಹಿತಿ ಪಡೆದಿದ್ದೆ. ನಿಮಗೂ ಪತ್ರ ಬರೆದಿದ್ದೆ. ನಿಮ್ಮಿಂದ ಉತ್ತರ ಬಂದಿರಲಿಲ್ಲ. ಈಗ ಈ ರೀತಿ ಹೇಳುತ್ತಿರುವುದು ಸರಿಯೇ' ಎಂದು ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಟೂಲ್ ಕಿಟ್ ಅಸಲಿ: ಸಿ.ಟಿ. ರವಿ



ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಮತ್ತು ದೇಶದ ಅವಹೇಳನಕ್ಕೆ ಕಾಂಗ್ರೆಸ್ ಪಕ್ಷವು ಸಿದ್ಧಪಡಿಸಿ, ಹರಿಬಿಟ್ಟಿರುವ 'ಟೂಲ್ ಕಿಟ್' ಅಸಲಿಯಾದದ್ದು. ಟೂಲ್ ಕಿಟ್‌ನಲ್ಲಿರುವ ಮಾಹಿತಿ ಮತ್ತು ಕಾಂಗ್ರೆಸ್‌ನ ಕ್ರಿಯೆ, ಪ್ರತಿಕ್ರಿಯೆಗಳಿಗೆ ಸಾಮ್ಯತೆ ಇದೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಆರೋಪಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಟೂಲ್ ಕಿಟ್‌ನಲ್ಲಿರುವ ಮಾಹಿತಿ ಪ್ರಕಾರವೇ ಕಾಂಗ್ರೆಸ್‌ನ ಕ್ರಿಯೆ ಮತ್ತು ಪ್ರತಿಕ್ರಿಯೆಗಳು ಇದ್ದುದು ಕಾಕತಾಳೀಯವೆ? ಅಥವಾ ಟೂಲ್ ಕಿಟ್ ಮಾದರಿಯಲ್ಲೇ ಅವಹೇಳನ ಮತ್ತು ಅಪಪ್ರಚಾರ ನಡೆದಿದೆಯೆ' ಎಂದು ಪ್ರಶ್ನಿಸಿದರು.

ದೇಶದಲ್ಲಿ ಕೋವಿಡ್‌ನಿಂದ ಸಂಭವಿಸಿದ ಸಾವುಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ವೈಭವೀಕರಿಸುವ ಪ್ರಯತ್ನ ಕಾಂಗ್ರೆಸ್‌ನಿಂದ ನಡೆದಿದೆ. ಕೊರೊನಾ ವೈರಾಣು ಚೀನಾದಿಂದ ಬಂದಿದೆ ಎಂದು ಹೇಳಲು ಕಾಂಗ್ರೆಸ್ ಮುಖಂಡರಿಗೆ ಧೈರ್ಯವಿಲ್ಲ. ಮೋದಿ ತಳಿ, ಭಾರತೀಯ ತಳಿ ಎಂದು ವೈರಾಣುವನ್ನು ಉಲ್ಲೇಖಿಸಿದ್ದಾರೆ. ರಾಜ್ಯದ ಕಾಂಗ್ರೆಸ್ ಶಾಸಕ ದಿನೇಶ್ ಗುಂಡೂರಾವ್ ಸೇರಿದಂತೆ ಹಲವರು ಈ ಮಾತನ್ನು ಹೇಳಿದ್ದಾರೆ ಎಂದು ದೂರಿದರು.

'ಮರಣಗಳಿಗೆ ಬಿಜೆಪಿಯೇ ಹೊಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಲಸಿಕೆಗಳನ್ನು ಸಮರ್ಪಕವಾಗಿ ನೀಡಲಾಗದೆ, ಸಮಸ್ಯೆ-ಗಳನ್ನು ನಿರ್ವಹಿಸಲಾಗದೇ ಜನರ ಮಾರಣಹೋಮಕ್ಕೆ ಕಾರಣವಾಗಿರುವ ಕೇಂದ್ರ ಮತ್ತು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರಗಳು ಅಪರಾಧಿ ಸ್ಥಾನದಲ್ಲಿ ನಿಂತಿವೆ' ಎಂದು ವಿಧಾನಸಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.



ಸಿದ್ದರಾಮಯ್ಯ

ಕೋವಿಡ್ ಲಸಿಕೆ ವಿತರಣೆ ಸಂಬಂಧ ವಸ್ತುಸ್ಥಿತಿ ವಿವರಿಸಿ ಜನರಿಗೆ ಪತ್ರ ಬರೆದಿರುವ ಅವರು, 'ತನ್ನದೇ ದೇಶದ ಮಕ್ಕಳಿಗೆ ಲಸಿಕೆ ನಿರಾಕರಿಸಿ ಲಕ್ಷಾಂತರ ಜನರನ್ನು ಕೊಂದ ಕೊಲೆಗಾರರು ಹೊರಬೇಕಾದ ಅಪರಾಧ ಅದು. ಸ್ವತಃ ಅಪರಾಧಿ ಸ್ಥಾನದಲ್ಲಿ ನಿಂತಿರುವ ಬಿಜೆಪಿಯು ಈಗ ದೇಶದ ನಾಗರಿಕರಿಗೆ ಲಸಿಕೆಯ ಕುರಿತು ಕಾಂಗ್ರೆಸ್ ಮುಖಂಡರು ಅಪಪ್ರಚಾರ ಮಾಡಿದರು. ಅದಕ್ಕಾಗಿ ಜನ ಲಸಿಕೆ ಹಾಕಿಸಿಕೊಳ್ಳಲಿಲ್ಲ ಎಂದು ಹೇಳಿಕೆ ನೀಡಲಾರಂಭಿಸಿದ್ದಾರೆ' ಎಂದಿದ್ದಾರೆ.

'ಆಡಳಿತ ನಡೆಸುವ ಬಿಜೆಪಿ, ಲಸಿಕೆ ವಿಚಾರದಲ್ಲಿ ದೇಶದ ಜನರಿಗೆ ಉತ್ತರಿಸಬೇಕಾಗಿದೆ. ದೇಶದ ಜನ ಪ್ರಶ್ನೆ ಕೇಳುತ್ತಿದ್ದಾರೆ. ಜನರ ಪ್ರಶ್ನೆಗಳಿಗೆ ಕಾಂಗ್ರೆಸ್ ದನಿಗೂಡಿಸಿದೆ ಅಷ್ಟೇ. ಪ್ರಶ್ನೆ ಕೇಳುವುದು, ಸಲಹೆ ನೀಡುವುದು, ಪ್ರತಿಭಟಿಸುವುದು ಜನರ ಹಕ್ಕು. ಜನರ ದನಿಗೆ ಕಿವಿಗೊಟ್ಟು ಕೆಲಸ ಮಾಡಬೇಕಾಗಿರುವುದು ಸರ್ಕಾರಗಳ ಕರ್ತವ್ಯ. ಪ್ರತಿಪಕ್ಷಗಳು, ನಾಡಿನ ಜನರು ಕೇಳುತ್ತಿರುವ ಈ ಪ್ರಶ್ನೆಗಳಿಗೆ ಉತ್ತರ ಹೇಳಬೇಕಾಗಿರುವುದೂ ಸರ್ಕಾರದ ಕರ್ತವ್ಯ' ಎಂದಿರುವ ಸಿದ್ದರಾಮಯ್ಯ, ಸರ್ಕಾರಕ್ಕೆ ಹಲವು ಪ್ರಶ್ನೆಗಳನ್ನು ಕೇಳಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆಯು ಕಳೆದ ವರ್ಷದ ಅಕ್ಟೋಬರ್‌ನಲ್ಲಿಯೇ ಭಾರತದಲ್ಲಿ ರೂಪಾಂತರ ಹೊಂದಿದ ಕೊರೊನಾ ವೈರಾಣು ಮುಂದಿನ ದಿನಗಳಲ್ಲಿ ಭಾರಿ ಹಾನಿ ಮಾಡಬಹುದು ಎಂದು ಹೇಳಿದ್ದರೂ ಕೇಂದ್ರ ಸರ್ಕಾರ ಏಕೆ ನಿರ್ಲಕ್ಷಿಸಿತು. ಜನರನ್ನು ದಾರಿ ತಪ್ಪಿಸಿ ಕ್ರೂರ ಕೊರೊನಾದ ಬಾಯಿಗೆ ದೂಡಿದವರು ಬಿಜೆಪಿಯವರಲ್ಲವೆ. ಆಡಳಿತ ನಡೆಸುವವರ ಅಪ್ರಬುದ್ಧ, ಅರಾಜಕ, ಸರ್ವಾಧಿಕಾರಿ ಧೋರಣೆಯ ರಾಜಕೀಯ ತೀರ್ಮಾನಗಳಿಂದ ಜನ ಮರಣ ಹೊಂದುತ್ತಿದ್ದಾರೆ. ಜನರ ಸಾವಿನ ಹೊಣೆಯನ್ನು ಯಾರು ಹೊರಬೇಕು' ಎಂದು ಪ್ರಶ್ನಿಸಿದ್ದಾರೆ.

'ಸಾವು ನೋವುಗಳಿಗೆ, ಲಸಿಕೆ ಅಭಾವಕ್ಕೆ ಕೇಂದ್ರದ ಬಿಜೆಪಿ ನಾಯಕರುಗಳ ಅವೈಜ್ಞಾನಿಕ, ದೂರದೃಷ್ಟಿ ಇಲ್ಲದ, ವಿಜ್ಞಾನಿಗಳ, ತಜ್ಞರ ಮಾತು ಕೇಳದ ಸರ್ವಾಧಿಕಾರಿ, ಹೆಸರಿಗೆ, ಕೀರ್ತಿಗೆ ಹಪ ಹಪಿಸುವಿಕೆಯೇ ಕಾರಣ. ಜನರ ಕಗ್ಗೊಲೆಗಳಿಗೂ ಇದೇ ಕಾರಣ' ಎಂದೂ ಸಿದ್ದರಾಮಯ್ಯ ದೂರಿದ್ದಾರೆ.

ಮೋದಿ ಮೊಸಳೆ ಕಣ್ಣೀರು: 'ಕೈ' ನಾಯಕರ ವ್ಯಂಗ್ಯ

ಬೆಂಗಳೂರು: 'ಮೊಸಳೆ ಕಣ್ಣೀರಿಗಾಗಿ ದೇಶದಲ್ಲಿ ಆಸ್ಕರ್ ಪ್ರಶಸ್ತಿ ಕೊಡುವುದಾದರೆ ಅದನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೊಡಬೇಕು' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಪ್ರಕಾಶ ರಾಥೋಡ್ ಲೇವಡಿ ಮಾಡಿದರು.

ಪಕ್ಷದ ವಿಧಾನ ಪರಿಷತ್ ಸದಸ್ಯರಾದ ನಸೀರ್ ಅಹ್ಮದ್, ಎಸ್. ರವಿ, ಪಿ.ಆರ್. ರಮೇಶ್ ಜೊತೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸುಳ್ಳುಗಳನ್ನೆ ಹೇಳಿ ದೇಶದ ಜನರಿಗೆ ಮೋದಿ ಮೋಸ ಮಾಡಿದ್ದಾರೆ. ಕೋವಿಡ್ ನಿರ್ವಹಣೆಯಲ್ಲಿ ಕೇಂದ್ರ – ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿವೆ' ಎಂದು ವಾಗ್ದಾಳಿ ನಡೆಸಿದರು.

'ಬಿಜೆಪಿ ಸಾಮಾಜಿಕ ಜಾಲತಾಣವನ್ನು ದುರುಪಯೋ-ಗಪಡಿಸಿಕೊಳ್ಳುತ್ತಿದೆ. ಟೂಲ್ ಕಿಟ್ ವಿಷಯವಾಗಿ ಬಿಜೆಪಿಗೆ ಟ್ವಿಟರ್ ಸಂಸ್ಥೆಯೇ ಪ್ರತಿಕ್ರಿಯೆ ನೀಡಿದ್ದು, ಬಿಜೆಪಿ ನಾಯಕರ ಬಂಡವಾಳ ಸಮಾಜಕ್ಕೆ ಗೊತ್ತಾಗಿದೆ' ಎಂದರು.

'ರಾಜ್ಯ ಸರ್ಕಾರ ಘೋಷಣೆ ಮಾಡಿದ ಪ್ಯಾಕೇಜ್ ಅರೆಕಾಸಿನ ಮಜ್ಜಿಗೆಯಂತೆ. ಯಡಿಯೂರಪ್ಪ ಮತ್ತು 25 ಸಂಸದರು ಕೇಂದ್ರದ ವಿರುದ್ಧ ಗಟ್ಟಿ ದನಿಯಲ್ಲಿ ಮಾತ-ನಾಡುತ್ತಿಲ್ಲ. ಆರೋಗ್ಯ ಸಚಿವ ಸುಧಾಕರ್ ಮತ್ತು ಉಪ ಮುಖ್ಯಮಂತ್ರಿ ಅಶ್ವತ್ಥನಾರಾಯಣ್ ಮಧ್ಯೆ ಸಮನ್ವಯ ಇಲ್ಲ. ಇಬ್ಬರನ್ನೂ ಸಚಿವ ಸ್ಥಾನದಿಂದ ತೆಗೆದು ಹಾಕಬೇಕು' ಎಂದು ಎಸ್. ರವಿ ಆಗ್ರಹಿಸಿದರು.

'ಆಮ್ಲಜನಕ ಉತ್ಪಾದನ ಘಟಕ ಮಾಡುವುದಾಗಿ ಹೇಳಿ ಬಿಜೆಪಿ ನಾಯಕರು ಮೋಸ ಮಾಡಿದ್ದಾರೆ' ಎಂದು ಪಿ.ಆರ್. ರಮೇಶ್ ಆಕ್ರೋಶ ವ್ಯಕ್ತಪಡಿಸಿದರು.

'ಕೋಲಾರದಲ್ಲಿ ಆರು ದಿನಗಳಲ್ಲಿ ಆಮ್ಲಜನಕ ಘಟಕ ಆರಂಭವಾಗಲಿದೆ ಎಂದು ಸಚಿವ ಅಶ್ವತ್ಥನಾರಾಯಣ್ ಹೇಳಿದ್ದರು. ಎಂಟು ದಿನಗಳಲ್ಲಿ ಆರಂಭವಾಗಲಿದೆ ಎಂದು ಅರವಿಂದ ಲಿಂಬಾವಳಿ ಹೇಳಿದರು. ಆದರೆ, ಇನ್ನೂ ಆರಂಭವಾಗಿಲ್ಲ' ಎಂದು ನಸೀರ್ ಅಹ್ಮದ್ ದೂರಿದರು.

44 ವರ್ಷ ಹಿಂದಿನ ಭೂಸ್ವಾಧೀನ ಪ್ರಕ್ರಿಯೆ ರದ್ದು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಉತ್ತರ ತಾಲ್ಲೂಕಿನ ಕಸಬಾ ಹೋಬಳಿ ಭಿನ್ನ ಮಂಗಲ ಗ್ರಾಮದ 1 ಎಕರೆ 12 ಗುಂಟೆ ಜಮೀನು ಸ್ವಾಧೀನಕ್ಕೆ 1977ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹೊರಡಿಸಿದ್ದ ಅಧಿಸೂಚನೆಯನ್ನು ಹೈಕೋರ್ಟ್ ರದ್ದುಪಡಿಸಿದೆ. ದಾಖಲೆಗಳನ್ನು ನಿರ್ವಹಿಸದ ಕಾರಣಕ್ಕೆ ಬಿಡಿಎಗೆ ₹1 ಲಕ್ಷ ದಂಡ ವಿಧಿಸಿದೆ.

ವಯ್ಯಾಲಿಕಾವಲ್ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ (ವಿಎಚ್‌ಬಿಸಿಎಸ್) ಪರವಾಗಿ ಮಾಡಿದ್ದ ಕ್ರಯಪತ್ರ ಮತ್ತು ಆ ನಂತರ 1997ರಲ್ಲಿ ವಿಎಚ್‌ಬಿಸಿಎಸ್ ಏಳು ಜನರಿಗೆ ಮಾಡಿಕೊಟ್ಟಿರುವ ಕ್ರಯಪತ್ರಗಳನ್ನೂ ರದ್ದುಪಡಿಸಿದೆ.

'ಭೂಸ್ವಾಧೀನಕ್ಕೆ ಬಿಡಿಎ ಮಾಡಿದ ಮಹಜರ್ ದಾಖಲೆಗಳು ದೋಷ-ಯುಕ್ತವಾಗಿವೆ. ವಿಎಚ್‌ಬಿಸಿಎಸ್‌ಗೆ ಭೂಮಿ ಹಸ್ತಾಂತರ ಮಾಡಿರುವುದಕ್ಕೆ ಯಾವುದೇ ದಾಖಲೆಗಳಿಲ್ಲ. ಮಹಜರು ಮಾಡಿರುವುದಕ್ಕೆ ಹಸ್ತಪ್ರತಿ ಅಥವಾ ಮುದ್ರಿತ ಪ್ರತಿ ಲಭ್ಯವಿಲ್ಲ' ಎಂದು ನ್ಯಾಯಮೂರ್ತಿ ಪಿ.ಬಿ. ಭಜಂತ್ರಿ ಅವರಿದ್ದ ಪೀಠ ಅಭಿಪ್ರಾಯಪಟ್ಟಿತು.

ಒಎಂಬಿಆರ್ ಲೇಔಟ್ ನಿರ್ಮಾಣದ ಉದ್ದೇಶಕ್ಕಾಗಿ 1977ರ ನವೆಂಬರ್‌ನಲ್ಲಿ ಭೂಸ್ವಾಧೀನ ಪ್ರಕ್ರಿಯೆ ಆರಂಭವಾಗಿದ್ದು, ಬಳಿಕ ಆ ಜಾಗವನ್ನು ಕೋರಿಕೆ ಮೇರೆಗೆ ವಿಎಚ್‌ಬಿಸಿಎಸ್‌ಗೆ ವರ್ಗಾಯಿಸಲಾಗಿತ್ತು. ಈ ಸಂದರ್ಭದಲ್ಲಿ ಭೂಮಿಯ ಹಕ್ಕಿಗಾಗಿ ದೊಡ್ಡಮಾರಪ್ಪ ಮತ್ತು ಎ. ಶುಕ್ಲ ನಡುವೆ ವಿವಾದವೂ ಉಂಟಾಗಿತ್ತು.

'ಇದ್ಯಾವುದನ್ನೂ ಲೆಕ್ಕಿಸದೆ ಬಿಡಿಎ ದಾಖಲೆಗಳನ್ನು ಸೃಷ್ಟಿಸಿಕೊಂಡು ಭೂಮಿಯನ್ನು ಕಸಿದುಕೊಳ್ಳಲು ಆದೇಶ ಹೊರಡಿಸಿತ್ತು' ಎಂದು ದೊಡ್ಡಮಾರಪ್ಪ ಪರ ವಕೀಲರು ವಾದಿಸಿದರು.

ಪೀಠ ನೀಡಿದ ನಿರ್ದೇಶನದಂತೆ ಕಂದಾಯ ಇಲಾಖೆಯ ಪ್ರಾದೇಶಿಕ ಆಯುಕ್ತರು ವಿಚಾರಣೆ ನಡೆಸಿ 2020ರ ಜೂನ್ 22ರಂದು ವರದಿ ಸಲ್ಲಿಸಿದ್ದರು. ಕಂದಾಯ ಇಲಾಖೆ ದಾಖಲೆಗಳನ್ನು ಬಿಡಿಎ ಅಧಿಕಾರಿಗಳು ಗಮನಿಸದೆ ವಶಕ್ಕೆ ಪಡೆದಿದ್ದಾರೆ ಎಂದು ವರದಿಯಲ್ಲಿ ತಿಳಿಸಿದ್ದರು.

'ಎಲ್ಲಾ ದಾಖಲೆಗಳನ್ನು ಸರಿಪಡಿಸಿ ನಾಲ್ಕು ತಿಂಗಳಲ್ಲಿ ಮೃತ ದೊಡ್ಡಮಾರಪ್ಪ ಅವರ ಕುಟುಂಬಕ್ಕೆ ಭೂಮಿ ಹಸ್ತಾಂ-ತರಿಸಬೇಕು' ಎಂದು ಪೀಠ ನಿರ್ದೇಶನ ನೀಡಿತು.



ರಾಜ್ಯ ಕಂದಾಯ ಇಲಾಖೆ ನೌಕರರ ಸಂಘದ ವತಿಯಿಂದ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರು ಗ್ರಾಮ ಸಹಾಯಕರಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು –ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಆಶ್ಡೆನ್ ಪ್ರಶಸ್ತಿ: ಅಂತಿಮ ಸುತ್ತಿನ ಪಟ್ಟಿಯಲ್ಲಿ ಬಿವಿಟಿ

ಬೆಂಗಳೂರು: ಬ್ರಿಟನ್‌ನ ಆಶ್ಡೆನ್ ಸಂಸ್ಥೆ ನೀಡುವ ಜಾಗತಿಕ ಮಟ್ಟದ ಪ್ರತಿಷ್ಠಿತ ಆಶ್ಡೆನ್ ಪ್ರಶಸ್ತಿಯ 'ಸುಸ್ಥಿರ ಇಂಧನ ಕೌಶಲ ವೃದ್ಧಿ' ವಿಭಾಗದ ಅಂತಿಮ ಸುತ್ತಿಗೆ ಆಯ್ಕೆಯಾದ ಸಂಸ್ಥೆಗಳ ಪಟ್ಟಿಯಲ್ಲಿ ಮಣಿಪಾಲದ ಭಾರತೀಯ ವಿಕಾಸ ಟ್ರಸ್ಟ್ (ಬಿವಿಟಿ) ಸ್ಥಾನಪಡೆದಿದೆ ಎಂದು ಆಶ್ಡನ್ ಸಂಸ್ಥೆಯು ತನ್ನ ಪ್ರಕಟ-ಣೆಯಲ್ಲಿ ತಿಳಿಸಿದೆ.

ಇಂಗ್ಲೆಂಡ್‌ನ ಆಶ್ಡೆನ್ ಸಂಸ್ಥೆಯು ಕಳೆದ 20 ವರ್ಷಗಳಿಂದ ಹವಾಮಾನ ಬದಲಾವಣೆಯ ಪರಿಹಾರಗಳನ್ನು ಬೆಂಬಲಿಸುವ ನಿಟ್ಟಿನಲ್ಲಿ ಜಾಗತಿಕ ಮಟ್ಟದಲ್ಲಿ ಪ್ರಶಸ್ತಿಗಳನ್ನು ನೀಡುತ್ತಿದೆ.

ಪ್ರಶಸ್ತಿಗಾಗಿ 800ಕ್ಕೂ ಹೆಚ್ಚು ಸಂಸ್ಥೆಗಳು ಅರ್ಜಿ ಸಲ್ಲಿಸಿದ್ದವು. ಇದೀಗ 38 ಸಂಸ್ಥೆಗಳನ್ನು ಅಂತಿಮ ಪಟ್ಟಿಯಲ್ಲಿ ಹೆಸರಿಸಿದ್ದು, ಅದರಲ್ಲಿ ಬಿವಿಟಿ ಕೂಡ ಒಂದು.

ಪ್ರಶಸ್ತಿ ವಿಜೇತರ ಹೆಸರನ್ನು 2021ರ ನವೆಂಬರ್‌ನಲ್ಲಿ ಘೋಷಿಸಲಾಗುವುದು ಎಂದು ಆಶ್ಡೆನ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಹ್ಯಾರಿಯಟ್ ಲಾಂಬ್ ತಿಳಿಸಿದ್ದಾರೆ.

ಶಿಕ್ಷಕರಿಗೆ ₹50 ಲಕ್ಷ ಪರಿಹಾರ: ಆಗ್ರಹ

ಬೆಂಗಳೂರು: ಶಿಕ್ಷಕರು, ಉಪನ್ಯಾಸಕರು ಕೋವಿಡ್ ಸೇವೆಗಳಲ್ಲಿ ತೊಡಗಿದ್ದಾಗ ಸೋಂಕಿನಿಂದ ಮೃತಪಟ್ಟರೆ, ಅವರ ಕುಟುಂಬಗಳಿಗೆ ಸರ್ಕಾರ ತಲಾ ₹50 ಲಕ್ಷ ಪರಿಹಾರ ನೀಡಬೇಕು ಎಂದು ವಿಧಾನ ಪರಿಷತ್ ಸದಸ್ಯ ವೈ.ಎ. ನಾರಾಯಣಸ್ವಾಮಿ ಆಗ್ರಹಿಸಿದ್ದಾರೆ.

ಈ ಕುರಿತು ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

'ಕೋವಿಡ್ ಎರಡನೇ ಅಲೆ ಆರಂಭವಾದ ಬಳಿಕವೂ ರಾಜ್ಯದಲ್ಲಿ ನಡೆದ ವಿವಿಧ ಚುನಾವಣಾ ಕರ್ತವ್ಯಗಳಿಗೆ ಬೋಧಕ ಸಿಬ್ಬಂದಿಯನ್ನು ಬಳಸಿಕೊಳ್ಳಲಾಗಿದೆ. ಈ ವೇಳೆ ಸೋಂಕು ತಗುಲಿ ಕೆಲವರು ಮೃತಪಟ್ಟಿ-ದ್ದಾರೆ. ಶಿಕ್ಷಕರು ಹಾಗೂ ಉಪನ್ಯಾಸಕ-ರನ್ನು ಕೊರೊನಾ ಯೋಧರು ಎಂದು ಪರಿಗಣಿಸಬೇಕು' ಎಂದಿದ್ದಾರೆ.

ಗುಜರಾತ್: ನಾಲ್ವರ ಶವ ಪತ್ತೆ

ವಲ್ಸದ್, ಗುಜರಾತ್ (ಪಿಟಿಐ): ಇಲ್ಲಿನ ಅರೇಬಿಯನ್ ಸಮುದ್ರದ ತೀರದಲ್ಲಿ ಶನಿವಾರ ನಾಲ್ವರ ಶವಗಳು ಪತ್ತೆಯಾಗಿವೆ. ಇವು ತೌತೆ ಚಂಡಮಾರುತ-ದಿಂದಾಗಿ ಬಾರ್ಜ್ ಪಿ 305 ಮುಳುಗಡೆ ಆಗಿದ್ದಾಗ ಕಾಣೆಯಾಗಿದ್ದವರ ಶವ ಎಂದು ಶಂಕಿಸಲಾಗಿದೆ.

ಶವಗಳ ಮೇಲಿನ ಸಮವಸ್ತ್ರ ಮತ್ತು ಜೀವರಕ್ಷಕ ಜಾಕೆಟ್‌ಗಳನ್ನು ಗಮನಿಸಿದರೆ ಇವು ಬಾರ್ಜ್ ಮುಳುಗಡೆಯಾಗಿ ಕಾಣೆಯಾದವರ ಶವ ಎನ್ನಲಾಗಿದೆ ಎಂದು ವಲ್ಸದ್ ಪೊಲೀಸ್ ವರಿಷ್ಠಾಧಿಕಾರಿ ರಾಜದೀಪ್ ಸಿನ್ಹಾ ಝಾಲಾ ತಿಳಿಸಿದ್ದಾರೆ. ಮೂರು ಶವಗಳು ತಿಥಲ್ ಬೀಚ್‌ನಲ್ಲಿ ಕಂಡುಬಂದರೆ, ಒಬ್ಬರ ಶವವು ದುಂಗ್ರಿ ಗ್ರಾಮದ ಬಳಿ ಪತ್ತೆಯಾಗಿದೆ. ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ತಿಳಿಸಿದರು.

ಜಾಗತಿಕ ನೆರವು: 19 ಆಮ್ಲಜನಕ ಉತ್ಪಾದನಾ ಘಟಕ

ನವದೆಹಲಿ (ಪಿಟಿಐ): ವಿದೇಶಗಳ ನೆರವಿನಿಂದ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಏ. 27ರಿಂದ ಇದುವರೆಗೆ ಒಟ್ಟು 19 ಆಮ್ಲಜನಕ ಉತ್ಪಾದನಾ ಘಟಕ, 16,530 ಆಮ್ಲಜನಕ ಕಾನ್ಸನ್‌ಟ್ರೇ-ಟರ್‌ಗಳು, 15,901 ಆಮ್ಲಜನಕ ಸಿಲಿಂಡರ್‌ಗಳು ಹಾಗೂ ಸುಮಾರು 6.6 ಲಕ್ಷ ರೆಮ್‌ಡಿಸಿವಿರ್ ಔಷಧಿಯ ಬಾಟಲಿಗಳನ್ನು ತಲುಪಿಸಲಾಗಿದೆ ಎಂದು ಕೇಂದ್ರ ಸರ್ಕಾರವು ಶನಿವಾರ ತಿಳಿಸಿದೆ.

ಕೇಂದ್ರವು ಏ. 27ರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿನ ಸಹಕಾರದಿಂದಾಗಿ ವಿವಿಧ ದೇಶಗಳು ಮತ್ತು ಸಂಸ್ಥೆಗಳಿಂದ ಕೋವಿಡ್–19 ವೈದ್ಯಕೀಯ ಸೌಲಭ್ಯ ಮತ್ತು ಸಲಕರಣೆಗಳ ನೆರವನ್ನು ಪಡೆಯುತ್ತಿದೆ.

ಅಗತ್ಯವಿರುವ ಸಂದರ್ಭಗಳಲ್ಲಿ ಸೂಕ್ತ ಸಮಯಕ್ಕೆ ವೈದ್ಯಕೀಯ ಉಪಕರಣಗಳ ಸರಬರಾಜು ಆಗುತ್ತಿದೆ ಎಂದೂ ಆರೋಗ್ಯ ಸಚಿವಾಲಯವು ತಿಳಿಸಿದೆ.

ಉದ್ಯೋಗಿಗಳ ಸಂಬಂಧಿಕರಿಗೆ ಲಸಿಕೆ: ಕೇಂದ್ರ ಸರ್ಕಾರ

ನವದೆಹಲಿ: ಕೇಂದ್ರ ಸರ್ಕಾರದ ಉದ್ಯೋಗಿಗಳಿಗೆ ಅವರ ಕೆಲಸದ ಸ್ಥಳಗಳಲ್ಲಿಯೇ ಲಸಿಕೆ ನೀಡುವಂತೆ ಸೂಚಿಸಿರುವ ಸರ್ಕಾರ, ಆ ಉದ್ಯೋಗಿಗಳ ಸಂಬಂಧಿಕರಿಗೂ ಅದೇ ಕೇಂದ್ರಗಳಲ್ಲಿ ಲಸಿಕೆ ಪಡೆಯಲು ಅವಕಾಶ ಕಲ್ಪಿಸಿ ಮಾರ್ಗಸೂಚಿ ಪರಿಷ್ಕರಿಸಿದೆ.

ಸಣ್ಣ ಕರಳಿನಲ್ಲಿ ಬ್ಲ್ಯಾಕ್ ಫಂಗಸ್ ಪತ್ತೆ

ನವದೆಹಲಿ(ಪಿಟಿಐ): ಕೋವಿಡ್–19 ಸೋಂಕಿತ ಇಬ್ಬರು ರೋಗಿಗಳ ಸಣ್ಣ ಕರಳಿನಲ್ಲಿ ಬ್ಲ್ಯಾಕ್ ಫಂಗಸ್ ಪತ್ತೆಯಾಗಿದೆ. ಇದೊಂದು ಅಪರೂಪದ ಪ್ರಕರಣ ಎಂದು ವೈದ್ಯರು ತಿಳಿಸಿದ್ದಾರೆ.

56 ವರ್ಷದ ದೆಹಲಿ ನಿವಾಸಿಯೊಬ್ಬರ ಹೊಟ್ಟೆಯಲ್ಲಿ ಮೊದಲು ನೋವು ಕಾಣಿಸಿಕೊಂಡಿತ್ತು. ಆರಂಭದಲ್ಲಿ ಇದನ್ನು 'ಅಸಿಡಿಟಿ'ಯಿಂದ ಆಗಿರಬಹುದು ಎಂದು ಪರಿಗಣಿಸಲಾ-ಗಿತ್ತು. ಆದರೆ, ಸಿಟಿ ಸ್ಕ್ಯಾನ್ ಮಾಡಿಸಿದ ಬಳಿಕ, ಸಣ್ಣ ಕರಳಿನಲ್ಲಿ ರಂಧ್ರಗಳಿರು-ವುದು ಪತ್ತೆಯಾಯಿತು. ರೋಗಿಯನ್ನು ದಾಖಲಿಸಿಕೊಂಡು ಶಸ್ತ್ರಚಿಕಿತ್ಸೆಯನ್ನು ತುರ್ತಾಗಿ ಕೈಗೊಳ್ಳಲಾಗಿದೆ ಎಂದು ಇಲ್ಲಿನ ಸರ್ ಗಂಗಾ ರಾಮ್ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಆಗ್ರಹ

'ಆರೋಗ್ಯ ಇಲಾಖೆ ಸುತ್ತೋಲೆ, ಕೈಪಿಡಿ ಕನ್ನಡದಲ್ಲಿರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರೋಗ್ಯ ಇಲಾಖೆ ಹೊರಡಿಸುವ ಸುತ್ತೋಲೆ ಹಾಗೂ ಕೈಪಿಡಿಗಳು ಕನ್ನಡದಲ್ಲಿರಬೇಕು. ಇವು ಇಂಗ್ಲಿಷ್‌ನಲ್ಲಿರುವುದರಿಂದ ಶೇ70ರಷ್ಟು ಜನರಿಗೆ ತಲುಪುತ್ತಿಲ್ಲ. ಇದು ವಿಷಾದದ ಸಂಗತಿ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಬೇಸರ ವ್ಯಕ್ತಪಡಿಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಶನಿವಾರ ಆನ್‌ಲೈನ್ ಮೂಲಕ ಹಮ್ಮಿಕೊಂಡಿದ್ದ 'ಕನ್ನಡ ವೈದ್ಯಕೀಯ ಸಾಹಿತ್ಯ ಸಮ್ಮೇಳನ'ದಲ್ಲಿ ಅವರು 'ಆರೋಗ್ಯ ವಿಜ್ಞಾನ' ತ್ರೈಮಾಸಿಕ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.

'ಕೋವಿಡ್ ಸಂದಿಗ್ಧ ಪರಿಸ್ಥಿತಿಯಲ್ಲಿ ಆರೋಗ್ಯ ಇಲಾಖೆ ಹೊರಡಿಸುವ ಮಾರ್ಗಸೂಚಿಗಳು ಕನ್ನಡದಲ್ಲಿರಬೇಕು. ಹಾಗಾದಾಗ ಮಾತ್ರ ಅವು ಗ್ರಾಮೀಣ ಭಾಗದ ಜನರಿಗೂ ತಲುಪುತ್ತವೆ. ಈ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಗಮನ-ಹರಿಸಬೇಕು. ಸಹಾಯಕ ವೈದ್ಯಕೀಯ ಶಿಕ್ಷಣ ವ್ಯವಸ್ಥೆಯಲ್ಲಿ ಕನ್ನಡದ ಬಳಕೆ ಜಾರಿಗೊಳಿಸಬೇಕು. ಇದರಿಂದ ಕನ್ನಡದ ಮಕ್ಕಳಿಗೆ ಹೆಚ್ಚು ಅನುಕೂಲ-ವಾಗುತ್ತದೆ' ಎಂದು ಒತ್ತಾಯಿಸಿದರು.

'ಭಾಷೆ ಎಲ್ಲವನ್ನೂ ಸಂಗ್ರಹಿಸಿಕೊ-ಳ್ಳುವ ವಿಜ್ಞಾನ. ಪಾರಂಪರಿಕ ಜ್ಞಾನದ ಜೊತೆಯಲ್ಲಿ ವಿಜ್ಞಾನ ಮೇಳೈಸಿದಾಗ ಮಾತ್ರ ಬದುಕು ಸುಗಮವಾಗುತ್ತದೆ' ಎಂದು ತಿಳಿಸಿದರು.

ಕುಲಪತಿ ಎಸ್. ಸಚ್ಚಿದಾನಂದ 'ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಹೊರ ರಾಜ್ಯದ ವಿದ್ಯಾ-ರ್ಥಿಗಳಿಗೆ ಕನ್ನಡ ಕಲಿಸುವ ಕೆಲಸ ಮಾಡುತ್ತಿದ್ದೇವೆ. ಇದಕ್ಕಾಗಿ 'ಕನ್ನಡ ಕಲಿ' ಪುಸ್ತಕ ಹೊರತಂದಿದ್ದೇವೆ' ಎಂದು ಹೇಳಿದರು.

ಸಮ್ಮೇಳನಾಧ್ಯಕ್ಷ ಪಿ.ಎಸ್.ಶಂಕರ್ 'ವೈದ್ಯಕೀಯ ಬರವಣಿಗೆ ಸಮೃದ್ಧವಾ-ಗಿದ್ದರೂ ಅದಕ್ಕೆ ಸಾಹಿತ್ಯಿಕ ಮನ್ನಣೆ ಸಿಕ್ಕಿಲ್ಲ. ನಮ್ಮ ಬರವಣಿಗೆ ಸೃಜನಾ-ತ್ಮಕವಲ್ಲ ಎಂಬ ಅಭಿಪ್ರಾಯವಿದೆ. ವೈದ್ಯಕೀಯ ವಿಜ್ಞಾನದಲ್ಲಿ ಪದವಿ ಪಡೆದವರು ನಗರ ಹಾಗೂ ಹಳ್ಳಿಗಾಡಿನ ಜನರ ಜೊತೆ ಬೆರೆತು ಕೆಲಸ ಮಾಡಬೇಕಿದೆ. ರೋಗಿಗಳನ್ನು ಅವರ ಮಾತೃಭಾಷೆಯಲ್ಲೇ ವಿಚಾ-ರಿಸಬೇಕಾಗುತ್ತದೆ. ಹೀಗಾಗಿ ಎಲ್ಲಾ ವೈದ್ಯಕೀಯ ಕಾಲೇಜುಗಳಲ್ಲೂ ಕನ್ನಡದ ಮೂಲಕ ಸಾಮಾನ್ಯ ರೋಗಗಳ ಗುಣಲಕ್ಷಣ, ಚಿಕಿತ್ಸಾ ಕ್ರಮಗಳ ಬಗ್ಗೆ ಅರಿವು ಮೂಡಿಸಬೇಕು. ವಾರದಲ್ಲಿ ಎರಡು ದಿನಗಳಲ್ಲಿ ಕನ್ನಡ ತರಗತಿಗಳ-ನ್ನು ಆಯೋಜಿಸಬೇಕು' ಎಂದು ಸಲಹೆ ನೀಡಿದರು.

'ಕೋವಿಡ್ ಔಷಧಗಳಿಂದ ಹೃದಯಾಘಾತ ಅತ್ಯಲ್ಪ'

'ಕೋವಿಡ್‌ನಿಂದ ಚೇತರಿಸಿಕೊಂಡವರ ಪೈಕಿ ಶೇ5 ರಿಂದ 6ರಷ್ಟು ಮಂದಿಗೆ ಮಾತ್ರ ಹೃದಯಾಘಾತವಾಗುತ್ತದೆ. ಇದಕ್ಕೆ ಕೋವಿಡ್‌ಗೆ ನೀಡುವ ಔಷಧ ಕಾರಣವಲ್ಲ' ಎಂದು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಹೇಳಿದರು.

'ರೋಗದಿಂದ ಚೇತರಿಸಿಕೊಂಡ ನಂತರ ಮತ್ತಷ್ಟು ಮುನ್ನೆಚ್ಚರಿಕೆ ವಹಿಸಬೇಕು. ಅಗತ್ಯ ಪರೀಕ್ಷೆ ಮಾಡಿಸಿಕೊಂಡು ವೈದ್ಯರು ಸೂಚಿಸಿದ ಔಷಧಗಳನ್ನು ನಿಯಮಿತವಾಗಿ ಸೇವಿಸಬೇಕು' ಎಂದರು.

'ಕೋವಿಡ್ ಎರಡನೇ ಅಲೆ ಹತೋಟಿಗೆ ಬರುತ್ತಿದೆ. ಆಸ್ಪತ್ರೆಗಳಿಗೆ ದಾಖಲಾಗುವವರ ಸಂಖ್ಯೆ ಇಳಿಮುಖವಾಗಿದೆ. ಅನೇಕರು ಬೆಂಗಳೂರು ತೊರೆದು ಹಳ್ಳಿಗಳಿಗೆ ಹೋಗಿದ್ದರಿಂದ ಅಲ್ಲಿ ಸೋಂಕು ಪ್ರಕರಣಗಳು ಹೆಚ್ಚಿವೆ. ಅಲ್ಲೂ ಅಗತ್ಯ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗಿದೆ' ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ.ಎಂ.ಕೆ.ಸುದರ್ಶನ್ ತಿಳಿಸಿದರು.

ಡಾ.ಗಿರಿಧರ್ ಬಾಬು 'ಜನರ ನಿರ್ಲಕ್ಷ್ಯದಿಂದಾ-ಗಿ ಕೋವಿಡ್ ವೈರಾಣು ಹರಡುತ್ತಿದೆ. ಜನ ತಮ್ಮ ವರ್ತನೆಯಲ್ಲಿ ಬದಲಾವಣೆ ತಂದುಕೊಳ್ಳಬೇಕು' ಎಂದು ಹೇಳಿದರು.

ಕೊರೊನಾ ಸೋಂಕು ನಿಯಂತ್ರಣದ ಹೊಣೆಗಾರಿಕೆ: 24ರಿಂದ 2 ದಿನ ಸಚಿವ ಈಶ್ವರಪ್ಪ ವಿಡಿಯೊ ಸಂವಾದ

ಹಳ್ಳಿಗಳಲ್ಲೂ ಕೋವಿಡ್: ತುರ್ತು ಕ್ರಮಕ್ಕೆ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದು, ಸೋಂಕು ನಿಯಂತ್ರಿಸಲು ಕೈಗೊಳ್ಳಬೇಕಾದ ತುರ್ತು ಕ್ರಮಗಳ ಕುರಿತು ಚರ್ಚಿಸಲು ಇದೇ 24 ಮತ್ತು 25ರಂದು ವಿಡಿಯೊ ಸಂವಾದ ನಡೆಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ನಿರ್ಧರಿಸಿದ್ದಾರೆ.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಆರೋಗ್ಯ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಂವಾದದಲ್ಲಿ ಭಾಗವಹಿಸಲಿದ್ದಾರೆ.

ಈ ಬಗ್ಗೆ ಮಾತನಾಡಿದ ಈಶ್ವರಪ್ಪ, ‘ಗ್ರಾಮೀಣ ಪ್ರದೇಶಗಳಲ್ಲಿ ಕೋವಿಡ್ ವ್ಯಾಪಕವಾಗುತ್ತಿದೆ. ಸೋಂಕು ನಿಯಂತ್ರಿಸುವ ಹೊಣೆಗಾರಿಕೆ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಪಂಚಾಯಿತಿ ಅಧ್ಯಕ್ಷರಿಗೆ ವಹಿಸುವ ಜೊತೆಗೆ, ಜಾಗೃತಿ ಮೂಡಿಸುವ ಉದ್ದೇಶದಿಂದ ಅವರೆಲ್ಲರ ಜೊತೆ ಸಮಾಲೋಚನೆ ನಡೆಸಲು ಈ ಸಂವಾದ ಹಮ್ಮಿಕೊಂಡಿದ್ದೇನೆ’ ಎಂದರು.

‘24ರಂದು ಬೆಳಿಗ್ಗೆ 10.30ಕ್ಕೆ ಮೈಸೂರು ಮತ್ತು ಬೆಂಗಳೂರು ವಿಭಾಗದ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯಿತಿಗಳು ಹಾಗೂ 25ರಂದು ಬೆಳಗಾವಿ ಮತ್ತು ಕಲಬುರ್ಗಿ ವಿಭಾಗದ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯಿತಿಗಳಲ್ಲಿ ಕೋವಿಡ್ ಪರಿಸ್ಥಿತಿಯನ್ನು ಅವಲೋಕಿಸಿ, ಅಗತ್ಯ ಕ್ರಮಗಳ ಕುರಿತು ಸೂಚನೆಗಳು ನೀಡುತ್ತೇನೆ’ ಎಂದರು.

‘ಗ್ರಾಮಕ್ಕೆ ಹೊರಗಡೆಯಿಂದ ಬಂದವರನ್ನು ಪರೀಕ್ಷೆಗೆ ಒಳಪಡಿಸಿ, ಅವರು ಸೋಂಕಿತರಾಗಿದ್ದರೆ ಚಿಕಿತ್ಸೆಗೆ ವ್ಯವಸ್ಥೆ ಮಾಡಬೇಕು. ಮನೆ ಆರೈಕೆಯ ಬದಲು ಕೋವಿಡ್ ಆರೈಕೆ ಕೇಂದ್ರಕ್ಕೆ ಯಾಕೆ ಹೋಗಬೇಕು ಎಂದು ಮನವರಿಕೆ ಮಾಡುವ ಜೊತೆಗೆ, ಇಂತಹ ಆರೈಕೆ ಕೇಂದ್ರದಲ್ಲಿ ಇರುವವರನ್ನು ಅಗತ್ಯಬಿದ್ದರೆ ಆಸ್ಪತ್ರೆಗೆ ಸೇರಿಸವ ಕೆಲಸವನ್ನೂ ಮಾಡುವಂತೆ ನಿರ್ದೇಶನ ನೀಡಲಾಗುವುದು’ ಎಂದರು.

‘ವೆಬೆಕ್ಸ್‌ನಲ್ಲಿ ಈ ಸಂವಾದ ನಡೆಯಲಿದ್ದು, ಒಮ್ಮೆಗೆ 1,000 ಲಾಗಿನ್‌ಗೆ ಮಾತ್ರ ಅವಕಾಶವಿದೆ. ಹೀಗಾಗಿ, ಒಂದು ಸ್ಥಳದಲ್ಲಿ ಮೂರು ಗ್ರಾಮ ಪಂಚಾಯಿತಿಗಳು ಲಾಗಿನ್ ಆಗಿ ಭಾಗವಹಿಸುವಂತೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಸಂಯೋಜಿಸಬೇಕು’ ಎಂದೂ ಇಲಾಖೆಯ ಆಯುಕ್ತರು ಸೂಚಿಸಿದ್ದಾರೆ.



ಕೋವಿಡ್ ಕಾಲದಲ್ಲಿನ ಗ್ರಾಮೀಣ ಜನರ ಸಮಸ್ಯೆಗಳಿಗೆ ತಕ್ಷಣ ಪರಿಹಾರ ಕಲ್ಪಿಸಲು ಏನು ಮಾಡಬೇಕಿದೆ ಎಂಬುದನ್ನು ಚರ್ಚಿಸಿ, ನಿರ್ದೇಶನ ನೀಡಲು ಸಂವಾದ ನಡೆಯಲಿದೆ

ಕೆ.ಎಸ್. ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

‘ಗ್ರಾ.ಪಂ.ನಿಂದ ಊಟೋಪಚಾರ’

ಗ್ರಾಮೀಣ ಪ್ರದೇಶದಲ್ಲಿ ತೊಂದರೆಯಲ್ಲಿ ಸಿಲುಕಿರುವ ಮಕ್ಕಳು, ಮಹಿಳೆಯರು ವೃದ್ಧರು, ಅಂಗವಿಕಲರಿಗೆ ಊಟೋಪಚಾರದ ವ್ಯವಸ್ಥೆ ಮಾಡಬೇಕು’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಉಮಾ ಮಹಾದೇವನ್ ಸೂಚಿಸಿದ್ದಾರೆ.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ (ಪಿಡಿಒ) ಪತ್ರ ಬರೆದಿರುವ ಅವರು, ಕೊರೊನಾ ನಿರ್ವಹಣೆಗೆ ಗ್ರಾಮಮಟ್ಟದ ಕಾರ್ಯಪಡೆಯನ್ನು ಮತ್ತೆ ಸಕ್ರಿಯಗೊಳಿಸಬೇಕು. ಮಾಸ್ಕ್ ಧರಿಸುವಂತೆ, ಅಂತರ ಕಾಪಾಡಿಕೊಳ್ಳುವಂತೆ, ಸ್ಯಾನಿಟೈಸರ್ ಬಳಸುವಂತೆ ಜಾಗೃತಿ ಮೂಡಿಸಬೇಕಿದೆ. ಸೋಂಕಿತರನ್ನು ಗುರುತಿಸಿ ಪರೀಕ್ಷೆಗೆ ಒಳಪಡಿಸಿ ಪ್ರತ್ಯೇಕವಾಗಿ ಇರಿಸಬೇಕು. ಸೋಂಕು ದೃಢಪಟ್ಟವರನ್ನು ಕೋವಿಡ್ ಆರೈಕೆ ಕೇಂದ್ರಗಳಿಗೆ ಸೇರಿಸಿ ಚಿಕಿತ್ಸೆ ಕೊಡಿಸಬೇಕು. ಅಗತ್ಯ ಇರುವವರನ್ನು ಆಸ್ಪತ್ರೆಗೆ ದಾಖಲಿಸಬೇಕು ಎಂದು ನಿರ್ದೇಶನ ನೀಡಿದ್ದಾರೆ.

ವಾಹನ ವ್ಯವಸ್ಥೆ

ಗ್ರಾಮೀಣ ಪ್ರದೇಶಗಳಲ್ಲಿ ಕೋವಿಡ್ ರೋಗಿಗಳನ್ನು ಆಸ್ಪತ್ರೆಗಳಿಗೆ ಕರೆದೊಯ್ಯಲು ವಾಹನ ವ್ಯವಸ್ಥೆ ಮಾಡುವಂತೆ ಇಲಾಖೆ ಸೂಚಿಸಿದೆ.

ಕೋವಿಡ್ ರೋಗಿಗಳು ಓಡಾಡಲು ವಾಹನ ತೊಂದರೆ ಯಾಗದಂತೆ ನೋಡಿಕೊಳ್ಳಲು ಹಾಗೂ ಮೃತಪಟ್ಟವರನ್ನು ಚಿತಾಗಾರಗಳಿಗೆ ಸಾಗಿಸಲು ಅಂಬುಲೆನ್ಸ್‌ಗಳು ಸಿಗದಿರುವ ಪರಿಸ್ಥಿತಿ ನಿರ್ಮಾಣ ಆಗುತ್ತಿದೆ. ಹೀಗಾಗಿ, ಈ ಉದ್ದೇಶಕ್ಕಂದೇ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಒಂದು ವಾಹನವನ್ನು ಬಾಡಿಗೆ ಪಡೆದು ಬಳಸುವಂತೆ ಗ್ರಾಮ ಪಂಚಾಯಿತಿಗಳಿಗೆ ಇಲಾಖೆ ಸೂಚನೆ ನೀಡಿದೆ.

ಸುದ್ದಿ 2 ನಿಮಿಷ

ಸುತ್ತೂರು ಮಠದಿಂದ ಉಚಿತ ಶಿಕ್ಷಣ

ಮೈಸೂರು: ಕೊರೊನಾ ಸೋಂಕಿನಿಂದ ಸಾವು–ನೋವು ಉಂಟಾಗಿ ಸಂಕಷ್ಟಕ್ಕೆ ಸಿಲುಕಿರುವ ಕುಟುಂಬದ ಮಕ್ಕಳಿಗೆ ಉಚಿತ ಶಿಕ್ಷಣ ಕಲ್ಪಿಸಲು ಸುತ್ತೂರು ಮಠ ಮುಂದಾಗಿದೆ.

‘ಇಂಥ ಕುಟುಂಬದ ಸದಸ್ಯರು, ಜೀವನ ನಿರ್ವಹಣೆಗೂ ಕಷ್ಟಪಡುವ ಸಂದರ್ಭ ಬಂದೊದಗಿದೆ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಮಕ್ಕಳ ವಿದ್ಯಾಭ್ಯಾಸದ ಮುಂದುವರಿಕೆಯೂ ಸವಾಲಾಗಿರುತ್ತದೆ. ಇಂಥ ಕುಟುಂಬದ ಮಕ್ಕಳಿಗೆ ಶ್ರೀ ಕ್ಷೇತ್ರದ ವಸತಿ ಶಾಲೆಯಲ್ಲಿ ಉಚಿತ ಶಿಕ್ಷಣ ಕಲ್ಪಿಸಲು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕ್ರಮ ವಹಿಸಿದ್ದಾರೆ’ ಎಂದು ಗೌರವ ಕಾರ್ಯದರ್ಶಿ ಎಸ್. ಶಿವಕುಮಾರಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

1 ರಿಂದ 10ನೇ ತರಗತಿವರೆಗಿನ ಬಾಲಕ ಮತ್ತು ಬಾಲಕಿಯರನ್ನು ಶಾಲೆಗೆ ದಾಖಲಿಸಬಹುದಾಗಿದೆ. ಹೆಸರು ನೋಂದಾಯಿಸಿಕೊಳ್ಳಲು ಮೊ: 74114 86938 ಸಂಪರ್ಕಿಸಲು ಕೋರಿದೆ.

ಬಾವಗಿ ಗ್ರಾಮ ಕೋವಿಡ್ ಮುಕ್ತ



ಜನವಾಡ (ಬೀದರ್ ಜಿಲ್ಲೆ): ರಾಜ್ಯ ಸರ್ಕಾರ ಲಾಕ್‌ಡೌನ್ ಘೋಷಿಸುವ ಮುನ್ನವೇ ಸ್ವಯಂ ಪ್ರೇರಿತ ಲಾಕ್‌ಡೌನ್ ವಿಧಿಸಿಕೊಂಡಿದ್ದ ಬೀದರ್ ತಾಲ್ಲೂಕಿನ ಬಾವಗಿ ಗ್ರಾಮಸ್ಥರು ಕೊರೊನಾ ಸೋಂಕು ನಿಯಂತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸಾಂಘಿಕ ಪ್ರಯತ್ನದಿಂದ ಸೋಂಕು ಕಟ್ಟಿ ಹಾಕಬಹುದು ಎನ್ನುವುದಕ್ಕೆ ನಿದರ್ಶನ ಕೂಡ ಆಗಿದ್ದಾರೆ.

‘ಮೊದಲು 8 ಜನರಲ್ಲಿ ಸೋಂಕು ಕಾಣಿಸಿಕೊಂಡ ಕಾರಣ ಗ್ರಾಮಸ್ಥರು ಆತಂಕಗೊಂಡಿದ್ದರು. ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಗ್ರಾಮದ ಮುಖಂಡರು ಸೋಂಕು ತಡೆಗೆ ಗ್ರಾಮವನ್ನು ಸ್ವಯಂ ಪ್ರೇರಿತವಾಗಿ ಲಾಕ್‌ಡೌನ್ ಮಾಡಲು ಮನವಿ ಮಾಡಿದರು. ಅದಕ್ಕೆ ಗ್ರಾಮಸ್ಥರೂ ಸಹಕರಿಸಿದರು. ಅದಾದ ಕೆಲ ದಿನಗಳ ನಂತರ ರಾಜ್ಯ ಸರ್ಕಾರವೂ ಲಾಕ್‌ಡೌನ್ ಘೋಷಣೆ ಮಾಡಿತ್ತು. ಸುರಕ್ಷತಾ ನಿಯಮಗಳನ್ನು ಪಾಲಿಸಿದ ಪರಿಣಾಮ ಗ್ರಾಮ ಈಗ ಸೋಂಕಿನಿಂದ ಮುಕ್ತವಾಗಿದೆ’ ಎಂದು ಭದ್ರೇಶ್ವರ ಮಠದ ಶಿವಕುಮಾರ ಸ್ವಾಮಿ ತಿಳಿಸಿದ್ದಾರೆ.

‘ಕಟ್ಟುನಿಟ್ಟಿನ ಕ್ರಮಗಳ ಕಾರಣ ಗ್ರಾಮದಲ್ಲಿ ಸೋಂಕು ಸಂಪೂರ್ಣ ನಿವಾರಣೆಯಾಗಿದೆ. ಗ್ರಾಮೀಣ ಪ್ರದೇಶದ ಜನ ಒಗ್ಗಟ್ಟಿನಿಂದ ಪ್ರಯತ್ನ ಮಾಡಿದರೆ ಗ್ರಾಮಗಳನ್ನು ಕೋವಿಡ್ ಮುಕ್ತಗೊಳಿಸಬಹುದು’ ಎಂದು ಗ್ರಾಮ ಪಂಚಾಯಿತಿ ಸದಸ್ಯರಾದ ಸಂಗಮೇಶ ಹಜ್ಜರಗಿ, ತಾಜೊದ್ದಿನ್ ಔರಾದ್, ಝರೆಪ್ಪ ಮಸಲು ನೀರಡಿ ಹೇಳಿದ್ದಾರೆ.

ಚಾಲಕರಿಗೆ ಆನ್‌ಲೈನ್‌ನಲ್ಲಿ ಪರಿಹಾರ

ಬೆಂಗಳೂರು: ರಾಜ್ಯ ಸರ್ಕಾರ ಪ್ರಕಟಿಸಿರುವ ಪ್ಯಾಕೇಜ್ ಅಡಿಯಲ್ಲಿ ಆಟೊ ರಿಕ್ಷಾ, ಟ್ಯಾಕ್ಸಿ ಮತ್ತು ಮ್ಯಾಕ್ಸಿ ಕ್ಯಾಬ್ ಚಾಲಕರಿಗೆ ಆನ್‌ಲೈನ್ ಮೂಲಕವೇ ಪರಿಹಾರ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಸಾರಿಗೆ ಇಲಾಖೆ ತಿಳಿಸಿದೆ.

‘ಸೇವಾ ಸಿಂಧು’ ಪೋರ್ಟಲ್ ಮೂಲಕವೇ ಅರ್ಜಿ ಸ್ವೀಕರಿಸಿ, ಪರಿಹಾರ ವಿತರಣೆಗೆ ಸೂಕ್ತ ತಂತ್ರಾಂಶ ರೂಪಿಸಲಾಗುತ್ತಿದೆ. ತಂತ್ರಾಂಶ ಸಿದ್ಧವಾದ ಬಳಿಕ ಅರ್ಜಿಗಳನ್ನು ಆಹ್ವಾನಿಸಲಾಗುವುದು’ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂತ್ರ ನೆಕ್ಕಿಸಿ ದೌರ್ಜನ್ಯ– ದೂರು: ಪಿಎಸ್‌ಐ ವಿರುದ್ಧ ಪ್ರಕರಣ ದಾಖಲು

ಚಿಕ್ಕಮಗಳೂರು: ಬಾಯಿಗೆ ಮೂತ್ರ ಹುಯ್ಯಿಸಿ, ನೆಲದಲ್ಲಿದ್ದ ಮೂತ್ರ ನೆಕ್ಕಿಸಿದ್ದಾರೆ ಎಂದು ಪರಿಶಿಷ್ಟ ಸಮುದಾಯದ ಯುವಕ ನೀಡಿರುವ ದೂರಿಗೆ ಸಂಬಂಧಿಸಿದಂತೆ ಪಿಎಸ್‌ಐ ಕೆ.ಅರ್ಜುನ್ ಹೊರಕೇರಿ ವಿರುದ್ಧ ಶನಿವಾರ ಪ್ರಕರಣ ದಾಖಲಾಗಿದೆ.

ಮೂಡಿಗೆರೆ ತಾಲ್ಲೂಕಿನ ಗೋಣಿಬೀಡು ಠಾಣೆಯ ಪಿಎಸ್‌ಐ, ಬಾಯಿಗೆ ಮೂತ್ರ ಹುಯ್ಯಿಸಿ, ಹಿಗ್ಗಾಮುಗ್ಗಾ ಥಳಿಸಿ ದೌರ್ಜನ್ಯಎಸಗಿದ್ದಾರೆಎಂದು ಕಿರುಗುಂದ ಗ್ರಾಮದ ಯುವಕ ಕೆ.ಎಲ್.ಪುನೀತ್ ಅವರು ಈಚೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿದ್ದರು. ದೂರಿನ ಪ್ರತಿಗಳನ್ನು ಪೊಲೀಸ್ ಮಹಾನಿರ್ದೇಶಕರು, ಪಶ್ಚಿಮ ವಲಯ ಐಜಿಪಿಗೂ ರವಾನಿಸಿದ್ದಾರೆ.

‘ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಶೀಲನೆ ಮಾಡಿ ವರದಿ ನೀಡುವಂತೆ ಡಿವೈಎಸ್ಪಿಗೆ ಹೊಣೆ ವಹಿಸಲಾಗಿತ್ತು. ವಿಚಾರಣೆ ನಡೆಸಿ ಅವರು ವರದಿ ನೀಡಿದ್ದಾರೆ. ಗೋಣಿಬೀಡು ಠಾಣೆ ಪಿಎಸ್‌ಐ ಅರ್ಜುನ್ ಅವರನ್ನು ಡಿಸಿಆರ್‌ಬಿಗೆ ನಿಯೋಜಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಕ್ಷಯ್ ತಿಳಿಸಿದರು.

‘ಮೇ 10ರಂದು ಗೋಣಿಬೀಡು ಠಾಣೆ ಪಿಎಸ್‌ಐ ನನ್ನನ್ನು ಠಾಣೆಗೆ ಕರೆದೊಯ್ದಿದ್ದು, ಜಾತಿ ನಿಂದನೆ ಮಾಡಿದ್ದಾರೆ. ಬಾಯಾರಿಕೆಯಾಗಿದೆ ನೀರು ಕೊಡಿ ಎಂದು ಕೇಳಿದೆ. ವ್ಯಕ್ತಿಯೊಬ್ಬನನ್ನು ಕರೆಸಿ ಬಾಯಿಗೆ ಉಚ್ಚೆ ಮಾಡಿಸಿದರು. ನೆಲದಲ್ಲಿ ಬಿದ್ದ ಮೂತ್ರವನ್ನು ನೆಕ್ಕಿಸಿದರು. ಹಿಂಸೆ ಕೊಟ್ಟ ವಿಚಾರ ಯಾರಿಗೂ ಹೇಳಬಾರದು ಎಂದು ಬೆದರಿಕೆ ಹಾಕಿದ್ದರು’ ಎಂದು ಯುವಕ ಆರೋಪಿಸಿದ್ದಾರೆ.

ಭಾರಿ ಮಳೆ, ಮನೆಗಳಿಗೆ ನುಗ್ಗಿದ ನೀರು

ನಾಯಕನಹಟ್ಟಿ: 60 ಸಂತ್ರಸ್ತರಿಗೆ ಸಮುದಾಯ ಭವನದಲ್ಲಿ ಆಶ್ರಯ, ಊಟ

ಪ್ರಜಾವಾಣಿ ವಾರ್ತೆ

ನಾಯಕನಹಟ್ಟಿ: ಹೋಬಳಿಯಾದ್ಯಂತ ಶುಕ್ರವಾರ ರಾತ್ರಿ 9.9 ಸೆಂ.ಮೀ ಮಳೆಯಾಗಿದ್ದು, ಮನುಮೈನಹಟ್ಟಿ ಗ್ರಾಮದಲ್ಲಿ ಎರಡು ಮನೆಗಳು ಕುಸಿದು ಬಿದ್ದು, 22 ಮನೆಗಳಿಗೆ ನೀರು ನುಗ್ಗಿದೆ.

ಗ್ರಾಮದ ಕೆರೆಯು ಕೋಡಿ ಬಿದ್ದು, ನೀರು ರಾಜ್ಯ ಹೆದ್ದಾರಿ 45ರಲ್ಲಿ ಹರಿಯಿತು. 22 ಮನೆಗಳಿಗೆ ನುಗ್ಗಿತು. ಮಧ್ಯ ರಾತ್ರಿ 2 ಮನೆಗಳು ಕುಸಿದು ಬಿದ್ದವು. 60 ಸಂತ್ರಸ್ತರಿಗೆ ರಾತ್ರಿಯೇ ಸಮೀಪದಲ್ಲಿದ್ದ ಏಕಾಂತೇಶ್ವರ ದೇವಾಲಯದ ಸಮುದಾಯ ಭವನದಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಲಾಯಿತು. ಶನಿವಾರ ಬೆಳಿಗ್ಗೆ ಗ್ರಾಮಕ್ಕೆ ತಹಶೀಲ್ದಾರ್ ಎಂ.ಮಲ್ಲಿಕಾರ್ಜುನ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಅಧಿಕಾರಿಗಳ ತಂಡ ಭೇಟಿ ನೀಡಿ ಮಳೆ ಹಾನಿ ಪರಿಶೀಲಿಸಿತು. ಸಂತ್ರಸ್ತರೆಲ್ಲರಿಗೂ ಉಪಾಹಾರ, ಊಟ, ತಾತ್ಕಾಲಿಕ ವಸತಿ ವ್ಯವಸ್ಥೆ ಮಾಡಲಾಯಿತು.

ಮಲ್ಲೂರಹಳ್ಳಿ ಗ್ರಾಮದ ಸುತ್ತಮುತ್ತಲ 4 ಚೆಕ್‌ಡ್ಯಾಂಗಳು ಮಳೆಯ ರಭಸಕ್ಕೆ ಒಡೆದು ಹೋಗಿವೆ. ದಾಸರಮುತ್ತೇನಹಳ್ಳಿ ಗ್ರಾಮದ ಬಳಿ ಜಿಲ್ಲಾ ಹೆದ್ದಾರಿ ಕುಸಿದಿದೆ. ನಾಯಕನಹಟ್ಟಿ ಪಟ್ಟಣದಲ್ಲಿ 4 ಮನೆಗಳಿಗೆ ನೀರು ನುಗ್ಗಿದೆ. ಬಿರುಸಾದ ಗಾಳಿ ಮತ್ತು ಮಳೆಗೆ ನಿರಂತರ ಜ್ಯೋತಿ ಯೋಜನೆಯ 25ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. 8 ವಿದ್ಯುತ್ ಪರಿವರ್ತಕಗಳು ಸಿಡಿಲಿನ ರಭಸಕ್ಕೆ ಸುಟ್ಟು ಹೋಗಿವೆ.

ಶಿವಮೊಗ್ಗ ನಗರ ಹಾಗೂ ಗ್ರಾಮಾಂತರ ಭಾಗದಲ್ಲಿ ಕೆಲವು ಸಮಯ ಮಳೆ ಸುರಿಯಿತು. ತುಂಗಾ ಜಲಾಶಯ ಭರ್ತಿಯಾಗಿರುವ ಕಾರಣ ಸಣ್ಣ ಪ್ರಮಾಣದಲ್ಲಿ ನದಿಗೆ ನೀರು ಹರಿಸಲಾಗುತ್ತಿತ್ತು. ಶನಿವಾರ ಒಳ ಹರಿವು ಸಾವಿರ ಕ್ಯುಸೆಕ್‌ಗೂ ಕಡಿಮೆಯಾಗಿದೆ. ಹಾಗಾಗಿ, ನದಿಗೆ ಅಲ್ಪ ಪ್ರಮಾಣದ ನೀರು ಬಿಡಲಾಗುತ್ತಿದೆ. ದಾವಣಗೆರೆ ಜಿಲ್ಲೆಯ ಹೊನ್ನಾಳಿಯಲ್ಲಿ ಶನಿವಾರ ಉತ್ತಮ ಮಳೆಯಾಗಿದೆ. ಶುಕ್ರವಾರ ರಾತ್ರಿ ಸುರಿದ ಮಳೆಗೆ ಮಲೇಬೆನ್ನೂರು ಹೋಳಿಯಲ್ಲಿ ಮೂರು ಮನೆಗಳಿಗೆ ಹಾನಿಯಾಗಿದೆ. 25 ಎಕರೆ ಭತ್ತದ ಬೆಳೆ ನೆಲಕಚ್ಚಿದೆ.

ಉತ್ತಮ ಮಳೆ: ಕೊಡಗು ಜಿಲ್ಲೆಯ ನಾಪೋಕ್ಲು, ಗೋಣಿಕೊಪ್ಪಲು, ವಿರಾಜಪೇಟೆ ಸುತ್ತಮುತ್ತ ಬಿರುಸಿನ ಮಳೆಯಾಗಿದೆ. ಹಾಸನ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದೆ.



ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿ ಹೋಬಳಿಯ ಮನುಮೈನಹಟ್ಟಿ ಗ್ರಾಮದಲ್ಲಿ ಮಳೆಯ ರಭಸಕ್ಕೆ ಸಿ.ಸಿ ರಸ್ತೆ ಕೊಚ್ಚಿ ಹೋಗಿರುವುದು.

ಸಂಕ್ಷಿಪ್ತ ಸುದ್ದಿ

ಜೋಶಿ ಜೊತೆ ರಾಜ್ಯ ಸಚಿವರ ಗೋಪ್ಯ ಸಭೆ

ಹುಬ್ಬಳ್ಳಿ: ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಾಗೂ ರಾಜ್ಯ ಸಚಿವ ಸಂಪುಟದ ಪ್ರಮುಖ ಸಚಿವರು ಶುಕ್ರವಾರ ನಗರದಲ್ಲಿ ಗೋಪ್ಯ ಸಭೆ ನಡೆಸಿದ್ದಾರೆ ಎನ್ನಲಾಗಿದ್ದು, ಭಾರಿ ಚರ್ಚೆಗೆ ಗ್ರಾಸವಾಗಿದೆ.


ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ, ಆರೋಗ್ಯ ಸಚಿವ ಡಾ. ಸುಧಾಕರ್ ಜೊತೆಗೆ ಶಾಸಕ ರಮೇಶ ಜಾರಕಿಹೊಳಿ ನಗರದ ಹೋಟೆಲ್‌ವೊಂದರಲ್ಲಿ ಶುಕ್ರವಾರ ತಡರಾತ್ರಿವರೆಗೂ ಸಭೆ ನಡೆಸಿ, ಶನಿವಾರ ಬೆಳಿಗ್ಗೆ ಬೆಳಗಾವಿಗೆ ವಾಪಸ್ ಹೋಗಿದ್ದಾರೆ. ನಂತರ ಬೈರತಿ ಬಸವರಾಜ, ಸುಧಾಕರ್ ಅವರು ಪ್ರಲ್ಹಾದ ಜೋಶಿ ನಿವಾಸದಲ್ಲಿ ಎರಡು ತಾಸು ಗೋಪ್ಯ ಸಭೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಬದಲಾವಣೆ ಚರ್ಚೆಯಾಗುತ್ತಿರುವ ಬೆನ್ನಲ್ಲೇ ಈ ಸಭೆ ನಡೆದಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಧರ್ಮಸ್ಥಳ: ಹತ್ತನಾವಧಿ ಉತ್ಸವ ನಾಳೆ

ಉಜಿರೆ: ಧರ್ಮಸ್ಥಳದಲ್ಲಿ ವರ್ಷದ ಕೊನೆಯ ಕಾರ್ಯಕ್ರಮ ಹತ್ತನಾವಧಿ (ಪತ್ತನಾಜೆ) ಉತ್ಸವ ಮೇ 24ರಂದು ಸರಳವಾಗಿ ನಡೆಯಲಿದೆ.

ದೀಪಾವಳಿವರೆಗೆ ದೇವಸ್ಥಾನದಲ್ಲಿ ಉತ್ಸವ, ರಂಗಪೂಜೆ, ಬೆಳ್ಳಿ ರಥೋತ್ಸವ ಮೊದಲಾದ ವಿಶೇಷ ಸೇವೆಗಳು ನಡೆಯುವುದಿಲ್ಲ ಎಂದು ದೇವಳದ ಪ್ರಕಟಣೆ ತಿಳಿಸಿದೆ.



ಮೃತಪಟ್ಟಿರುವ ಚಿರತೆ

ಮೂರು ಚಿರತೆ ಸಾವು: ವಿಷಪ್ರಾಶನ ಶಂಕೆ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಹೊರವಲಯದ ಬೆಳವಾಡಿ ಕೆರೆ ಸಮೀಪದಲ್ಲಿ ಮೂರು ಚಿರತೆಗಳು ಶನಿವಾರ ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ವಿಷಪ್ರಾಶನದ ಶಂಕೆ ವ್ಯಕ್ತವಾಗಿದೆ.

ಸುಮಾರು 4 ವರ್ಷದ ತಾಯಿ ಚಿರತೆ ಹಾಗೂ ಅದರ 8 ರಿಂದ 10 ತಿಂಗಳ ಎರಡು ಮರಿಗಳು (ಗಂಡು ಹಾಗೂ ಹೆಣ್ಣು) ಜಮೀನೊಂದರಲ್ಲಿ ಮೃತಪಟ್ಟಿವೆ. ಈ ಚಿರತೆಗಳ ಸಮೀಪದಲ್ಲಿ ಅರ್ಧ ತಿಂದು ಬಿಟ್ಟ ಬೀದಿನಾಯಿಯೊಂದರ ಮೃತದೇಹ ಕೂಡ ದೊರೆತಿದ್ದು, ಆ ನಾಯಿ ದೇಹದ ಮೇಲೆ ಕೀಟನಾಶಕ ಸಿಂಪಡಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಚಿರತೆಗಳ ಹೊರಭಾಗದಲ್ಲಿ ಯಾವುದೇ ಗಾಯ ಆಗಿಲ್ಲ.

‘ಮೂರೂ ಚಿರತೆಗಳು ಅಸಹಜವಾಗಿ ಮೃತಪಟ್ಟಿವೆ. ಪಶು ವೈದ್ಯರ ತಂಡ ಮರಣೋತ್ತರ ಪರೀಕ್ಷೆ ನಡೆಸಿದ್ದು, ಅಂಗಾಂಗಳ ಮಾದರಿಯನ್ನು ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಅನಿಮಲ್ ಹೆಲ್ತ್ ಅಂಡ್ ವೆಟರ್ನರಿ ಬಯೊಲಜಿಕಲ್ಸ್ (ಐಎಎಚ್‌ವಿಬಿ) ಪ್ರಯೋಗಾಲಯ ಹಾಗೂ ಮೈಸೂರಿನ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿದ್ದೇವೆ’ ಎಂದು ಡಿಸಿಎಫ್ ಕೆ.ಸಿ.ಪ್ರಶಾಂತಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬೆಳವಾಡಿ ಕೆರೆಯ ನೀರಿನ ಮಾದರಿಯನ್ನು ಪರೀಕ್ಷೆಗಾಗಿ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಚೇರಿಗೆ ಕಳುಹಿಸಿಕೊಟ್ಟಿದ್ದೇವೆ. ಪೊಲೀಸ್ ಇಲಾಖೆ ಶ್ವಾನದಳ ಹಾಗೂ ಬಂಡೀಪುರದ ವಿಶೇಷ ಹುಲಿ ಸಂರಕ್ಷಣಾ ಪಡೆಯ ‘ರಾಣಾ’ ಶ್ವಾನವನ್ನು ಕರೆಯಿಸಿಕೊಂಡು ಪರಿಶೀಲಿಸಿದ್ದೇವೆ’ ಎಂದರು.

ಮೂರು ದಿನಗಳ ಹಿಂದೆ ಬೆಳವಾಡಿ ಸಮೀಪ ಕೈಗಾರಿಕಾ ಪ್ರದೇಶದಲ್ಲಿ ತಾಯಿ ಚಿರತೆ ಹಾಗೂ ಅದರ ನಾಲ್ಕು ಮರಿಗಳು ಓಡಾಡುತ್ತಿದ್ದವು. ಇದರ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿತ್ತು. ಆದರೆ, ಶನಿವಾರ ಮೃತಪಟ್ಟಿರುವುದು ಅದೇ ಚಿರತೆಗಳೇ ಎಂಬುದು ಖಚಿತವಾಗಿಲ್ಲ.

ನಿಧನ ವಾರ್ತೆ

ಕ.ರಾ.ಕೃಷ್ಣಸ್ವಾಮಿ




ಬೆಂಗಳೂರು: ಜಾನಪದ ವಿದ್ವಾಂಸ ಕ.ರಾ. ಕೃಷ್ಣಸ್ವಾಮಿ (86) ಅವರು ನಗರದ ಮಹಾಲಕ್ಷ್ಮೀಪುರದ ನಿವಾಸದಲ್ಲಿ ಶನಿವಾರ ನಿಧನರಾದರು.

ಇವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಭಾನುವಾರ ಬೆಳಿಗ್ಗೆ 9 ಗಂಟೆಗೆ ಕದಬಹಳ್ಳಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಾನಪದ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕರಾಕೃ ಎಂದೇ ಪರಿಚಿತರಾಗಿದ್ದ ಇವರು, 1959ರಲ್ಲಿ ‘ಜಾನಪದ ಅಕಾಡೆಮಿ’ಯನ್ನೂ ಸ್ಥಾಪಿಸಿದ್ದರು. ನಾಗಮಂಗಲ ತಾಲ್ಲೂಕಿನ ಎರಡನೇ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯೂ ವಹಿಸಿದ್ದರು. ಇವರು 30ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಅಬ್ದುಲ್‌ಸಮದ್ ಖಾನಾಪುರಿ



ಬೆಳಗಾವಿ: ಇಲ್ಲಿನ ಸುಭಾಷ್ ನಗರದ ನಿವಾಸಿ, ಉರ್ದು ಕವಿ ಅಬ್ದುಲ್‌ಸಮದ್ ಖಾನಾಪುರಿ (76) ಅನಾರೋಗ್ಯದಿಂದ ಶನಿವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಇಬ್ಬರು ಪುತ್ರಿಯರು ಇದ್ದಾರೆ.

ಕರ್ನಾಟಕ ಉರ್ದು ಅಕಾಡೆಮಿ ನಾಮನಿರ್ದೇಶಿತ ಸದಸ್ಯರಾಗಿದ್ದರು. ಪ್ರಸ್ತುತ ಬೆಳಗಾವಿ ಉರ್ದು ಅಕಾಡೆಮಿ ಕಾರ್ಯದರ್ಶಿಯಾಗಿದ್ದರು. ಇವರು 2 ಕವನ ಸಂಕಲನ ಸೇರಿ 7 ಗ್ರಂಥಗಳನ್ನು ರಚಿಸಿದ್ದರು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕೃಭಾಜನಿನಿ, ಎ.ಎಲ್.ಬಿ.ಸಿ ವಿಭಾಗ, ಆಲಮಟ್ಟಿ–586201.
ತಾ॥ ಬ.ಬಾಗೇವಾಡಿ, ಜಿ॥ ವಿಜಯಪೂರ.
ಸಂಖ್ಯೆ:ಕೃ.ಭಾ.ನಿ.ನಿ/ಎಎಲ್‌ಬಿಸಿ ವಿಭಾಗ/ಡಿಎಮ್/ಟೆಂಡರ್/ಟೇಲಾಫ್&ಇತರೆ/2021–22/207 ದಿನಾಂಕ:18.05.2021

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಎ ಎಲ್ ಬಿ ಸಿ ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು **ಶೇಕಡಾವಾರು ಟೆಂಡರನ್ನು** ಅಹ್ವಾನಿಸಿರುತ್ತಾರೆ. ಕೆಟಿಟಿಪಿ ಕಾಯ್ದೆ ನಿಯಮ–28 ರನ್ವಯ ಗುತ್ತಿಗೆದಾರರು ದ್ವಿ–ಲಕೋಟೆಯಲ್ಲಿ ಟೆಂಡರನ್ನು ಸಂದಾಯ ಮಾಡುವಂತೆ ಕೋರಲಾಗಿದೆ. ಟೆಂಡರನ್ನು **ಕೆಪಿಡಬ್ಲ್ಯೂ ಕ್ಲಾಸ್–1 & ಮೇಲಟ್ಟು** ಅರ್ಹ ಗುತ್ತಿಗೆದಾರರಿಂದ ಅಹ್ವಾನಿಸಲಾಗಿರುತ್ತದೆ. ಒಟ್ಟು ಕಾಮಗಾರಿಗಳ **ಸಂಖ್ಯೆ: 03**. ಟೆಂಡರಗಿಟ್ಟ ಮೊತ್ತ **ರೂ. 184.25 ಲಕ್ಷಗಳು.**

ಟೆಂಡರನ ವಿವಿಧ ಹಂತಗಳನ್ನು 1) ಟೆಂಡರ ಡಾಕುಮೆಂಟ್‌ನ್ನು ಇ–ಪೋರ್ಟಲ್‌ನಲ್ಲಿ ವೀಕ್ಷಿಸುವ & ಭರ್ತಿ ಮಾಡಿದ ಬಿಡ್‌ನ್ನು ಸಲ್ಲಿಸುವ ಕಾಲಾವಧಿ ದಿನಾಂಕ: **24.05.2021 ರಿಂದ 09.06.2021 ರ ಸಾಯಂಕಾಲ 5.00 ಘಂಟೆಯವರೆಗೆ.** 2) ಲಕೋಟೆ–1 (ತಾಂತ್ರಿಕ ಬಿಡ್) ನ್ನು ತೆರೆಯುವ **ದಿನಾಂಕ; 11.06.2021ರ ಬೆಳಿಗ್ಗೆ 11.00 ಘಂಟೆಗೆ** 3) ಲಕೋಟೆ–2 (ಆರ್ಥಿಕ ಬಿಡ್)ನ್ನು ತೆರೆಯುವ **ದಿನಾಂಕ; 16.06.2021ರ ಬೆಳಿಗ್ಗೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ಅವಧಿಯಲ್ಲಿ ಅಥವಾ http://eproc.karnataka.gov.in/eportal/ines.seam and www.kbjnl.karnataka.gov.in ವೆಬ್‌ಸೈಟನಲ್ಲಿ ಪಡೆದುಕೊಳ್ಳಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ
ವಾಸಾಸಂಇ/ವಿಜಯಪುರ/78/ಎಂಸಿಎ/2021–22

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ತರೀಕೆರೆ
ದೂ.ಸಂ:9480860130 , ಇ ಮೇಲ್ : eotarikere@gmail.com
ಸಂಖ್ಯೆ:ತಾಪಂತ್/ಸ್ವಭಾಮಿ/ಇ–ಟೆಂಡರ್/2021–22 ದಿನಾಂಕ:13–052021

–: ಸಾರ್ವಜನಿಕ ಪ್ರಕಟಣೆ :–

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು ಇವರ ಪತ್ರ ಸಂಖ್ಯೆ ಜಿಪಂಚಿ/ಸ್ವ.ಭಾ.ಮಿ/SLRM/67/2018-19 ದಿನಾಂಕ : 18–01–2021, 15–02–2021 ಆದೇಶದಂತೆ ತರೀಕೆರೆ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ 26 ಗ್ರಾಮ ಪಂಚಾಯಿತಿಗಳಿಗೆ ಘನ ಮತ್ತು ದ್ರವ ತ್ಯಾಜ್ಯ ಸಂಗ್ರಹಣೆ ಮಾಡಲು 20 ಲೀಟರ್ ಅಳತೆಯ ಕ್ರಮವಾಗಿ ಹಸಿರು ಮತ್ತು ಕೆಂಪು ಬಣ್ಣದ ಕಸದ ಬುಟ್ಟಿ (ಬಕೆಟನ್ನು) ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ ಯೋಜನೆಯಡಿ ಖರೀದಿಗಾಗಿ ಸಾಮಾನ್ಯ (Common per piece Tender) ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಪ್ರೊಕ್ಯುರ್ ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು ಆಸಕ್ತರು ದಿನಾಂಕ 13.05.2021 ರಿಂದ 27–05–2021 ರೊಳಗೆ https://eproc.karn ataka.gov.in Online ಮೂಲಕ ಅರ್ಜಿ ಸಲ್ಲಿಸಲು ಕೋರಿದೆ.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ,
ತಾಲ್ಲೂಕು ಪಂಚಾಯಿತಿ , ತರೀಕೆರೆ.

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)
ಸಿಐಎನ್ ನಂ.ಯು85110ಕೆಎ1947ಎಸ್‌ಜಿಸಿ001321
ಹಟ್ಟಿ –584115, ಲಿಂಗಸುಗೂರು–ತಾ. ರಾಯಚೂರು ಜಿಲ್ಲೆ,
ಕರ್ನಾಟಕ, ದೂ.ಸಂಖ್ಯೆ: 08537–275740/276339/275463,
email:material276339@gmail.com, website: www.huttigold.co.in

ನೇರ ಸಂದರ್ಶನ

ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ ಹಟ್ಟಿಯಲ್ಲಿರುವ 120 ಹಾಸಿಗೆಗಳ ಆಸ್ಪತ್ರೆಗೆ ಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ತಜ್ಞ ವೈದ್ಯರುಗಳು ಬೇಕಾಗಿದ್ದಾರೆ.

1	ಸ್ತ್ರೀರೋಗ ತಜ್ಞರು ವಿದ್ಯಾರ್ಹತೆ ಕ್ರೋಢೀಕೃತ ಸಂಬಳ	: : :	1 ಹುದ್ದೆ ಓಬಿಜಿಯಲ್ಲಿ ಎಂಎಸ್/ಡಿಎನ್‌ಬಿ/ಡಿಪ್ಲೊಮಾ. ಎನ್.ಹೆಚ್.ಆರ್.ಎಂ ವೇತನ ಶ್ರೇಣಿ ಮತ್ತು ಮಾರ್ಗದರ್ಶಗಳಂತೆ.
2	ಇ.ಎನ್.ಟಿ ಸರ್ಜನ್ ವಿದ್ಯಾರ್ಹತೆ ಕ್ರೋಢೀಕೃತ ಸಂಬಳ	: : :	1 ಹುದ್ದೆ ಇ.ಎನ್.ಟಿಯಲ್ಲಿ ಎಂಎಸ್/ಡಿಎನ್‌ಬಿ/ಡಿಪ್ಲೊಮಾ. ತಿಂಗಳಿಗೆ ರೂ.1.00 ಲಕ್ಷ (ನೆಗೋಷಿಯಬಲ್)

ಜಾಹೀರಾತು ಪ್ರಕಟಣೆಗೊಂಡ ದಿನಾಂಕದಿಂದ **ಪ್ರತಿದಿನ ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ** ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ, ಹಟ್ಟಿ–584 115 ನಲ್ಲಿರುವ ಆಡಳಿತ ಕಛೇರಿಯಲ್ಲಿ ನೇರ ಸಂದರ್ಶನ ಕೈಗೊಳ್ಳಲಾಗುವುದು. ಅಭ್ಯರ್ಥಿಗಳು ಸಂದರ್ಶನದ ಸಮಯದಲ್ಲಿ ತಮ್ಮ ಪೂರ್ಣ ವಿವರಗಳನ್ನೊಳಗೊಂಡ ಅರ್ಜಿಯನ್ನು ಮತ್ತು ಶೈಕ್ಷಣಿಕ ವಿದ್ಯಾರ್ಹತೆಯ ದಾಖಲೆ ಪ್ರಮಾಣ, ಅನುಭವ ಪ್ರಮಾಣ ಪತ್ರ, ಜಾತಿ ಇತ್ಯಾದಿಗಳ ಮೂಲ ಮತ್ತು ಪ್ರತಿಗಳೊಂದಿಗೆ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದ ಜೊತೆಗೆ ಹಾಜರುಪಡಿಸಬೇಕು. ಜಾಹೀರಾತು ಪ್ರಕಟಣೆಗೊಂಡ ದಿನಾಂಕದಿಂದ 6 ತಿಂಗಳವರೆಗೆ ಈ ಜಾಹೀರಾತಿಗೆ ಮಾನ್ಯತೆ ಇರಲಿದೆ.

ಸಹಿ/– ಪ್ರಭಾರಿ ಕಾರ್ಯನಿರ್ವಾಹಕ ನಿರ್ದೇಶಕರು

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (ರಿ.)
ಪಿ.ಹೆಚ್.ಐ ಕಟ್ಟಡ, ಎಸ್.ಜೆ.ಪಿ ಪಾಲಿಟೆಕ್ನಿಕ್ ಎದುರು, ಕೆ.ಆರ್.ಸರ್ಕಲ್, ಶೇಷಾದ್ರಿರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: +91–80–29619801 ಮಿಂಚ್ ಅಂಚೆ: latha.mdksmscl@gmail.com
No. HFW/KSMSCL/COVID/IFQ/17 DRUGS/32/2021-22 Date: 22-05-2021

ದರಪಟ್ಟಿ ಪ್ರಕಟಣೆ

ಉಲ್ಲೇಖ: (1) ದರಪಟ್ಟಿ ಅಧಿಸೂಚನೆ ಸಂಖ್ಯೆ: HFW/KSMSCL/COVID/IFQ/17 Drugs/ 32 /2021-22, Dtd: 22.05.2021 (2) ದರಪಟ್ಟಿ ಅಧಿಸೂಚನೆ ಸಂಖ್ಯೆ: HFW/KSMSCL/COVID /IFQ/5 Drugs/33/2021-22, Dtd: 22.05.2021

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರ4(ಎ) ಅಡಿಯಲ್ಲಿ ಈ ಕೆಳಕಂಡ ಔಷಧಿಯನ್ನು ಖರೀದಿಸಿ ಪೂರೈಸಲು ದರಪಟ್ಟಿಗಳನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ.

1) ಕೋವಿಡ್–19 ಚಿಕಿತ್ಸೆಗೆ ಅಗತ್ಯವಿರುವ Inj. Dexamethasone 4 mg/ml, Tab. Dexamethasone 8mg, Tab. Zinc Sulphate/Acetate Dispersible 50 mg, Tab Ivermectin 12 mg, Tab Vitamin C 500 mg, Tab Cetrizine 10 mg, Tab Pantoprazole 40 mg, Tab Paracetamol 500 mg, Tab Colchicine 0.5 mg, Tab Acetylsalicylic Acid Dispersible 75 mg, Cough Syrup, Inj. Enoxaparin 40 mg/0.4ml Amp. with Syringe - Combo Pack, Cap. Doxycycline 100 mg, Tab. Azithromycin 500 mg, Tab. Favipiravir 800 mg, Oxygen Mask & NIV Mask (17 Drugs) ಔಷಧಿಗಳನ್ನು ಖರೀದಿಸುವ ಬಗ್ಗೆ.

(2) Mucormycosis ಚಿಕಿತ್ಸೆಗೆ ಅಗತ್ಯವಿರುವ Inj. Posaconazole 300 mg, Tab. Posaconazole 300 mg, Inj. Isavuconazole 200 mg, Tab Isavuconazole 200 mg, Inj. Amphotericin-B ಔಷಧಿಗಳನ್ನು ಖರೀದಿಸುವ ಬಗ್ಗೆ.

ಕೆ.ಎಸ್.ಎಂ.ಎಸ್.ಸಿ.ಎಲ್ ವೆಬ್‌ಸೈಟ್ ಮುಖಾಂತರ: http://www.kdlws.kar.nic.in/ ನಲ್ಲಿ ತಾಂತ್ರಿಕ ವಿವರಣೆ, ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಕ್ರಮ ಸಂಖ್ಯೆ ದಿನಾಂಕ: 23.05.2021 ಮತ್ತು 26.05.2021 ಒಳಗಾಗಿ ಪಡೆಯಬಹುದು. ಅರ್ಹ ಸಂಸ್ಥೆಗಳು ಆನ್‌ಲೈನ್ ಮೂಲಕ ದರಪಟ್ಟಿಯನ್ನು Password Protected PDF ನಲ್ಲಿ ಇ–ಮೇಲ್ ಐಡಿ ksdlwscovid19.procurement@gmail.comಗೆ ಕ್ರಮ ಸಂಖ್ಯೆ ದಿನಾಂಕ: 26.05.2021 ರವರೆಗೆ ಸಂಜೆ 5:00 ಗಂಟೆಯೊಳಗೆ ದರಪಟ್ಟಿಯನ್ನು ಸಲ್ಲಿಸಬಹುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕೆ.ಎಸ್.ಎಮ್.ಎಸ್.ಸಿ.ಎಲ್.
DIPR/DDU/Zen/RO-410/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

Government of Karnataka
OFFICE OF THE DEPUTY DIRECTOR, SOCIAL WELFARE DEPARTMENT,
Room No 25, B Block DC OFFICE Devagiri, HAVERI.
Email : dswohvri-swd-ka@nic.in
Office Telephone No:08375-249292

e-TENDER NOTIFICATION

SUPPLY OF Bed & Pillow TO Covid Care Center In Haveri District.

Deputy Director, Social Welfare Department, HAVERI district invites tender in two tender document system for supply of Bed & Pillow TO Covid Care Center In Haveri District. GOK through e-procurement portal of Government of Karnataka (**https://eproc.karnataka.gov.in**). Prospective suppliers willing to participate in this tender shall necessarily register themselves with above mentioned e procurement portal.

(1) Tender Reference No and date : DDSWD:S-6:CR-03:2020-21 (2) Amount put to Tender : **26.25** lakhs (3) Date of Tender Publication (e portal) : **20-05-2021** (4) Last date & Time for submission of Tender : **27-05-2021** at 05:00 pm (5) Date & Time of opening of Technical bid : **28-05-2021** (6) Tentative Date & Time of opening of Commercial bid : **29-05-2021** (7) EMD Amount : As per the Govt Order : ಆಇ 675 ವೆಚ್ಚ–12/2020 ಬೆಂಗಳೂರು ದಿನಾಂಕ : 22–12–2020 ರನ್ವಯ ನಿಗಧಿತ ನಮೂನೆಯಲ್ಲಿ EMD Declaration ಸಲ್ಲಿಸುವುದು. (8) Place of opening of tenders : District Social Welfare Office, Haveri (9) Address for communication : Deputy Director. District Social Welfare Dept. ‘B’ Block, Room No- 25, DC office, Devagiri, Haveri (10) Contact No & e Mail ID : **08375-249292. dswohvri-swd-ka@nic.in**

Prospective suppliers willing to participate in this tender can download the bid documents with visiting the website **http://e-proc.karnataka.gov.in**

Sd/- Deputy Director,
Social Welfare Department, HAVERI
DIPR/HVR/MCA/52/2021-22 District and Tender Inviting Authority

ಮಯೂರ ಜೂನ್ 2021 ಸಂಚಿಕೆಯಲ್ಲಿ
ಸುಮಧುರ ಬರಹಗಳ ಗುಚ್ಛ

ನಂದಾದೀಪ
ಶಬ್ದ ಸಾಗರದಲ್ಲಿ ಸಿಕ್ಕ ಒಂದು ಬೊಗಸೆ ನೀರು
ನಿಘಂಟು ತಜ್ಞ ಜಿ. ವೆಂಕಟಸುಬ್ಬಯ್ಯ ಅವರ ಬದುಕು–ಬರಹವನ್ನು ಚಿತ್ರಿಸುವ ಎನ್.ಎಸ್. ಶ್ರೀಧರ ಮೂರ್ತಿ ಅವರ ಲೇಖನ

ಅನನ್ಯ
ರಾಜಕಾರಣಿ ಬಿ. ಬಸವಲಿಂಗಪ್ಪ ಅವರ ‘ಬೂಸಾ ಪ್ರಕರಣ’ದ ಕುರಿತು ರಹಮತ್ ತರೀಕೆರೆ ಬರಹ

ಪ್ರಬಂಧ
ಮಶಕವೆಂಬ ಮಾಯೆ ಕಚ್ಚಿ ಕೂಗದೇ ನರರಂ?
ರೇಶ್ಮಾ ಭಟ್ ಲಘು ಲಹರಿ

ಕತೆಗಳು
- ಅವಿರತ ಮಾವಿನಕುಳಿ
- ವಿನಾಯಕ ಅರಳಸುರಳಿ
- ಬನವಾಸಿ ವೆಂಕಟೇಶ ದೀಕ್ಷಿತ್
- ಟಿ.ಎಂ. ಶೇಷಗಿರಿ ತುಮರಿ
- ಮಲ್ಲಿಕಾರ್ಜುನ ಶೆಲ್ಲಿಕೇರಿ
- ರೊಆಲ್ಡ್ ದಾಹ್ಲ್
- ಸೆಲಿನಾ ಹುಸೈನ್
- ವಿರಿಂಚಿ

ಮಾತು–ಕತೆ
ಮರಾಠಿ ಲೇಖಕ ಶರಣಕುಮಾರ ಲಿಂಬಾಳೆ ಅವರೊಂದಿಗೆ ಒಂದು ಆಪ್ತ ಸಂವಾದ
ನಾನು ಕೇವಲ ದಲಿತ ಲೇಖಕನಲ್ಲ, ಭಾರತೀಯ ಬರಹಗಾರ
ಸಂದರ್ಶನ: ಚಂದ್ರಕಾಂತ ಪೋಕಳೆ

₹15 ನಿಮ್ಮ ಪ್ರತಿಗಳಿಗೆ ಏಜೆಂಟರನ್ನು ಸಂಪರ್ಕಿಸಿ
editormy@mayura.co.in | /mayuramonthly
mayuraezine.com | 080-45557333/264

ಸಿ.ಎಂ ಅಮರಿಂದರ್‌ಗೆ ಸಿಧು ಸವಾಲು

ನಾನು ಬೇರೆ ಪಕ್ಷದ ನಾಯಕರನ್ನು ಭೇಟಿಮಾಡಿದ್ದರೆ ಅದನ್ನು ಸಾಬೀತುಪಡಿಸಿ ಎಂದು ಹೇಳಿದ್ದಾರೆ.

‘ಪಕ್ಷಾಂತರ ಯತ್ನ ಆರೋಪ ಸಾಬೀತುಪಡಿಸಿ’

ಚಂಡಿಗಡ (ಪಿಟಿಐ): ಪಕ್ಷಾಂತರದ ಪ್ರಯತ್ನ ನಡೆಸುತ್ತಿರುವುದಾಗಿ ತನ್ನ ವಿರುದ್ಧ ಮಾಡಿರುವ ಆರೋಪಗಳನ್ನು ಸಾಬೀತುಪಡಿಸುವಂತೆ ಕಾಂಗ್ರೆಸ್ ಮುಖಂಡ ನವಜೋತ್‌ಸಿಂಗ್ ಸಿಧು ಅವರು ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರಿಗೆ ಸವಾಲು ಹಾಕಿದ್ದಾರೆ.

ಧಾರ್ಮಿಕ ಗ್ರಂಥವನ್ನು ಅಪವಿತ್ರಗೊಳಿಸಿದ್ದನ್ನು ವಿರೋಧಿಸಿ 2015ರಲ್ಲಿ ಪಂಜಾಬ್‌ನ ಕೋಟಕ್‌ಪುರದಲ್ಲಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಗುಂಡು ಹಾರಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ, ಪಂಜಾಬ್ ಹರಿಯಾಣ ಹೈಕೋರ್ಟ್ ಇತ್ತೀಚೆಗೆ ತೀರ್ಪು ನೀಡಿತ್ತು. ಈ ತೀರ್ಪಿನ ನಂತರ ಸಿಧು ಅವರು ತಮ್ಮದೇ ಪಕ್ಷದ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ವಿರುದ್ಧ ಬಹಿರಂಗವಾಗಿ ಟೀಕಾ ಪ್ರಹಾರಗಳನ್ನು ಮಾಡಿದ್ದಾರೆ.



ಸಿಧು ಅವರ ಟೀಕೆಗೆ ಪ್ರತಿಕ್ರಿಯೆ ನೀಡಿದ್ದ ಸಿಂಗ್, ‘ಸಿಧು ಅವರು ಸಂಪೂರ್ಣ ಅಶಿಸ್ತನ್ನು ಪ್ರದರ್ಶಿಸುತ್ತಿದ್ದಾರೆ, ಬಹುಶಃ ಅವರು ಆಮ್‌ಆದ್ಮಿ ಪಕ್ಷವನ್ನು ಸೇರುತ್ತಿರಬಹುದು’ ಎಂದಿದ್ದರು.

ಮುಖ್ಯಮಂತ್ರಿಯ ಈ ಹೇಳಿಕೆಗೆ ಟ್ವೀಟ್ ಮೂಲಕ ಶನಿವಾರ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಸಿಧು, ‘ಇಂದಿನವರೆಗೂ ನಾನು ಯಾರಲ್ಲೂ, ಯಾವ ಹುದ್ದೆಗಾಗಿಯೂ ಬೇಡಿಕೆ ಇಟ್ಟಿಲ್ಲ. ನಾನು ಕೇಳಿದ್ದು ಪಂಜಾಬ್‌ನ ಅಭಿವೃದ್ಧಿಯನ್ನು ಮಾತ್ರ. ಹಲವು ಬಾರಿ ನನ್ನನ್ನು ಆಹ್ವಾನಿಸಿ ಕ್ಯಾಬಿನೆಟ್ ಪದವಿಯ ಭರವಸೆ ನೀಡಲಾಗಿತ್ತು. ಆದರೆ, ನಾನು ಅದನ್ನು ಸ್ವೀಕರಿಸಲಿಲ್ಲ. ಈಗ ನಮ್ಮ ಹೈಕಮಾಂಡ್ ಮಧ್ಯಪ್ರವೇಶ ಮಾಡಿದೆ. ನಾನು ಕಾದು ನೋಡುತ್ತೇನೆ’ ಎಂದಿದ್ದಾರೆ.

382 ಜಿಲ್ಲೆಗಳಲ್ಲಿ ದೃಢೀಕರಣ ಪ್ರಮಾಣ ಶೇ 10ಕ್ಕಿಂತ ಹೆಚ್ಚು • ಲಸಿಕೆ ಪೋಲು ಪ್ರಮಾಣ ಇಳಿಕೆ


ಸೋಂಕು ದೃಢೀಕರಣ ಪ್ರಮಾಣ ಇಳಿಮುಖ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್–19 ಸೋಂಕು ದೃಢೀಕರಣ ಪ್ರಮಾಣ ಇಳಿಮುಖದ ಹಾದಿಯಲ್ಲಿದೆ. ಮೇ 10ರಂದು ಶೇ 24.83ರಷ್ಟಿದ್ದ ಪ್ರಮಾಣ ಮೇ 22ಕ್ಕೆ ಶೇ 12.45ಕ್ಕೆ ಇಳಿದಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಪ್ರಕಟಿಸಿದೆ.

ಒಟ್ಟಾರೆಯಾಗಿ ದೃಢೀಕರಣ ಪ್ರಮಾಣ, ನಿತ್ಯದಾಖಲಾಗುತ್ತಿದ್ದ ಪ್ರಕರಣಗಳು, ಸಕ್ರಿಯ ಪ್ರಕರಣಗಳ ಸಂಖ್ಯೆ ಕುಗ್ಗುತ್ತಿದೆ. ಇದರಿಂದಾಗಿ ಕೋವಿಡ್–19 ಪರಿಸ್ಥಿತಿಯಲ್ಲಿ ಸ್ಥಿರತೆ ಕಂಡುಬಂದಿದೆ ಎಂದು ನೀತಿ ಆಯೋಗದ ಸದಸ್ಯ (ಆರೋಗ್ಯ) ವಿ.ಕೆ.ಪಾಲ್ ಶನಿವಾರ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಕೊರೊನಾ ಸೋಂಕು ಮಕ್ಕಳಿಗೂ ಹರಡಬಹುದು. ಆದರೆ, ತೀವ್ರತೆ ಕಡಿಮೆ ಇರಲಿದ್ದು, ಮಕ್ಕಳಲ್ಲಿ ಸಾವಿನ ಪ್ರಮಾಣವೂ ಕಡಿಮೆ ಇರುತ್ತದೆ. ಆದರೆ ಮಕ್ಕಳಿಗೆ ಸೋಂಕು ತಗುಲದಂತೆ ಜಾಗ್ರತೆ ವಹಿಸುವುದು ಮುಖ್ಯವಾಗಿದೆ ಎಂದು ಪಾಲ್ ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಕೋವಿಡ್ ಪರಿಸ್ಥಿತಿ ನಿಯಂತ್ರಣಕ್ಕೆ ಬರುತ್ತಿರುವ ಸೂಚನೆಗಳ ಹಿಂದೆಯೇ, ಸೋಂಕು ಹರಡುವ ಸರಪಳಿ ಹಿಗ್ಗದಂತೆ ಜಾಗ್ರತೆ ವಹಿಸಬೇಕಾದ ಅಗತ್ಯವಿದೆ. ಪ್ರಕರಣಗಳ ಸಂಖ್ಯೆ ಕಡಿಮೆ ಆಗಿದ್ದರೂ ವಿವಿಧ 382 ಜಿಲ್ಲೆಗಳಲ್ಲಿ ಪ್ರಕರಣಗಳ ದೃಢೀಕರಣ ಪ್ರಮಾಣ ಶೇ 10ಕ್ಕಿಂತಲೂ ಹೆಚ್ಚಾಗಿದೆ ಎಂದು ತಿಳಿಸಿದರು.



‘ಎಂಟು ರಾಜ್ಯಗಳಲ್ಲಿ ಸಕ್ರಿಯ ಪ್ರಕರಣಗಳು 1 ಲಕ್ಷಕ್ಕೂ ಹೆಚ್ಚಿದೆ. ದೃಢೀಕರಣ ಪ್ರಮಾಣ ಶೇ 15ಕ್ಕೂ ಹೆಚ್ಚಿದೆ. ಒಟ್ಟಾರೆಯಾಗಿ ಪ್ರಕರಣಗಳು ಕಳೆದ 20 ದಿನಗಳಿಂದ ಇಳಿಮುಖವಾಗುತ್ತವೆ’ ಎಂದು ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ್ ಅಗರವಾಲ್ ಇದೇ ಸಂದರ್ಭದಲ್ಲಿ ತಿಳಿಸಿದರು.

ಕೋವಿಶೀಲ್ಡ್ ಲಸಿಕೆ ಪೋಲು ಪ್ರಮಾಣವೂ ಕುಗ್ಗಿದೆ. ಇದು ಮಾರ್ಚ್ 1ರಂದು ಶೇ 8ರಷ್ಟಿದ್ದರೆ, ಈಗ ಶೇ 1ಕ್ಕೆ ಕುಸಿದಿದೆ. ಕೋವ್ಯಾಕ್ಸಿನ್ ಲಸಿಕೆ ಪೋಲು ಪ್ರಮಾಣವು ಇದೇ ಅವಧಿಯಲ್ಲಿ ಶೇ 17ರಿಂದ ಶೇ 4ಕ್ಕೆ ಇಳಿದಿದೆ ಎಂದು ಸಚಿವಾಲಯವು ಮಾಹಿತಿ ನೀಡಿದೆ.

ಲಸಿಕೆ ಪಾಸ್‌ಪೋರ್ಟ್ ವಿವಾದ ಕುರಿತ ಪ್ರಶ್ನೆಗೆ, ಸದ್ಯ ಈ ವಿಷಯ ವಿಶ್ವ ಆರೋಗ್ಯ ಸಂಸ್ಥೆಯ ಮಟ್ಟದಲ್ಲಿ ಪರಿಶೀಲನೆಯಲ್ಲಿದ್ದು, ಚರ್ಚೆ ನಡೆದಿದೆ. ಇನ್ನೂ ಯಾವುದೇ ಸಹಮತ ಮೂಡಿಲ್ಲ ಎಂದು ಲವ್ ಅಗರವಾಲ್ ಪ್ರತಿಕ್ರಿಯಿಸಿದರು.

ಕಪ್ಪು ಶಿಲೀಂಧ್ರ ಪ್ರಕರಣ: ಕಪ್ಪು ಶಿಲೀಂಧ್ರ ಚಿಕಿತ್ಸೆಗೆ ಔಷಧಗಳ ಲಭ್ಯತೆಯನ್ನು ಹೆಚ್ಚಿಸಲಾಗಿದೆ. ಮಧುಮೇಹ, ನಿರೋಧಕ ಶಕ್ತಿ ಕುಗ್ಗಿರುವುದು, ದೀರ್ಘಕಾಲ ಆಸ್ಪತ್ರೆಯಲ್ಲಿ ಇರುವುದು ಇಂಥ ಸಮಸ್ಯೆಗೆ ಕಾರಣ ಆಗಬಹುದು ಎಂದು ಪಾಲ್ ತಿಳಿಸಿದರು.

ಸ್ಟಿರಾಯ್ಡ್ ವಾಸ್ತವವಾಗಿ ಜೀವರಕ್ಷಕ ಔಷಧ. ಆದರೆ, ಅದರ ಅಧಿಕ ಬಳಕೆ ಕಪ್ಪು ಶಿಲೀಂಧ್ರ ಸಮಸ್ಯೆಗೆ ಆಸ್ಪದವಾಗುತ್ತಿದೆ. ಇದು ಇನ್ನು ಹೆಚ್ಚಾಗದಂತೆ ಗಮನಿಸುವುದು ಈಗ ನಮ್ಮ ಹೊಣೆ ಎಂದು ಪಾಲ್ ತಿಳಿಸಿದರು.

ಆರೋಗ್ಯ ಸಚಿವಾಲಯದ ಅಂಕಿ ಅಂಶದ ಪ್ರಕಾರ, ದೇಶದಲ್ಲಿ ಕೊರೊನಾ ಸೋಂಕಿನ ಹೊಸ ಪ್ರಕರಣಗಳ ಸಂಖ್ಯೆ, ಸತತ ಆರನೇ ದಿನದಲ್ಲಿ 3 ಲಕ್ಷಕ್ಕೂ ಕಡಿಮೆ ಇತ್ತು. ಶನಿವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳಲ್ಲಿ 2.57 ಲಕ್ಷ ಪ್ರಕರಣಗಳು ದಾಖಲಾಗಿವೆ.

‘ಫೈಜರ್’ ಲಸಿಕೆಗೆ ಸಮ್ಮತಿ ಬಗೆಹರಿಯದ ಗೊಂದಲ



ನವದೆಹಲಿ/ನ್ಯೂಯಾರ್ಕ್ (ರಾಯಿಟರ್ಸ್): ‘ಫೈಜರ್’ ಲಸಿಕೆ ಬಳಕೆ ಕುರಿತು ಕಾನೂನು ಕ್ರಮದಿಂದ ರಕ್ಷಣೆ ನೀಡುವ ಬಗ್ಗೆ ಅಮೆರಿಕದ ಫೈಜರ್ ಕಂಪನಿಯ ಮನವಿ ಕುರಿತ ಗೊಂದಲ ಬಗೆಹರಿಸಲು ಭಾರತ ಸರ್ಕಾರ ಮತ್ತು ಸಂಸ್ಥೆಯು ಯತ್ನಿಸುತ್ತಿವೆ.

ಪ್ರತಿಕೂಲ ಪರಿಣಾಮದ ಸಂದರ್ಭದಲ್ಲಿ ನಷ್ಟಪರಿಹಾರ ನೀಡುವ ಕುರಿತು ಭಾರತ ಸರ್ಕಾರ ಇದುವರೆಗೂ ಯಾವುದೇ ಲಸಿಕೆ ಉತ್ಪಾದನಾ ಕಂಪನಿಗೆ ಖಚಿತ ಭರವಸೆ ನೀಡಿಲ್ಲ. ಇತ್ತ, ನಷ್ಟ ಪರಿಹಾರ ನೀಡದ ಕುರಿತು ಫೈಜರ್ ಕಂಪನಿಯು ಈಗಾಗಲೇ ಬ್ರಿಟನ್, ಅಮೆರಿಕ ಸೇರಿದಂತೆ ವಿವಿಧ ದೇಶಗಳಿಂದ ಅನುಮತಿ ಪಡೆದುಕೊಂಡಿದೆ.

ಒಪ್ಪಂದದ ಚರ್ಚೆ ಚಾಲ್ತಿಯಲ್ಲಿದ್ದು, ಒಂದು ಮಟ್ಟದ ಕಾನೂನು ರಕ್ಷಣೆ ಒದಗಿಸುವ ಪ್ರಸ್ತಾವವೂ ಇದೆ ಎಂದು ಮೂಲಗಳು ತಿಳಿಸಿವೆ. ಕೋವಿಡ್ ಪ್ರಕರಣಗಳ ಏರಿಕೆ ಕಾರಣದಿಂದ ಫೈಜರ್ ಕಂಪನಿ ಜೊತೆಗಿನ ಒಪ್ಪಂದ ತುರ್ತು ಆಗಿದೆ. ಫೈಜರ್ ಕಂಪನಿಯ ಆತಂಕ ಬಗೆಹರಿಸುವ ಕ್ರಮವಾಗಿ ಭಾರತದ ವಿದೇಶಾಂಗ ಸಚಿವರು ಮುಂದಿನ ದಿನಗಳಲ್ಲಿ ಅಮೆರಿಕಕ್ಕೆ ಭೇಟಿ ನೀಡುವ ಸಂಭವವಿದೆ.

ಕೋವಿಶೀಲ್ಡ್ ಶೇ 80 ಪರಿಣಾಮಕಾರಿ

ಲಂಡನ್ (ಪಿಟಿಐ): ಆಕ್ಸ್‌ಫರ್ಡ್/ಆಸ್ಟ್ರಾಜೆನೆಕಾ ಅಥವಾ ಫೈಜರ್ ಲಸಿಕೆಯ ಎರಡು ಡೋಸ್ ಪಡೆಯುವುದು ಕೊರೊನಾದ ಬಿ1.617.2 ರೂಪಾಂತರಿ ಸೋಂಕು ತಗುಲುವುದನ್ನು ತಡೆಯುವಲ್ಲಿ ಶೇ 80ರಷ್ಟು ಪರಿಣಾಮಕಾರಿಯಾಗಿದೆ.

ಬಿ1.617.2 ರೂಪಾಂತರಿ ಸೋಂಕು ಭಾರತದಲ್ಲಿ ಮೊದಲಿಗೆ ಕಾಣಿಸಿಕೊಂಡಿದೆ ಎಂದು ಬ್ರಿಟನ್‌ನ ಸರ್ಕಾರದ ನೂತನ ಅಧ್ಯಯನ ವರದಿ ತಿಳಿಸಿದೆ. ಆಕ್ಸ್‌ಫರ್ಡ್/ಆಸ್ಟ್ರಾಜೆನೆಕಾ ಅಭಿವೃದ್ಧಿಪಡಿಸಿರುವ ಲಸಿಕೆಯನ್ನು ಭಾರತದಲ್ಲಿ ಸೀರಂ ಇನ್‌ಸ್ಟಿಟ್ಯೂಟ್ ಸಂಸ್ಥೆ ‘ಕೋವಿಶೀಲ್ಡ್’ ಹೆಸರಿನಲ್ಲಿ ಉತ್ಪಾದಿಸುತ್ತಿದೆ.

ಈ ಅಧ್ಯಯನ ವರದಿ ಇಂಗ್ಲೆಂಡ್‌ನ ಸಾರ್ವಜನಿಕ ಆರೋಗ್ಯ ಅಂಕಿ ಅಂಶ ಆಧರಿಸಿದೆ. ಇಂಗ್ಲೆಂಡ್‌ನ ಕೆಂಟ್ ವಲಯದಲ್ಲಿ ಮೊದಲು ಪತ್ತೆಯಾದ ಬಿ.117 ರೂಪಾಂತರ ಸೋಂಕು ವಿರುದ್ಧ ಈ ಲಸಿಕೆ ಶೇ 87ರಷ್ಟು ಪರಿಣಾಮಕಾರಿ ಎಂದೂ ವರದಿ ತಿಳಿಸಿದೆ.

ದೇಶದಲ್ಲಿ ಲಸಿಕೆ ಉತ್ಪಾದನೆ

ವಿದೇಶಿ ಕಂಪನಿಗಳಿಗೂ ಅವಕಾಶ ನೀಡಿ: ಕೇಜ್ರಿವಾಲ್

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಲಸಿಕೆ ಉತ್ಪಾದಿಸಲು ವಿದೇಶಿ ಕಂಪನಿಗಳಿಗೂ ಅವಕಾಶ ಕಲ್ಪಿಸಬೇಕು ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಶನಿವಾರ ಒತ್ತಾಯಿಸಿದ್ದಾರೆ. ಲಸಿಕೆ ಕೊರತೆ ಕಾರಣ ಭಾನುವಾರದಿಂದ ಯುವಜನರಿಗೆ ಲಸಿಕೆ ನೀಡುವ ಕೇಂದ್ರಗಳನ್ನು ಮುಚ್ಚಲಾಗುವುದು ಎಂದು ತಿಳಿಸಿದ್ದಾರೆ.

ಭಾರತ್ ಬಯೊಟೆಕ್ ಸಂಸ್ಥೆಯು ಕೋವ್ಯಾಕ್ಸಿನ್ ಲಸಿಕೆಯ ಸೂತ್ರವನ್ನು ಹಂಚಿಕೊಳ್ಳಲು ಒಪ್ಪಿರುವ ಕಾರಣ ಮುಂದಿನ 24 ಗಂಟೆಗಳಲ್ಲಿ ಈ ಕುರಿತು ಕ್ರಮವಹಿಸಲು ಔಷಧ ಕಂಪನಿಗಳಿಗೆ ಕೇಂದ್ರ ಸೂಚಿಸಬೇಕು. ಅಲ್ಲದೆ, ವಿದೇಶಿ ಕಂಪನಿಗಳಿಗೂ ಭಾರತದಲ್ಲಿ ಲಸಿಕೆ ಉತ್ಪಾದಿಸಲು ಅವಕಾಶ ಕಲ್ಪಿಸಬೇಕು. ಅಲ್ಲದೆ, ಅಗತ್ಯ ಪ್ರಮಾಣದಲ್ಲಿ ವಿದೇಶಗಳಿಂದಲೂ ತರಿಸಿಕೊಳ್ಳಲು ಒತ್ತು ನೀಡಬೇಕು ಎಂದೂ ಸಲಹೆ ಮಾಡಿದ್ದಾರೆ.

ರಾಷ್ಟ್ರ ರಾಜಧಾನಿಗೆ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆಯನ್ನು ಪೂರೈಸಬೇಕು. ಯುವಜನರಿಗೆ ನೀಡಲು ದೆಹಲಿಗೆ ತಕ್ಷಣಕ್ಕೆ 80 ಲಕ್ಷ ಡೋಸ್‌ಗಳ ಲಸಿಕೆ ಅಗತ್ಯವಿದೆ. ಸದ್ಯ ಕೇವಲ 16 ಲಕ್ಷ ಡೋಸ್‌ಗಳನ್ನಷ್ಟೇ ಸ್ವೀಕರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ದೆಹಲಿ ಕೋಟಾ ಪ್ರಮಾಣವನ್ನು ಕೇಂದ್ರ ಕಳೆದ ಜೂನ್‌ನಲ್ಲಿ ತಗ್ಗಿಸಿತ್ತು. ಎಲ್ಲ ವಯಸ್ಕರಿಗೂ ಲಸಿಕೆ ನೀಡಲು ದೆಹಲಿಗೆ 2.5 ಕೋಟಿ ಲಸಿಕೆ ಅಗತ್ಯವಿದೆ. ಕೋಟಾ ಹೆಚ್ಚಿಸಬೇಕು ಹಾಗೂ ಪೂರೈಸಲು ಕ್ರಮವಹಿಸಬೇಕು ಎಂದು ಆಗ್ರಹಪಡಿಸಿದ್ದಾರೆ.



ಕೋವಿಡ್ ಪರೀಕ್ಷೆಗೆ ಸರದಿ

ಮಹಾರಾಷ್ಟ್ರದಿಂದ ಬಂದ ವಲಸೆ ಕಾರ್ಮಿಕರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಬಿಹಾರದ ಪಟ್ನಾ ರೈಲ್ವೆ ನಿಲ್ದಾಣದಲ್ಲಿ ಶನಿವಾರ ಸರದಿಯಲ್ಲಿ ನಿಂತಿದ್ದರು –ಪಿಟಿಐ ಚಿತ್ರ

ಲಾಕ್‌ಡೌನ್: ದೆಹಲಿಯಿಂದ ತೆರಳಿದ 8 ಲಕ್ಷ ವಲಸೆ ಕಾರ್ಮಿಕರು

ನವದೆಹಲಿ (ಪಿಟಿಐ): ಲಾಕ್‌ಡೌನ್ ಜಾರಿಗೊಳಿಸಿದ ಬಳಿಕ ಮೊದಲ ನಾಲ್ಕು ವಾರಗಳಲ್ಲಿ ಸುಮಾರು ಎಂಟು ಲಕ್ಷ ವಲಸೆ ಕಾರ್ಮಿಕರು ರಾಜಧಾನಿಯಿಂದ ತೆರಳಿದ್ದಾರೆ ಎಂದು ದೆಹಲಿ ಸಾರಿಗೆ ಇಲಾಖೆ ವರದಿ ತಿಳಿಸಿದೆ.

ಏಪ್ರಿಲ್ 19ರಿಂದ ಮೇ 14ರವರೆಗೆ ಒಟ್ಟು 8.07 ಲಕ್ಷ ವಲಸೆ ಕಾರ್ಮಿಕರು ದೆಹಲಿ ತೊರೆದು ತಮ್ಮ ತವರು ರಾಜ್ಯಗಳಿಗೆ ತೆರಳಿದ್ದಾರೆ. ಇವರಲ್ಲಿನ 3.79 ಲಕ್ಷ ಮಂದಿ ಲಾಕ್‌ಡೌನ್ ಜಾರಿಯಾದ ಮೊದಲ ವಾರದಲ್ಲೇ ತೆರಳಿದ್ದಾರೆ. ಕ್ರಮೇಣ ಈ ಸಂಖ್ಯೆ ಕಡಿಮೆಯಾಯಿತು. ಎರಡನೇ ವಾರದಲ್ಲಿ 2.12 ಲಕ್ಷ ಮತ್ತು ಮೂರನೇ ವಾರದಲ್ಲಿ 1.22 ಲಕ್ಷ ಹಾಗೂ ನಾಲ್ಕನೇ ವಾರದಲ್ಲಿ 92,490 ಮಂದಿ ತಮ್ಮ ಮನೆಗಳಿಗೆ ತೆರಳಿದ್ದಾರೆ.

ಸಕಾಲಕ್ಕೆ ನೆರೆಯ ರಾಜ್ಯಗಳ ಸಾರಿಗೆ ಪ್ರಾಧಿಕಾರಗಳ ಜತೆ ಸಮನ್ವಯ ಸಾಧಿಸಿ ಬಸ್‌ಗಳ ವ್ಯವಸ್ಥೆ ಕಲ್ಪಿಸಲಾಯಿತು. ವಿಶೇಷವಾಗಿ ಉತ್ತರ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳ ಜತೆ ದೆಹಲಿ ಸರ್ಕಾರ ನಿರಂತರವಾಗಿ ಸಂಪರ್ಕದಲ್ಲಿತ್ತು. ಇದರಿಂದ ಯಾವುದೇ ತೊಂದರೆ ಇಲ್ಲದೆಯೇ ವಲಸೆ ಕಾರ್ಮಿಕರು ತಮ್ಮ ತವರಿಗೆ ತೆರಳಲು ಅನುಕೂಲವಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ನಾಲ್ಕು ವಾರಗಳ ಲಾಕ್‌ಡೌನ್‌ನಲ್ಲಿ 21,879 ಅಂತರರಾಜ್ಯ ಬಸ್ ಟ್ರಿಪ್‌ಗಳನ್ನು ಕೈಗೊಳ್ಳಲಾಗಿತ್ತು. ವಲಸೆ ಕಾರ್ಮಿಕರು ರೈಲುಗಳ ಮೂಲಕವೂ ಸಂಚರಿಸಿದ್ದಾರೆ. ಹಲವು ಮಂದಿ ರೈಲು ಸಂಚಾರಕ್ಕೆ ಆದ್ಯತೆ ನೀಡಿದರು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಏಪ್ರಿಲ್ 19ರಿಂದ ಲಾಕ್‌ಡೌನ್ ಜಾರಿಗೊಳಿಸಿದರು. ನಂತರ ಹಲವು ಬಾರಿ ವಿಸ್ತರಿಸಿದರು.

ನವದೆಹಲಿ ತಲುಪಿದ ವೈದ್ಯಕೀಯ ಪರಿಕರ

ಆಮ್ಲಜನಕ ಕಾನ್ಸನ್‌ಟ್ರೇಟರ್ ಸೇರಿದಂತೆ 18 ಟನ್ ವೈದ್ಯಕೀಯ ಪರಿಕರಗಳನ್ನು ಹೊತ್ತ ಬ್ರಿಟಿಷ್ ಏರ್‌ವೇಸ್ ಸರಕು ಸಾಗಣೆ ವಿಮಾನ ದೆಹಲಿ ವಿಮಾನ ನಿಲ್ದಾಣಕ್ಕೆ ಶನಿವಾರ ಬೆಳಿಗ್ಗೆ ಬಂದಿಳಿದಿದೆ ಎಂದು ಪ್ರಕಟಣೆ ತಿಳಿಸಿದೆ.

ಲಂಡನ್‌ನಿಂದ ಹೊರಟ ಸರಕು ಸಾಗಣೆವಿಮಾನ ಶನಿವಾರ ಬೆಳಿಗ್ಗೆ 5.45ಕ್ಕೆ ದೆಹಲಿಗೆ ಬಂದಿಳಿದಿದೆ.

ಕಳೆದ ಎರಡು ವಾರಗಳಲ್ಲಿ ಭಾರತಕ್ಕೆ ವೈದ್ಯಕೀಯ ಪರಿಕರಗಳನ್ನು ಹೊತ್ತುತಂದಿರುವ ಬ್ರಿಟಿಷ್ ಏರ್‌ವೇಸ್‌ನ ಎರಡನೇ ವಿಮಾನ ಇದಾಗಿದೆ.

ಕಪ್ಪು ಶಿಲೀಂಧ್ರ: ಚಿಕಿತ್ಸೆಗೆ ಹತ್ತು ತೊಡಕು

ಒಂದನೇ ಪುಟದಿಂದ...

ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ 10 ಹಾಸಿಗೆಗಳನ್ನು ಗುರುತಿಸಲಾಗಿತ್ತು. ಈಗ ಅಲ್ಲಿ 30ಕ್ಕೂ ಅಧಿಕ ರೋಗಿಗಳು ದಾಖಲಾಗಿದ್ದು, ಇನ್ನಷ್ಟು ಮಂದಿ ದಾಖಲಾತಿಗಾಗಿ ಎದುರು ನೋಡುತ್ತಿದ್ದಾರೆ. ‘ಲಿಪೋಸೋಮಲ್ ಅಂಫೋಟೆರಿಸಿನ್ ಬಿ’ ಔಷಧವು ಮಾರುಕಟ್ಟೆಯಲ್ಲಿ ದೊರೆಯದ ಪರಿಣಾಮ ಖಾಸಗಿ ಆಸ್ಪತ್ರೆಗಳು ದಾಖಲಿಸಿಕೊಂಡಿರುವ ರೋಗಿಗಳನ್ನೇ ಸ್ಥಳಾಂತರ ಮಾಡಲು ಮುಂದಾಗುತ್ತಿವೆ.

‘ಶಿಲೀಂಧ್ರ ಸೋಂಕಿಗೆ 10 ಹಾಸಿಗೆಗಳನ್ನು ಮೀಸಲಿಡಲಾಗಿತ್ತು. ಈಗ ರೋಗಿಗಳ ಸಂಖ್ಯೆ ಮೂರು ಪಟ್ಟು ಹೆಚ್ಚಾಗಿದೆ. ಹಾಸಿಗೆ ಸಂಖ್ಯೆಯನ್ನು ಇನ್ನಷ್ಟು ಹೆಚ್ಚಿಸಲು ಅವಕಾಶವಿಲ್ಲ. ಹೀಗಾಗಿ, ಹೊಸ ದಾಖಲಾತಿ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಔಷಧಕ್ಕೆ ಕೂಡ ಬೇಡಿಕೆ ಹೆಚ್ಚಿದ್ದು, ಹಲವರು ಈ ಬಗ್ಗೆ ವಿಚಾರಿಸುತ್ತಿದ್ದಾರೆ’ ಎಂದು ಬೌರಿಂಗ್ ಆಸ್ಪತ್ರೆ ನಿರ್ದೇಶಕ ಡಾ. ಮನೋಜ್ ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಚಿಕಿತ್ಸೆ ಗೊಂದಲ: ಕಪ್ಪು ಶಿಲೀಂಧ್ರ ರೋಗ ಸಾಂಕ್ರಾಮಿಕ ಎಂದು ಘೋಷಿಸಿ, ಚಿಕಿತ್ಸೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ. ಚಿಕಿತ್ಸೆಯನ್ನು ಉಚಿತವಾಗಿ ನೀಡುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಣೆಯನ್ನೂ ಮಾಡಿದ್ದು, ಮಾರ್ಗಸೂಚಿ ಹೊರಡಿಸಲಾಗಿದೆ. ಆದರೆ, ಚಿಕಿತ್ಸೆ ವಿಷಯದಲ್ಲಿ ಗೊಂದಲ ಇನ್ನೂ ಬಗೆಹರಿದಿಲ್ಲ.

‘ಕ್ಯಾನ್ಸರ್‌ನಿಂದಾಗಿ ಕಿದ್ವಾಯಿಗೆ ದಾಖಲಾಗಿದ್ದ ಇಳಕಲ್‌ನ ಆಸಿಫ್ ಮೆಹಬೂಬ್ ಸಾಬ್ ಯರಿಗೇರಿ ಅವರಿಗೆ ಕಪ್ಪು ಶಿಲೀಂಧ್ರ ರೋಗ ಕಾಣಿಸಿಕೊಂಡಿತು. ಬಡ ಕುಟುಂಬದ ಇವರಿಗೆ ಶಿಲೀಂಧ್ರ ರೋಗಕ್ಕೆ ಚಿಕಿತ್ಸೆ ಪಡೆಯುವ ಆರ್ಥಿಕ ಶಕ್ತಿಯೂ ಇಲ್ಲ. ಕೋವಿಡ್ ರೋಗಿ ಅಲ್ಲದೇ ಇರುವುದರಿಂದ ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಯವರು ದಾಖಲು ಮಾಡಿಕೊಳ್ಳಲು ನಿರಾಕರಿಸುತ್ತಿದ್ದರು. ಮೂರು ದಿನಗಳಿಂದ ಪ್ರಯತ್ನ ಪಟ್ಟರೂ ಹಾಸಿಗೆ ಸಿಗದೇ, ಆಸಿಫ್ ಪರಿಸ್ಥಿತಿ ಬಿಗಡಾಯಿಸುತ್ತಿತ್ತು. ಹಲವರ ಪ್ರಯತ್ನದ ಫಲವಾಗಿ ಶನಿವಾರ ಬೌರಿಂಗ್‌ಗೆ ದಾಖಲು ಮಾಡಲಾಯಿತು’ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಜಾಲತಾಣದ ಮುಖ್ಯಸ್ಥ ದಿನೇಶ್ ಕುಮಾರ್ ತಿಳಿಸಿದ್ದಾರೆ.

ಕಪ್ಪು ಶಿಲೀಂಧ್ರ ರೋಗ ಕಾಣಿಸಿಕೊಂಡ ಕಾರಣಕ್ಕೆ ಬೆಂಗಳೂರಿನ ಆಸ್ಪತ್ರೆಯೊಂದಕ್ಕೆ ರೋಗಿ ದಾಖಲಾಗಿದ್ದರು. ಆದರೆ, ಅಲ್ಲಿಗೆ ಔಷಧಿಯೇ ಪೂರೈಕೆಯಾಗುತ್ತಿಲ್ಲ. ಈ ರೋಗದ ಚಿಕಿತ್ಸೆಗಾಗಿ ಮೀಸಲಾಗಿರುವ ಬೌರಿಂಗ್ ಆಸ್ಪತ್ರೆಗೆ ದಾಖಲಾಗಬೇಕೆಂದರೆ ಅಲ್ಲಿ ಹಾಸಿಗೆ ಸೌಲಭ್ಯ ಇಲ್ಲ. ಕೋವಿಡ್ ಪಾಸಿಟಿವ್ ಬಂದ ಬಳಿಕ ಶಿಲೀಂಧ್ರ ಸೋಂಕು ಕಾಣಿಸಿಕೊಂಡಲ್ಲಿ ಮಾತ್ರ ಬೌರಿಂಗ್‌ನಲ್ಲಿ ದಾಖಲಿಸಿಕೊಳ್ಳಬಹುದೇ ಹೊರತು, ನೆಗೆಟಿವ್ ವರದಿ ಇದ್ದರೆ ದಾಖಲೆ ಸಾಧ್ಯವಿಲ್ಲ ಎಂದು ಆಸ್ಪತ್ರೆಯ ವೈದ್ಯಾಧಿಕಾರಿಗಳು ಹೇಳುತ್ತಿದ್ದಾರೆ. ನೆಗೆಟಿವ್ ಇದ್ದು, ಶಿಲೀಂಧ್ರ ರೋಗ ಬಂದರೆ ಏನು ಮಾಡಬೇಕು ಎಂದು ಪ್ರಶ್ನಿಸುವ ಪರಿಸ್ಥಿತಿ ರೋಗಿಗಳ ಸಂಬಂಧಿಗಳದ್ದಾಗಿದೆ.

ಕ್ರೋಡೀಕೃತ ಮಾಹಿತಿ ಅಲಭ್ಯ: ಕಪ್ಪು ಶಿಲೀಂಧ್ರ ಸೋಂಕು ಎಷ್ಟು ಜನರಲ್ಲಿ ಬಂದಿದೆ, ಎಷ್ಟು ಜನರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂಬ ಕ್ರೋಡೀಕೃತ ಮಾಹಿತಿ ಲಭ್ಯ ಇಲ್ಲ. ಅದಕ್ಕಾಗಿ ಪ್ರತ್ಯೇಕ ವ್ಯವಸ್ಥೆಯನ್ನು ಸರ್ಕಾರ ಇನ್ನೂ ಮಾಡಿಲ್ಲ.

ಸೋಂಕು ಮುಚ್ಚಿಟ್ಟು ರಹಸ್ಯವಾಗಿ ಚಿಕಿತ್ಸೆ ನೀಡಿದರೆ ಕ್ರಮ ಜರುಗಿಸುವುದಾಗಿ ಸರ್ಕಾರ ಎಚ್ಚರಿಸಿದೆ. ಆದರೆ, ಚಿಕಿತ್ಸೆ ಪಡೆಯಲು ಸರ್ಕಾರ ಸೌಲಭ್ಯ ಒದಗಿಸದೇ ಇದ್ದರೆ ರೋಗಿಗಳು ಎಲ್ಲಿಗೆ ಹೋಗಬೇಕು ಎಂಬ ಪ್ರಶ್ನೆಯೂ ಮೂಡಿದೆ.

ರಾಜ್ಯದಲ್ಲಿಯೂ ಕಾಣಿಸಿಕೊಂಡಿರುವ ಬಗ್ಗೆ ವೈದ್ಯರ ಕಳವಳ

ಬಿಳಿ ಶಿಲೀಂಧ್ರ ಸೋಂಕು: ಶ್ವಾಸಕೋಶಕ್ಕೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾಯಿಲೆ ಜಯಿಸಿದ ಕೆಲವರಿಗೆ ಕಪ್ಪು ಶಿಲೀಂಧ್ರ ಸೋಂಕಿನ (ಮ್ಯುಕರ್ ಮೈಕೋಸಿಸ್-ಬ್ಲ್ಯಾಕ್ ಫಂಗಸ್) ಜತೆಗೆ ಅಪರೂಪವಾಗಿ ಕಾಣಿಸಿಕೊಳ್ಳುತ್ತಿದ್ದ ಬಿಳಿ ಶಿಲೀಂಧ್ರ ಸೋಂಕು (ವೈಟ್ ಫಂಗಸ್ ಅಥವಾ ಕ್ಯಾಂಡಿಡಾ) ಕೂಡ ಅಪಾಯವನ್ನು ತಂದೊಡ್ಡುವ ಬಗ್ಗೆ ವೈದ್ಯಕೀಯ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಬಿಹಾರದ ಪಟ್ನಾದಲ್ಲಿ ಕೋವಿಡ್‌ನಿಂದ ಚೇತರಿಸಿಕೊಂಡವರಲ್ಲಿ ಬಿಳಿ ಶಿಲೀಂಧ್ರ ಸೋಂಕು ಕಾಣಿಸಿಕೊಂಡಿದೆ. ಕೋವಿಡ್ ಕಾಣಿಸಿಕೊಳ್ಳುವ ಪೂರ್ವದಲ್ಲಿಯೂ ಕ್ಯಾನ್ಸರ್ ಪೀಡಿತರು, ಎಚ್‌ಐವಿ ಸೋಂಕಿತರು, ಅನಿಯಂತ್ರಿತ ಮಧುಮೇಹ ಹೊಂದಿರುವವರು, ಸ್ಟೀರಾಯಿಡ್ ಥೆರಪಿಗೆ ಒಳಗಾದವರಲ್ಲಿ ಹೆಚ್ಚಾಗಿ ಇದು ಕಾಣಿಸಿಕೊಳ್ಳುತ್ತಿತ್ತು. ರೋಗನಿರೋಧಕ ಶಕ್ತಿ ಕಡಿಮೆ ಇರುವವರಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಬಾಯಿ, ಚರ್ಮ, ಉದರ, ಜನನಾಂಗಗಳು ಶ್ವಾಸಕೋಶ ಸೇರಿದಂತೆ ವಿವಿಧ ಭಾಗಗಳಲ್ಲಿ ಕಾಣಿಸಿಕೊಳ್ಳುವ ಇದು, ಕಪ್ಪು ಶಿಲೀಂಧ್ರದಷ್ಟು ತೀವ್ರತೆ ಹೊಂದಿರುವುದಿಲ್ಲ ಎಂದು ತಜ್ಞರು ಸ್ಪಷ್ಟಪಡಿಸಿದ್ದಾರೆ.

ವೈದ್ಯಕೀಯ ವಿಶ್ಲೇಷಣೆ ಅಗತ್ಯ: ರಾಜ್ಯದಲ್ಲಿ ಈವರೆಗೂ ಕೋವಿಡ್ ಜಯಿಸಿದವರಿಗೆ ಶಿಲೀಂಧ್ರ ಸೋಂಕು ಕಾಣಿಸಿಕೊಂಡ ಬಗ್ಗೆ ಅಧಿಕೃತವಾಗಿ ಪ್ರಕರಣಗಳು ದೃಢಪಟ್ಟಿಲ್ಲ. ಆದರೆ, ಈ ವರ್ಷ ಕೂಡ ಕೆಲವರು ಬಿಳಿ ಶಿಲೀಂಧ್ರ ಸೋಂಕಿಗೆ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಅವರಿಗೆ ಅರಿವಿಲ್ಲದೆಯೇ ಕೊರೊನಾ ಸೋಂಕು ಬಂದು ಹೋಗಿತ್ತೇ ಎನ್ನುವುದರ ಬಗ್ಗೆ ವೈದ್ಯಕೀಯ ವಿಶ್ಲೇಷಣೆ ನಡೆಸಿದ ಬಳಿಕವಷ್ಟೇ ಸ್ಪಷ್ಟತೆ ದೊರೆಯಲಿದೆ ಎಂದು ವೈದ್ಯರು ಹೇಳಿದ್ದಾರೆ.

‘ಕಪ್ಪು ಶಿಲೀಂಧ್ರ ಸೋಂಕಿಗೆ ಹೋಲಿಸಿದಲ್ಲಿ ಬಿಳಿ ಶಿಲೀಂಧ್ರ ಸೋಂಕು ತೀವ್ರತೆ ಕಡಿಮೆ ಇರುತ್ತದೆ. ಇದು ಹೆಚ್ಚಾಗಿ ಮೂಗಿನಲ್ಲಿ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಚಿಕಿತ್ಸೆ ಒದಗಿಸುವುದು ಕೂಡ ಸುಲಭ. ಸೋಂಕಿಗೆ ಒಳಗಾದವರು ಬೇಗ ಚೇತರಿಸಿಕೊಳ್ಳುತ್ತಾರೆ. ಇದಕ್ಕೆ ಶಸ್ತ್ರಚಿಕಿತ್ಸೆ ಅಗತ್ಯವಿಲ್ಲ. ಎರಡು ವಾರಗಳ ಹಿಂದೆ ಇಬ್ಬರಲ್ಲಿ ಬಿಳಿ ಶಿಲೀಂಧ್ರ ಸೋಂಕು ಕಾಣಿಸಿಕೊಂಡಿತ್ತು. ದ್ರಾವಣ ರೂಪದ ಔಷಧದಲ್ಲಿ ಬಾಯಿಯನ್ನು ಸ್ವಚ್ಛಗೊಳಿಸಲು ಸೂಚಿಸಲಾಗುತ್ತದೆ’ ಎಂದು ಪೀಪಲ್ ಟ್ರೀ ಆಸ್ಪತ್ರೆಯ ಇಎನ್‌ಟಿ ಶಸ್ತ್ರಚಿಕಿತ್ಸಕ ಡಾ. ರವಿ ಸಚ್ಚಿದಾನಂದ ತಿಳಿಸಿದರು.

‘ಅಂಗಾಂಗ ಕಸಿಗೆ ಒಳಗಾದವರು, ದೀರ್ಘಕಾಲಿನ ಕಾಯಿಲೆ ಎದುರಿಸುತ್ತಿರುವವರು, ಸ್ಟೀರಾಯಿಡ್ ಪಡೆದುಕೊಳ್ಳುತ್ತಿರುವವರಲ್ಲಿ ಹೆಚ್ಚಾಗಿ ಬಿಳಿ ಶಿಲೀಂಧ್ರ ಸೋಂಕು ಕಾಣಿಸಿಕೊಳ್ಳುತ್ತದೆ. ಸ್ಟೀರಾಯಿಡ್ ಬಳಕೆಯನ್ನು ಕಡಿಮೆ ಮಾಡಬೇಕು. ಮಧುಮೇಹ ನಿಯಂತ್ರಣದಲ್ಲಿ ಇರುವಂತೆ ನೋಡಿಕೊಳ್ಳಬೇಕು. ರೋಗನಿರೋಧಕ ಶಕ್ತಿ ವೃದ್ಧಿಗೆ ಉತ್ತಮ ಪೌಷ್ಟಿಕ ಆಹಾರ ಸೇವಿಸಬೇಕು’ ಎಂದು ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ಕ್ರಿಟಿಕಲ್ ಕೇರ್ ವಿಭಾಗದ ಹಿರಿಯ ಸಲಹೆಗಾರ ಡಾ. ಪ್ರದೀಪ್ ರಂಗಪ್ಪ ಹೇಳಿದರು.

‘ಶ್ವಾಸಕೋಶದಲ್ಲಿ ಗೂಡು ಕಟ್ಟುವ ಸೋಂಕು’

‘ಕೋವಿಡ್ ಸಂದರ್ಭದಲ್ಲಿ ಸ್ಟೀರಾಯಿಡ್‌ಗಳನ್ನು ಹೆಚ್ಚಾಗಿ ಬಳಸುತ್ತಿರುವ ಕಾರಣ ಶಿಲೀಂಧ್ರ ಸೋಂಕು ಕಾಣಿಸಿಕೊಳ್ಳುತ್ತಿದೆ. ಬಿಳಿ ಶಿಲೀಂಧ್ರವು ಶ್ವಾಸಕೋಶ ಹಾನಿಯಾದ ಜಾಗದಲ್ಲಿ ಗೂಡು ಮಾಡಿಕೊಳ್ಳುತ್ತದೆ. ರೋಗನಿರೋಧಕ ಶಕ್ತಿ ಕಡಿಮೆ ಆದ ಬಳಿಕ ಅದು ರಕ್ತದ ಮೂಲಕ ವಿವಿಧ ಅಂಗಗಳಿಗೆ ಹರಡಿಕೊಳ್ಳುತ್ತದೆ. ಇದರ ಲಕ್ಷಣಗಳು ಪ್ರಾರಂಭಿಕ ಹಂತದಲ್ಲಿ ಬಹಿರಂಗವಾಗಿ ಗೋಚರಿಸುವುದಿಲ್ಲ’ ಎಂದು ಪೀಪಲ್ ಟ್ರೀ ಆಸ್ಪತ್ರೆಯ ಶ್ವಾಸಕೋಶ ತಜ್ಞ ಡಾ. ವಿವೇಕ್ ಜಿ. ತಿಳಿಸಿದರು.

‘ಲಕ್ಷಣಗಳು ಉಲ್ಬಣವಾದ ಬಳಿಕ ಕೆಮ್ಮಿದಾಗ ರಕ್ತ ಹೊರಹೊಮ್ಮುವುದು ಸೇರಿದಂತೆ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಎಕ್ಸ್–ರೇ, ಸಿ.ಟಿ. ಸ್ಕ್ಯಾನ್ ಮೂಲಕ ಪತ್ತೆ ಮಾಡಬೇಕಾಗುತ್ತದೆ’ ಎಂದು ವಿವರಿಸಿದರು.

ಶಿಲೀಂಧ್ರ ಸೋಂಕಿನ ಪ್ರಮುಖ ಲಕ್ಷಣಗಳು


ಕಪ್ಪು ಶಿಲೀಂಧ್ರ ಸೋಂಕು: ಅತಿಯಾದ ತಲೆನೋವು, ಕಣ್ಣು ನೋವು, ಕಣ್ಣು ಕೆಂಪಾಗುವುದು, ಕಿವಿಯ ಹಿಂದೆ ಊತ, ಕಣ್ಣು ಗುಡ್ಡೆ ಮುಂದೆ ಬರುವುದು, ಕಣ್ಣಿನ ಸುತ್ತಲಿನ ಭಾಗದಲ್ಲಿ ನೋವು, ಚರ್ಮ ಕಪ್ಪಾಗುವಿಕೆ

ಬಿಳಿ ಶಿಲೀಂಧ್ರ ಸೋಂಕು: ಕೆಮ್ಮು, ಜ್ವರ, ಅತಿಸಾರ, ಶ್ವಾಸಕೋಶ ಸಮಸ್ಯೆ, ದೇಹದಲ್ಲಿನ ಆಮ್ಲಜನಕ ಪ್ರಮಾಣ ಇಳಿಕೆ



ಸ್ಟೀರಾಯಿಡ್ ಬಳಕೆ ಕಡಿಮೆ, ಮಧುಮೇಹ ನಿಯಂತ್ರಣ ಸೇರಿದಂತೆ ವಿವಿಧ ಮುನ್ನೆಚ್ಚರಿಕೆ ಅಗತ್ಯ

ಡಾ. ಬಿ.ಎಲ್. ಶಶಿಭೂಷಣ್
ವಿಕ್ಟೋರಿಯಾ ಆಸ್ಪತ್ರೆ ಶ್ವಾಸಕೋಶ ಔಷಧ ವಿಭಾಗದ ಮುಖ್ಯಸ್ಥ



ಸೋಂಕಿನ ಲಕ್ಷಣಗಳು ಗೋಚರಿಸಿದ ಕೂಡಲೇ ವೈದ್ಯರನ್ನು ಸಂಪರ್ಕಿಸಬೇಕು. ಕೋವಿಡ್ ಪೀಡಿತರಿಗೆ ಸೋಂಕು ತಗಲುವ ಸಾಧ್ಯತೆ ಇರಲಿದೆ

ಡಾ. ಮಧುರಾ ಎಂ.
ನೇತ್ರಶಾಸ್ತ್ರ ತಜ್ಞೆ, ವಾಸನ್ ಐ ಕೇರ್

ಬಿಳಿ ಶಿಲೀಂಧ್ರ ಪತ್ತೆಯಾಗಿದ್ದ ಆರು ಜನ ಗುಣಮುಖ

ರಾಯಚೂರು: ಕೋವಿಡ್‌ನಿಂದ ಗುಣಮುಖರಾಗಿದ್ದ ಜಿಲ್ಲೆಯ ಆರು ಜನರಿಗೆ ಬಿಳಿ ಶಿಲೀಂಧ್ರ (ವೈಟ್ ಫಂಗಸ್) ಕಾಣಿಸಿಕೊಂಡಿದ್ದು, ನಗರದ ಸಿದ್ಧಾರ್ಥ ಹೆಲ್ತ್‌ಕೇರ್ ಆಸ್ಪತ್ರೆಯ ಗ್ಯಾಸ್ಟ್ರೋ ಎಂಟ್ರಾಲಾಜಿ ವೈದ್ಯ ಡಾ.ಮಂಜುನಾಥ ಅವರು ಚಿಕಿತ್ಸೆ ನೀಡಿ ಗುಣಪಡಿಸಿದ್ದಾರೆ.

‘ಈ ಕಾಯಿಲೆ ಹೊಸದಲ್ಲ. ಮೊದಲಿನಿಂದಲೂ ಇದ್ದು, ಮುಂದೆಯೂ ಇರುತ್ತದೆ. ಜನರು ಭಯಪಡುವ ಅಗತ್ಯವಿಲ್ಲ. 14 ದಿನಗಳವರೆಗೆ ಮಾತ್ರೆಗಳನ್ನು ತೆಗೆದುಕೊಂಡರೆ ರೋಗ ವಾಸಿಯಾಗುತ್ತದೆ. ಸ್ಟಿರಾಯ್ಡ್ ಚುಚ್ಚುಮದ್ದು ತೆಗೆದುಕೊಂಡ 100 ರೋಗಿಗಳಲ್ಲಿ ಒಬ್ಬರಲ್ಲಿ ಇದು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಇದು ಸಾಮಾನ್ಯ ಕಾಯಿಲೆ’ ಎಂದು ಡಾ. ಮಂಜುನಾಥ ತಿಳಿಸಿದರು.

‘ಈರುಳ್ಳಿ ಬಹಳ ದಿನಗಳವರೆಗೆ ಇಟ್ಟಾಗ, ಅದರೊಳಗೂ ಶಿಲೀಂಧ್ರ ಕಾಣಿಸುತ್ತದೆ. ಅದೇ ರೀತಿ ದೇಹದಲ್ಲಿ ರೋಗ ನಿರೋಧಕ ಶಕ್ತಿ ಕುಂದಿದಾಗ ಅನ್ನನಾಳದಲ್ಲಿ ಆಸ್ಪರ್ ಜಿಲೋಸಿಸ್ ಕಾಣಿಸಿಕೊಳ್ಳುತ್ತದೆ. ಇದು ಮಾರಣಾಂತಿಕ ಕಾಯಿಲೆಯಲ್ಲ. 1000 ರೋಗಿಗಳಲ್ಲಿ ಒಬ್ಬರಿಗೆ ಮಾತ್ರ ಗಂಭೀರ ಪರಿಣಾಮ ಬೀರಬಹುದಷ್ಟೇ’ ಎಂದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಆರ್.ವೆಂಕಟೇಶಕುಮಾರ್, ‘ಬಿಳಿ ಶಿಲೀಂಧ್ರ ಕಾಣಿಸಿಕೊಂಡಿದ್ದ ರೋಗಿಯೊಬ್ಬರು ಖಾಸಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದಾರೆ ಎನ್ನುವ ಮಾಹಿತಿ ಬಂದಿದೆ. ಬೇರೆ ಎಲ್ಲಿಯೂ ಕಂಡುಬಂದಿಲ್ಲ. ಇದರ ಚಿಕಿತ್ಸೆಗೆ ಎಂಫೋಟೆರಿಸಿನ್-ಬಿ ಚುಚ್ಚುಮದ್ದು ಬೇಕಾಗಿಲ್ಲ. ಮಾತ್ರೆಗಳಿಂದ ಗುಣಮುಖವಾಗುತ್ತದೆ. ಈ ಮಾತ್ರೆಗಳು ಎಲ್ಲ ಕಡೆಗೂ ಲಭ್ಯವಿರುವುದಾಗಿ ವೈದ್ಯರು ತಿಳಿಸಿದ್ದಾರೆ’ ಎಂದರು.

ಸಂಕ್ಷಿಪ್ತ ಸುದ್ದಿ

12ನೇ ತರಗತಿ ಪರೀಕ್ಷೆ: ಇಂದು ಮಹತ್ವದ ಸಭೆ

ನವದೆಹಲಿ (ಪಿಟಿಐ): ಕೋವಿಡ್–19 ಪಿಡುಗಿನ ಕಾರಣದಿಂದಾಗಿ ಮುಂದೂಡಲಾಗಿರುವ 12ನೇ ತರಗತಿ ಪರೀಕ್ಷೆಗಳ ಕುರಿತು ಚರ್ಚಿಸಲು ಕೇಂದ್ರ ಶಿಕ್ಷಣ ಸಚಿವಾಲಯ ಭಾನುವಾರ (ಮೇ 23) ಮಹತ್ವದ ಸಭೆ ಕರೆದಿದೆ.

‘ಬೆಳಿಗ್ಗೆ 11.30ಕ್ಕೆ ವರ್ಚುವಲ್ ವಿಧಾನದ ಮೂಲಕ ಸಭೆ ನಡೆಯುವುದು’ ಎಂದು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ತಿಳಿಸಿದ್ದಾರೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸಭೆಯ ಅಧ್ಯಕ್ಷತೆ ವಹಿಸುವರು. ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ, ವಾರ್ತಾ ಮತ್ತು ಪ್ರಸಾರ ಸಚಿವ ಪ್ರಕಾಶ್ ಜಾವಡೇಕರ್ ಸಭೆಯಲ್ಲಿ ಉಪಸ್ಥಿತರಿರುವರು.

ಟೂಲ್‌ಕಿಟ್ ಪ್ರಕರಣ: ರಮಣ್ ಸಿಂಗ್‌ಗೆ ನೋಟಿಸ್

ರಾಯಪುರ (ಪಿಟಿಐ): ಟೂಲ್‌ಕಿಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆಯನ್ನು ದಾಖಲಿಸಲು ಮೇ 24ರಂದು ತಮ್ಮ ನಿವಾಸದಲ್ಲಿಯೇ ಇರುವಂತೆ ಬಿಜೆಪಿ ನಾಯಕ ರಮಣ್ ಸಿಂಗ್ ಅವರಿಗೆ ರಾಯಪುರ ಪೊಲೀಸರು ನೋಟಿಸ್ ನೀಡಿದ್ದಾರೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಛತ್ತೀಸಗಡದ ಸಿವಿಲ್ ಲೈನ್ಸ್ ಠಾಣೆಯ ಅಧಿಕಾರಿ ಈ ನೋಟಿಸ್ ಜಾರಿ ಮಾಡಿದ್ದಾರೆ’ ಎಂದು ಹೇಳಿದರು.

‘ರಮಣ್ ಸಿಂಗ್ ಅವರದ್ದು ಎನ್ನಲಾದ ಟ್ವಿಟರ್ ಖಾತೆಯಿಂದ ಎಐಸಿಸಿ ರಿಸರ್ಚ್ ಪ್ರಾಜೆಕ್ಟ್ ಅಥವಾ ‘ಕಾರ್ನರಿಂಗ್ ನರೇಂದ್ರ ಮೋದಿ ಆ್ಯಂಡ್ ಬಿಜೆಪಿ ಆನ್ ಕೋವಿಡ್ ಮ್ಯಾನೇಜ್‌ಮೆಂಟ್’ ಎಂಬ ಶೀರ್ಷಿಕೆಯುಳ್ಳ ದಾಖಲೆಯೊಂದನ್ನು ಹಂಚಿಕೊಳ್ಳಲಾಗಿದೆ. ಒಂದು ವೇಳೆ ಈ ಖಾತೆ ರಮಣ್ ಸಿಂಗ್ ಅವರದ್ದೇ ಆಗಿದ್ದಲ್ಲಿ, ಅವರಿಗೆ ಈ ದಾಖಲೆಗಳು ಎಲ್ಲಿಂದ ಸಿಕ್ಕಿವೆ ಎಂಬುದರ ಬಗ್ಗೆ ಪೊಲೀಸರು ರಮಣ್ ಸಿಂಗ್ ಅವರನ್ನು ಪ್ರಶ್ನಿಸಲಿದ್ದಾರೆ’ ಎಂದು ಮಾಹಿತಿ ನೀಡಿದರು.

ಪಶ್ಚಿಮ ಬಂಗಾಳ: ಸುವೇಂದು ಅಧಿಕಾರಿ ತಂದೆ, ಸಹೋದರಗೆ ‘ವೈ–ಪ್ಲಸ್’ ಭದ್ರತೆ



ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಬಿಜೆಪಿ ಮುಖಂಡ ಸುವೇಂದು ಅಧಿಕಾರಿ ಅವರ ತಂದೆ ಹಾಗೂ ಸಹೋದರಗೆ ಕೇಂದ್ರ ಗೃಹ ಸಚಿವಾಲಯ ‘ವೈ–ಪ್ಲಸ್’ ಭದ್ರತೆಯನ್ನು ಒದಗಿಸಿದೆ ಎಂದು ಮೂಲಗಳು ಶನಿವಾರ ತಿಳಿಸಿವೆ.

ಸುವೇಂದು ಅವರ ತಂದೆ ಶಿಶಿರ್ ಕುಮಾರ್ ಅಧಿಕಾರಿ, ಸಹೋದರ ದಿವ್ಯೇಂದು ಅಧಿಕಾರಿ ಅವರಿಗೆ ಬೆದರಿಕೆ ಇರುವುದಾಗಿ ಕೇಂದ್ರದ ಭದ್ರತಾ ಸಂಸ್ಥೆಗಳು ವರದಿ ನೀಡಿದ್ದವು. ಈ ವರದಿಯ ಆಧಾರದಲ್ಲಿ ಅವರಿಗೆ ಭದ್ರತೆಯನ್ನು ನೀಡಲಾಗಿದೆ ಎಂದು ಮೂಲಗಳು ಹೇಳಿವೆ.

ಶಿಶಿರ್‌ಕುಮಾರ್ ಅಧಿಕಾರಿ ಹಾಗೂ ದಿವ್ಯೇಂದು ಅಧಿಕಾರಿ ಸಂಸದರಾಗಿದ್ದು, ಕ್ರಮವಾಗಿ ಕಾಂತಿ ಹಾಗೂ ತಾಮ್ಲೂಕ್ ಲೋಕಸಭಾ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿದ್ದಾರೆ.

ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಸುವೇಂದು ಅಧಿಕಾರಿ ಅವರಿಗೆ ಈಗಾಗಲೇ ‘ಝಡ್’ ಶ್ರೇಣಿಯ ಭದ್ರತೆಯನ್ನು ಒದಗಿಸಲಾಗಿದೆ.

ಗುಜರಾತ್: ಹೆಣ್ಣುಸಿಂಹ, ನಾಲ್ಕು ಕೃಷ್ಣಮೃಗಗಳ ಕಳೇಬರ ಪತ್ತೆ

ಅಹಮದಾಬಾದ್ (ಪಿಟಿಐ): ‘ಗುಜರಾತ್‌ನ ಜುನಾಗಢ ಜಿಲ್ಲೆಯ ಗಿರ್ ಅರಣ್ಯ ಪ್ರದೇಶದ ವಿಸಾವದರ್ ಸಮೀಪದ ಅಣೆಕಟ್ಟೆ ಬಳಿ ಒಂದು ಹೆಣ್ಣು ಸಿಂಹ ಮತ್ತು ನಾಲ್ಕು ಕೃಷ್ಣಮೃಗಗಳ ಕಳೇಬರ ಪತ್ತೆಯಾಗಿವೆ’ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದರು.

‘ಪ್ರಾಣಿಗಳ ಸಾವಿಗೆ ನಿಖರ ಕಾರಣ ಪತ್ತೆ ಹಚ್ಚಲಾಗುತ್ತಿದೆ’ ಎಂದು ಜುನಾಗಢ ಅರಣ್ಯದ ಮುಖ್ಯ ಸಂರಕ್ಷಣಾಧಿಕಾರಿ ದುಶ್ಯಂತ್ ಹೇಳಿದರು.

ನಿಧನ ವಾರ್ತೆ

ತೆಲುಗು ನಿರ್ಮಾಪಕ ಬಿ.ಎ ರಾಜು



ಹೈದರಾಬಾದ್ (ಪಿಟಿಐ): ತೆಲುಗು ಚಿತ್ರ ನಿರ್ಮಾಪಕ ಮತ್ತು ಹಿರಿಯ ಪತ್ರಕರ್ತ ಬಿ.ಎ ರಾಜು (62) ಹೃದಯಾಘಾತದಿಂದ ಶುಕ್ರವಾರ ರಾತ್ರಿ ನಿಧನರಾದರು ಎಂದು ಮೂಲಗಳು ತಿಳಿಸಿವೆ.

‘ಏಕಾಏಕಿ ರಕ್ತದಲ್ಲಿನ ಸಕ್ಕರೆ ಪ್ರಮಾಣದಲ್ಲಿ ಏರಿಳಿತ ಉಂಟಾಗಿ ಹೃದಯಾಘಾತ ಸಂಭವಿಸಿದೆ. ಈ ವೇಳೆ ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟರು’ ಎಂದು ಅವರ ಮಗ ಬಿ.ಶಿವಕುಮಾರ್ ಟ್ವೀಟ್ ಮಾಡಿದ್ದಾರೆ.

ರಾಜು ಅವರು ಸಿನಿಮಾ ಪತ್ರಕರ್ತರಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದರು. ಬಳಿಕ ನಿರ್ಮಾಪಕರಾದರು. ರಾಜು ಅವರು ‘ಸೂಪರ್ ಹಿಟ್’ ಎಂಬ ಸಿನಿಮಾ ನಿಯತಕಾಲಿಕೆ ನಡೆಸಿದ್ದರು.

ಅಲೋಪಥಿ ವೈದ್ಯ ಪದ್ಧತಿ ವಿರುದ್ಧ ಅಸಂಬದ್ಧ ಹೇಳಿಕೆಗೆ ಆಕ್ರೋಶ

ರಾಮ್‌ದೇವ್ ವಿರುದ್ಧ ಕ್ರಮಕ್ಕೆ ಐಎಂಎ ಪಟ್ಟು

ನವದೆಹಲಿ (ಪಿಟಿಐ): ಅಲೋಪಥಿ ವೈದ್ಯಕೀಯ ಪದ್ಧತಿಯ ವಿರುದ್ಧ ಅಸಂಬದ್ಧ ಹೇಳಿಕೆ ನೀಡಿ, ವೈಜ್ಞಾನಿಕ ವೈದ್ಯ ಪದ್ಧತಿಯ ಹೆಸರಿಗೆ ಚ್ಯುತಿ ತರಲು ಯತ್ನಿಸಿದ ಯೋಗಗುರು ಬಾಬಾ ರಾಮ್‌ದೇವ್ ವಿರುದ್ಧ ಕೇಂದ್ರ ಆರೋಗ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕು ಎಂದು ಭಾರತೀಯ ವೈದ್ಯಕೀಯ ಸಂಘ (ಐಎಂಎ) ಶನಿವಾರ ಆಗ್ರಹಿಸಿದೆ.

ಅಸಂಬದ್ಧ ಹೇಳಿಕೆಗಳ ಮೂಲಕ ದೇಶದ ಸಾಕ್ಷರ ಸಮಾಜ ಮತ್ತು ಅವರ ಅಮಾಯಕ ಬೆಂಬಲಿಗರ ದಿಕ್ಕು ತಪ್ಪಿಸುತ್ತಿರುವ ರಾಮ್‌ದೇವ್ ವಿರುದ್ಧ ಸಾಂಕ್ರಾಮಿಕ ರೋಗ ಕಾಯ್ದೆಯಡಿ ವಿಚಾರಣೆ ನಡೆಸಬೇಕು ಎಂದು ಸಂಘಟನೆ ಆಗ್ರಹಿಸಿದೆ.

‘ಅಲೋಪಥಿ ಒಂದು ಅವಿವೇಕದ ವಿಜ್ಞಾನ’ ಎಂಬುದಾಗಿ ರಾಮ್‌ದೇವ್ ಹೇಳಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ‘ಅಲೋಪಥಿ-ಔಷಧಿಗಳನ್ನು ತೆಗೆದುಕೊಂಡ ನಂತರ ಲಕ್ಷಾಂತರ ಜನರು ಸಾವನ್ನಪ್ಪಿದ್ದಾರೆ. ಭಾರತದ ಔಷಧ ನಿಯಂತ್ರಕರು ಅನುಮೋದಿಸಿದ್ದ ರೆಮ್‌ಡಿಸಿವಿರ್, ಫಾವಿಫ್ಲು ಮತ್ತು ಇತರ ಎಲ್ಲಾ ಔಷಧಿಗಳು ಚಿಕಿತ್ಸೆಯಲ್ಲಿ ವಿಫಲವಾಗಿವೆ’ ಎಂದು ವಿಡಿಯೊದಲ್ಲಿ ಹೇಳಿದ್ದಾರೆ.

ಐಎಂಎ ಆರೋಪಗಳೇನು?

- ಜನರಲ್ಲಿ ಭೀತಿ ಹುಟ್ಟಿಸಲು ರಾಮ್‌ದೇವ್ ಯತ್ನ
- ತಮ್ಮ ಅಕ್ರಮ ಹಾಗೂ ಅನುಮತಿ ಪಡೆಯದ ಔಷಧ ಮಾರಲು ಯೋಗಗುರು ಪ್ರಯತ್ನ
- ಹರ್ಷವರ್ಧನ್ ಕ್ರಮ ಜರುಗಿಸದಿದ್ದರೆ, ಕಾನೂನು ಕ್ರಮಕ್ಕೆ ಚಿಂತನೆ



ಬಾಬಾ ರಾಮ್‌ದೇವ್

‘ಸ್ವತಃ ಅಲೋಪಥಿ ವೈದ್ಯರಾಗಿರುವ ಹರ್ಷವರ್ಧನ್ ಅವರು ಆಧುನಿಕ ವೈದ್ಯಪದ್ಧತಿ ಅನುಸರಿಸುತ್ತಿರುವ ಆರೋಗ್ಯ ಸಚಿವಾಲಯದ ನೇತೃತ್ವ ವಹಿಸಿದ್ದಾರೆ. ಸಚಿವರು ರಾಮ್‌ದೇವ್ ಅವರ ಹೇಳಿಕೆಯನ್ನು ಸವಾಲಾಗಿ ಸ್ವೀಕರಿಸುಬೇಕು ಇಲ್ಲವೇ ವೈದ್ಯಪದ್ಧತಿಗೆ ಇತಿಶ್ರೀ ಹಾಡಬೇಕು ಅಥವಾ ಅವರನ್ನು ವಿಚಾರಣೆಗೆ ಒಳಪಡಿಸಬೇಕು’ ಎಂದು ಸಂಘಟನೆ ಒತ್ತಾಯಿಸಿದೆ.

ಸುಳ್ಳು ಆರೋಪ: ‘ಬಾಬಾ ರಾಮ್‌ದೇವ್ ಅವರು ಆಧುನಿಕ ವಿಜ್ಞಾನ ಮತ್ತು ವೈದ್ಯಕೀಯ ಪದ್ಧತಿಯ ವಿರುದ್ಧ ಯಾವುದೇ ಕೆಟ್ಟ ಭಾವನೆಯನ್ನು ಹೊಂದಿಲ್ಲ. ಅವರ ವಿರುದ್ಧ ಆರೋಪಿಸಲಾಗಿರುವ ಸುಳ್ಳು ಸಂಗತಿ ಅಸಹ್ಯಕರವಾದದ್ದು’ ಎಂದು ಪತಂಜಲಿ ಯೋಗಪೀಠ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಆಚಾರ್ಯ ಬಾಲಕೃಷ್ಣ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಕೋವಿಡ್–19 ಸಾಂಕ್ರಾಮಿಕ ರೋಗದ ಸವಾಲಿನ ಸಮಯದಲ್ಲಿ ಹಗಲು–ರಾತ್ರಿ ಕೆಲಸ ಮಾಡುತ್ತಿರುವ ವೈದ್ಯರು ಮತ್ತು ಸಹಾಯಕ ಸಿಬ್ಬಂದಿ ಬಗ್ಗೆ ರಾಮ್‌ದೇವ್ ಅವರಿಗೆ ಗೌರವವಿದೆ’ ಎಂದೂ ಟ್ರಸ್ಟ್ ತಿಳಿಸಿದೆ.

ಫಲಿತಾಂಶದ ನಿರೀಕ್ಷೆಯ ಭಾರಕ್ಕೆ ಕುಸಿಯುವ ಮನೋಬಲ

• ವಿನಾಯಕ ಭಟ್

ದಾವಣಗೆರೆ: ಉಸಿರಾಟದ ತೊಂದರೆ ಕಾಣಿಸಿಕೊಂಡ 76 ವರ್ಷದ ವೃದ್ಧರೊಬ್ಬರಿಗೆ ರ್‍ಯಾಪಿಡ್ ಆ್ಯಂಟಿಜನ್ ಟೆಸ್ಟ್‌ನಲ್ಲಿ 'ಕೋವಿಡ್ ಪಾಸಿಟಿವ್' ಎಂಬ ವರದಿ ಬಂತು. ಪ್ರಾಥಮಿಕ ಸಂಪರ್ಕಿತರಾಗಿದ್ದ ಅವರ ಪತ್ನಿಯ ಗಂಟಲಿನ ದ್ರವದ ಮಾದರಿಯನ್ನು ಅಂದೇ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿದ್ದರೂ 'ನೆಗೆಟಿವ್' ಎಂದು ಆರ್‌ಟಿಪಿಸಿಆರ್ ವರದಿ ಬಂದಿದ್ದು ಎಂಟು ದಿನಗಳ ಬಳಿಕ. ಅದೂ ಪತಿ ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಗೆ ಬಂದಮೇಲೆ ಮೊಬೈಲ್‌ಗೆ ಸಂದೇಶ ಬಂದಿತ್ತು!

ಇದು ದಾವಣಗೆರೆ ಜಿಲ್ಲೆಯ ಉದಾಹರಣೆಯಷ್ಟೇ ಅಲ್ಲ; ಬಹುತೇಕ ಕಡೆ 'ಪಾಸಿಟಿವ್' ಪ್ರಕರಣಗಳ ವರದಿಯು ಎರಡು–ಮೂರು ದಿನಗಳಲ್ಲಿ ಬರುತ್ತಿವೆ. ಆದರೆ, 'ನೆಗೆಟಿವ್' ವರದಿಯ ಸಂದೇಶ ಬರಲು ವಿಳಂಬವಾಗುತ್ತಿದೆ. ಇದರಿಂದಾಗಿ ಫಲಿತಾಂಶಕ್ಕಾಗಿ ಕಾಯುತ್ತಿರುವ ರೋಗಿಗಳ ಮನೋಬಲ ನಿರೀಕ್ಷೆಯ ಭಾರಕ್ಕೆ ದಿನೇ ದಿನೇ ಕುಸಿಯುತ್ತಿದೆ.

ದಾವಣಗೆರೆಯಲ್ಲಿ ಪಾಸಿಟಿವ್ ಪ್ರಕರಣಗಳು ಗೊತ್ತಾಗಲು ಎರಡು–ಮೂರು ದಿನಗಳಾಗುತ್ತಿದ್ದವು. ಗಂಟಲು ದ್ರವ ಮಾದರಿ ತೆಗೆದುಕೊಳ್ಳುವಾಗಲೇ ಆರೋಗ್ಯದ ಸ್ಥಿತಿ ಚೆನ್ನಾಗಿದ್ದರೆ 'ಬಿ' ಎಂದೂ, ಆರೋಗ್ಯದಲ್ಲಿ ಏರುಪೇರಾಗಿದ್ದರೆ 'ಎ' ಎಂದೂ ವಿಂಗಡಿಸಲಾಗುತ್ತಿತ್ತು. 'ಎ' ವಿಭಾಗದ್ದನ್ನು ಮೊದಲು ಪರೀಕ್ಷೆಗೊಳಪಡಿಸಲಾಗುತ್ತಿತ್ತು. ಈಗ ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ಹೊಸ ಆರ್‌ಟಿಪಿಸಿಆರ್ ಯಂತ್ರ ಬಂದಿದೆ. ಒಂದೇ ಬಾರಿಗೆ 1,600 ಮಾದರಿಗಳನ್ನು ಪರೀಕ್ಷೆ ಮಾಡಬಹುದಾಗಿದೆ. 24ರಿಂದ 30 ಗಂಟೆಗಳ ಒಳಗೆ ಪಾಸಿಟಿವ್ ಇರುವವರಿಗೆ ಮಾಹಿತಿ ಹೋಗುತ್ತಿದೆ ಎನ್ನುತ್ತಾರೆ ಆರೋಗ್ಯ ಇಲಾಖೆ ಅಧಿಕಾರಿಗಳು.

ಆರೋಗ್ಯ ಇಲಾಖೆಯು ಕೋವಿಡ್ ಪರೀಕ್ಷೆ ನಡೆಸುವ ಪ್ರಮಾಣವನ್ನು ಈಗ ಕಡಿಮೆಗೊಳಿಸಿದೆ. ಸೋಂಕಿನ ಲಕ್ಷಣ ಇಲ್ಲದವರು ಪರೀಕ್ಷೆ ಮಾಡಿಸಿಕೊಳ್ಳಲು ಮುಂದೆ ಬಂದರೆ 'ನಿಮಗೆ ಅಗತ್ಯವಿಲ್ಲ' ಎಂದೂ ಹೇಳಿ ಕಳುಹಿಸಲಾಗುತ್ತಿದೆ. ಕೆಲವೆಡೆ ₹ 1,200 ಕೊಟ್ಟು ಖಾಸಗಿ ಆಸ್ಪತ್ರೆಗಳಲ್ಲಿ ಪರೀಕ್ಷೆ ಮಾಡಿಸಿಕೊಳ್ಳುವ ಅನಿವಾರ್ಯ ಎದುರಾಗಿದೆ.

ಪರೀಕ್ಷೆಗೆ ಹಿಂದೇಟು: ಗ್ರಾಮೀಣ ಪ್ರದೇಶಗಳಲ್ಲಿ ರೋಗ ಲಕ್ಷಣ ಕಾಣಿಸಿಕೊಂಡವರೂ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಮುಂದೆ ಬರುತ್ತಿಲ್ಲ. ಆರೋಗ್ಯ ಇಲಾಖೆಯೂ ಪರೀಕ್ಷೆಯ ಪ್ರಮಾಣ ಕಡಿಮೆಗೊಳಿಸಿರುವುದರಿಂದ ಹಳ್ಳಿಗಳಲ್ಲಿ ರೋಗಿಗಳು ಸೋಂಕುವಾಹಕರಾಗುತ್ತಿದ್ದಾರೆ. ಹೀಗಾಗಿ ಹಳ್ಳಿಗಳಲ್ಲೂ ಕೋವಿಡ್ ಪ್ರಕರಣಗಳು ಹೆಚ್ಚತೊಡಗಿವೆ. ವರದಿ ಬರಲು ವಿಳಂಬವಾಗುತ್ತಿರುವುದೂ ಸೋಂಕು ಹರಡಲು ಕಾರಣವಾಗಿದೆ.

ಬೆಳಗಾವಿಯಂತಹ ದೊಡ್ಡ ಜಿಲ್ಲೆಯಲ್ಲಿ ಆರ್‌ಟಿಪಿಸಿಆರ್ ವರದಿ ಬರಲು ಐದಾರು ದಿನಗಳಾಗುತ್ತಿದೆ. ದಿನಕ್ಕೆ ಸರಾಸರಿ ಆರು ಸಾವಿರ ಮಾದರಿಗಳನ್ನು ಪರೀಕ್ಷೆಗೊಳಪಡಿಸುತ್ತಿದ್ದ ಈ ಜಿಲ್ಲೆಯಲ್ಲಿ ಈಗ 2,600 ಮಾದರಿಗಳನ್ನು ಪರೀಕ್ಷಿಸಲಾಗುತ್ತಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ನಿತ್ಯ 1,055 ಮಾದರಿಗಳನ್ನು ಮಾತ್ರ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದವರು ಫಲಿತಾಂಶಕ್ಕೆ ಸರಾಸರಿ ಐದು ದಿನ ಕಾಯಬೇಕಾಗಿದೆ. ಆಂಧ್ರಪ್ರದೇಶದ ಗಡಿಗೆ ಹೊಂದಿಕೊಂಡ ಗ್ರಾಮಗಳ ಜನರು ಸೋಂಕು ಬಾಧಿಸುತ್ತಿದ್ದರೂ ಚಿಕಿತ್ಸೆಗಾಗಿ ಫಲಿತಾಂಶ ಬರುವವರೆಗೆ ಕಾಯುವ ಅನಿವಾರ್ಯ ಇದೆ. ಸೋಂಕು ಕಾಣಿಸಿಕೊಂಡವರಿಗೆ ಸಕಾಲಕ್ಕೆ ಚಿಕಿತ್ಸೆ ಸಿಗುತ್ತಿಲ್ಲ. ಕೋವಿಡ್ ಆರೈಕೆ ಕೇಂದ್ರಗಳಿಗೆ ಬರಲು ಜನ ಹಿಂದೇಟು ಹಾಕುತ್ತಿದ್ದಾರೆ.

ಶಿವಮೊಗ್ಗದಲ್ಲಿ ಮೆಗ್ಗಾನ್ ಹಾಗೂ ಪರಿಮಾಣು ಕ್ರಿಮಿ ಪ್ರಯೋಗಶಾಲೆಯಲ್ಲಿ ಪರೀಕ್ಷೆ ಮಾಡಲಾಗುತ್ತಿದ್ದು, ಕೆಲ ಬಾರಿ ವರದಿ ಬರಲು ಮೂರು–ನಾಲ್ಕು ದಿನಗಳಾಗುತ್ತವೆ. ಇನ್ನೂ ಎರಡು ಪ್ರಯೋಗಾಲಯಗಳನ್ನು ನಿರ್ಮಿಸಲು ಜಿಲ್ಲಾಡಳಿತ ಸಿದ್ಧತೆ ಮಾಡಿಕೊಳ್ಳುತ್ತಿದೆ.

ಕಲಬುರ್ಗಿ ಜಿಲ್ಲೆಯಲ್ಲಿ ಲಾಕ್‌ಡೌನ್‌ಗಿಂತ ಮುಂಚೆ ನಿತ್ಯ ಸರಾಸರಿ 5 ಸಾವಿರ ಜನರಿಗೆ ಕೋವಿಡ್ ತಪಾಸಣೆ ಮಾಡಲಾಗುತ್ತಿತ್ತು. ಈಗ 2,000ಕ್ಕೆ ಇಳಿಸಲಾಗಿದೆ. ಸರಾಸರಿ ಮೂರು ದಿನಗಳ ಬಳಿಕ ಫಲಿತಾಂಶ ಬರುತ್ತಿದೆ.

ಮೈಸೂರಿನಲ್ಲಿ ಪರೀಕ್ಷೆಯ ಪ್ರಮಾಣವನ್ನು ಅರ್ಧಷ್ಟು ಕಡಿಮೆಗೊಳಿಸಲಾಗಿದೆ. ಮೂರ್ನಾಲ್ಕು ದಿನಗಳ ಬಳಿಕ ವರದಿ ಕೈಸೇರುತ್ತಿದೆ. ಹಳ್ಳಿಗಳಲ್ಲಿ ಹಾಗೂ ಹೋಬಳಿ ಕೇಂದ್ರಗಳಲ್ಲಿ ಪರೀಕ್ಷೆ ನಡೆಸದೇ ಇರುವುದರಿಂದ ತಾಲ್ಲೂಕು ಕೇಂದ್ರಗಳಿಗೇ ಬರಬೇಕಾಗಿದೆ. ಹಾಸನ ಜಿಲ್ಲೆಯಲ್ಲಿ ದಿನಾಲು ಸರಾಸರಿ ಮೂರು ಸಾವಿರ ಮಾದರಿಗಳನ್ನು ಪರೀಕ್ಷೆಗೊಳಪಡಿಸಲಾಗುತ್ತಿದ್ದು, ವರದಿ ಬರಲು ಐದು ದಿನಗಳಾಗುತ್ತಿವೆ. ಮಂಡ್ಯ, ಕೊಡಗು ಜಿಲ್ಲೆಗಳ ಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ.

ದಕ್ಷಿಣ ಕನ್ನಡ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಗ್ರಾಮ ಮಟ್ಟದ ಕಾರ್ಯಪಡೆಗಳು ಸಕ್ರಿಯವಾಗಿವೆ. ರೋಗ ಲಕ್ಷಣ ಇರುವವರು, ಪ್ರಾಥಮಿಕ, ದ್ವಿತೀಯ ಸಂಪರ್ಕಿತರನ್ನು ಪತ್ತೆ ಮಾಡಿ ಪರೀಕ್ಷೆಗೊಳಪಡಿಸಲಾಗುತ್ತಿದೆ. ಈ ಜಿಲ್ಲೆಗಳಲ್ಲಿ ಗರಿಷ್ಠ 48 ಗಂಟೆಯೊಳಗೆ ವರದಿ ಬರುತ್ತಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಪರೀಕ್ಷಾ ವರದಿ 36 ಗಂಟೆಯೊಳಗೆ ಲಭಿಸುತ್ತಿದೆ. ಆದರೆ ಗ್ರಾಮೀಣ ಪ್ರದೇಶದ ಜನ ರೋಗ ಲಕ್ಷಣವಿದ್ದರೂ ಪರೀಕ್ಷೆ ಮಾಡಿಸಿಕೊಳ್ಳಲು ಮುಂದೆ ಬರುತ್ತಿಲ್ಲ. ಕೋವಿಡ್ ಕೇಂದ್ರಕ್ಕೆ ಬರದೇ, ಸ್ಥಳೀಯವಾಗಿಯೇ ಔಷಧ ಪಡೆಯಲು ಮುಂದಾಗುತ್ತಿರುವುದರಿಂದ ಹಲವು ಹಳ್ಳಿಗಳಲ್ಲಿ ಕೋವಿಡ್ ಪ್ರಕರಣಗಳು ಕಾಣಿಸಿಕೊಳ್ಳುತ್ತಿವೆ.

ಹುಬ್ಬಳ್ಳಿಯಲ್ಲಿ ಸಾಮಾನ್ಯವಾಗಿ ಮೂರು ದಿನಗಳಲ್ಲಿ ಫಲಿತಾಂಶ ಬರುತ್ತಿವೆ. ಕೋವಿಡ್ ಕೇರ್ ಸೆಂಟರ್ ತಾಲ್ಲೂಕು ಕೇಂದ್ರದಲ್ಲಿ ಮಾತ್ರವಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಚಿಕಿತ್ಸೆ ಲಭಿಸುತ್ತಿಲ್ಲ. ಫಲಿತಾಂಶ ಬರುವುದು ವಿಳಂಬವಾಗಲಿದೆ ಎಂಬ ಕಾರಣಕ್ಕೆ ರೋಗಿಗಳು 'ಸಿಟಿ ಸ್ಕ್ಯಾನ್' ಮೊರೆಹೋಗುತ್ತಿದ್ದಾರೆ.

ಕೆಲವು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಾತ್ರೆಗಳು, ಮೆಡಿಸಿನ್ ಕಿಟ್ ಲಭ್ಯವಿಲ್ಲ ಎಂಬ ದೂರುಗಳೂ ಕೇಳಿಬರುತ್ತಿವೆ. ಕೋವಿಡ್ ಫಲಿತಾಂಶ ಬರುವವರೆಗೆ ಕಾಯದೇ ರೋಗ ಲಕ್ಷಣಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಆದರೆ, ಕೆಲವೆಡೆ ಹಾಸಿಗೆ ಸಿಗುವುದೇ ಸಮಸ್ಯೆಯಾಗಿದೆ.

ಕ್ವಾರಂಟೈನ್ ಕೇಂದ್ರ ತೆರೆಯಲು ಹಿಂದೇಟು

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಸೌಮ್ಯ ಸ್ವರೂಪದ ಹಾಗೂ ಲಕ್ಷಣರಹಿತ ಕೊರೊನಾ ಸೋಂಕಿತರ ಆರೈಕೆಗಾಗಿ ಸೋಂಕಿತರ ಊರಿನ ಸಮೀಪದಲ್ಲೇ ಕ್ವಾರಂಟೈನ್ ಕೇಂದ್ರಗಳನ್ನು ತೆರೆಯಲು ಕಲ್ಯಾಣ ಕರ್ನಾಟಕದ ಬಹುತೇಕ ಜಿಲ್ಲಾಡಳಿತಗಳು ಆಸಕ್ತಿ ತೋರಿಸುತ್ತಿಲ್ಲ.

ಲಕ್ಷಣರಹಿತ ಸೋಂಕಿತರನ್ನು ಕ್ವಾರಂಟೈನ್ ಕೇಂದ್ರಗಳಲ್ಲಿ ಇರಿಸಿ ಆರೈಕೆ ಮಾಡಲು ವೈದ್ಯರು, ನರ್ಸ್‌ಗಳು, ಔಷಧಿ, ಊಟ, ವಾಸ್ತವ್ಯದ ಸೌಲಭ್ಯ ಕಲ್ಪಿಸುವುದು ದೊಡ್ಡ ಸವಾಲು ಎಂಬುದನ್ನು ಅರಿತು ತಮ್ಮ ಕರ್ತವ್ಯದಿಂದ ವಿಮುಖವಾಗಿವೆ. ಈ ವಾಸ್ತವವನ್ನು ಒಪ್ಪಿಕೊಳ್ಳುವ ಬದಲು 'ಸೋಂಕಿತರು ಕ್ವಾರಂಟೈನ್ ಕೇಂದ್ರಗಳಿಗೆ ಬರುತ್ತಿಲ್ಲ' ಎಂಬ ನೆಪ ಹೇಳುತ್ತಿವೆ. ವೈದ್ಯಕೀಯ ಮೂಲಸೌಕರ್ಯಗಳ ಕೊರತೆಯೂ ತಕ್ಕಮಟ್ಟಿಗೆ ಕ್ವಾರಂಟೈನ್ ಕೇಂದ್ರ ಆರಂಭಿಸದಿರಲು ಕಾರಣವಾಗಿದೆ.

ಕಲಬುರ್ಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಚಂದಾಪುರ, ಕಾಳಗಿ ತಾಲ್ಲೂಕಿನ ಕೋಡ್ಲಿ ಗ್ರಾಮದಲ್ಲಿ ಕ್ವಾರಂಟೈನ್ ಕೇಂದ್ರ ಆರಂಭಿಸಲು ವಸತಿ ನಿಲಯಗಳನ್ನು ಗುರುತಿಸಲಾಗಿದೆ. ಆದರೆ, ಇನ್ನೂ ಆರಂಭಿಸಿಲ್ಲ. ಅಫಜಲಪುರ ಹೊರವಲಯದಲ್ಲಿಯೂ ಕೇಂದ್ರ ಆರಂಭವಾಗಿಲ್ಲ. ಚಿಕಿತ್ಸೆ ನೀಡಬೇಕಿದ್ದ ವೈದ್ಯರಿಗೇ ಕೋವಿಡ್ ಆಗಿರುವುದರಿಂದ ಕೇಂದ್ರಕ್ಕೆ ಸೋಂಕಿತರನ್ನು ಕರೆತರಲು ಆಗಿಲ್ಲ ಎಂದು ವೈದ್ಯಾಧಿಕಾರಿಗಳು ಕಾರಣ ನೀಡುತ್ತಾರೆ.

ಯಾದಗಿರಿ ಜಿಲ್ಲೆಯಲ್ಲಿ ಮೂರು ಕೋವಿಡ್ ಕೇರ್ ಕೇಂದ್ರಗಳನ್ನು ಆರಂಭಿಸಲಾಗಿದೆ. ಹೋಂ ಐಸೊಲೇಷನ್ ಆಗಲು ಮನೆಗಳಲ್ಲಿ ಪ್ರತ್ಯೇಕ ಕೊಠಡಿ ಇಲ್ಲದ ಸೋಂಕಿತರನ್ನು ವಿವಿಧ ವಸತಿ ನಿಲಯಗಳಲ್ಲಿ ಇರಿಸಲಾಗುತ್ತದೆ.

ಕೊಪ್ಪಳ ಜಿಲ್ಲೆಯಲ್ಲಿ ಹೋಂ ಐಸೋಲೇಷನ್ ರದ್ದುಗೊಳಿಸಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇರುವ ಸಮಾಜ ಕಲ್ಯಾಣ, ಅಲ್ಪಸಂಖ್ಯಾತರ ವಸತಿ ನಿಲಯಗಳಲ್ಲಿ ಕೋವಿಡ್ ಕೇರ್ ಸೆಂಟರ್ ಆರಂಭಿಸಲು ತೀರ್ಮಾನಿಸಲಾಗಿದೆ. ಬಹುತೇಕ ವಸತಿ ನಿಲಯಗಳು ಜನವಸತಿಯಿಂದ ದೂರ ಇರುವುದು, ಸಾರಿಗೆ, ಸಂಚಾರ ಸಮಸ್ಯೆ, ಸಕಾಲಕ್ಕೆ ದೊರೆಯದ ಊಟ, ಉಪಾಹಾರ, ವೈದ್ಯರ ಕೊರತೆಯಿಂದ ಕೇಂದ್ರಕ್ಕೆ ತೆರಳಲು ಸೋಂಕಿತರು ಹಿಂದೇಟು ಹಾಕುತ್ತಿದ್ದಾರೆ. ಗ್ರಾಮೀಣ, ನಗರ, ಪಟ್ಟಣ ಸೇರಿ ಒಟ್ಟು 159 ಕೋವಿಡ್ ಕೇರ್ ಸೆಂಟರ್ ಆರಂಭಿಸಲಾಗಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಸೋಂಕಿತರು ದಾಖಲಾಗಿಲ್ಲ.

ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿಯಲ್ಲಿ ಕೋವಿಡ್ ರೋಗಿಗಳಿಗಾಗಿ 100 ಹಾಸಿಗೆ ಸೌಲಭ್ಯವಿರುವ ಆಸ್ಪತ್ರೆಯನ್ನು ತೆರೆಯಲಾಗಿದೆ. ಸಿರವಾರ ತಾಲ್ಲೂಕಿನ ನವಲಕಲ್ಲು ಗ್ರಾಮದ ಹೊರವಲಯದಲ್ಲಿರುವ ಇಂದಿರಾಗಾಂಧಿ ವಸತಿ ಶಾಲೆಯಲ್ಲಿ ಕೋವಿಡ್ ಕೇರ್ ಸೆಂಟರ್ ತೆರೆಯಲಾಗಿದೆ. ಸದ್ಯಕ್ಕೆ 30 ಬೆಡ್ ವ್ಯವಸ್ಥೆ ಮಾಡಲಾಗಿದ್ದು, ಇಲ್ಲಿ ಇದುವರೆಗೆ ಸೋಂಕಿತರು ದಾಖಲಾಗಿಲ್ಲ.



ಹಾಸನದ ಚೈಲ್ಡ್ ಹೋಂ ಕಟ್ಟಡದಲ್ಲಿನ ಕೋವಿಡ್ ಕೇರ್ ಸೆಂಟರ್‌ನಲ್ಲಿ ಸೋಂಕಿತರಿಗೆ ಚಿಕಿತ್ಸೆ ನೀಡಲಾಗುತ್ತಿದೆ

ದೂರು, ಸೇವೆ ಸ್ಥಗಿತ

ಮೈಸೂರು: ಕೊಡಗು ಜಿಲ್ಲೆಯ ಆರೈಕೆ ಕೇಂದ್ರಗಳಲ್ಲಿ ಬಿಸಿಯೂಟ, ಬಿಸಿ ನೀರು ಕೊಡುತ್ತಿಲ್ಲ. ಚಾಮರಾಜನಗರ ಜಿಲ್ಲೆಯ ಶಿವಪುರ, ಸಂತೆಮರಹಳ್ಳಿಯಲ್ಲಿ ಸಮರ್ಪಕವಾಗಿ ಊಟ ಕೊಡುತ್ತಿಲ್ಲ ಎಂಬ ದೂರು ಕೇಳಿ ಬಂದಿದೆ.

ಮೈಸೂರಿನಲ್ಲಿ ಖಾಸಗಿ ಆಸ್ಪತ್ರೆಗಳು ನಿರ್ವಹಿಸುತ್ತಿದ್ದ 16 ಕೋವಿಡ್ ಆರೈಕೆ ಕೇಂದ್ರಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬ ಕಾರಣಕ್ಕೆ ಡಿಎಚ್‌ಒ ಡಾ.ಟಿ.ಅಮರನಾಥ್ ಈ ಸೇವೆ ಸ್ಥಗಿತಗೊಳಿಸುವಂತೆ ಆದೇಶಿಸಿದ್ದಾರೆ.

ಆಂಬುಲೆನ್ಸ್ ಆದ ಆಟೊ...

ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ಧುಪತಮಹಾಗಾಂವ್ ಗ್ರಾಮ ಪಂಚಾಯಿತಿಯವರು 18 ಕಿ.ಮೀ. ದೂರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರೋಗಿಗಳನ್ನು ಕರೆದೊಯ್ಯಲು ಆಟೊಗಳನ್ನು ಬಾಡಿಗೆಗೆ ಪಡೆದಿದ್ದಾರೆ. ಆಂಬುಲೆನ್ಸ್ ಕೊರತೆಯೇ ಇದಕ್ಕೆ ಕಾರಣ.

ಎರಡು ಆಟೊಗಳಲ್ಲಿ ಒಂದು ಕೋವಿಡ್ ರೋಗಿಗಳಿಗೆ ಬಳಸಿದರೆ, ಮತ್ತೊಂದನ್ನು ಇತರ ರೋಗಿಗಳಿಗೆ ಬಳಸಲಾಗುತ್ತಿದೆ.

ಕಲಬುರ್ಗಿ ಜಿಲ್ಲೆ ಅಫಜಲಪುರ ತಾಲ್ಲೂಕಿನ ಘತ್ತರಗಿ ಗ್ರಾಮ ಪಂಚಾಯಿತಿ ಒಂದು ಆಂಬುಲೆನ್ಸ್ ಪಡೆದು ಜನರ ಸೇವೆಗೆ ಮೀಸಲಿಟ್ಟಿದೆ.

ಗ್ರಾಮೀಣ ಪ್ರದೇಶದಲ್ಲೂ ಕೋವಿಡ್ ಆರೈಕೆ ಕೇಂದ್ರ

ಮೈಸೂರು: ಹಳ್ಳಿಗಳಲ್ಲಿನ ಸೋಂಕಿತರಲ್ಲಿ ಬಹುತೇಕರಿಗೆ ತಮ್ಮ ಮನೆಗಳಲ್ಲೇ ಹೋಂ ಐಸೋಲೇಷನ್ ಆಗಲು ಸೂಕ್ತ ಸೌಲಭ್ಯಗಳಿಲ್ಲ. ಇಂತಹವರು ಮನೆಯಲ್ಲೇ ಉಳಿಯುವುದರಿಂದ ಸೋಂಕಿತರ ಸಂಖ್ಯೆ ಹೆಚ್ಚುತ್ತಿದೆ ಎಂಬುದನ್ನು ಮನಗಂಡ ಆಯಾ ಜಿಲ್ಲಾಡಳಿತಗಳು ಇದೀಗ ಗ್ರಾಮೀಣ ಪ್ರದೇಶದಲ್ಲೂ ಕೋವಿಡ್ ಆರೈಕೆ ಕೇಂದ್ರಗಳನ್ನು ಆರಂಭಿಸಿವೆ.

ಮೈಸೂರಿನಲ್ಲಿ ಪ್ರಸ್ತುತ 14 ಕೋವಿಡ್ ಆರೈಕೆ ಕೇಂದ್ರ ಕಾರ್ಯ ನಿರ್ವಹಿಸುತ್ತಿದ್ದರೆ, ಹಾಸನದಲ್ಲಿ 27, ಚಾಮರಾಜನಗರದಲ್ಲಿ 16, ಮಂಡ್ಯದಲ್ಲಿ 10, ಕೊಡಗು ಜಿಲ್ಲೆಯಲ್ಲಿ 6 ಕೋವಿಡ್ ಆರೈಕೆ ಕೇಂದ್ರಗಳು ಸೋಂಕಿತರ ಆರೈಕೆ ಮಾಡುತ್ತಿವೆ.

ಸಂಕಷ್ಟದ ಈ ಹೊತ್ತಿನಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶದ ಹಲವರ ಪಾಲಿಗೆ ಇವು ಉಚಿತ ಸೇವೆ ನೀಡುತ್ತಿದ್ದು, 'ಸಂಜೀವಿನಿ'ಯಂತಾಗಿವೆ. ಸರ್ಕಾರಿ ಕೋವಿಡ್ ಆರೈಕೆ ಕೇಂದ್ರ ಹಾಗೂ ಆಸ್ಪತ್ರೆಗಳ ಮೇಲಿನ ಒತ್ತಡವನ್ನು ಕೊಂಚ ತಗ್ಗಿಸುವಲ್ಲಿಯೂ ಸಹಕಾರಿಯಾಗಿವೆ.

ಕೆ.ಆರ್.ನಗರ ಶಾಸಕ ಸಾ.ರಾ. ಮಹೇಶ್, ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಸೋಂಕಿತರ ಆರೈಕೆಗಾಗಿ ಸಾ.ರಾ.ಸ್ನೇಹ ಬಳಗ ಹಾಗೂ ತಾಲ್ಲೂಕು ಆಡಳಿತದ ಸಹಕಾರದಿಂದ ಕಗ್ಗೆರೆ ಬಳಿ 200 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರವೊಂದನ್ನು ಆರಂಭಿಸಿದ್ದಾರೆ.

ವೈದ್ಯರಿಗೆ ಸರ್ಕಾರ ಪಾವತಿಸುವ ₹ 60 ಸಾವಿರ ಸಂಬಳದ ಜೊತೆಗೆ, ತಮ್ಮ ಬಳಗದಿಂದಲೇ ಪ್ರತಿ ವೈದ್ಯರಿಗೂ ಮಾಸಿಕ ₹ 40 ಸಾವಿರವನ್ನು ಗೌರವಧನವಾಗಿ ಕೊಡುತ್ತಿದ್ದಾರೆ. ಆಮ್ಲಜನಕದ ಕಾನ್ಸನ್‌ಟ್ರೇಟರ್ ಸೌಲಭ್ಯವೂ ಇಲ್ಲಿದೆ.

ಹಾಸನದ ಹೊಸಲೈನ್ ರಸ್ತೆಯಲ್ಲಿರುವ ಈದ್ಗಾ ಮೈದಾನದ ಬಳಿಯ ಚೈಲ್ಡ್ ಹೋಂ ಕಟ್ಟಡದಲ್ಲಿ ಕೆಲವೊಂದು ಮುಸ್ಲಿಂ ಸಂಘಟನೆಗಳು ಜಿಲ್ಲಾಡಳಿತದ ಸಹಭಾಗಿತ್ವದಲ್ಲಿ 100 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರ ಆರಂಭಿಸಿ ಸೋಂಕಿತರಿಗೆ ಚಿಕಿತ್ಸೆ ನೀಡುತ್ತಿವೆ. ದಾನಿಗಳು ಸಹ ಈ ಕೇಂದ್ರಕ್ಕೆ ನೆರವಾಗಿದ್ದಾರೆ. ಆಮ್ಲಜನಕ ಸಹಿತ ಹಾಸಿಗೆಗಳಿವೆ. 50 ಯುವಕರು–ಹಿರಿಯರನ್ನೊಳಗೊಂಡ ತಂಡ, ಸ್ವಯಂ ಸೇವಕರಾಗಿ ಕೆಲಸ ಮಾಡುತ್ತಿದೆ.

ಕೊಡಗು ಜಿಲ್ಲೆಯ ಗೋಣಿಕೊಪ್ಪಲಿನಲ್ಲಿ ವಿವೇಕಾನಂದ ಫೌಂಡೇಷನ್‌ನ ಲೋಪಾಮುದ್ರ ಕರುಣಾ ಟ್ರಸ್ಟ್, ಆರೈಕೆ ಕೇಂದ್ರವೊಂದನ್ನು ಆರಂಭಿಸಿದೆ. ಜಿಲ್ಲಾಡಳಿತ ಸಾಥ್ ನೀಡಿದೆ. 30 ಹಾಸಿಗೆ ಸಾಮರ್ಥ್ಯದ ಈ ಕೇಂದ್ರದಲ್ಲಿ ಆಮ್ಲಜನಕ ಸಹಿತ ಹಾಸಿಗೆಯ ಸೌಲಭ್ಯವೂ ಇದೆ. ಟ್ರಸ್ಟ್‌ನಡಿ ಕಾರ್ಯ ನಿರ್ವಹಿಸುತ್ತಿದ್ದ ಆಸ್ಪತ್ರೆಯನ್ನೇ ಕೋವಿಡ್ ಆರೈಕೆ ಕೇಂದ್ರವನ್ನಾಗಿ ಪರಿವರ್ತಿಸಿ, ಸೋಂಕಿತರಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಮೈಸೂರು ತಾಲ್ಲೂಕಿನ 7 ಗ್ರಾಮ ಪಂಚಾಯಿತಿ ವ್ಯಾಪ್ತಿಯ 56 ಗ್ರಾಮಗಳನ್ನು ಕೋವಿಡ್ ಮುಕ್ತ ಗ್ರಾಮಗಳನ್ನಾಗಿಸಲು ಗ್ರಾಮ್ (ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವೋಕಸಿ ಮೂವ್‌ಮೆಂಟ್) ಸ್ವಯಂ ಸೇವಾ ಸಂಸ್ಥೆ, ಆಂದೋಲನವೊಂದನ್ನು ರೂಪಿಸಿದೆ. ಇದಕ್ಕೆ ಗುರುವಾರ (ಮೇ 20) ಚಾಲನೆ ನೀಡಿದೆ.

ಗ್ರಾಮೀಣರಿಗೆ ಸಿಗದ ಆರೋಗ್ಯ ಭಾಗ್ಯ

ಒಂದನೇ ಪುಟದಿಂದ...

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸರ್ಕಾರದ ಯೋಜನೆಗಳಾದ ಪೋಲಿಯೊ, ಟಿ.ಬಿ. ಮಾತ್ರೆ ವಿತರಣೆ, ದಡಾರದಂತಹ ಚುಚ್ಚುಮದ್ದು ಕೊಡುವುದಕ್ಕೆ ಸೀಮಿತವಾಗಿವೆ. ತಜ್ಞ ವೈದ್ಯರಿಲ್ಲ. ಕೆಲವೆಡೆ ವೈದ್ಯರೇ ಇಲ್ಲ. ಕೆಲವು ಆರೋಗ್ಯ ಕೇಂದ್ರಗಳಲ್ಲಿ ಆಂಬುಲೆನ್ಸ್‌ಗಳಿವೆ. ಆದರೆ, ನಿರ್ವಹಣೆ ಅಷ್ಟಕಷ್ಟೇ. ತುರ್ತು ಸಂದರ್ಭಗಳಲ್ಲಿ ಸಕಾಲಕ್ಕೆ ಬರುವ ಸಾಧ್ಯತೆ ತೀರ ಕಮ್ಮಿ. ಬಂದರೂ ದೂರದ ಊರುಗಳಿಗೆ ಕ್ರಮಿಸಲು ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ಈ ಅಮೂಲ್ಯ ಅವಧಿಯಲ್ಲಿ ಜೀವ ಹಾನಿ ಸಾಧ್ಯತೆಯೂ ಇರುತ್ತದೆ. ಲಾಕ್‌ಡೌನ್ ಘೋಷಿಸಿದ ಬಳಿಕ ಸಾರಿಗೆ ಸಂಪೂರ್ಣ ಸ್ಥಗಿತಗೊಂಡಿರುವುದರಿಂದ ಜನ ಆರೋಗ್ಯ ಕೇಂದ್ರಗಳಿಗೆ ಹೋಗಲು ಸಾಧ್ಯವಾಗುತ್ತಿಲ್ಲ.

ವೈದ್ಯರಿದ್ದಲ್ಲಿ ಸಣ್ಣಪುಟ್ಟ ರೋಗಗಳಿಗಷ್ಟೇ ಚಿಕಿತ್ಸೆ ಸಾಧ್ಯ. ಸ್ವಲ್ಪ ಗಂಭೀರ ಸ್ವರೂಪದ ತೊಂದರೆಗಳಿದ್ದರೂ ಜಿಲ್ಲಾ ಕೇಂದ್ರದ ಆಸ್ಪತ್ರೆಗೆ ಹೋಗುವಂತೆ ಶಿಫಾರಸು ಮಾಡುತ್ತಾರೆ. ಇನ್ನು ರಾತ್ರಿ ವೇಳೆ ಯಾರೊಬ್ಬರೂ ಸಿಗುವುದಿಲ್ಲ. ರಾತ್ರಿ ಏನಾದರೂ ಆರೋಗ್ಯ ಸಮಸ್ಯೆ ಉಂಟಾದರೆ ದೇವರೇ ಕಾಪಾಡಬೇಕು.

ಈಗಂತೂ ಕೋವಿಡ್ ಪರೀಕ್ಷೆ ಭೀತಿಯಿಂದ ಮಂದಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೋಗುವುದಕ್ಕೆ ಹಿಂಜರಿಯುತ್ತಿದ್ದಾರೆ. ತಾವಾಗಿಯೇ ಮಾತ್ರೆ ಖರೀದಿಸಿ ಸೇವಿಸುವುದು ಅಥವಾ ಲಭ್ಯವಿರುವ ಖಾಸಗಿ ವೈದ್ಯರ ಬಳಿ ಚಿಕಿತ್ಸೆ ಪಡೆಯುವುದು ಸಾಮಾನ್ಯವಾಗಿ ಕಂಡುಬರುತ್ತಿದೆ.



ಕೋವಿಡ್ ಲಕ್ಷಣಗಳು ಗೋಚರಿಸಿದಾಗ ಎಲ್ಲರೂ ಪರೀಕ್ಷೆ ಮಾಡಿಸಿಕೊಳ್ಳಬೇಕು. ನಂತರ ಪ್ರತ್ಯೇಕವಾಸ ಅಥವಾ ಆಸ್ಪತ್ರೆ ವಾಸದ ನಿರ್ಧಾರ ಮಾಡಬೇಕು. ರೋಗ ಉಲ್ಬಣಗೊಂಡ ಮೇಲೆ ಆಸ್ಪತ್ರೆಗೆ ಬಂದರೆ ಪ್ರಯೋಜನ ಆಗುವುದಿಲ್ಲ. ಕೋವಿಡ್ ಲಸಿಕೆ ಪಡೆಯುವುದು ಈಗಿನ ಅತ್ಯಂತ ತುರ್ತು

ಡಾ.ಸಿ.ಎನ್. ಮಂಜುನಾಥ್ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕರು ಮತ್ತು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ

ಆಂಬುಲೆನ್ಸ್ ಸಿಕ್ಕರೆ ಅದೃಷ್ಟ

ಬೆಳಗಾವಿ ಜಿಲ್ಲೆಯ ಕಕಮರಿ ಆಸ್ಪತ್ರೆಯಲ್ಲಿ ವೈದ್ಯರು ಸೇರಿ ಆರು ಮಂದಿ ಸಿಬ್ಬಂದಿ ಇರಬೇಕಿತ್ತು. ಆದರೆ, ಮೂವರಷ್ಟೆ ಇದ್ದಾರೆ. ಹೀಗಾಗಿ, ಬಹುತೇಕರು ಗ್ರಾಮದಲ್ಲೇ ಲಭ್ಯವಿರುವ ಖಾಸಗಿ ವೈದ್ಯರ ಬಳಿಗೆ ಹೋಗುತ್ತಾರೆ. ಈ ಆರೋಗ್ಯ ಕೇಂದ್ರದ ವ್ಯಾಪ್ತಿಯ ಕೊಟ್ಟಲಗಿ ಮತ್ತು ರಾಮತೀರ್ಥ ಗ್ರಾಮದವರು ತುರ್ತು ಅಥವಾ ಹೆಚ್ಚಿನ ಚಿಕಿತ್ಸೆ ಬೇಕಾದಲ್ಲಿ 30 ಕಿ.ಮೀ. ದೂರದ ಅಥಣಿ ಅಥವಾ 70 ಕಿ.ಮೀ. ದೂರದ ವಿಜಯಪುರಕ್ಕೆ ಹೋಗಬೇಕು. ಬೆಳಗಾವಿ ಜಿಲ್ಲಾಸ್ಪತ್ರೆಗೆ ಬರಬೇಕಾದರೆ 140 ಕಿ.ಮೀ. ಕ್ರಮಿಸಬೇಕು! ಆಂಬುಲೆನ್ಸ್ ಸಿಕ್ಕರೆ ಅದೃಷ್ಟ.

ಯುದ್ಧ ಕಾಲದಲ್ಲಿ ಸಿದ್ಧತೆ ಆರಂಭ

ಒಂದನೇ ಪುಟದಿಂದ...

ಆದರೆ, ರಾಜ್ಯದ ಬಹುಪಾಲು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಿತಿ ಶೋಚನೀಯವಾಗಿದೆ. ವೈದ್ಯರು ಮತ್ತು ಸಿಬ್ಬಂದಿಯ ಕೊರತೆ ತಾಂಡವವಾಡುತ್ತಿದೆ. ಈ ಕೇಂದ್ರಗಳನ್ನು ಕೋವಿಡ್ ಆಸ್ಪತ್ರೆಗಳನ್ನಾಗಿ ಪರಿವರ್ತಿಸುವುದು ಸಾಧ್ಯವೇ ಎಂಬ ಪ್ರಶ್ನೆ ಆರೋಗ್ಯ ಇಲಾಖೆಯನ್ನೂ ಕಾಡುತ್ತಿದೆ.

ಸಿಬ್ಬಂದಿ ಇಲ್ಲದೆ ಹೈರಾಣ: 'ಹೆಚ್ಚಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿಯೇ ಇಲ್ಲ. ವೈದ್ಯರ ಜತೆ ಒಬ್ಬ ಸ್ಟಾಫ್ ನರ್ಸ್, ಒಬ್ಬ ಫಾರ್ಮಸಿಸ್ಟ್, ಒಬ್ಬ ಗುಮಾಸ್ತ, ಒಬ್ಬ ಡೇಟಾ ಎಂಟ್ರಿ ಆಪರೇಟರ್, ಕನಿಷ್ಠ ಇಬ್ಬರು 'ಡಿ' ದರ್ಜೆ ನೌಕರರು ಬೇಕು. ಆದರೆ, ಕೆಲವು ಕಡೆ ನರ್ಸ್‌ಗಳೇ ಇಲ್ಲ. ಡೇಟಾ ಎಂಟ್ರಿ ಆಪರೇಟರ್‌ಗಳಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆಯೇ ವಿರಳ. ವೈದ್ಯರೇ ಎಲ್ಲ ಕೆಲಸವನ್ನೂ ಮಾಡಬೇಕಾದ ಸ್ಥಿತಿ ಇದೆ' ಎನ್ನುತ್ತಾರೆ ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರು.

ಕೋವಿಡ್ ಎರಡನೇ ಅಲೆ ಆರಂಭವಾದ ಬಳಿಕ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ ಖಾಲಿ ಹುದ್ದೆಗಳ ಭರ್ತಿಗೆ ಕಸರತ್ತು ನಡೆಸುತ್ತಿದೆ. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್‌ಎಚ್‌ಎಂ) ಮೂಲಕ ಒಂದಷ್ಟು ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದರೆ, ಸ್ಥಳೀಯವಾಗಿ ಗುತ್ತಿಗೆ ಮೂಲಕವೂ ಸಿಬ್ಬಂದಿ ನೇಮಕಕ್ಕೆ ಪ್ರಯತ್ನಿಸಲಾಗುತ್ತಿದೆ ಎಂದು ಆರೋಗ್ಯ ಇಲಾಖೆಯ ಮೂಲಗಳು ತಿಳಿಸಿವೆ.

ಪಿಎಚ್‌ಸಿಗಳ ಪರಿವರ್ತನೆ ಅಸಾಧ್ಯ


'ಸಮುದಾಯ ಆರೋಗ್ಯ ಕೇಂದ್ರಗಳನ್ನು ಕೋವಿಡ್ ಆಸ್ಪತ್ರೆಗಳನ್ನಾಗಿ ಪರಿವರ್ತಿಸಬಹುದು. ಆದರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪರಿವರ್ತಿಸಲು ಸಾಧ್ಯವಿಲ್ಲ. ಕೋವಿಡ್ ಆರೈಕೆ ಕೇಂದ್ರಗಳ ರೂಪದಲ್ಲಿ ಬೇಕಾದರೆ ಬಳಸಿಕೊಳ್ಳಬಹುದು' ಎನ್ನುತ್ತಾರೆ ಜಿಲ್ಲಾ ಆರೋಗ್ಯಾಧಿಕಾರಿ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಹಿರಿಯ ವೈದ್ಯ ಡಾ. ರಾಮಚಂದ್ರ ಬಾಯರಿ.

ಕೋವಿಡ್ ಆರೈಕೆ ಕೇಂದ್ರಗಳಿಗೆ 24 ಗಂಟೆಗಳ ಕಾಲ ವೈದ್ಯರು, ನರ್ಸ್‌ಗಳ ಸೇವೆ ಮತ್ತು ಆಮ್ಲಜನಕ ಪೂರೈಕೆಯ ವ್ಯವಸ್ಥೆ ಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇರುವುದೇ ಆರು ಹಾಸಿಗೆಗಳು. ಅವುಗಳನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ಬಳಸುವುದು ಅಸಾಧ್ಯ ಎಂದು ಅವರು ಹೇಳುತ್ತಾರೆ.

₹ 4ಲಕ್ಷ ಸಂಬಳಕ್ಕೂ ವೈದ್ಯರು ಬರುತ್ತಿಲ್ಲ!

ಬಳ್ಳಾರಿ: ಜಿಂದಾಲ್ ತಾತ್ಕಾಲಿಕ ಆಸ್ಪತ್ರೆಯಲ್ಲಿ ವೈದ್ಯರ ಹುದ್ದೆ ಭರ್ತಿಮಾಡಲು ಮರು ಪ್ರಕಟಣೆ ನೀಡಿರುವ ಜಿಲ್ಲಾಡಳಿತ ವೇತನವನ್ನು ₹2.50 ಲಕ್ಷದಿಂದ ₹4 ಲಕ್ಷಕ್ಕೆ ಏರಿಸಿದೆ. ಗುತ್ತಿಗೆ ಅವಧಿಯನ್ನು ಮೂರು ತಿಂಗಳಿಂದ ಹನ್ನೊಂದು ತಿಂಗಳಿಗೆ ಹೆಚ್ಚಿಸಿದೆ. ಸಾಮಾನ್ಯ ವೈದ್ಯರ ವೇತನವನ್ನು ₹50 ಸಾವಿರದಿಂದ ₹75 ಸಾವಿರಕ್ಕೆ ಹೆಚ್ಚಿಸಿದೆ. ಊಟ ವಸತಿ ಸಹಿತ ಈ ಉದ್ಯೋಗಾವಕಾಶ ನೀಡಿದ್ದರೂ ಅರ್ಜಿಗಳು ಬರುತ್ತಿಲ್ಲ ಎಂದು ಜಿಲ್ಲಾಡಳಿತ ಅಸಹಾಯಕತೆ ವ್ಯಕ್ತಪಡಿಸುತ್ತದೆ.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 23-5-1996

• ವಿರೋಧ ಕಡೆಗಣಿಸಿ ರಂಗಕ್ಕೆ ಕಾಂಗ್ರೆಸ್ ಬೆಂಬಲ

ನವದೆಹಲಿ, ಮೇ 22 (ಯುಎನ್‌ಐ)– ಕೇಂದ್ರದಲ್ಲಿ ಸರ್ಕಾರ ರಚಿಸಲು ಸಂಯುಕ್ತ ರಂಗಕ್ಕೆ ಬೆಂಬಲ ನೀಡುವ ಬಗ್ಗೆ ಪಕ್ಷದ ಕೆಲವು ರಾಜ್ಯ ಘಟಕಗಳು ವಿರೋಧ ವ್ಯಕ್ತಪಡಿಸಿದ್ದರೂ ಅದನ್ನು ಕಡೆಗಣಿಸಿ ಸಂಯುಕ್ತ ರಂಗ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡಲು ಕಾಂಗ್ರೆಸ್ ಪಕ್ಷ ನಿರ್ಧರಿಸಿದೆ.

'ವಿರೋಧ ಅನಿರೀಕ್ಷಿತ ಅಲ್ಲ. ಆದರೆ ಈಗ ನಾವು ಅನಿಶ್ಚಿತ ಸ್ಥಿತಿಯನ್ನು ಎದುರಿಸುತ್ತಿರುವುದರಿಂದ ಇಂತಹ ಘಟನೆಗಳು ನಡೆಯುತ್ತವೆ' ಎಂದು ಪಕ್ಷದ ವಕ್ತಾರ ವಿ.ಎನ್. ಗಾಡ್ಗೀಳ್ ಅವರು ಹೇಳಿದರು.

50 ವರ್ಷಗಳ ಹಿಂದೆ — ಭಾನುವಾರ, 23-5-1971

• ಬಾಂಗ್ಲಾದೇಶ ನಿರಾಶ್ರಿತರಿಗೆ ಎಲ್ಲ ನೆರವು: ಜೆ.ಪಿ.ಗೆ ಟಿಟೋ ಆಶ್ವಾಸನೆ

ಬೆಲ್‌ಗ್ರೇಡ್, ಮೇ 22– ಗಡಿದಾಟಿ ಭಾರತಕ್ಕೆ ಬಂದಿರುವ ಬಾಂಗ್ಲಾದೇಶದ ನಿರಾಶ್ರಿತರಿಗೆ ಸಾಧ್ಯವಾದ ಎಲ್ಲ ನೆರವು ನೀಡುವುದಾಗಿ ಯುಗೋಸ್ಲಾವಿಯ ಅಧ್ಯಕ್ಷ ಟಿಟೋ ಅವರು ತಮ್ಮನ್ನು ಭೇಟಿ ಮಾಡಿದ ಸರ್ವೋದಯ ನಾಯಕ ಜಯಪ್ರಕಾಶ್ ನಾರಾಯಣ್ ಅವರಿಗೆ ಆಶ್ವಾಸನೆ ನೀಡಿದ್ದಾರೆ.

ಪೂರ್ವ ಬಂಗಾಳದಲ್ಲಿಯ ಪರಿಸ್ಥಿತಿ ಬಗ್ಗೆ ತೀವ್ರ ಆತಂಕವನ್ನೂ ಯುಗೋಸ್ಲಾವಿಯ ಅಧ್ಯಕ್ಷರು ವ್ಯಕ್ತಪಡಿಸಿದ್ದಾರೆ. ಶ್ರೀ ಜಯಪ್ರಕಾಶ್ ನಾರಾಯಣ್, ಯುಗೋಸ್ಲಾವಿಯ ಅಧ್ಯಕ್ಷರನ್ನು ಭೇಟಿಯಾಗಿ ಐವತ್ತು ನಿಮಿಷಗಳ ಕಾಲ ಮಾತನಾಡಿದರು.

ದಿನ ಭವಿಷ್ಯ

ಭಾನುವಾರ 23 ಮೇ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಕೃತ್ತಿಕಾ ದ್ವಾದಶೀ ಗಂ. 45-47 (ರಾ. 12-19) ಭಾನುವಾರ ನಿತ್ಯ ನಕ್ಷತ್ರ ಹಸ್ತ ಗಂ. 6-50 (ಬೆ. 8-45) ಸಿದ್ಧಿ ನಾಮ ಯೋಗ ಗಂ 15-8 ಬವ ಕರಣ ಗಂ. 18-22 ವಿಷ ಗಂ. 25-39 ಅಮೃತ ಗಂ. 48-15 ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 5-57 ಸೂರ್ಯಾಸ್ತ: 6-36 ಅದೃಷ್ಟ ಸಂಖ್ಯೆ 5 6

ಮೇಷ: ವಂಚಕರ ಜಾಲದಿಂದ ಮೋಸಹೋಗದಿರಲು ವ್ಯವಹಾರದಲ್ಲಿ ಜಾಗರೂಕತೆ ಅಗತ್ಯ. ಸೋಲಿನ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ, ಧೈರ್ಯದಿಂದ ಮುನ್ನುಗ್ಗಿದಲ್ಲಿ ಯಶಸ್ಸು.

ವೃಷಭ: ಗುಣಾವಗುಣಗಳನ್ನು ಅರಿಯುವಲ್ಲಿ ಗೊಂದಲ. ಆದರೂ ನಿಧಾನವಾಗಿ ಯೋಚಿಸಿ ಕಾರ್ಯ ನಿರ್ವಹಿಸುವುದು ಯಶಸ್ಸು. ಮಾನಸಿಕ ಶಾಂತಿಗಾಗಿ ಪ್ರವಾಸ ಮಾಡುವ ಸಾಧ್ಯತೆ.

ಮಿಥುನ: ಇಂದು ಕೆಲವು ಉತ್ತಮ ಸನ್ನಿವೇಶಗಳು ನಿಮ್ಮ ಪಾಲಿಗೆ ದೊರಕಲಿವೆ. ಉನ್ನತ ಸ್ಥಾನಮಾನಗಳನ್ನು ಪಡೆಯುವ ಸಾಧ್ಯತೆ. ಯಶದ ಅಮಲಿನಿಂದ ಬೀಗದೆ ಸಮಾಧಾನ ಚಿತ್ತವನ್ನು ಕಾಪಾಡಿಕೊಳ್ಳುವುದು ಉತ್ತಮ.

ಕರ್ಕಾಟಕ: ನಿಮ್ಮ ಹೆಸರನ್ನು ದುರುಪಯೋಗ ಪಡಿಸಿಕೊಂಡು ಅನ್ಯರು ಲಾಭ ಪಡೆಯುವ ವಿಚಾರದಲ್ಲಿ ಎಚ್ಚರಿಕೆ ಅಗತ್ಯ. ಸಾರ್ವಜನಿಕ ಜೀವನದಲ್ಲಿ ಉನ್ನತ ಸ್ಥಾನವನ್ನು ಹೊಂದುವ ಸದಾವಕಾಶ ನಿಮ್ಮದಾಗಿದೆ.

ಸಿಂಹ: ಸುತ್ತಮುತ್ತಲಿನವರ ಬಗೆಗೆ ಸೂಕ್ಷ್ಮ ಮನಸಿನವರಾಗಬೇಕು. ಉದ್ವೇಗಕ್ಕೊಳಗಾಗಿ ಅನಾಹುತ ತಂದುಕೊಳ್ಳುವ ಸಾಧ್ಯತೆ. ಸಮಾಧಾನದಿಂದ ಎದುರಾದ ಪರಿಸ್ಥಿತಿಯನ್ನು ನಿಭಾಯಿಸಿದಲ್ಲಿ ಉತ್ತಮ ಮಾರ್ಗ ನಿಮ್ಮದಾಗಲಿದೆ.

ಕನ್ಯಾ: ದಿನವಿಡೀ ಸಂಭ್ರಮಿಸುವ ಯೋಗ ನಿಮ್ಮದಾಗಲಿದೆ. ಅತಿಯಾದ ನಡವಳಿಕೆಯಿಂದಾಗಿ ನಿಮ್ಮವರಿಂದಲೇ ನಿಮಗೆ ಕೆಟ್ಟ ಹೆಸರು ಬರುವ ಸಾಧ್ಯತೆ. ತೂಗಿ ನೋಡಿ ಹಿತೈಷಿಗಳ ಮಾತುಗಳಿಗೆ ಮನ್ನಣೆ ನೀಡುವುದು ಉತ್ತಮ.

ತುಲಾ: ಉತ್ತಮ ಧನಾಗಮನದ ಅದೃಷ್ಟ ಕಂಡುಬರುತ್ತಿದೆ. ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಲಾಭ. ಹಿರಿಯರ ಆರೋಗ್ಯದ ವಿಚಾರದಲ್ಲಿ ಕೊಂಚ ಆತಂಕ ಮೂಡುವ ಲಕ್ಷಣ. ಸಂಜೆಯ ವೇಳೆಗೆ ಎಲ್ಲವೂ ನಿರಾಳ.

ವೃಶ್ಚಿಕ: ಪಾಲು ಬಂಡವಾಳದ ವ್ಯವಹಾರದಿಂದಾಗಿ ಉತ್ತಮ ಲಾಭ. ಹೊಸ ಉದ್ಯಮಗಳಿಗೆ ಚಿಂತನೆ. ಆರ್ಥಿಕ ಅನುಕೂಲತೆಗಳು ತಾನಾಗಿಯೇ ಕೂಡಿಬರುವ ಸಾಧ್ಯತೆ. ಗೆಳೆಯರಿಂದ ಅನುಕೂಲ.

ಧನು: ಮಹಿಳೆಯರಿಗೆ ಸಾಮಾಜಿಕವಾಗಿ ಉತ್ತಮ ಸ್ಥಾನ ದೊರೆಯುವ ಸಾಧ್ಯತೆ. ಅತೀ ಉತ್ಸಾಹದಿಂದಾಗಿ ಕುಟುಂಬದ ಬಗ್ಗೆ ನಿರ್ಲಕ್ಷ್ಯ ತೋರುವುದು ಸರಿಯಲ್ಲ. ಮಕ್ಕಳ ವಿವಾಹದ ಬಗ್ಗೆ ವೆಚ್ಚ ಮಾಡುವುದು ಅನಿವಾರ್ಯ.

ಮಕರ: ವಿರೋಧಿಗಳೂ ನಿಮ್ಮ ಪಾಲಿಗೆ ಮಿತ್ರರಾಗಿ ಪರಿಣಮಿಸಲಿದ್ದಾರೆ. ಉತ್ಸಾಹದಲ್ಲಿ ಮೈಮರೆಯದೆ ಎಚ್ಚರಿಕೆಯ ನಡೆ ಅಗತ್ಯ. ಉದ್ಯೋಗ/ ಅಧಿಕಾರ ಪ್ರಾಪ್ತಿಯಾಗುವ ಲಕ್ಷಣ. ದೇವತಾ ದರ್ಶನ ಮಾಡುವ ಸಾಧ್ಯತೆ.

ಕುಂಭ: ನಿಮ್ಮ ನಿರೀಕ್ಷೆಯು ಹುಸಿಗೊಳ್ಳುವ ಸಾಧ್ಯತೆ. ಇಂದಿನ ನಿಮ್ಮ ಹಿನ್ನಡೆಯ ಬಗ್ಗೆ ಧೃತಿಗೆಡಬೇಕಾಗಿಲ್ಲ. ಆತ್ಮವಿಶ್ವಾಸದಿಂದ ಕಾರ್ಯತತ್ಪರರಾಗುವುದು ಶ್ರೇಯಸ್ಕರ. ಸಂಗಾತಿಯಿಂದ ಸಮಾಧಾನ ಮತ್ತು ಸಹಕಾರ.

ಮೀನ: ಒತ್ತಡದ ಜೀವನ ನಿಮ್ಮದಾಗಬಹುದು. ಆರೋಗ್ಯದ ಕುರಿತು ಹೆಚ್ಚಿನ ನಿಗಾ ವಹಿಸುವುದು ಉತ್ತಮ. ಹಣಕಾಸಿನ ವಿಚಾರದಲ್ಲಿ ಉತ್ತಮ ದಿನ. ಧಾರ್ಮಿಕ ಸಮಾರಂಭಗಳಲ್ಲಿ ಭಾಗವಹಿಸುವ ಮೂಲಕ ನೆಮ್ಮದಿ.


ನಿಮ್ಮ ಜನ್ಮದಿನ 23-ಮೇ ಈ ದಿನವು ಅತ್ಯಂತ ಶುಭಕರವಾಗಿದ್ದು, ನೀವು ಕೈಗೊಳ್ಳಲಿರುವ ಉದ್ಯಮವು ಬದುಕಿಗೊಂದು ನಾಂದಿಯಾಗಲಿದೆ. ಸ್ವಂತ ಉದ್ಯೋಗ ರಂಗದಲ್ಲಿರುವವರಿಗೆ ಉತ್ತಮ ಅವಕಾಶಗಳು ಲಭ್ಯವಾಗಲಿವೆ. ವಾತ ಪಿತ್ಥಗಳ ಸಮಸ್ಯೆಗಳಿಂದ ಬಳಲುವ ಸಾಧ್ಯತೆ ಕಂಡುಬರುವುದು. ವಿವಾಹಾಕಾಂಕ್ಷಿಗಳಿಗೆ ವಿವಾಹ ಭಾಗ್ಯ ಕಂಡುಬರುವುದು.

ಪದಬಂಧ 4605

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಿತ್ತಲಲ್ಲಿರುವ ತೆಳು ಸೀರೆ (3)
3.ಮನವನ್ನು ಕೊನೆಗಿಟ್ಟು ಶಾಂತಪಡಿಸುವಿಕೆ (3)
5.ಬೇರೆ ಬೇರೆ ಬಣ್ಣಗಳ ಬೆರಕೆ (5)
6.ಶರಣ ಹಿಡಿದಿರುವ ಬಾಣ (2)
8.ಮಾತು ಬಾರದವನು (2)
9.ಈ ಹತೋಟಿಗೆ ಸಿಕ್ಕದ ಕಪಿ ಲಂಕೆ ಹಾರಿತ್ತಂತೆ! (2)
10.ಕಲಾವಿದನ ಮನೆಬಾಗಿಲು (2)
14.ಸೇವಕರ ಸೇವಕ (5)
15.ಕತ್ತರಿಸುವ ಸಾಧನ (3)
16.ಜೀರುಗುಣಿಕೆ ಅಥವಾ ಬಂಧ (3)

ಮೇಲಿಂದ ಕೆಳಕ್ಕೆ
1.ಬೇರೆಯವರ ಅಧೀನದಲ್ಲಿರುವಿಕೆ (4)
2.ರಾಮನ ಮಗ ಹಿಡಿದಿರುವ ಉಪ್ಪು (3)
3.ಬಾಣವಿರುವ ಸಮುದ್ರ (3)
4.ಬೆಂಬಿಡದೆ ಕಾಡುವವನನ್ನು ಹೀಗೆನ್ನುವರು (4)
7.ಸಿಡುಬಿನ ಹಾಲು (3)
8.ಗಣಪನ ವಾಹನ (3)
9.ಮಂಗಳ ಗ್ರಹವಿದು (4)
11.ಬಲಾತ್ಕಾರದ ಆಡಳಿತ (4)
12.ಈತ ದಾನಶೀಲನಾದವನು (3)
13.ಅಸ್ಪಷ್ಟವಾದುದು (3)



4604ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಜಮಾಬಂದಿ 5.ನಗದು 6.ವಾತಾಯನ 8.ಗತ್ಯಂತರ 12.ಪ್ರಕಟಿಸು 14.ಅನುವಾದ 15.ಬಾಹಿರ 16.ವಿದ್ಯಮಾನ

ಮೇಲಿಂದ ಕೆಳಕ್ಕೆ: 1.ಅನಕ್ಷರಸ್ಥ 2.ಚದುರಂಗ 3.ಜನಿವಾರ 4.ದಿವಾನ 7.ಯತ್ನ 9.ತವಕ 10.ವಾತಾವರಣ 11.ಹೇನು 12.ಪ್ರದರ್ಶನ 13. ಸುಮಬಾಣ 14.ಅಡವಿ

ಸುಡೊಕು 4991

							5	
		7	5		6	3		2
	8	5					6	
	2					9		4
			2	4	7			
	7					5		8
		9			8		4	
4		2					8	1
	6		4		2	7		

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4990 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೇರಳ: ಶೈಲಜಾ ಟೀಚರ್ ಕೈಬಿಟ್ಟಿದ್ದು ಸರಿಯೆ?


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದಲ್ಲಿ ಪಿಣರಾಯಿ ವಿಜಯನ್ ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ಎರಡನೇ ಬಾರಿಗೆ ಅಧಿಕಾರಕ್ಕೆ ಬಂದಿದೆ. ವಿಜಯನ್ ಹೊರತಾಗಿ ಎಡ ಪಕ್ಷಗಳಲ್ಲಿನ ಎಲ್ಲ ಸಚಿವರನ್ನೂ ಈ ಬಾರಿ ಕೈಬಿಡಲಾಗಿದೆ. ಕೋವಿಡ್ ನಿಯಂತ್ರಣ, ಚಿಕಿತ್ಸೆ ಮತ್ತು ಆರೋಗ್ಯ ವ್ಯವಸ್ಥೆ ಸುಧಾರಣೆಯಲ್ಲಿ ಮೊದಲ ಕಳೆದ ಅವಧಿಯಲ್ಲಿ ಗಣನೀಯ ಕೆಲಸ ಮಾಡಿದ್ದ ಅಲ್ಲಿನ ಆರೋಗ್ಯ ಸಚಿವೆ ಶೈಲಜಾ ಟೀಚರ್ ಕುರಿತು ಜಗತ್ತಿನ ಮೂಲೆ ಮೂಲೆಗಳಿಂದಲೂ ಮೆಚ್ಚುಗೆ ವ್ಯಕ್ತವಾಗಿತ್ತು. ಈ ಬಾರಿ ಅವರನ್ನು ಸಂಪುಟದಿಂದ ಹೊರಗಿಟ್ಟಿರುವುದು ಚರ್ಚೆಗೆ ಗ್ರಾಸವಾಗಿದೆ.

ಇದೇ ಬೆಳವಣಿಗೆ ಕುರಿತು 'ಸಚಿವ ಸಂಪುಟದಿಂದ ಶೈಲಜಾ ಟೀಚರ್ ಅವರನ್ನು ಕೈಬಿಟ್ಟಿದ್ದು ಸರಿಯೇ' ಎಂಬ ವಿಷಯದಲ್ಲಿ 'ಪ್ರಜಾವಾಣಿ' ಶನಿವಾರ ನಡೆಸಿದ ಫೇಸ್ ಬುಕ್ ಸಂವಾದದಲ್ಲಿ ಮೂವರು ಅತಿಥಿಗಳು ಹಂಚಿಕೊಂಡಿರುವ ಅಭಿಪ್ರಾಯದ ಸಂಕ್ಷಿಪ್ತ ರೂಪ ಇಲ್ಲಿದೆ.

ಪ್ರಜಾವಾಣಿ ಸಂವಾದ

ಚುನಾವಣೆಗೂ ಮೊದಲಿನ ನಿರ್ಧಾರ



ಶೈಲಜಾ ಟೀಚರ್ ಒಬ್ಬರನ್ನೇ ಸಂಪುಟದಿಂದ ಕೈಬಿಟ್ಟಿಲ್ಲ. 17 ಜನರನ್ನು ಕೈಬಿಡಲಾಗಿದೆ. ಸಮರ್ಥವಾಗಿ ಹಣಕಾಸು, ಆಹಾರ ಖಾತೆಗಳನ್ನು ನಿಭಾಯಿಸಿದವರನ್ನೂ ಕೈಬಿಡಲಾಗಿದೆ. ಕೋವಿಡ್ ಎದುರಿಸಲು ಎಂಟರಿಂದ ಹತ್ತು ಸಚಿವರ ತಂಡ ಒಟ್ಟಾಗಿ ಕೆಲಸ ಮಾಡಿದೆ. ಈ ತಂಡದ ಹಿಂದೆ ವೈದ್ಯರು ಸೇರಿದಂತೆ ಹಲವರು ಇದ್ದರು. ಚುನಾವಣೆ ಆದ ಬಳಿಕ ಈ ತೀರ್ಮಾನ ಕೈಗೊಂಡಿಲ್ಲ. ಚುನಾವಣೆಗೂ ಮೊದಲೇ ಇದನ್ನು ಘೋಷಿಸಲಾಗಿತ್ತು. ವ್ಯಕ್ತಿಕೇಂದ್ರಿತವಾಗಿ ಹೇಳಬೇಕಾದರೆ, ಇಂತಹದ್ದೊಂದು ಆಘಾತಕ್ಕೆ ನಾನು ತಯಾರಾಗಿದ್ದೆ.

ಜನಾಭಿಪ್ರಾಯ ಆಧರಿಸಿ ಅತ್ಯಂತ ಪ್ರಜಾಸತ್ತಾತ್ಮಕವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಚುನಾವಣೆಯ ಹಂತದಲ್ಲೇ ಬದಲಾವಣೆಯ ನಿಲುವನ್ನು ಜನರು ಒಪ್ಪಿದ್ದಾರೆ. ಪಕ್ಷದ ಒಳಗಡೆ ಈ ನಿರ್ಣಯ ಕೈಗೊಂಡ ಸಿಪಿಎಂ ಕೇರಳ ರಾಜ್ಯ ಕಾರ್ಯದರ್ಶಿ ಮಂಡಳಿಯಲ್ಲಿ ಶೈಲಜಾ ಕೂಡ ಭಾಗಿಯಾಗಿ, ತೀರ್ಮಾನವನ್ನು ಒಪ್ಪಿಕೊಂಡಿದ್ದಾರೆ. ಈಗ ಸಚಿವರಾಗಿರುವವರು ಸಚಿವರಾಗಿ ಮಾತ್ರ ಹೊಸಬರು. ಆದರೆ, ಸಾರ್ವಜನಿಕ ಜೀವನದಲ್ಲಿ ಹೆಚ್ಚು ಅನುಭವ ಹೊಂದಿರುವವರೇ ಆಗಿದ್ದಾರೆ.

ವಿಜಯನ್ ಅವರನ್ನು ಬದಲಾವಣೆ ಮಾಡಬಹುದಿತ್ತಲ್ಲ ಎಂಬ ಪ್ರಶ್ನೆ ಇರುವುದು ನಿಜ. ಅದನ್ನು ಮಾಡುವುದು ನಿಶ್ಚಿತ. ಆದರೆ, ಈಗ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಕೇರಳ ಸರ್ಕಾರವನ್ನು ನಡೆಸಬೇಕಿದೆ. ಹೆಚ್ಚು ಸವಾಲುಗಳಿವೆ. ಶಬರಿಮಲೆ ವಿವಾದ, ಕೇಂದ್ರ ಸರ್ಕಾರವೇ ಮಾಡಿರುವ ಭ್ರಷ್ಟಾಚಾರದ ಆರೋಪ ಸೇರಿದಂತೆ ಸಂಕೀರ್ಣ ಸವಾಲುಗಳಿವೆ. ಅದನ್ನು ಎದುರಿಸಲು ಪಿಣರಾಯಿ ಅವರನ್ನು ಆಯ್ಕೆ ಮಾಡಲಾಗಿದೆ. ಇದು ಪಾಲಿಟ್ ಬ್ಯೂರೊ ತೀರ್ಮಾನ ಅಲ್ಲ. ಸಿಪಿಎಂ ರಾಜ್ಯ ಸಮಿತಿ ಕೈಗೊಂಡಿರುವ ತೀರ್ಮಾನ.

– **ಜಿ.ಎನ್. ನಾಗರಾಜ್,** ಸಿಪಿಎಂ ರಾಜ್ಯ ಮಂಡಳಿ ಸದಸ್ಯರು

ಎಲ್ಲ ಪಕ್ಷಗಳಲ್ಲೂ ಸಾಮ್ಯತೆ ಕಾಣಿಸುತ್ತಿದೆ



ಬಿಜೆಪಿ ಮತ್ತು ಎಡ ಪಕ್ಷಗಳ ಕಾರ್ಯವಿಧಾನದಲ್ಲಿ ಸಾಮ್ಯತೆ ಇದೆ. ಅದಕ್ಕಾಗಿಯೇ ಇಬ್ಬರೂ ಈ ವಿಚಾರದಲ್ಲಿ ಒಂದೇ ರೀತಿ ಮಾತನಾಡುತ್ತಿದ್ದಾರೆ. ಕಮ್ಯುನಿಸ್ಟ್ ಪಕ್ಷವು ಇನ್ನೂ ಹೆಚ್ಚಾಗಿ ಜನಪ್ರಿಯ ವಿಧಾನದಲ್ಲಿ ಕೆಲಸ ಮಾಡಲು ಆರಂಭಿಸಿದರೆ ಪ್ರಜಾಪ್ರಭುತ್ವ ಮತ್ತಷ್ಟು ಯಶಸ್ವಿಯಾಗುತ್ತಿತ್ತು. ಸಂಪುಟ ಹಳಬರು ಮತ್ತು ಹೊಸಬರ ಮಿಶ್ರಣ ಆಗಿರಬೇಕು. ಪಿಣರಾಯಿ ವಿಜಯನ್ ಮೇಲೆ ಅತಿಯಾದ ಅವಲಂಬನೆ ಕಾಣುತ್ತಿದೆ.

ಲಿಂಗ ಸಮಾನತೆಯ ವಿಚಾರದಲ್ಲಿ ರಾಜಕೀಯ ಪಕ್ಷಗಳು ಸರಿಯಾಗಿ ಆಲೋಚಿಸುತ್ತಿಲ್ಲ. ಎಲ್ಲ ಪ್ರಧಾನ ರಾಜಕೀಯ ಪಕ್ಷಗಳೂ ಮಹಿಳಾ ನಾಯಕತ್ವವನ್ನು ಬೆಂಬಲಿಸುವ ವಿಚಾರದಲ್ಲಿ ಪೂರಕವಾಗಿಲ್ಲ. ಸ್ವಂತ ವರ್ಚಸ್ಸಿನ ಆಧಾರದಲ್ಲಿ ಮಹಿಳಾ ನಾಯಕತ್ವ ಬೆಳೆಯುತ್ತಿದೆ ಅನಿಸಿದಾಗ ತಡೆ ಹಾಕಲಾಗುತ್ತಿದೆ. ಬಿಜೆಪಿಯಲ್ಲಿ ಉಮಾಭಾರತಿ ಅವರಿಗೂ ಇದೇ ರೀತಿ ಮಾಡಲಾಯಿತು. ಎಡ ಪಕ್ಷಗಳಲ್ಲಿ ಗೌರಿ ಅಮ್ಮ, ಸುಶೀಲಾ ಗೋಪಾಲನ್ ಕೂಡ ಅದೇ ರೀತಿ ಹಿನ್ನಡೆ ಅನುಭವಿಸಿದರು. ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ಯಾವ ಪಕ್ಷವೂ ಇದಕ್ಕೆ ಹೊರತಾಗಿಲ್ಲ. ಮಹಿಳೆಯರು ನಾಯಕತ್ವದ ವಿಚಾರದಲ್ಲಿ ಎರಡನೆ ಸಾಲಿನಲ್ಲಿ ಇರುವವರು ಎಂಬ ಭಾವನೆ ಇದೆ. ಕೇರಳದ ಈಗಿನ ಸಂಪುಟದಲ್ಲಿ ಕೂಡ ಜಾತಿ ವಿಚಾರದಲ್ಲಿ ಸಮಾನತೆ, ಪ್ರಾತಿನಿಧ್ಯ ಸರಿಯಾಗಿಲ್ಲ. ಆರ್‌ಎಸ್‌ಎಸ್‌ನಲ್ಲಿ ಮಹಿಳಾ ಪ್ರಾತಿನಿಧ್ಯ ಇಲ್ಲ ಎಂದು ಪ್ರಶ್ನಿಸುವುದು ಕಷ್ಟ. ಅದು ಪುರುಷ ಪ್ರಧಾನ ವ್ಯವಸ್ಥೆ ಎಂಬುದು ಗೊತ್ತಿದೆ. ಎಡ ಪಕ್ಷಗಳಲ್ಲಿ ಆ ಪ್ರಶ್ನೆ ಎತ್ತಬಹುದು. ಇಂತಹ ಪ್ರಶ್ನೆಗಳಿಗೆ ಉತ್ತರ ನೀಡದಿದ್ದರೆ ಎಡ ಪಕ್ಷಗಳೂ ಯಥಾಸ್ಥಿತಿವಾದದ ಅನುಸರಣೆ ಮಾಡುತ್ತಿವೆಯೇ ಎಂಬ ಅನುಮಾನ ಮೂಡುತ್ತದೆ.

– **ಡಾ. ಬಂಜಗೆರೆ ಜಯಪ್ರಕಾಶ್,** ಲೇಖಕ ಮತ್ತು ಚಿಂತಕ

ತಪ್ಪು ನಡೆ ಎನ್ನಲಾಗದು



ಶೈಲಜಾ ಟೀಚರ್ ಸಾಮರ್ಥ್ಯದ ಬಗ್ಗೆ ಯಾರಿಗೂ ಅನುಮಾನ ಇಲ್ಲ. ಆದರೆ ಸಿಪಿಎಂ ಕೇಡರ್ ಆಧಾರಿತ ಪಕ್ಷ. ಸತತ ಎರಡನೇ ಬಾರಿಗೆ ಅಧಿಕಾರಕ್ಕೆ ಬಂದಿರುವ ಪಿಣರಾಯಿ ವಿಜಯನ್ ಅವರೊಬ್ಬರೇ ಸಂಪುಟದ ಕುರಿತು ನಿರ್ಧಾರ ಕೈಗೊಂಡಿಲ್ಲ. ಸ್ಥಳೀಯ ವಿಚಾರಗಳು, ಪಕ್ಷದ ವರಿಷ್ಠ ಮಂಡಳಿ ಸೇರಿಯೇ ಈ ತೀರ್ಮಾನ ಕೈಗೊಂಡಿರುತ್ತದೆ. ಸಂಪೂರ್ಣವಾಗಿ ಹೊಸಬರಿಗೆ ಅವಕಾಶ ನೀಡಿರುವುದು ಒಂದು ಹೊಸ ಪ್ರಯೋಗ. ನನ್ನ ಪ್ರಕಾರ ಇದು ತಪ್ಪು ನಡೆ ಎಂದು ಹೇಳಲಾಗದು.

ಕಮ್ಯುನಿಸ್ಟ್ ಪಕ್ಷ ಮೂಲಭೂತವಾಗಿ ಒಂದು ಸಿದ್ಧಾಂತದ ಮೇಲೆ ನಿಂತಿದೆ. ವರ್ಗರಹಿತ ಸಮಾಜ ಕಟ್ಟುವುದು ಅವರ ಗುರಿ. ಬಿಜೆಪಿ ವ್ಯಕ್ತಿಗಿಂತ ಪಕ್ಷ, ಪಕ್ಷಕ್ಕಿಂತ ದೇಶ ದೊಡ್ಡದು ಎಂದು ಕೆಲಸ ಮಾಡುತ್ತಿದೆ. ಪಕ್ಷದ ನಾಯಕತ್ವ ಕೈಗೊಳ್ಳುವ ತೀರ್ಮಾನವನ್ನು ಪಾಲಿಸುವ ಪದ್ಧತಿ ಎರಡೂ ಪಕ್ಷದಲ್ಲಿರುವ ಸಾಮ್ಯತೆ. ಬೇರೇನೂ ಹೋಲಿಕೆಗಳಿಲ್ಲ. ಶೈಲಜಾ ಟೀಚರ್ ಅವರಿಗೆ ಇನ್ನೊಂದು ಅವಕಾಶ ಕೊಡಬೇಕಿತ್ತು ಎಂಬ ಭಾವನೆ ಜನರಲ್ಲಿದೆ. ಶೈಲಜಾ ಟೀಚರ್ ಬಗ್ಗೆ ಇರುವ ಗೌರವ, ಮೆಚ್ಚುಗೆ, ಶ್ರದ್ಧೆಯನ್ನು ನಾನು ನೇರವಾಗಿ ನೋಡಿದ್ದೇನೆ. ಆದರೆ, ಈ ಎಲ್ಲದರ ಆಚೆಗೆ ಪಕ್ಷದ ನಿರ್ಧಾರವನ್ನು ಟೀಕಿಸುವುದು ಹೇಗೆ ಎಂದು ನನಗೆ ಅರ್ಥವಾಗುತ್ತಿಲ್ಲ. ಮಹಿಳೆಯರನ್ನು ಕಡೆಗಣಿಸಲಾಗುತ್ತಿದೆ ಎಂಬುದನ್ನು ವೈಯಕ್ತಿಕವಾಗಿ ಒಪ್ಪುವುದಿಲ್ಲ. ಮಹಿಳೆಯರು ಕುಟುಂಬದ ಕೆಲಸಗಳಲ್ಲೇ ಹೆಚ್ಚು ಮಗ್ನರಾಗಿರುವುದರಿಂದ ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗಿಲ್ಲ. ಮಹಿಳೆಯರನ್ನು ರಾಜಕೀಯವಾಗಿ ಮುಖ್ಯ ವಾಹಿನಿಗೆ ಕರೆತರಲು ಎಲ್ಲ ರಾಜಕೀಯ ಪಕ್ಷಗಳೂ ಹೆಚ್ಚು ಕೆಲಸ ಮಾಡಬೇಕಾದ ಅಗತ್ಯವಿದೆ. ಹೆಣ್ಣು ಮಕ್ಕಳನ್ನು ರಾಜಕೀಯವಾಗಿ ತುಳಿಯುವ, ಅವಕಾಶ ಕಿತ್ತುಕೊಳ್ಳುವ ಪ್ರಯತ್ನ ನಡೆದಿಲ್ಲ. ಆದರೆ, ಹೆಚ್ಚಿನ ಸಂಖ್ಯೆಯಲ್ಲಿ ಬೆಂಬಲಿಸುವ ಕೆಲಸ ಆಗದೇ ಇರಬಹುದು. ಸಂಪುಟ ರಚನೆ ಎಂಬುದು ಅತ್ಯಂತ ಸವಾಲಿನ ಕೆಲಸ. ಪ್ರತಿ ನಿರ್ಧಾರವನ್ನೂ ಬೆಂಬಲಿಸಲು ಮತ್ತು ವಿರೋಧಿಸಲು ಸಾಕಷ್ಟು ಅವಕಾಶಗಳಿರುತ್ತವೆ. ಕರ್ನಾಟಕದಲ್ಲೂ ಸಂಪೂರ್ಣವಾಗಿ ಸಂಪುಟ ಬದಲಾವಣೆ ಸಾಧ್ಯವೇ ಎಂಬ ಪ್ರಶ್ನೆಗೆ ಕಾದು ನೋಡಿ ಎಂಬ ಉತ್ತರವನ್ನು ನೀಡಬಹುದು.

ಗಣೇಶ ಕಾರ್ಣಿಕ್, ಮುಖ್ಯ ವಕ್ತಾರ, ಬಿಜೆಪಿ

ಪ್ರಜಾವಾಣಿ DH ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ ಸುಮಾರು 24 ಲಕ್ಷ ಜನ ಕಾಯಿಲೆಪೀಡಿತರಾಗಿದ್ದು, 24 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.



ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಎಂ.ಎಸ್.ವೇಣುಗೋಪಾಲ್,** #182, ಮಂಜುನಾಥ ರಸ್ತೆ, 2 ನೇ ಬ್ಲಾಕ್, ಟಿ.ಆರ್.ನಗರ, ಬೆಂಗಳೂರು	25,000
2	**ವೇಣುಗೋಪಾಲ್ ನಲ್ಲಮಲ್ಲಿ,** ಎ 216, ಮಹಾವೀರ ಟಸ್ಕಾನ್, ಬಸವಣ್ಣನಗರ ಮುಖ್ಯರಸ್ತೆ, ಹೂಡಿ, ಬೆಂಗಳೂರು	25,000
3	**ಚಂದ್ರಕಾಂತ್ ಎಚ್.ಎಸ್,** ನಿವೃತ್ತ ಎಸಿಎಫ್, ಚೌಳಹಿರಿಯೂರು–577180, ಚಿಕ್ಕಮಗಳೂರು ಜಿಲ್ಲೆ	25,000
4	**ಶ್ರೀ ವಿನಾಯಕ ಜನರಲ್ ಅಂಡ್ ಮೆಟರ್ನಿಟಿ ಆಸ್ಪತ್ರೆ,** ನಂ:961, ಒಂದನೇ ಅಡ್ಡರಸ್ತೆ, ಚನ್ನಕೇಶವನಗರ, ಹೊಸೂರು ಮುಖ್ಯರಸ್ತೆ, ಬೆಂಗಳೂರು	25,000
5	**ಜಿ.ಮುರಳೀಧರ,** #11/2, 4 ನೇ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ವಿದ್ಯಾರಣ್ಯಪುರ, ಮೈಸೂರು	20,000
6	**ಎಂ.ಶ್ರೀನಿವಾಸ,** 5, ನ್ಯಾಷನಲ್ ಹೈಸ್ಕೂಲ್ ರಸ್ತೆ, ವಿ.ವಿ.ಪುರಂ, ಬೆಂಗಳೂರು	5,000
7	**ಕಮಲಾಕ್ಷ ಕೋಪರ್ಡೆ,** #22'ಎ', 2ನೇ ಮುಖ್ಯರಸ್ತೆ, 2 ನೇ ಅಡ್ಡರಸ್ತೆ, ಬಸವ ಕಾಲೊನಿ, ಬಾಕ್ಸೈಟ್ ರಸ್ತೆ, ಬೆಳಗಾವಿ	5,000
8	**ಎಸ್.ಜಯರಾಮನ್,** ಫ್ಲ್ಯಾಟ್ 3ಎ, ಆರ್ಕೋಟ್ ವಿಲ್ಲಾ,ಮಸೀದಿ ರಸ್ತೆ, ಫ್ರೆಜರ್ ಟೌನ್,ಬೆಂಗಳೂರು	5,000
9	**ಎಸ್.ಜಿ.ರಾಮಚಂದ್ರ,** ಎಸ್–3, 5ನೇ ಮುಖ್ಯರಸ್ತೆ, ಭಾಗ್ಯಲಕ್ಷ್ಮೀ ನಿವಾಸ ಅಪಾರ್ಟ್‌ಮೆಂಟ್, ಆರ್.ಕೆ. ಲೇಔಟ್, ಪದ್ಮನಾಭನಗರ, ಬೆಂಗಳೂರು	5,000
10	**ಎಂ.ಜಿ.ಅರುಳ್,** ಬೆಂಗಳೂರು	3,000
11	**ಅನ್ನಪೂರ್ಣ ಎಂ.ಆರ್,** ನಂ020, ಬ್ಲಾಕ್11, ಬಿಇಎಂಎಲ್ ಲೇಔಟ್, ಶ್ರೀರಾಂಪುರ 2ನೇ ಹಂತ, ಮೈಸೂರು	2,001
12	**ಸುಧೀಶ್ ಕೆ.ಟಿ,** #3, ಲಕ್ಷ್ಮೀ ನಿವಾಸ, 14ನೇ ಅಡ್ಡರಸ್ತೆ, ಕನಕನಗರ, ಆರ್.ಟಿನಗರ ಪೋಸ್ಟ್, ಬೆಂಗಳೂರು	2,000
13	**ಟಿ.ಪುಟ್ಟಸ್ವಾಮಿ,** ನಂ.18,21ನೇ ಅಡ್ಡರಸ್ತೆ, ಇಂಡಿಯನ್ ಬ್ಯಾಂಕ್ ಕಾಲೊನಿ, ಆರ್.ಆರ್.ನಗರ, ಬೆಂಗಳೂರು	1,100
14	**ಉಮಾ,** ನಂ.18, 21ನೇ ಅಡ್ಡರಸ್ತೆ, ಇಂಡಿಯನ್ ಬ್ಯಾಂಕ್ ಕಾಲೊನಿ, ಆರ್.ಆರ್.ನಗರ ಬೆಂಗಳೂರು	1,100
15	**ರಾಜಾರಾಂ ರಾಮಚಂದ್ರ ಹೆಗಡೆ,** ಹೆರೂರು, ಅಣಲೆಬೈಲು ಗ್ರಾಮ, ಸಿದ್ದಾಪುರ, ಉತ್ತರ ಕನ್ನಡ	1,000
	ಒಟ್ಟು ಮೊತ್ತ	1,50,201

ಕೋವಿಡ್: ಐದು ದಿನಗಳಲ್ಲಿ 2.74 ಲಕ್ಷ ಮಂದಿ ಚೇತರಿಕೆ

61 ಸಾವಿರ ಮಂದಿ ಗುಣಮುಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪೀಡಿತರಲ್ಲಿ ಇದೇ ಮೊದಲ ಬಾರಿಗೆ 24 ಗಂಟೆಗಳ ಅವಧಿಯಲ್ಲಿ ಚೇತರಿಕೆ ಹೊಂದಿದವರ ಸಂಖ್ಯೆ ರಾಜ್ಯದಲ್ಲಿ 60 ಸಾವಿರದ ಗಡಿ (61,766) ದಾಟಿದೆ. ಇದರಿಂದಾಗಿ ಆರು ಲಕ್ಷದ ಆಸುಪಾಸಿನಲ್ಲಿದ್ದ ಸಕ್ರಿಯ ಪ್ರಕರಣಗಳ ಸಂಖ್ಯೆ 4.83 ಲಕ್ಷಕ್ಕೆ ಇಳಿಕೆಯಾಗಿದೆ.

ಕೆಲದಿನಗಳಿಂದಗುಣಮುಖಹೊಂದುವವರ ಸಂಖ್ಯೆ ಏರಿಕೆ ಕಂಡಿದೆ. ಐದು ದಿನಗಳಲ್ಲಿ 2.74 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ. ಸೋಂಕಿತರಲ್ಲಿ ಈವರೆಗೆ ಒಟ್ಟು 18.91 ಲಕ್ಷ ಮಂದಿಗೆ ಕಾಯಿಲೆ ವಾಸಿಯಾಗಿದೆ. ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 31,183 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢ ಪಟ್ಟಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 23.98 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 200 ಮಂದಿ ಸೇರಿದಂತೆ ರಾಜ್ಯದಲ್ಲಿ 451 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರು ಗ್ರಾಮಾಂತರದಲ್ಲಿ 35 ಮಂದಿ, ಉತ್ತರ ಕನ್ನಡದಲ್ಲಿ 20 ಮಂದಿ, ಬಳ್ಳಾರಿಯಲ್ಲಿ 19 ಮಂದಿ, ತುಮಕೂರಿನಲ್ಲಿ 18 ಮಂದಿ, ಬೆಳಗಾವಿ, ಶಿವಮೊಗ್ಗದಲ್ಲಿ ತಲಾ 14 ಮಂದಿ, ಹಾಸನದಲ್ಲಿ 13 ಮಂದಿ ಸಾವಿಗೀಡಾಗಿದ್ದಾರೆ. ಈವರೆಗೆ ಮೃತಪಟ್ಟವರ ಒಟ್ಟು ಸಂಖ್ಯೆ 24,658ಕ್ಕೆ ಏರಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 1.28 ಲಕ್ಷ ಮಂದಿಗೆ ಪರೀಕ್ಷೆ ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 24.21ಕ್ಕೆ ಇಳಿಕೆಯಾಗಿದೆ. ಬೆಂಗಳೂರಿನಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಇಳಿಕೆ ಕಂಡಿದೆ. 8,214 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಮೈಸೂರು (2,526), ಬಳ್ಳಾರಿ (2,157), ಹಾಸನ (1,641), ತುಮಕೂರು (1,545), ಉತ್ತರ ಕನ್ನಡ (1,357), ಬೆಳಗಾವಿ (1,026) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ಹೊಸದಾಗಿ ವರದಿಯಾಗಿವೆ.

26ಕ್ಕೆ 'ಸೂಪರ್‌ಮೂನ್' ದರ್ಶನ



ಡೆಟ್ರಾಯಿಟ್(ಅಮೆರಿಕ): ಮೇ 26ರಂದು ಸಂಭವಿಸಲಿರುವ ಚಂದ್ರಗ್ರಹಣ ವಿಶೇಷವಾಗಿದೆ. ಅಂದು 'ಸೂಪರ್ ಮೂನ್' ಗೋಚರವಾಗಲಿದೆ. ಚಂದ್ರ ಗ್ರಹಣ ಮತ್ತು ಕೆಂಪು ಚಂದ್ರನನ್ನು ಏಕಕಾಲಕ್ಕೆ ಕಾಣಬಹುದಾಗಿದೆ.

ಅಂದು ಚಂದ್ರ ಭೂಮಿಯಿಂದ ಅತೀ ಸಮೀಪದಲ್ಲಿ ಗೋಚರಿಸಲಿದ್ದಾನೆ. ಹೀಗಾಗಿ, ಚಂದ್ರ ಸಾಮಾನ್ಯಕ್ಕಿಂತಲೂ ಹೆಚ್ಚು ದೊಡ್ಡದಾಗಿ ಮತ್ತು ಪ್ರಕಾಶಮಾನವಾಗಿಯೂ ಕಾಣಿಸುತ್ತಾನೆ.

ಚಂದ್ರನನ್ನು ಭೂಮಿಯ ನೆರಳು ಸಂಪೂರ್ಣವಾಗಿ ಆವರಿಸಿಕೊಳ್ಳುತ್ತದೆ. ಆದರೆ, ಇದು ಸಂಪೂರ್ಣವಾಗಿ ಕಪ್ಪಾಗುವುದಿಲ್ಲ. ಬದಲಾಗಿ, ಕೆಂಪು ಬಣ್ಣ ಕಾಣಿಸಿಕೊಳ್ಳುತ್ತದೆ. ಆದ್ದರಿಂದ, ಸಂಪೂರ್ಣ ಚಂದ್ರ ಗ್ರಹಣವನ್ನು ಕೆಂಪು ಅಥವಾ ರಕ್ತ ಚಂದ್ರ ಎಂದು ಕರೆಯಲಾಗುತ್ತದೆ ಎಂದು ವಿಜ್ಞಾನಿಗಳು ವಿಶ್ಲೇಷಿಸಿದ್ದಾರೆ.

ಮೇ 26ರಂದು ಆಸ್ಟ್ರೇಲಿಯಾ, ಜಪಾನ್, ಅಮೆರಿಕ ಸೇರಿದಂತೆ ಕೆಲವು ರಾಷ್ಟ್ರಗಳಲ್ಲಿ 'ಸೂಪರ್‌ಮೂನ್' ದರ್ಶನವಾಗಲಿದೆ.

ಅಂತರ ಕಾಯ್ದುಕೊಳ್ಳಿ

ಭಾವಪೂರ್ಣ ಶ್ರದ್ಧಾಂಜಲಿ



ಎನ್. ರಾಮರೆಡ್ಡಿ
ಡಿ.ಎನ್. ಲಕ್ಷ್ಮಣರೆಡ್ಡಿರವರ ಅಣ್ಣ
ಇವರು ದಿನಾಂಕ: 22.05.2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ದುಃಖತಪ್ತರು: ಪತ್ನಿ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಕುಟುಂಬದವರು ಮತ್ತು ಬಂಧುಗಳು

ಲಸಿಕೆಗೆ ಪೇಟೆಂಟ್: ಪರಿಷ್ಕೃತ ಪ್ರಸ್ತಾವ ಸಲ್ಲಿಕೆ

ನವದೆಹಲಿ: ಕೋವಿಡ್–19 ವಿರುದ್ಧದ ಲಸಿಕೆ ಮತ್ತು ಔಷಧದ ಬೌದ್ಧಿಕ ಆಸ್ತಿ ಹಕ್ಕುಗಳಿಂದ (ಐಪಿಆರ್) ವಿನಾಯಿತಿ ಪಡೆಯುವ ಪ್ರಸ್ತಾವನೆಯನ್ನು ಭಾರತ, ದಕ್ಷಿಣ ಆಫ್ರಿಕಾ ಸೇರಿದಂತೆ ಸುಮಾರು 60 ರಾಷ್ಟ್ರಗಳು ಪರಿಷ್ಕರಿಸಿವೆ.

ವಿಶ್ವ ವಾಣಿಜ್ಯ ಸಂಸ್ಥೆಗೆ (ಡಬ್ಲ್ಯುಟಿಒ) ಈ ಪರಿಷ್ಕೃತ ಪ್ರಸ್ತಾವನೆಯನ್ನು ಈ ರಾಷ್ಟ್ರಗಳು ಸಲ್ಲಿಸಿವೆ. ಮೂಲ ಪ್ರಸ್ತಾವನೆಗೆ ಆಕ್ಷೇಪಗಳು ವ್ಯಕ್ತವಾಗಿದ್ದರಿಂದ ಈ ಕ್ರಮಕೈಗೊಳ್ಳಲಾಗಿದೆ. ಪೇಟೆಂಟ್ ವಿನಾಯಿತಿ ನೀಡುವಂತೆ ಕೋರಿಕೆ ಸಲ್ಲಿಸಿದ್ದ ರಾಷ್ಟ್ರಗಳು ಕೆಲವು ಬದಲಾವಣೆಗಳನ್ನುಸೂಚಿಸಿವೆ.ಪೇಟೆಂಟ್‌ವಿನಾಯಿತಿಯನ್ನು ಕನಿಷ್ಠ ಮೂರು ವರ್ಷಗಳವರೆಗೆ ನೀಡಬೇಕು ಎಂದು ಪರಿಷ್ಕೃತ ಪ್ರಸ್ತಾವನೆಯಲ್ಲಿ ಪ್ರಮುಖವಾಗಿ ಸೂಚಿಸಲಾಗಿದೆ.

ವಿಶ್ವದ ಬಹುಪಾಲು ಜನಸಂಖ್ಯೆ ಲಸಿಕೆ ಪಡೆದು ರೋಗ ನಿರೋಧಕ ಶಕ್ತಿ ಬೆಳೆಸಿಕೊಳ್ಳುವವರೆಗೆ ಬೌದ್ಧಿಕ ಆಸ್ತಿ ಹಕ್ಕಿನ ವ್ಯಾಪಾರ ಸಂಬಂಧಿ ವಿಚಾರಗಳ ಒಪ್ಪಂದದಲ್ಲಿ (ಟ್ರಿಪ್ಸ್) ನಾಲ್ಕು ಪ್ರಮುಖ ಅಂಶಗಳಿಗೆ ವಿನಾಯಿತಿ ನೀಡುವಂತೆ ಮೂಲ ಪ್ರಸ್ತಾವನೆಯಲ್ಲಿ ಉಲ್ಲೇಖಿಸಲಾಗಿತ್ತು. ಇದರಲ್ಲಿ ಕಾಪಿರೈಟ್ ಮತ್ತು ಪೇಟೆಂಟ್ ಪ್ರಮುಖ ಅಂಶಗಳಾಗಿದ್ದವು. ಈ ವಿಷಯದಲ್ಲಿ ಬದಲಾವಣೆ ಮಾಡಲಾಗಿದ್ದು, ಡಬ್ಲ್ಯುಟಿಒದ 'ಟ್ರಿಪ್ಸ್' ಮಂಡಳಿ ಮೂರು ವರ್ಷಗಳ ನಂತರ ವಿನಾಯಿತಿ ನೀಡುವುದನ್ನು ಪರಿಷ್ಕರಿಸಬಹುದು ಎಂದು ತಿಳಿಸಲಾಗಿದೆ.

ಈ ಹೊಸ ಪ್ರಸ್ತಾವನೆಯು ಕೋವಿಡ್–19 ತಡೆಯುವುದು ಮತ್ತು ಚಿಕಿತ್ಸೆ ನೀಡುವುದಕ್ಕೆ ಮಾತ್ರ ಸಂಬಂಧಿಸಿದ್ದಾಗಿದೆ ಎಂದು ತಿಳಿಸಲಾಗಿದೆ.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ವಿ.ಕೆ. ರಾಮಣ್ಣನವರು
ತಾ॥ 14–05–2021ನೇ ಶುಕ್ರವಾರ ಬೆಳಗ್ಗೆ 5–15 ಘಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ತತ್ಸಂಬಂಧವಾಗಿ ಪತಿಯ ಆತ್ಮಶಾಂತಿಗಾಗಿ ಅವರ ವೈಕುಂಠ ಸಮಾರಾಧನೆಯನ್ನು ತಾ॥ 24–5–2021ನೇ ಸೋಮವಾರ ಬೆಳಗ್ಗೆ 9–15 ರಿಂದ 12–00 ರವರೆಗೆ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ
ಇಂತಿ ದುಃಖತಪ್ತರು :
ಶ್ರೀಮತಿ ಕೆ. ಜಯಮ್ಮ ಮತ್ತು ಕುಟುಂಬವರ್ಗದವರು

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

18–44: ಸದ್ಯಕ್ಕಿಲ್ಲ ಕೋವಿಡ್ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆ ಕೊರತೆ ಇರುವ ಕಾರಣ ರಾಜ್ಯದಲ್ಲಿ ಸದ್ಯಕ್ಕೆ 18ರಿಂದ 44 ವರ್ಷದವರಿಗೆ ಲಸಿಕೆ ವಿತರಿಸದಿರಲು ಸರ್ಕಾರ ನಿರ್ಧರಿಸಿದೆ.

ಈ ಸಂಬಂಧ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಪ್ರಕಟಣೆ ಹೊರಡಿಸಿದ್ದಾರೆ. 18ರಿಂದ 44 ವರ್ಷ ವಯೋಮಾನದವರಿಗೆ ನೀಡಲು ಸದ್ಯಕ್ಕೆ ಕೋವಿಡ್ ಲಸಿಕೆ ಲಭ್ಯವಿಲ್ಲ. ಆದರೆ, ರಾಜ್ಯದಲ್ಲಿ ಗುರುತಿಸಿರುವ ಕೋವಿಡ್ ಮುಂಚೂಣಿ ಕಾರ್ಯಕರ್ತರಿಗೆ, ದುರ್ಬಲ ಮತ್ತು ಆದ್ಯತೆ ಗುಂಪಿನವರಿಗೆ ನಿಯೋಜಿತ ನೋಡಲ್ ಅಧಿಕಾರಿಗಳು ಲಸಿಕೆ ಪಡೆಯುವ ದಿನಾಂಕ ಮತ್ತು ಸಮಯದ ಕುರಿತು ಮಾಹಿತಿ ನೀಡಲಿದ್ದಾರೆ ಎಂದು ತಿಳಿಸಿದ್ದಾರೆ.

ಎರಡು ದಿನಗಳ ಹಿಂದಷ್ಟೇ 18ರಿಂದ44ವರ್ಷದವರೆಗಿನಕೋವಿಡ್ ಮುಂಚೂಣಿ ಕಾರ್ಯಕರ್ತರಿಗೆ ಶನಿವಾರದಿಂದ ಲಸಿಕೆ ವಿತರಣೆ ಮಾಡಲು ಜಿಲ್ಲಾಧಿಕಾರಿಗಳು ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚಿಸಲಾಗಿತ್ತು. ಆದರೆ, ಈ ಬಗ್ಗೆ ಲಸಿಕೆ ವಿತರಿಸುವ ಆಸ್ಪತ್ರೆಗಳಿಗೆ ಸೂಕ್ತ ನಿರ್ದೇಶನ ನೀಡಿರದ ಕಾರಣ 45 ವರ್ಷದೊಳಗಿನ ಕೋವಿಡ್ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ವಿತರಣೆ ನಡೆಯಲಿಲ್ಲ. ಇದರಿಂದಾಗಿ ಅವರು ಲಸಿಕೆ ಕೇಂದ್ರಗಳಿಗೆ ತೆರಳಿ, ವಾಪಸ್ ತೆರಳಬೇಕಾಯಿತು.

'ಸದ್ಯ 45 ವರ್ಷ ಮೇಲ್ಪಟ್ಟವರಿಗೆ 'ಕೋವಿಶೀಲ್ಡ್' ಮೊದಲ ಡೋಸ್ ನೀಡಲಾಗುವುದು. ಅರ್ಹ ಫಲಾನುಭವಿಗಳು ನಗರ ಪ್ರದೇಶಗಳಲ್ಲಿ ಆನ್‌ಲೈನ್ ಮೂಲಕ ನೋಂದಾಯಿಸಿಕೊಳ್ಳಬೇಕು. ಗ್ರಾಮೀಣ ಪ್ರದೇಶಗಳಲ್ಲಿ ನೇರವಾಗಿ ಲಸಿಕಾ ಕೇಂದ್ರಕ್ಕೆ ತೆರಳಿ, ಲಸಿಕೆ ಪಡೆಯಬಹುದಾಗಿದೆ. ಎರಡನೇ ಡೋಸ್ ಪಡೆಯುವವರು ನೇರವಾಗಿ ಹತ್ತಿರದ ಲಸಿಕಾ ಕೇಂದ್ರಗಳಲ್ಲಿ ಲಸಿಕೆ ಪಡೆಯಬಹುದು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಕೋವ್ಯಾಕ್ಸಿನ್ ಮೊದಲ ಡೋಸ್ ಸದ್ಯಕ್ಕೆ ಲಭ್ಯವಿಲ್ಲ. ಎರಡನೇ ಡೋಸ್ ಪಡೆಯಬೇಕಾದ ಫಲಾನುಭವಿಗಳ ಮೊಬೈಲ್‌ಗೆ ದೂರವಾಣಿ ಸಂದೇಶ ಕಳುಹಿಸಲಾಗುತ್ತದೆ. ಅಂತಹವರು ಲಸಿಕಾ ಕೇಂದ್ರಗಳಿಗೆ ನಿಗದಿತ ಸಮಯಕ್ಕೆ ತೆರಳಿ, ಲಸಿಕೆ ಪಡೆಯಬಹುದು' ಎಂದು ಹೇಳಿದ್ದಾರೆ.

ನ್ಯಾಯಾಲಯಗಳಲ್ಲಿ ಶೇ 50ರಷ್ಟು ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ವಿಸ್ತರಣೆ ಆಗಿರುವ ಕಾರಣ ನ್ಯಾಯಾಲಯಗಳಲ್ಲಿ ಶೇ 50ರಿಂದ ಶೇ 60ರಷ್ಟು ಸಿಬ್ಬಂದಿಯನ್ನು ರೊಟೇಷನ್ ಆಧಾರದಲ್ಲಿ ನಿಯೋಜಿಸಿಕೊಳ್ಳಲು ಹೈಕೋರ್ಟ್ ಮಾರ್ಗಸೂಚಿ ಹೊರಡಿಸಿದೆ.

'ಮೇ 24ರಿಂದ ಮುಂದಿನ ಆದೇಶದ ತನಕ ಈ ಮಾರ್ಗಸೂಚಿ ಜಾರಿಯಲ್ಲಿ ಇರಲಿದೆ' ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಗಳಿಗೆ ನಿರ್ದೇಶನ ನೀಡಿದೆ.

'ಬೆಂಗಳೂರು, ಧಾರವಾಡ ಮತ್ತು ಕಲಬುರ್ಗಿ ಹೈಕೋರ್ಟ್ ಪೀಠಗಳಲ್ಲಿ ನಿರ್ದಿಷ್ಟ ಪ್ರಕರಣಗಳಲ್ಲಿ ಮಾತ್ರ ವಕೀಲರು, ಕಕ್ಷಿದಾರರ ಪ್ರವೇಶಕ್ಕೆ ಅವಕಾಶ ಇದೆ. ಬೆಂಗಳೂರಿನ ಪ್ರಧಾನ ಪೀಠ ಆನ್‌ಲೈನ್‌ನಲ್ಲೇ ವಿಚಾರಣೆ ನಡೆಸಲಿದೆ. ಅಡ್ವೊಕೇಟ್ ಜನರಲ್, ಹೆಚ್ಚುವರಿ ಅಡ್ವೊಕೇಟ್ ಜನರಲ್ ಮಾತ್ರ ಹಾಜರಾಗಲು ಅವಕಾಶ ನೀಡಬಹುದು' ಎಂದು ಮಾರ್ಗಸೂಚಿ ಹೇಳಿದೆ. 'ಎಲ್ಲಾ ಜಿಲ್ಲಾ ಮತ್ತು ವಿಚಾರಣಾ ನ್ಯಾಯಾಯಲಗಳಲ್ಲಿ ತುರ್ತು ವಿಷಯ, ಜಾಮೀನು ಅರ್ಜಿ, ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸಬಹುದಾಗಿದೆ. ವಕೀಲರು ಮತ್ತು ಜಾಮೀನು ಪಡೆದಿರುವ ಆರೋಪಿಗಳ ಅನುಪಸ್ಥಿತಿಯಲ್ಲಿ ಯಾವುದೇ ಪ್ರತಿಕೂಲ ಆದೇಶಗಳನ್ನು ಹೊರಡಿಸಬಾರದು' ಎಂದು ತಿಳಿಸಿದೆ.

ವೈಕುಂಠ ಸಮಾರಾಧನೆ
ಶ್ರೀ ಬಿ. ಅಣ್ಣೇಗೌಡರವರ ಧರ್ಮಪತ್ನಿ ಶ್ರೀಮತಿ ಡಿ. ಪಿ. ಚಂದ್ರಿಕಾ, ಕುಮಾರಸ್ವಾಮಿ ಲೇಔಟ್, ಬೆಂಗಳೂರು
ಶ್ರೀಮತಿ ಬಿ. ಎ. ನಿರ್ಮಲ ವೇಣುಗೋಪಾಲ, ಮಗಳು/ಅಳಿಯಂದಿರು
ಶ್ರೀಮತಿ ಬಿ. ಎ. ಮಧುರ ಶಿವಕುಮಾರ್, ಮಗಳು/ಅಳಿಯಂದಿರು
ಶ್ರೀ. ಬಿ. ಎ. ನವೀನ್ ಕುಮಾರ್ ಮಗ, ಶ್ರೀಮತಿ ಹೆಚ್. ಬಿ. ರಮ್ಯ ಸೊಸೆ ಹಾಗೂ ಮೊಮ್ಮಕ್ಕಳು
ಇವರುಗಳು ಮಾಡುವ ವಿಜ್ಞಾಪನೆಗಳು



ನಮ್ಮ ಪೂಜ್ಯ ತಾಯಿಯವರಾದ
ಶ್ರೀಮತಿ ಡಿ. ಪಿ. ಚಂದ್ರಿಕಾ ಹಾಸನ
(ಲೇಟ್ ಗೌರಮ್ಮ, ಶ್ರೀ ಪುಟ್ಟೇಗೌಡರವರ ಮಗಳು)
ಬಂಧುಗಳೇ:
ನಮ್ಮ ಪೂಜ್ಯ ತೀರ್ಥರೂಪ ತಾಯಿಯವರಾದ ಶ್ರೀಮತಿ ಡಿ. ಪಿ. ಚಂದ್ರಿಕಾರವರು ದಿನಾಂಕ 13–05–2021ನೇ ಗುರುವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಇವರ ಉತ್ತರ ಕ್ರಿಯಾದಿಗಳನ್ನು ದಿನಾಂಕ 23–05–2021ನೇ ಭಾನುವಾರ ಬೆಳಗ್ಗೆ 10:00 ಗಂಟೆಗೆ ಪುಣ್ಯಾಹ ಹಾಗೂ ಮಧ್ಯಾಹ್ನ 12:00 ಗಂಟೆಗೆ ವೈಕುಂಠ ಸಮಾರಾಧನೆಯನ್ನು ನಮ್ಮ ಸ್ವಗೃಹ ಕುಮಾರಸ್ವಾಮಿ ಲೇಔಟ್‌ನಲ್ಲಿ ಏರ್ಪಡಿಸಲಾಗಿದೆ.
ತಾವುಗಳು ದೇಶದಲ್ಲಿ ಕರೋನ ಇರುವುದರಿಂದ ತಮ್ಮ ಮನೆಯಲ್ಲಿ ಇದ್ದು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಪ್ರಾರ್ಥಿಸುತ್ತೇವೆ.
ಇಂತಿ ದುಃಖತಪ್ತರು: ಕುಟುಂಬದವರು ಮತ್ತು ಬಂಧು–ಬಳಗದವರು

ನವೆಂಬರ್‌ನಲ್ಲಿ ಸಾರ್ವತ್ರಿಕ ಚುನಾವಣೆ: ಅಧ್ಯಕ್ಷ

ನೇಪಾಳ ಸಂಸತ್ ವಿಸರ್ಜನೆ

ಕಠ್ಮಂಡು (ರಾಯಿಟರ್ಸ್): ನೇಪಾಳದಲ್ಲಿ ಮತ್ತೊಮ್ಮೆ ರಾಜಕೀಯ ಬಿಕ್ಕಟ್ಟು ಸೃಷ್ಟಿಯಾಗಿದೆ. ರಾಷ್ಟ್ರಪತಿ ವಿದ್ಯಾ ದೇವಿ ಭಂಡಾರಿ ಅವರು ಶನಿವಾರ ಸಂಸತ್ ವಿಸರ್ಜಿಸಿದ್ದು, ನವೆಂಬರ್‌ನಲ್ಲಿ ಸಾರ್ವತ್ರಿಕ ಚುನಾವಣೆ ನಿಗದಿಪಡಿಸಿದ್ದಾರೆ.

ಉಸ್ತುವಾರಿ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಅಥವಾ ವಿರೋಧ ಪಕ್ಷದ ನಾಯಕ ಶೇರ್ ಬಹಾದ್ದೂರ್ ದೇಬಾ ಶುಕ್ರವಾರ ನಿಗದಿಪಡಿಸಿದ ಗಡುವಿನೊಳಗೆ ಸರ್ಕಾರ ರಚನೆಗೆ ಅಗತ್ಯ ಇರುವ ಬಹುಮತ ಸಾಬೀತುಪಡಿಸುವಲ್ಲಿ ವಿಫಲರಾದರು. ಹೀಗಾಗಿ, ಅಧ್ಯಕ್ಷರು ಈ ಆದೇಶ ಹೊರಡಿಸಿದ್ದಾರೆ.



ಶರ್ಮಾ ಒಲಿ

'ಅಧ್ಯಕ್ಷರು ಜನಪ್ರತಿನಿಧಿಗಳ ಸಭೆಯನ್ನು ವಿಸರ್ಜಿಸಿದ್ದಾರೆ. ಮೊದಲ ಹಂತದ ಸಾರ್ವತ್ರಿಕ ಚುನಾವಣೆಯನ್ನು ನವೆಂಬರ್ 12 ರಂದು ಮತ್ತು ಎರಡನೇ ಹಂತದ ಚುನಾವಣೆಯನ್ನು ನವೆಂಬರ್ 19 ರಂದು ನಡೆಸಲು ಆದೇಶಿಸಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

'ಉಸ್ತುವಾರಿ ಪ್ರಧಾನಿ ಒಲಿ ನೇತೃತ್ವದ ಸಚಿವ ಸಂಪುಟದ ಶಿಫಾರಸಿನ ಮೇರೆಗೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

> **ಸಂಸತ್ ವಿಸರ್ಜನೆಯ ನಿರ್ಧಾರದ ವಿರುದ್ಧ ರಾಜಕೀಯ ಮತ್ತು ಕಾನೂನಾತ್ಮಕ ಹೋರಾಟ ನಡೆಸಲಾಗುವುದು**
> **ಪ್ರಕಾಶ್ ಶರಣ್ ಮಹತ್**
> ವಿರೋಧ ಪಕ್ಷದ ನಾಯಕ

ವಿಶ್ವಾಸಮತ ಕಳೆದುಕೊಂಡಿರುವ ಒಲಿ ಅವರಿಗೆ ಸಂಸತ್ ವಿಸರ್ಜನೆಗೆ ಶಿಫಾರಸು ಮಾಡುವ ಕಾನೂನು ಅಧಿಕಾರ ಇಲ್ಲ ಎಂದು ವಿರೋಧ ಪಕ್ಷಗಳು ಪ್ರತಿಪಾದಿಸಿವೆ.

ಅಫ್ಗಾನ್‌ನಲ್ಲಿ ಶಾಂತಿ ಪ್ರಕ್ರಿಯೆಗೆ ಪಾಕ್ ಸಹಕಾರ: ಅಮೆರಿಕ

ವಾಷಿಂಗ್ಟನ್ (ಪಿಟಿಐ): ಅಫ್ಗಾನಿಸ್ತಾನದಲ್ಲಿ ಸೇನಾ ಉಪಸ್ಥಿತಿಯನ್ನು ಬಲಪಡಿಸಲು ಹೆಚ್ಚಿನ ವಿಮಾನಗಳ ಹಾರಾಟಕ್ಕೆ ಪಾಕಿಸ್ತಾನ ಅವಕಾಶ ಕಲ್ಪಿಸಿದೆ ಎಂದು ಅಮೆರಿಕದ ಸೇನೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಕ್ಷಣಾ ಪಡೆಯ ಇಂಡೊ ಫೆಸಿಫಿಕ್ ವ್ಯವಹಾರಗಳ ವಿಭಾಗದ ಉಪ ಕಾರ್ಯದರ್ಶಿ ಡೇವಿಡ್ ಎಫ್ ಹೆಲ್ವೆ ಅವರು ಸಂಸತ್ತಿನ ಸೇನಾ ಸೇವೆಗಳ ಸಮಿತಿ ಸದಸ್ಯರಿಗೆ ಈ ಮಾಹಿತಿ ನೀಡಿದ್ದಾರೆ.

ಯುದ್ಧದಿಂದ ಬಾಧಿತ ನೆರೆ ರಾಷ್ಟ್ರದಲ್ಲಿ ಶಾಂತಿ ಪ್ರಕ್ರಿಯೆಗೆ ಪಾಕಿಸ್ತಾನದ ಪಾತ್ರ ಮಹತ್ವದ್ದಾಗಿದೆ. ಈ ಸಂಬಂಧ ಆ ದೇಶದ ಜೊತೆಗೆ ಚರ್ಚೆ ನಡೆದಿದೆ ಎಂದು ಅವರು ತಿಳಿಸಿದ್ದಾರೆ.

ಪಾಕಿಸ್ತಾನ ಮುಖ್ಯವಾಗಿ ಅದರ ಗುಪ್ತದಳ ವಿಭಾಗ ಐಎಸ್ಐ ಹಾಗೂ ಭವಿಷ್ಯದಲ್ಲಿ ಅದು ನಿರ್ವಹಿಸುವ ಪಾತ್ರದ ಕುರಿತು ಖಚಿತವಾಗಿ ವಿವರಿಸಬಲ್ಲಿರಾ ಎಂದು ಈ ಸಂದರ್ಭದಲ್ಲಿ ಸಮಿತಿಯ ಸದಸ್ಯ ಜೋ ಮಚ್ಚಿನ್ ಪ್ರಶ್ನಿಸಿದರು.

ಈ ವರ್ಷದ ಸೆಪ್ಟೆಂಬರ್ 11ರಿಂದ ಜಾರಿಗೆ ಬರುವಂತೆ ಅಫ್ಗಾನಿಸ್ತಾನದಿಂದ ಸೇನೆಯನ್ನು ಹಿಂಪಡೆಯಲಾಗುವುದು ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಕಳೆದ ತಿಂಗಳು ಪ್ರಕಟಿಸಿದ್ದರು.

ಶ್ರದ್ಧಾಂಜಲಿ ಮತ್ತು ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
DH DECCAN HERALD ಪ್ರಜಾವಾಣಿ
ಸಂತೋಷ್ ಕುಮಾರ್ : 9880856233
ಜೆರ್ರಿ : 9731810277 | ರವಿಚಂದ್ರ : 9901641752
ವಿಶಾಲ್ : 9845114560 | ತನ್ವೀರ್ : 9886213331
ಇ–ಮೇಲ್ : dhclassifieds@deccanherald.co.in

WEEKEND CORNER

OXYGEN UNLIMITED
3B Medical USA
STRATUS 5 5L OXYGEN CONCENTRATOR
93% +or- 3% @ 5LPM



1 YEAR WARRANTY
Max Retail Price ₹1,20,000/-
₹75,000/-

Pulse Oximeter



MOQ 50 PIECES
Attractive Prices
Looking for Medical Distributors & Wholesalers
Special discount for Apartments and other Associations/NGOs /Corporates & Charitable organisations on bulk purchase.
Call: 80887 32817, 63649 80009

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಭವಿಷ್ಯ
Astrology
ಶ್ರೀರಾಘವೇಂದ್ರ ಸ್ವಾಮಿ ಜ್ಯೋತಿಷಾಲಯ ಪಂಡಿತ್ ರಾಘವೇಂದ್ರ ಗೂರುಜಿ ನಿಮ್ಮ ಯಾವುದೇ ಸಮಸ್ಯೆ ಇರಲಿ 3ದಿನದಲ್ಲಿ ಫೋನಿನ ಮೂಲಕ ಪರಿಹಾರ ಶತಸಿದ್ಧ ಮಂತ್ರಾಲಯ 7760909072

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information Contact:
9880856233
9731810277
9886213331

ಉದ್ಯೋಗಾವಕಾಶ
General
ನಾಗರಬಾವಿಯಲ್ಲಿರುವ ಮನೆಯಲ್ಲಿ ಕೆಲಸಮಾಡಲು ಮಹಿಳಾ ಅಥವಾ ಗಂಡ ಹೆಂಡತಿಯರು ಮನೆಕೆಲಸಕ್ಕೆ ಬೇಕಾಗಿದ್ದಾರೆ. ವಸತಿಯೊಂದಿಗೆ ಉತ್ತಮ ಸಂಬಳ ನೀಡಲಾಗುವುದು. ಸಂಪರ್ಕಿಸಿ: 9108759269

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು



ಧ್ವನ್ಯಾಲೋಕದ ಧ್ವನಿ 9

ತ್ಯಾಗ, ಸ್ವಾಭಿಮಾನದ ಅನ್ವರ್ಥಕನಾಮ ಸೆಲ್ವಿ 10





ದೇವರು, ದೆವ್ವ ಮತ್ತು ಆ ಎರಡು ಸಿನಿಮಾ! 11

ಬಿಕ್ಕಟ್ಟಿನಲ್ಲಿ ಅರಳುವ ಮನುಷ್ಯತ್ವ



ಬದುಕು ನಿಂತ ಬಂಡಿ...
ಸಾಂಕ್ರಾಮಿಕದಿಂದ ಕೋಟ್ಯಂತರ ಮಂದಿಯ ಬದುಕು ಈ ಕಾರ್ಮಿಕರು ಕುಳಿತ ಬಂಡಿಯಂತೆಯೇ ಈಗ ನಿಂತಲ್ಲೇ ನಿಂತುಹೋಗಿದೆ. ಈ ಬಂಡಿಯು ಮುನ್ನಡೆಯಲು ಮನುಷ್ಯತ್ವದ ಇಂಧನಶಕ್ತಿ ಬೇಕೇಬೇಕಾಗಿದೆ

> ನಮ್ಮ ಬದುಕು ಉಳಿದರೆ ಸಾಕು, ನಮ್ಮ ನೋವಷ್ಟೇ ದೊಡ್ಡದು ಎಂದು ತಳಮಳಿಸುವ ಪ್ರವೃತ್ತಿ ಹೆಚ್ಚುತ್ತಿರುವ ಸಾಂಕ್ರಾಮಿಕದ ಈ ಕಾಲಘಟ್ಟದಲ್ಲಿ ಮಹತ್ವದ ಸಾಹಿತ್ಯ ಕೃತಿಗಳ ಮರುಚಿಂತನೆಯು ಮನುಷ್ಯತ್ವದ ಚಿಲುಮೆಯೊಂದು ಮತ್ತೆ ಪುಟಿದೆದ್ದು ನಿಲ್ಲುವಂತೆ ಮಾಡುತ್ತದೆ. ಸಮಾಜದ ಹುಳುಕುಗಳನ್ನು ವಿಪತ್ತುಗಳು ಮುಖಕ್ಕೆ ರಾಚಿದಂತೆ ಹೊರಹಾಕುತ್ತಿರುವಾಗ ಡಾ.ರಿಯು, ತಾಹು ಅವರಂತಹ ಪಾತ್ರಗಳು ಮಾನವೀಯತೆಯ ದೀವಟಿಗೆಯನ್ನು ಹಿಡಿದುಹೊರಟ ಸಂತರಂತೆ ಗೋಚರಿಸುತ್ತವೆ...

ಬೆಂಗಳೂರಿನಲ್ಲಿ ಕೋವಿಡ್ ಸ್ವಯಂಸೇವಕರಾಗಿ ಕೆಲಸ ಮಾಡುತ್ತಿರುವ ಉಪನ್ಯಾಸಕಿ ಎಸ್ತರ್ ಮೇರಿ ಮತ್ತು ವಿದ್ಯಾರ್ಥಿನಿ ಅಕ್ಷಯಾ. ತಾಹು ಪ್ರತಿಪಾದನೆಯ 'ಯಾವುದು ರೋಗವೆಂದು ಸ್ಪಷ್ಟ ಗೊತ್ತಿರುವ, ಅವುಗಳಿಂದ ಬಿಡುಗಡೆಗೊಳ್ಳಲು ಕೂಡ ಸೆಣಸುವ' ಮೂರನೇ ವರ್ಗಕ್ಕೆ ಸೇರಿದ ಇಂಥವರ ಸದ್ದಿಲ್ಲದ ಸೇವೆಯಲ್ಲಿ ಮನುಷ್ಯತ್ವ ಅರಳಿ ನಿಲ್ಲುತ್ತದೆ...



ರಹಮತ್ ತರೀಕೆರೆ

ಮಹತ್ವದ ಸಾಹಿತ್ಯ ಕೃತಿಗಳಲ್ಲಿ ಕೆಲವು ಸನ್ನಿವೇಶಗಳು ಮನದಲ್ಲಿ ಅಚ್ಚಳಿಯದೆ ಉಳಿದುಬಿಡುತ್ತವೆ; ಬಾಳಿನ ಬೇರೆಬೇರೆ ಘಟ್ಟಗಳಲ್ಲಿ ನೆನಪಾಗಿ ನುಗ್ಗಿ ಸಂವೇದನೆಯನ್ನು ಹರಿತಗೊಳಿಸುತ್ತವೆ. ಉದಾ: ಟಾಲ್‌ಸ್ಟಾಯನ 'ಒಬ್ಬನಿಗೆ ಎಷ್ಟು ನೆಲ ಬೇಕು?' ಕತೆಯ ಕೊನೆಯ ಸನ್ನಿವೇಶ, ಮಹಾಭಾರತದಲ್ಲಿ ಉಪಪಾಂಡವರ ಹತ್ಯೆಯ ಹೊತ್ತಿನ ದ್ರೌಪದಿ ಅಳಲು, ಪಂಪನ 'ಆದಿಪುರಾಣ'ದಲ್ಲಿ ವೃಷಭನಾಥನು ದಿಗ್ವಿಜಯ ದಾಖಲಿಸಲು ವೃಷಭಾಚಲಕ್ಕೆ ಹೋದಾಗ ಸಂಭವಿಸುವ ಗರ್ವಭಂಗ, 'ಒಡಲಾಳ'ದಲ್ಲಿ ಸಾಕವ್ವ ಮೊಮ್ಮಗನಿಗೆ ಕತೆ ಹೇಳುವ ಪ್ರಸಂಗ, 'ಮ್ಯಾಕ್‌ಬೆತ್'ನಲ್ಲಿ ನಿದ್ರಾಹೀನತೆಯಿಂದ ನರಳುವ ಲೇಡಿ ಮ್ಯಾಕ್‌ಬೆತಳ ಆಕ್ರಂದನ, 'ಮಲೆಗಳಲ್ಲಿ ಮದುಮಗಳು'ವಿನಲ್ಲಿ ದೊಡ್ಡಸೇಸಿ ತನ್ನ ಮಗನನ್ನು 'ಹೊನ್ನಾಳಿ ಹೊಡ್ತ'ದಿಂದ ಉಳಿಸುವುದು- ಇತ್ಯಾದಿ.

ಈ ಸನ್ನಿವೇಶಗಳು ಆಯಾ ಕೃತಿಯ ಭಾಗಗಳಾಗಿ ಅರ್ಥ ನೀಡುವಂತೆ, ಸ್ವತಂತ್ರ ಪ್ರಸಂಗಗಳಾಗಿಯೂ ಉಳಿದು ನಿಷ್ಠುರವಾದ ಲೋಕಸತ್ಯಗಳನ್ನು ನಿರೂಪಿಸುತ್ತವೆ; ನಮ್ಮ ಸದ್ಯದ ಅವಸ್ಥೆಯನ್ನು ಕಂಡು ಇದೀಗ ಬರೆದಿದ್ದು ಎಂಬಂತೆ ವಾಸ್ತವವನ್ನು ಮುಖಕ್ಕೆ ಹಿಡಿಯುತ್ತವೆ. ಬಗೆದಷ್ಟೂ ಅರ್ಥ ಕೊಡುತ್ತ ಗಹನವಾದ ಜೀವನದರ್ಶನ ಹೊಮ್ಮಿಸುತ್ತವೆ; ನಾವು ಕಟ್ಟಿಕೊಂಡಿರುವ ವ್ಯಕ್ತಿತ್ವ, ಕುಟುಂಬ, ಸಮಾಜ, ಧರ್ಮ, ಪಂಥ, ಸಿದ್ಧಾಂತಗಳು, ಆತ್ಮಾವಲೋಕನ ಮಾಡಿಕೊಳ್ಳುವಂತೆ ಪ್ರೇರೇಪಿಸುತ್ತವೆ; ಜಗತ್ತಿನ ಶ್ರೇಷ್ಠ ನಾಟಕ ಮತ್ತು ಸಿನಿಮಾಗಳಲ್ಲೂ ಹೀಗೆ ಕಾಡುವ ಪ್ರಸಂಗಗಳಿವೆ.



ಫ್ರೆಂಚ್ ಲೇಖಕ ಆಲ್ಬರ್ಟ್ ಕಮೂನ 'ಪ್ಲೇಗ್' ಕಾದಂಬರಿಯಲ್ಲೂ (ಅನು: ಎಚ್.ಎಸ್.ರಾಘವೇಂದ್ರ ರಾವ್) ಇಂತಹ ಎದೆಕಲಕುವ ಅದೆಷ್ಟೊ ದೃಶ್ಯಗಳಿವೆ. ಅವುಗಳಲ್ಲಿ ಚರಿತ್ರೆಕಾರ ತಾಹುವಿನ ಚಿಂತನಾ ಪ್ರಸಂಗವೂ ಒಂದು. ಒಂದು ಸಂಜೆ ಮನೆಯ ಮಾಳಿಗೆಯ ಮೇಲೆ ಕೂತಿರುವಾಗ, ಪ್ಲೇಗ್ ರೋಗಿಗಳ ಆರೈಕೆಯನ್ನು ತಪಸ್ಸಿನಂತೆ ಮಾಡುತ್ತಿರುವ ಮಿತ್ರನಾದ ಡಾ. ರಿಯೂನ ಜತೆ, ತಾಹು ಆತ್ಮಕಥೆಯ ರೂಪದಲ್ಲಿ ಚಿಂತನೆ ಹಂಚಿಕೊಳ್ಳುತ್ತಾನೆ. ವ್ಯಕ್ತಿಗಳ ಒಳತೋಟಿಗಳನ್ನು ಮತ್ತು ರೋಗಗ್ರಸ್ತ ಊರಿನ ವರ್ಣನೆಯನ್ನು ಸುದೀರ್ಘವಾಗಿ ಮಾಡುತ್ತ, ತನ್ನ ಜಿಜ್ಞಾಸಾ ಶೈಲಿಯಿಂದ ಕೆಲವೊಮ್ಮೆ ದಣಿವುಂಟು ಮಾಡುವ ಈ ಕಾದಂಬರಿಯಲ್ಲಿ, ತಾಹುವಿನ ಜಿಜ್ಞಾಸಾ ಪ್ರಸಂಗವು, ಬೆಳಗುವ ಕನ್ನಡಿಯಂತಿದೆ.

ತಾಹು, ಒಬ್ಬ ಪ್ರತಿಷ್ಠಿತ ಸರ್ಕಾರಿ ವಕೀಲನ ಮಗ. ಅವನಪ್ಪನಿಗೆ ಒಂದು ವಿಚಿತ್ರ ಹವ್ಯಾಸವಿರುತ್ತದೆ. ಅದೆಂದರೆ, ಯುರೋಪಿನಲ್ಲಿ ಟ್ರೈನುಗಳು, ಎಲ್ಲಿಂದ, ಎಲ್ಲಿಗೆ, ಯಾವ ಹೊತ್ತಿಗೆ ಹೊರಡುತ್ತವೆ ಮತ್ತು ತಲುಪುತ್ತವೆ ಎಂಬ ತಿಳಿವಳಿಕೆ. ಅವನು ರೈಲ್ವೆ ವೇಳಾಪಟ್ಟಿಯನ್ನು ಧರ್ಮಗ್ರಂಥದಂತೆ ನಿತ್ಯವೂ ಪಠಿಸುತ್ತಿರುತ್ತಾನೆ. ವೃತ್ತಿಬದುಕಿನ ಯಶಸ್ಸಿನ ಬೆನ್ನುಹತ್ತಿದ್ದ ಆತನಿಗೆ, ಹೆಂಡತಿಯ ಜತೆ ಕ್ಷಣಕಾಲ ಕೂತು ಆಪ್ತವಾಗಿ ಪ್ರೀತಿಯ ಮಾತಾಡುವುದಕ್ಕೂ ಸಾಧ್ಯವಾಗಿರುವುದಿಲ್ಲ. ತಾಹು ಹೇಳುವಂತೆ, ಅವನ ತಾಯಿ ಒಬ್ಬಳು ಅಸಹಾಯಕ ಹೆಂಗಸು; 'ಎಲ್ಲ ಆಸೆ, ಭರವಸೆಯನ್ನು ಕಳೆದುಕೊಂಡು ಸನ್ಯಾಸಿನಿಯಂತೆ ಬದುಕಿದ್ದವಳು.'

ಹೀಗಿರುತ್ತ ತಾಹೂನ ಅಪ್ಪ ಒಂದು ದಿನ, ತನ್ನ ಹದಿಹರೆಯದ ಮಗನನ್ನು ಕೋರ್ಟ್‌ಕಲಾಪ ತೋರಿಸಲೆಂದು ಕರೆದೊಯ್ಯುತ್ತಾನೆ. ತನ್ನ ವಾದವೈಖರಿಯಿಂದಲೂ ಕಾನೂನು ಪಾಂಡಿತ್ಯದಿಂದಲೂ ಮಗನನ್ನು ಬೆರಗುಗೊಳಿಸುವುದು, ಸಾಧ್ಯವಾದರೆ ಮಗನೂ ವಕೀಲಿ ವೃತ್ತಿ ಕೈಗೊಳ್ಳುವಂತೆ ಪ್ರೇರೇಪಿಸುವುದು ಅವನ ಇರಾದೆ. ಸದರಿ ದಿನ, ಆತ ಕೋರ್ಟಿನಲ್ಲಿ ಈಗಾಗಲೇ ತಪ್ಪೊಪ್ಪಿಗೆ ಮಾಡಿಕೊಂಡಿರುವ ಒಬ್ಬ ಬಡಪಾಯಿ ಆರೋಪಿಗೆ ಮರಣದಂಡನೆಯೇ ಆಗತಕ್ಕದ್ದು ಎಂದು ಹಟ ಹಿಡಿದು ವಾದಿಸುತ್ತಾನೆ. ತಾಹು ಪ್ರಕಾರ ಆಗ 'ಅವನ ಒಳ್ಳೇತನ ಎಲ್ಲೋ ಹೊರಟುಹೋಗಿತ್ತು. ಬಾಯಿಂದ ದೊಡ್ಡದೊಡ್ಡ ಮಾತು ಹಾವುಗಳಂತೆ ಹೊರಬರುತ್ತಿದ್ದವು.' ಅಪರಾಧಿಗಳಿಗೆ ಮರಣದಂಡನೆ ವಿಧಿಸುವುದನ್ನು ಖುದ್ದಾಗಿ ಪರಿಶೀಲಿಸಲು ಬೆಳಗಿನ ಜಾವವೇ ಎದ್ದು ಶ್ರದ್ಧೆಯಿಂದ ಜೈಲಿಗೆ ಹೋಗುವ ಅಭ್ಯಾಸವೂ ಅವನಿಗೆ ಇರುತ್ತದೆ.

ಕೋರ್ಟಿನಿಂದ ಮರಳಿದ ಬಳಿಕ ತಾಹುವಿಗೆ ಅಪ್ಪನ ವೃತ್ತಿ, ಹವ್ಯಾಸ ಮತ್ತು ಜೀವನದೃಷ್ಟಿಗಳ ಬಗ್ಗೆ ಜುಗುಪ್ಸೆ ಹುಟ್ಟುತ್ತದೆ; ಕಟಕಟೆಯಲ್ಲಿ ನಿಂತಿದ್ದ ಅಸಹಾಯಕ ವ್ಯಕ್ತಿಯ ಮುಖ ಇನ್ನಿಲ್ಲದಂತೆ ಕಾಡಿಸುತ್ತದೆ. ತನ್ನನ್ನು ಪ್ರೀತಿಸುವ, ಆದರೆ ಮತ್ತೊಬ್ಬರ ಸಂಕಟವನ್ನು ಆಸ್ವಾದಿಸುವ ಅಪ್ಪನ ವ್ಯಕ್ತಿತ್ವ, ಅವನ ಬಾಳಗತಿಯನ್ನೇ ಬದಲಿಸುತ್ತದೆ. ಅವನು ಮನೆಯನ್ನು ತೊರೆದು, ಸ್ವತಂತ್ರವಾದ ಬದುಕನ್ನು ಕಟ್ಟಿಕೊಳ್ಳುತ್ತಾನೆ. ಅವನ ಪ್ರಕಾರ 'ಅನ್ಯರಿಗೆ ತೊಂದರೆ ಕೊಡ್ತಾ ಬದುಕೋದೇ ಪ್ಲೇಗಿನ ಲಕ್ಷಣ'. ಇಂತಹ ರೋಗಗ್ರಸ್ತರು ತಮ್ಮನ್ನು ಸಭ್ಯ ನಾಗರಿಕರು ಎಂದು ಪರಿಭಾವಿಸಿರುತ್ತಾರೆ. ತಮ್ಮ ನೆಮ್ಮದಿಯ ಬದುಕಿಗೆ ಮತ್ತೊಬ್ಬರ ಕೊಲೆಯನ್ನು ಸಮರ್ಥಿಸುತ್ತಾರೆ. ತಾಹು ವಿವರಿಸುವಂತೆ ಸಮಾಜದಲ್ಲಿ ಮೂರು ಮಾದರಿಯ ಜನರಿದ್ದಾರೆ. 1. ತಮ್ಮ ನಂಬಿಕೆ ಮತ್ತು ವರ್ತನೆಗಳು ಸ್ವತಃ ರೋಗವೆಂದೇ ಅರಿಯದವರು. ಆ ರೋಗಗಳನ್ನೇ ಸಂತೋಷದಿಂದ ಅನುಭವಿಸುವವರು. ಅವನ್ನು ಮತ್ತೊಬ್ಬರಿಗೆ ಹರಡುತ್ತ ಜೀವಿಸುವವರು- ಅವನ ಅಪ್ಪನಂತೆ. 2. ಯಾವುದು ರೋಗವೆಂದು ಗೊತ್ತಿರುವವರು. ಆದರೆ ಪ್ರತಿರೋಧಿಸಲು ಆಗದವರು- ಅವನ ಅಮ್ಮನಂತೆ. 3. ಯಾವುದು ರೋಗವೆಂದು ಸ್ಪಷ್ಟ ಗೊತ್ತಿರುವವರು; ಅವುಗಳಿಂದ ಬಿಡುಗಡೆಗೊಳ್ಳಲು ಕೂಡ ಸೆಣಸುವವರು. ತಾಹು ಹೇಳುತ್ತಾನೆ: 'ಈ ಲೋಕದಲ್ಲಿ ಪಿಡುಗುಗಳೂ ಇವೆ, ಬಲಿಪಶುಗಳೂ ಇದ್ದಾರೆ. ನಾನು ಬಲಿಪಶುಗಳ ಜತೆಗೆ ಇರುವುದನ್ನು ಆಯ್ಕೆ ಮಾಡಿಕೊಂಡೆ.'

ತಾಹು ತನ್ನ ಚಿಂತನೆಯ ಸಾಕಾರರೂಪವನ್ನು ಡಾ. ರಿಯೂನಲ್ಲಿ ಕಾಣುತ್ತಾನೆ. ಯಾಕೆಂದರೆ, ರಿಯೂ, ಮಡದಿಯ ಮರಣವಾರ್ತೆ ಬಂದಾಗಲೂ, ಅದನ್ನು ಪಕ್ಕಕ್ಕಿಟ್ಟು ಜನರ ನೋವಿಗೆ ಮಿಡಿಯುವವನು; ಅವರ ದುಮ್ಮಾನ ಆಲಿಸುವವನು. ಈ ಗುಣವು ವೈದ್ಯನಾಗಿ ಅವನ ವೃತ್ತಿಪರತೆಯನ್ನು ಮಾತ್ರವಲ್ಲ, ಅವನೊಳಗಿನ ಧೀಮಂತ ಮನುಷ್ಯತ್ವದ ಭಾಗವೂ ಆಗಿದೆ. ತಾವಷ್ಟೇ ಬದುಕುಳಿಯಬೇಕು ಎಂದು ಆಲೋಚಿಸುವ, ತಮ್ಮ ದುಃಖವೇ ದೊಡ್ಡದು ಎಂದು ತಳಮಳಿಸುವ ಅನೇಕರು, ರಿಯೂನ ಚುಂಬಕ ಪ್ರಭಾವಕ್ಕೆ ಒಳಗಾಗುತ್ತಾ ಹೋಗುತ್ತಾರೆ.

ತನ್ನ ಎಳೆಮಗನ ದಾರುಣ ಸಾವಿನಿಂದ ಕಂಗೆಡುವ ನ್ಯಾಯಾಧೀಶ ಓಥಾನ್, ದುಗುಡವನ್ನು ಮರೆಯಲು ರೋಗಿಗಳ ಆರೈಕೆಯಲ್ಲಿ ತೊಡಗುತ್ತಾನೆ ಮತ್ತು ಸೋಂಕು ತಗುಲಿ ಜೀವತ್ಯಾಗ ಮಾಡುತ್ತಾನೆ; ಅಗಲಿದ ಪ್ರಿಯತಮೆಯನ್ನು ಕೂಡುವುದಕ್ಕಾಗಿ, ಲಾಕ್‌ಡೌನ್ ಆಗಿರುವ ಶಹರದಿಂದ ಹೇಗಾದರೂ ತಪ್ಪಿಸಿಕೊಂಡು ಹೋಗಲು ಹರಸಾಹಸ ಪಡುವ ಪತ್ರಕರ್ತ ರೋಂಬೆ, ಹಾಗೆ ಹೋಗುವ ಗಳಿಗೆ ಕೂಡಿಬಂದಾಗ, ಅದನ್ನು ಕೈಬಿಟ್ಟು ರೋಗಿಗಳ ಶುಶ್ರೂಷೆಗೆ ನಿಲ್ಲುತ್ತಾನೆ. ಜೀವನ್ಮರಣ ಸಂಘರ್ಷದಲ್ಲಿ ಜನ ತೊಳಲಾಡುತ್ತಿರುವಾಗ, ತಾನು ಪ್ರಿಯತಮೆಯನ್ನು ರಮಿಸುವುದು ಭೀಕರರೋಗವೆಂದು ಅವನಿಗೆ ಅನಿಸಿಬಿಡುತ್ತದೆ.

ಕಮೂ 'ಪ್ಲೇಗ್' ಬರೆವ ಕಾಲಕ್ಕೆ (1947) ನಾಜಿಗಳು ಜರ್ಮನಿಯಲ್ಲಿ ಮಾಡಿದ ಯಹೂದಿ ಹತ್ಯಾಕಾಂಡ ಮತ್ತು ಎರಡನೇ ಮಹಾಯುದ್ಧಗಳು ಮುಗಿದಿರುತ್ತವೆ. ಯುರೋಪಿನ ದೇಶಗಳು ಸತ್ತವರ ಮತ್ತು ಉಧ್ವಸ್ತಗೊಂಡ ಕುಟುಂಬಗಳ ವಿಷಾದಕರ ಎಣಿಕೆಯಲ್ಲಿ ಮುಳುಗಿರುತ್ತವೆ. **11ನೇ ಪುಟಕ್ಕೆ...**

ಸೊಂಡಿಲ ಮುಖಿ ಪೂಜಿಪ ನಾಡಿನಲ್ಲಿ...

ಅಸ್ಸಾಮಿನಲ್ಲಿ ಇತ್ತೀಚೆಗೆ 18 ಆನೆಗಳು ದುರ್ಮರಣವನ್ನು ಕಂಡವು. ತನ್ನ ಕುಟುಂಬದ ಈ ದಾರುಣ ಸ್ಥಿತಿ ಕುರಿತು ಗುಂಪಿನ ಅಧಿನಾಯಕಿ, ಮನುಕುಲಕ್ಕೆ ಬರೆದ ಮನಕಲುಕುವ ಪತ್ರದ ಸಾಲುಗಳಿವು...

ಅಖಿಲೇಶ್ ಚಿಪ್ಪಳಿ

ನಿಮಗಿದೋ ಕೋವಿಡ್ ಸಮಯ. ಕುಶಲವೇ ಎಂದಾದರೂ ಹೇಗೆ ಕೇಳೋದು? ಎಂತೆಂಥವರೆಲ್ಲ ಹೋಗಿಬಿಟ್ರು. ಮೂಕಜೀವಿಗಳಾದ ನಮ್ಮಂಥವರ ಧ್ವನಿಯಾಗಿದ್ದ ಹಸಿರಿನ ಸಂತ ಸುಂದರಲಾಲ ಬಹುಗುಣ ಅವರಂಥವರೂ ಅಗಲಿಬಿಟ್ಟರಲ್ಲ? ಅವರಿಗೆ ಕಾಡಿನ ಪರಿವಾರದ ಪರವಾಗಿ ನಮ್ಮ ಶ್ರದ್ಧಾಂಜಲಿ. ನಮ್ಮದೂ ಇಂತಹ ಸಾವು, ನೋವಿನ ಕಥೆಯೇ. ಮರೆಮಾಡುವುದೇಕೇ? ಅದಕ್ಕೆ ಕಾರಣವಾದವರು ನೀವೇ, ಮನುಷ್ಯರು.

ನಾವುಗಳು, ಅದೇ ಆನೆಗಳು, ನೆಲದ ಮೇಲಿನ ಎಲ್ಲ ಪ್ರಾಣಿಗಳಿಗಿಂತ ದೊಡ್ಡ ಜೀವಿಗಳು. ವಿಕಾಸವಾಗುತ್ತಲೇ ಪ್ರಾಕೃತಿಕ ಸವಾಲುಗಳನ್ನು ಎದುರಿಸಿ ಬದುಕುವುದನ್ನು ಕಲಿತುಕೊಂಡಿದ್ದೇವೆ. ನಲವತ್ತು ಆನೆಗಳ ಹಿಂಡಿನ ಒಡತಿಯಾದ ನಾನು, ನಿಮ್ಮ ಭೌಗೋಳಿಕ ವಿಭಜನೆಯ ಪ್ರಕಾರ, ಅಸ್ಸಾಂನ ನಗೋಂವ ಜಿಲ್ಲೆಯಲ್ಲಿ ವಾಸಿಸುತ್ತೇನೆ. ಈ ರಾಜ್ಯದಲ್ಲಿ ನಮ್ಮ ಸಂಖ್ಯೆ ಸುಮಾರು ಆರು ಸಾವಿರ. ನಿಮಗೆ ಹೇಗೆ ನಿಮ್ಮ ಮನೆಯೋ, ಹಾಗೇ ನಾವು ವಾಸಿಸುವ ಕಾಡು ನಮ್ಮ ಮನೆ. ಇಲ್ಲಿ ಮುಚ್ಚಿಡುವಂಥದ್ದು ಏನೂ ಇಲ್ಲ. ನಮ್ಮ ಆವಾಸತಾಣಗಳನ್ನು ದುರಾಸೆಯಿಂದ ನೀವು ಹಾಳು ಮಾಡಿದ್ದೀರಿ. ಅಲ್ಲ, ನಮ್ಮ ನೆಲ ನಿಮ್ಮದು ಹೇಗಾಗುತ್ತದೆ? ನಮ್ಮ ನೆಲೆಯಲ್ಲಿ ನಾವು ಓಡಾಡಿಕೊಂಡಿದ್ದರೂ ನೀವು ವಿನಾಕಾರಣ ನಮ್ಮನ್ನು ಕೊಲ್ಲುತ್ತೀರಿ ಮತ್ತು ಅದಕ್ಕೆ ವನ್ಯಜೀವಿ ದಾಳಿ ಎಂಬ ಹೆಸರನ್ನಿಟ್ಟು ನಿಮ್ಮ ಕ್ರಮವನ್ನೇ ಸಮರ್ಥಿಸಿಕೊಳ್ಳುತ್ತೀರಿ.

ಕೇರಳದಲ್ಲಿ ನಮ್ಮ ಕುಲದ ಗರ್ಭಿಣಿಯನ್ನು ಅನಾನಸ್ ಬಾಂಬ್ ಇಟ್ಟು ದಾರುಣವಾಗಿ ಕೊಂದವರು ನೀವು, ಬಂಗಾಳದಲ್ಲಿ ನಮ್ಮ ಗುಂಪಿನ ಮೇಲೆ ಪೆಟ್ರೋಲ್ ಬಾಂಬುಗಳನ್ನು ಎಸೆದು ಕ್ರೌರ್ಯ ಮೆರೆದವರೂ ನೀವೇ. ಅರೆ, ತಮಿಳುನಾಡಿನ ಮಸಿನಗುಡಿಯ ರೆಸಾರ್ಟ್‌ವೊಂದಕ್ಕೆ ಬಂದ ನಮ್ಮ ಸಹಚರನ ಮೇಲೆ ಟೈರಿಗೆ ಬೆಂಕಿಹಚ್ಚಿ ಎಸೆದಿದ್ದನ್ನು ಮರೆತುಬಿಟ್ಟಿರಾ? ಹಾದಿ ತಪ್ಪಿ ಬಂದವರನ್ನು ಕಳಿಸುವ ಕ್ರಮವೇ ಇದು? ಆ ಟೈರು, ಮೊರದಂತಹ ಕಿವಿಯಲ್ಲಿ ಸಿಕ್ಕಿ, ಬೆಂಕಿ ಹೊತ್ತಿಕೊಂಡ ಕಾರಣ ನಮ್ಮ ಸಹಚರ ನರಳಿ ನರಳಿ ಸತ್ತ. ನಿಮ್ಮ ಇಂತಹ ದೌರ್ಜನ್ಯಗಳು ಒಂದೇ, ಎರಡೇ?

ದಂತಚೋರ ವೀರಪ್ಪನ್ ಸತ್ತ ನಂತರದಲ್ಲಿ ಕರ್ನಾಟಕ-ತಮಿಳುನಾಡಿನಲ್ಲಿ ನಮ್ಮ ಗಳ ಬೇಟೆ ಏನೋ ಕಡಿಮೆಯಾಗಿದೆ. ಆದರೆ, ವಿದ್ಯುತ್ ಸ್ಪರ್ಶದಿಂದ ನಮ್ಮ ವರು ಸಾವನ್ನಪ್ಪುತ್ತಿರುವುದನ್ನು ಮನುಷ್ಯರಾದ ನೀವು ಯಾವ ರೀತಿ ಸಮರ್ಥಿಸುತ್ತೀರಿ? ಎಂತೆಂತಹ ವಿಶ್ವವಿದ್ಯಾಲಯ ಕಟ್ಟಿ, ಅದರಲ್ಲಿ ಓದಿ ಬಂದವರು ನೀವು. ಅರಣ್ಯದಲ್ಲಿ ನಿಮ್ಮ ಅಭಿವೃದ್ಧಿ ಯೋಜನೆಗಳು ನಮ್ಮ ಪಾಲಿಗೆ ಮರಣಶಾಸನಗಳು ಎನ್ನುವ ಸಣ್ಣ ಸಂಗತಿ ನಿಮ್ಮ ತಲೆಗೆ ಏಕೆ ಹೋಗಲಿಲ್ಲ? ನಮ್ಮ ಪಥಗಳಿಗೆ ಅಡ್ಡಲಾಗಿ ರೈಲುಗಳನ್ನು ಓಡಿಸಿ ನಮ್ಮಲ್ಲಿ ಎಷ್ಟು ಜನರನ್ನು ಕೊಂದಿಲ್ಲ ನೀವು?

10ನೇ ಪುಟಕ್ಕೆ...



ಜೀವ ಕಳೆದುಕೊಂಡ ಆನೆಗೆ ಮಹಿಳೆಯಿಂದ ಅಂತಿಮ ವಿದಾಯ



ಎಂದಿಗೂ ಬಾಗಿಲನ್ನೇ ಹಾಕಿರದಿದ್ದ ಗಾರೆಮನೆ ಚಿಕ್ಕಣ್ಣನವರ ಕೂಡಿ ಬಾಳಿದ ಮನೆಯ ಇಂದಿನ ಸ್ಥಿತಿ ಚಿತ್ರ: ನಿಸರ್ಗ ಗೋವಿಂದರಾಜು

ಕ್ಯಾತಜ್ಜಿಯ ಬೆಳಕಿನ ಹಾದಿ

> ಕಣ್ಣು ಕಾಣದಿದ್ದರೂ ನಿತ್ಯ ಸಂಜೆ ಕ್ಯಾತಜ್ಜಿ ದೀಪ ಹೊತ್ತಿಸುತ್ತಿದ್ದುದು ಯಾರಿಗಾಗಿ? ಆ ಮೂಲಕ ಆಕೆ ಕೊಡುತ್ತಿರುವ ಸಂದೇಶವಾದರೂ ಯಾವುದನ್ನು?

ಜಿ.ವಿ. ಆನಂದಮೂರ್ತಿ

ಕೂಡಿ ಬಾಳುವ ನಡೆ, ವೈಷಮ್ಯ ಮತ್ತು ದ್ವೇಷಗಳಿಲ್ಲದ, ಹೆಚ್ಚು ವ್ಯಸನಗಳಿಲ್ಲದೆ ಬದುಕಿನ ಸಕಾರಾತ್ಮಕ ನಡವಳಿಕೆಗಳಿಂದಲೇ ಕಾಲ ಮತ್ತು ಆಧುನಿಕತೆಯ ಹೊಡೆತಗಳನ್ನು ಸಮರ್ಥವಾಗಿ ತಡೆದಿರುವ ಹಲವಾರು ಹಟ್ಟಿಗಳು ನನ್ನ ಕಣ್ಣ ಮುಂದಿವೆ. ಅಂತಹ ವಿರಳ ಹಟ್ಟಿಗಳ ಸಾಲಿನಲ್ಲಿ ದೊಡ್ಡೇರಿ ಗೊಲ್ಲರಹಟ್ಟಿಯೂ ಒಂದು. ಸುಮಾರು ಅರವತ್ತರಿಂದ ಎಪ್ಪತ್ತು ಕುಟುಂಬಗಳು ವಾಸವಿದ್ದ ಹಟ್ಟಿ ಅದು. ನಾಲ್ಕೈದು ಮಾಳಿಗೆ ಮನೆಗಳನ್ನು ಬಿಟ್ಟರೆ ಉಳಿದವೆಲ್ಲಾ ಗುಡಿಸಲುಗಳಿಂದಲೇ ಇದ್ದ ಹಟ್ಟಿ. ಕಾರುಣ್ಯ, ಸಾಮರಸ್ಯ, ಅಂತಃಕರಣದ ಮೌಲ್ಯಗಳ ಬೇರು ದಿನನಿತ್ಯದ ಬದುಕಿನ ವಿವರಗಳಲ್ಲಿ ಆಳವಾಗಿ ಹಬ್ಬಿದ್ದ ಹಟ್ಟಿ ಅದು.

ಹಟ್ಟಿಯ ಉದಿಬಾಗಿಲನ್ನು ದಾಟಿ ಒಳಕ್ಕೆ ಹೋದರೆ, ಬಲಕ್ಕೆ ಸಿಗುವುದೇ ಕ್ಯಾತಜ್ಜಿಯ ಮನೆ. ಹಸಿ ಇಟ್ಟಿಗೆಯಿಂದ ಕಟ್ಟಿದ, ಕರಲಿನ ಮಾಳಿಗೆ ಮನೆ ಅದು. ಒಂದು ಬಲವಾದ ಗಾಳಿಗೆ ಉದುರಿ ಬೀಳಬಹುದಾದ, ಒಂದು ಭಾರೀ ಮಳೆಗೆ ಮೈವೊಡ್ಡಿದರೆ ಸೋರುವ ಸುಣ್ಣ-ಬಣ್ಣ ಕಾಣದ ಮನೆಯದು! ನನಗೆ ತಿಳಿದಂತೆ ಕ್ಯಾತಜ್ಜಿ ಹುಟ್ಟುಕುರುಡಿ. ಆದ್ದರಿಂದಲೇ ಹಟ್ಟಿಯಲ್ಲಿ ಎಲ್ಲರೂ ಅವಳನ್ನು 'ಕುರುಡು ಕ್ಯಾತಜ್ಜಿ' ಎಂದೇ ಕರೆಯುತ್ತಿದ್ದರು. ಎಡವಿದರೆ ಸಿಗುವ ವರ್ತಮಾನದ ದುಗುಡ, ಆತಂಕ, ನೀರವತೆಗಳ ನಡುವೆಯೂ ಸಣ್ಣಪುಟ್ಟ ಸಂತೋಷಗಳನ್ನು ಬೆನ್ನಟ್ಟಿಹೋಗುವ ನನ್ನ ಇಂಗಲಾರದ ಕುತೂಹಲಗಳ ನಡುವೆ, ಅನೇಕ ಬೇಸಗೆ, ಮಳೆಗಾಲ ಹಾಗೂ ಚಳಿಗಾಲಗಳಲ್ಲಿ ಈ ಹಟ್ಟಿಯೊಂದಿಗೆ ನಾನು ಮಾತನಾಡಿ ಬಂದಿದ್ದೇನೆ. ಇದೇ ಹಟ್ಟಿಯ ಗೋವಿಂದರಾಜು ನನ್ನ ಪ್ರತೀ ಭೇಟಿಯಲ್ಲೂ ನನ್ನೊಂದಿಗೆ ಇರುತ್ತಿದ್ದರು. ಪ್ರತೀ ಭೇಟಿಯಲ್ಲೂ ಈ ಹಟ್ಟಿ ನನಗೆ ಹೊಸತನ್ನೇ ಕಲಿಸಿದೆ. ಯಾವ ಭೇದ ಭಾವವೂ ಇಲ್ಲದ ಸೃಷ್ಟಿಯಲ್ಲಿ ಎಲ್ಲರೂ ಸರಿಸಮಾನರು ಎಂದು ಭಾವಿಸಿದ್ದ ಜನಗಳ ಶ್ರದ್ಧೆಯಿಂದ ರೂಪುಗೊಂಡ ಹಟ್ಟಿ ಅದು.

ಕ್ಯಾತಜ್ಜಿಯನ್ನು ಎಲ್ಲರೂ ಕರೆಯುವಂತೆ 'ಕುರುಡು ಕ್ಯಾತಜ್ಜಿ' ಎಂದು ಕರೆಯಲು ಏಕೋ ನನ್ನ ಮನಸ್ಸು ಯಾವತ್ತೂ ಒಪ್ಪುತ್ತಿರಲಿಲ್ಲ. ಆದ್ದರಿಂದ ನಾವು ಆಕೆಯನ್ನು 'ಕ್ಯಾತಜ್ಜಿ' ಎಂದೇ ಕರೆಯುತ್ತಿದ್ದೆವು. ರವಿಕೆ ಇಲ್ಲದ ದೇಹ, ಹರಿದ ಸೀರೆ, ಮೂಲೆ ಮುಡುಕಲುನಲ್ಲಿದ್ದ ಕೆಲವು ಸ್ವಾರೆಗಳು ಇವಿಷ್ಟೇ ಅವಳ ಆಸ್ತಿ. ಕ್ಯಾತಜ್ಜಿಯ ಮನೆಗೆ ಮಾರು ದೂರದಲ್ಲಿ ಒಂದು ಸೇದೋ ಬಾವಿ. ಬಾವಿಯ ರಾಟೆ ಸದ್ದು ಮಾಡಿದರೆ ಸಾಕು, ಕ್ಯಾತಜ್ಜಿ ಗಡಿಗೆ ಸಮೇತ ಹೊರಬಂದು 'ಯಾರು ತಾಯಿ, ನನಗೂ ಒಂದು ಗಡಿಗೆ ನೀರು ಸೇದಿ ಹುಯ್ಯವ್ವಾ!' ಎಂದು ಕೇಳಿ ಪಡೆಯುತ್ತಿದ್ದಳು. ಪ್ರತಿದಿನ ಸಂಜೆ ಆಗುತ್ತಿದ್ದ ಹಾಗೆಯೇ ಕ್ಯಾತಜ್ಜಿ ತನ್ನ ಮನೆಯ ಆಚೆ ನಿಂತು 'ಲೇ ಅಮ್ಮಯ್ಯಾ, ಯಾರೇ ಅದು! ಯಾರಾದರೂ ಬಂದು ಮನೆವೊಳಗೆ ದೀಪ ಕತ್ತಿಸಿ ಹೋಗ್ರವ್ವ' ಎಂದು ಕರೆಯುತ್ತಿತ್ತು. ನೀರಿಗಾಗಿ ಬಂದಿದ್ದ ಹೆಣ್ಣುಮಕ್ಕಳಲ್ಲಿ ಯಾರಾದರೂ ಒಬ್ಬರು ಬಂದು ಕ್ಯಾತಜ್ಜಿಯ ಮನೆಯಲ್ಲಿ ದೀಪ ಕತ್ತಿಸಿ ಹೋಗುತ್ತಿದ್ದರು.

9ನೇ ಪುಟಕ್ಕೆ...

ಧ್ವನ್ಯಾಲೋಕದ ಧ್ವನಿ

ಭಾರತೀಯ ಇಂಗ್ಲಿಷ್ ಸಾಹಿತ್ಯಕ್ಕೆ ಜಾಗತಿಕ ಮಾನ್ಯತೆ ಸಿಗುವಲ್ಲಿ ಶ್ರಮಿಸಿದ ಪ್ರಮುಖರಲ್ಲಿ ಸಿಡಿಎನ್ ಕೂಡ ಒಬ್ಬರು. ಅವರು ನಿರ್ಮಿಸಿದ ಧ್ವನ್ಯಾಲೋಕ ಪೂರ್ವ–ಪಶ್ಚಿಮ ಸಾಹಿತ್ಯದ ಸಂಗಮ ಸ್ಥಳ. ಇಂಗ್ಲಿಷ್ ಸಾಹಿತ್ಯದ ಈ ಮೇರು ಜನಿಸಿ ನೂರು ವಸಂತಗಳು ಸಂದುಹೋದ ಈ ಸಂದರ್ಭದಲ್ಲಿ ಅವರ ಬದುಕು–ಬರಹಗಳ ಕುರಿತು ಒಂದು ಪುಟ್ಟ ಮೆಲುಕು...

ಎಂ.ಎಸ್. ರಘುನಾಥ್



ಕಲೆ: ಗುರು ನಾವಳ್ಳಿ

ಸುಮಾರು ನಲವತ್ತು ವರ್ಷಗಳ ಹಿಂದೆ, ಆಸ್ಟ್ರೇಲಿಯಾದ ಹೈ ಕಮಿಷನರ್ ಅವರು ಮೈಸೂರು ಭೇಟಿ ನಿಮಿತ್ತ ಅಲ್ಲಿನ ಲಲಿತ ಮಹಲ್ ಪ್ಯಾಲೆಸ್ ಹೋಟೆಲ್‌ನಲ್ಲಿ ಕಾಲಿಡುತ್ತಿದ್ದಂತೆ, ಸ್ವಾಗತಿಸಲು ಬಂದ ಅಧಿಕಾರಿಯೊಬ್ಬರನ್ನು ಅವರು ಮೊದಲು ಕೇಳಿದ ಪ್ರಶ್ನೆಯೆಂದರೆ, ಪ್ರೊಫೆಸರ್ ಸಿ.ಡಿ.ನರಸಿಂಹಯ್ಯ ಅವರು ಸದ್ಯ ಊರಿನಲ್ಲಿದ್ದಾರೆಯೇ? ಅವರೊಂದಿಗೆ ಭೇಟಿಯನ್ನು ಏರ್ಪಡಿಸಬೇಕಲ್ಲ ಎಂದು. ಸುತ್ತಮುತ್ತ ಇದ್ದವರಿಗೆ ಈ ಅತಿಥಿ ಹೆಸರಿಸುತ್ತಿರುವವರು ಯಾರು ಎಂಬ ಕುತೂಹಲ. ಕೊನೆಗೆ ಅವರಿಗೆ ಅರ್ಥವಾಗದೆ ಇದ್ದಾಗ, ತಾವೇ ಆ ಬಗ್ಗೆ ವಿಚಾರಿಸಿ, ನರಸಿಂಹಯ್ಯನವರು ಊರಿನಲ್ಲಿಲ್ಲ, ಮುಂದಿನ ವಾರ ಬರುತ್ತಾರಂತೆ ಎಂದು ಹೇಳಿದಾಗ, ಅವರಿಗೆ ಸ್ವಲ್ಪಮಟ್ಟಿಗೆ ನಿರಾಸೆಯಾಯಿತಂತೆ.

ಹೈ ಕಮಿಷನರ್ ಅವರು ನರಸಿಂಹಯ್ಯನವರ ಬಗ್ಗೆ ವಿಚಾರಿಸಲು ಕಾರಣ, ಅವರು ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿದ್ದರಲ್ಲದೆ 'ಫ್ಲವರಿಂಗ್ ಆಫ್ ಆಸ್ಟ್ರೇಲಿಯನ್ ಲಿಟರೇಚರ್' ಎಂಬ ಕೃತಿಯನ್ನು ಪ್ರಕಟಿಸಿದ್ದರು. ಅವರ ಖ್ಯಾತಿ ಅಮೆರಿಕ, ಆಸ್ಟ್ರೇಲಿಯಾದಲ್ಲೆಲ್ಲ ಹರಡಿತ್ತು.

ನರಸಿಂಹಯ್ಯನವರು ಹುಟ್ಟಿದ್ದು 1921ರ ಮೇ 21ರಂದು. ತಾಯಿ ಹೇಳುತ್ತಿದ್ದ ಜನಪದ ಹಾಡುಗಳು ಹಾಗೂ ಕತೆಗಳನ್ನು ಕೇಳಿಯೇ ಅವರು ಬೆಳೆದಿದ್ದು. ಮೈಸೂರಿನ ಮಹಾರಾಜ ಕಾಲೇಜಿನ ಈ ಪ್ರತಿಭಾವಂತ ವಿದ್ಯಾರ್ಥಿಗೆ, ಅಲ್ಲಿನ ಪ್ರಾಧ್ಯಾಪಕರಾಗಿದ್ದ ಆಗಸ್ಟಿನ್, ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಪಡೆಯಲು ಅನುಕೂಲ ಮಾಡಿಕೊಟ್ಟರು. ಕೇಂಬ್ರಿಡ್ಜ್‌ನಲ್ಲಿ ನರಸಿಂಹಯ್ಯನವರಿಗೆ ಅವರ ಶಿಕ್ಷಕರ ಉಸ್ತುವಾರಿಯನ್ನು ಉದ್ದಾಮ ವಿಮರ್ಶಕ ಎಫ್.ಆರ್.ಲೀವಿಸ್‌ಗೆ ವಹಿಸಲಾಯಿತು. ಲೀವಿಸ್ ಮಾದರಿ ವಿಮರ್ಶೆಯೇ ಅವರ ಸಾಹಿತ್ಯದ ಉಸಿರಾಯಿತು. ಸುಮಾರು ನಾಲ್ಕು ದಶಕಗಳವರೆಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದು, ಶೈಕ್ಷಣಿಕ ವಲಯದಲ್ಲಿ ಆತ್ಮೀಯವಾಗಿ ಸಿಡಿಎನ್ ಎಂದೇ ಕರೆಯಿಸಿಕೊಳ್ಳುತ್ತಿದ್ದ [illegible] ದಾಸಪ್ಪ ನರಸಿಂಹಯ್ಯನವರು ತಮ್ಮ ವಿದ್ವತ್ಪೂರ್ಣ ಬರಹಗಳು ಹಾಗೂ ಭಾಷಣಗಳ ಮೂಲಕ ಭಾರತ ಮಾತ್ರವಲ್ಲ, ತೃತೀಯ ಜಗತ್ತಿನ ಅನೇಕ ವಿಶ್ವವಿದ್ಯಾಲಯಗಳಲ್ಲಿಯೂ ಹೆಸರುವಾಸಿಯಾಗಿದ್ದರು. ಅವುಗಳಲ್ಲಿ ಕೆಲವು ಕಡೆ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಹಾಗೆನೋಡಿದರೆ, ಇಂದಿರಾಗಾಂಧಿಯವರು ಪ್ರಧಾನಮಂತ್ರಿಯಾಗಿದ್ದ ಸಂದರ್ಭದಲ್ಲಿ, ದೆಹಲಿಯಲ್ಲಿ ಇದ್ದು ನೆಹರೂ ಅವರ ಪತ್ರಗಳನ್ನು ಸಂಪಾದಿಸಿ ಕೊಡುವಂತೆ ಸಿಡಿಎನ್ ಅವರನ್ನು ಆಹ್ವಾನಿಸಿದ್ದರಂತೆ. ಆದರೆ, ಸಿಡಿಎನ್ ಅದಕ್ಕೆ ಒಪ್ಪಿಗೆ ಕೊಡಲಿಲ್ಲ. ಅವರು ಇಷ್ಟಪಟ್ಟಿದ್ದರೆ, ಇಂದಿರಾ ಗಾಂಧಿಯವರ ಪ್ರಭಾವದಿಂದ, ಬೇರೊಂದು ಉನ್ನತ ಹುದ್ದೆಯನ್ನು ಪಡೆದುಕೊಳ್ಳಬಹುದಿತ್ತು, ಆದರೂ ಸಿಡಿಎನ್ ಅವರು ಮೈಸೂರಿನಲ್ಲಿಯೇ ಇರಲು ಇಷ್ಟಪಟ್ಟರು. ಶೈಕ್ಷಣಿಕ ವಾತಾವರಣದಲ್ಲೇ ಇದ್ದು ಬೋಧನ ಹಾಗೂ ಸಂಶೋಧನೆಗೆ ಒಲವು ತೋರಿದರು.

ಪ್ರಿನ್ಸ್‌ಟನ್‌ನಲ್ಲಿ ಅಧ್ಯಯನ ಮಾಡುತ್ತಿದ್ದಾಗ, ಅಲ್ಲಿ ವಿಜ್ಞಾನಿ ಐನ್‌ಸ್ಟೀನ್ ಅವರನ್ನು ಭೇಟಿ ಮಾಡಲು ಸಿಡಿಎನ್ ಹೋಗುತ್ತಿದ್ದರಂತೆ. ಪುರಾತನ ಗ್ರಂಥಗಳ ವಿವೇಕವನ್ನು ಪುನಶ್ಚೇತನಗೊಳಿಸುವಂತೆ ಹೇಳಿದ ಅವರ ಮಾತುಗಳಿಂದ ಪ್ರೇರಣೆ ಪಡೆದು ಭಾರತೀಯ ದರ್ಶನ, ಸಾಹಿತ್ಯಗಳ ಪುನರ್ ಅಧ್ಯಯನ ಹಾಗೂ ಪುನರ್ ಮೌಲ್ಯಮಾಪನ ಮಾಡಬೇಕೆಂಬ ಮಹೋದ್ದೇಶದಿಂದ ಭಾರತಕ್ಕೆ ಹಿಂದಿರುಗಿದರು.

ಸಿಡಿಎನ್ 100

ಸಿಡಿಎನ್ ಅವರ ಪ್ರಮುಖ ಶೈಕ್ಷಣಿಕ ಸಾಧನೆಯೆಂದರೆ, ಭಾರತೀಯ ಇಂಗ್ಲಿಷ್ ಲೇಖಕರ ಬರಹಗಳು, ಕಾಮನ್‌ವೆಲ್ತ್ ರಾಷ್ಟ್ರಗಳ ಸಾಹಿತ್ಯಕ್ಕೆ ಸರಿಸಾಟಿಯಾದವು ಎಂಬುದನ್ನು ವಿಮರ್ಶೆಯ ಮೂಲಕ ಸಾಬೀತುಪಡಿಸಿದುದು.

ಅಂತೆಯೇ ನೆಹರೂ, ರಾಜಾರಾವ್, ಆರ್.ಕೆ. ನಾರಾಯಣ್, ಮುಲ್ಕ್‌ರಾಜ್ ಆನಂದ್, ಅರಬಿಂದೋ ಮುಂತಾದವರ ಸಾಹಿತ್ಯಕ್ಕೊಂದು ಘನತೆ, ಗೌರವವನ್ನು ತಂದುಕೊಟ್ಟವರು ಅವರು. ಭಾರತೀಯ ಸಾಹಿತ್ಯದಲ್ಲಿ ಭಾರತೀಯ ಸಂವೇದನೆ ಎಷ್ಟು ಮಹತ್ವದ್ದು ಎಂಬುದನ್ನೂ ಪ್ರಚುರಪಡಿಸಿದರು. ಅವರ ಪ್ರಯತ್ನದ ಫಲವಾಗಿ ಈಗ, ಭಾರತೀಯ ಇಂಗ್ಲಿಷ್ ಬರಹವೆನ್ನುವುದು, ತೃತೀಯ ಜಗತ್ತಿನ ವಿಶ್ವವಿದ್ಯಾಲಯಗಳಲ್ಲಿ ಒಂದು ಅಧ್ಯಯನ ವಿಷಯವಾಗಿದೆ.

ಸಿಡಿಎನ್ ಅವರ ಪಾಲಿಗೆ ವಿಮರ್ಶೆಯ ಕಾರ್ಯವೆಂದರೆ, ವಿಷದಪಡಿಸುವಿಕೆ ಹಾಗೂ ವಿಕಸನ. ಅವರ ಮಾನವತಾ ಸಂಸ್ಕೃತಿ, ಅವರನ್ನು ವಸಾಹತುಶಾಹಿ ವಿರೋಧಿಯನ್ನಾಗಿಸಿತು. ಸಂಸ್ಕೃತಿ ಮತ್ತು ವಿಮರ್ಶೆ ಎರಡೂ ಅವರ ಪಾಲಿಗೆ ಒಂದೇ ನಡಿಗೆಯದಾಗಿವೆ. ಅವರು ಹೇಳುವಂತೆ 'ಸಂಸ್ಕೃತಿ ಓರ್ವ ವ್ಯಕ್ತಿಯ ಆಧ್ಯಾತ್ಮಿಕ ಅನುಭವವನ್ನು ಆವಾಹಿಸಿಕೊಂಡಿರುತ್ತದೆ. ಸಾಹಿತ್ಯ ಎನ್ನುವುದು ಮೂಲಭೂತವಾಗಿ ಒಂದು ಸಾಂಸ್ಕೃತಿಕ ಅನ್ವೇಷಣೆ. ಸಾಹಿತ್ಯ ಮತ್ತು ಸಂಸ್ಕೃತಿಗಳು ಆಂತರಿಕ ಬದಲಾವಣೆಗೊಳ್ಳುವಂತಹವು.'

ನಮ್ಮ ಸಾಹಿತ್ಯದಲ್ಲಿ ನವ್ಯತೆ ಹಾಗೂ ನವ್ಯ ಮನೋಧರ್ಮ ಉಂಟಾಗಲು ಸಿಡಿಎನ್ ಪರೋಕ್ಷವಾಗಿ ಕಾರಣ ಎಂದು ಹೇಳಬಹುದು. ಅವರಂತೂ ಇಂಗ್ಲಿಷ್ ನವ್ಯ ಕಾವ್ಯ ಪ್ರವರ್ತಕ ಟಿ.ಎಸ್. ಎಲಿಯಟ್‌ನ ಆರಾಧಕರಾಗಿದ್ದರು. ಎಲಿಯಟ್‌ನ 'ಕ್ರೈಟೀರಿಯನ್' ಎಂಬ ಪತ್ರಿಕೆಯಂತೆ, ಸಿಡಿಎನ್ 'ಲಿಟರರಿ ಕ್ರೈಟೀರಿಯನ್' ಎಂಬ ಸಾಹಿತ್ಯದ ಮ್ಯಾಗಜಿನ್‌ಅನ್ನು ಆರಂಭಿಸಿದರು. ಕಳೆದ ಐವತ್ತು ವರ್ಷಗಳಿಂದ ಅದು ನಿರಂತರವಾಗಿ ನಡೆದು ಬರುತ್ತಿದೆ. ಸಿಡಿಎನ್ ಅವರ ಎಲಿಯಟ್‌ನ ಕಾವ್ಯದ ಬೋಧನೆಯನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಹಾಗಾಗಿ ಬರವಣಿಗೆಯಲ್ಲಿ ತೊಡಗಿಸಿಕೊಂಡ ಅವರ ಬಹುತೇಕ ವಿದ್ಯಾರ್ಥಿಗಳು, ಅಭಿಮಾನಿಗಳು ಕನ್ನಡದಲ್ಲಿಯೂ, ನವ್ಯ ಸಾಹಿತ್ಯ, ಸಿದ್ಧಾಂತವನ್ನು ಅಭಿವ್ಯಕ್ತಿಸುವಲ್ಲಿ ಯಶಸ್ವಿಯಾದರೆನ್ನಬಹುದು.

ಸಿಡಿಎನ್ ಅವರ ಜೀವನದ ಪ್ರಮುಖ ಘಟ್ಟವೆಂದರೆ, ಅವರ ವಾನಪ್ರಸ್ಥಾಶ್ರಮದಲ್ಲಿ, ಅಂದರೆ ಸೇವಾ ನಿವೃತ್ತಿಯ ನಂತರ ಸ್ಥಾಪಿಸಿದ ಧ್ವನ್ಯಾಲೋಕ. ಅದನ್ನು ಹೆಸರಿಸದೇ ಅವರ ಕೊಡುಗೆಯನ್ನು ವಿಶ್ಲೇಷಿಸುವುದು ಅಪೂರ್ಣವಾಗುತ್ತದೆ. ಈ ಸಂಸ್ಥೆ, ಮೈಸೂರಿನ ಸಾಂಸ್ಕೃತಿಕ ಸೆಲೆಯಾಗಿ ಬೇರೂರಿದೆ. ಅಲ್ಲಿನ ಬೋಗಾದಿ ರಸ್ತೆಯಲ್ಲಿ, ಮೂರ್ನಾಲ್ಕು ಎಕರೆ ಪ್ರದೇಶದಲ್ಲಿ ಶುದ್ಧರೂಪದ ಹಸಿರು ಪ್ರಕೃತಿಯ ಮಡಿಲಲ್ಲಿ ಮುಳುಗಿದೆ. ಪೂರ್ವ, ಪಶ್ಚಿಮ ಸಿದ್ಧಾಂತಗಳಲ್ಲಿ ಅತ್ಯುತ್ತಮವಾದುದರ ಸ್ವೀಕಾರಕ್ಕೆ ಸದಾ ತುಡಿಯುತ್ತಿದ್ದ ಸಿಡಿಎನ್, ಈ ಸಂಸ್ಥೆಗೆ ಸಮಂಜಸವಾದ ಹೆಸರನ್ನೇ ಕೊಟ್ಟಿದ್ದಾರೆ. ಈವರೆಗೆ, 120ಕ್ಕೂ ಹೆಚ್ಚು ಸಾಹಿತ್ಯದ ಸೆಮಿನಾರ್‌ಗಳನ್ನು ನಡೆಸಲಾಗಿದೆ. ಹಿರಿಯ ಕಿರಿಯ ವಿದ್ವಾಂಸರುಗಳೆಲ್ಲ ಅವುಗಳಲ್ಲಿ ಭಾಗವಹಿಸಿದ್ದಾರೆ.

ಧ್ವನ್ಯಾಲೋಕಕ್ಕೆ ಭೇಟಿ ನೀಡಿರುವ ಗಣ್ಯ ಲೇಖಕರಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಲಿಯಂ ಗೋಲ್ಡಿಂಗ್, ನೈಜೀರಿಯಾದ ಚಿನುವ ಅಚಿಬೆ, ಆಸ್ಟ್ರೇಲಿಯಾ ಲೇಖಕರಾದ ಲೇ ಮರೇ, ರಾಡ್ನಿ ಹಾಲ್, ಭಾರತೀಯ ಲೇಖಕರಾದ ರಾಜಾರಾವ್, ಆರ್.ಕೆ.ನಾರಾಯಣ್, ಜಯಂತ ಮಹಾಪಾತ್ರ, ಶಿವರಾಮ ಕಾರಂತ, ಎ.ಕೆ. ರಾಮಾನುಜನ್, ಅಯ್ಯಪ್ಪ ಪಣಿಕ್ಕರ್, ಕಮಲಾ ದಾಸ್, ಕರಣ್ ಸಿಂಗ್, ರಸ್ಕಿನ್ ಬಾಂಡ್ ಪ್ರಮುಖರು. ಅಲ್ಲಿರುವ ಮುಕ್ತ ರಂಗಮಂದಿರಕ್ಕೆ, ಅದನ್ನು ಉದ್ಘಾಟಿಸಿದ ರಾಜೀವ್ ಗಾಂಧಿಯವರ ಹೆಸರನ್ನು ಇಡಲಾಗಿದೆ. ಇಂಗ್ಲಿಷ್ ಸಾಹಿತ್ಯ ಕುರಿತ ಸೆಮಿನಾರ್‌ಗಳಷ್ಟೇ ಅಲ್ಲ, ಬೇಂದ್ರೆಯವರ ಜನ್ಮಶತಮಾನೋತ್ಸವದಲ್ಲಿ, ಅವರ ಸಾಹಿತ್ಯ ಕುರಿತು ಸೆಮಿನಾರ್ ನಡೆದಿದೆ. ದಕ್ಷಿಣ ಭಾರತದ ಭಾಷೆಗಳ ಆಯ್ದ ಸಾಹಿತ್ಯ ಕೃತಿಗಳ ಇಂಗ್ಲಿಷ್ ಅನುವಾದಕ್ಕೆ ಸಂಬಂಧಿಸಿದಂತೆ ಪ್ರತಿವರ್ಷವೂ ಕಮ್ಮಟ ನಡೆಸಿ ಅಲ್ಲಿ ಪ್ರಸ್ತುತಪಡಿಸಲಾಗುವ ಅನುವಾದವನ್ನು 'ಸಾರಸ' ಎಂಬ ಮ್ಯಾಗಜಿನ್‌ನಲ್ಲಿ ಪ್ರಕಟಿಸಲಾಗುತ್ತಿದೆ. ಸಾವಿರಾರು ಪುಸ್ತಕಗಳು ಹಾಗೂ ಆಕರ ಗ್ರಂಥಗಳನ್ನು ಒಳಗೊಂಡ ಈ ಸಂಸ್ಥೆ ಮೌಲಿಕವಾದ ಸಾಹಿತ್ಯಿಕ ಆಸ್ತಿಯೆನ್ನಬಹುದು. ಇದು ಓರ್ವ ಅಭಿಮಾನಿ ಕರೆದಿರುವಂತೆ, ಸಾಹಿತ್ಯ ಅಧ್ಯಯನದ ಆಶ್ರಮ, ಆಧ್ಯಾತ್ಮಿಕ ಕಾರಂಜಿ, ಎರಡೂ ಹೌದು.

ಧ್ವನ್ಯಾಲೋಕಕ್ಕೆ ನಲವತ್ತು ವರ್ಷಗಳು ತುಂಬಿರುವ ಈ ಸಂದರ್ಭದಲ್ಲಿ, ಆ ಸಂಸ್ಥೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವ, ಅದರಿಂದ ತಮ್ಮ ಸಾಹಿತ್ಯದ ಸಂವೇದನೆಯನ್ನು ಬೆಳೆಸಿಕೊಳ್ಳುವ ಹೊಣೆಗಾರಿಕೆ ಯುವ ಮನಸ್ಸುಗಳ ಮೇಲಿದೆ. ಅದೇ ಸಿಡಿಎನ್ ಅವರಿಗೆ ಸಲ್ಲಿಸಬಹುದಾದ ಗುರು ಕಾಣಿಕೆ.


ಅಗಾಧ ಸಾಹಿತ್ಯ, ಹಲವು ಪುರಸ್ಕಾರ

ಸ್ವಾನ್ ಅಂಡ್ ದ ಈಗಲ್, ರಾಜಾರಾವ್, ನೆಹರೂ: ಸ್ಟೇಟ್ಸ್‌ಮನ್ ಆ್ಯಸ್ ಎ ರೈಟರ್, ಕಾಮನ್‌ವೆಲ್ತ್ ಲಿಟರೇಚರ್, ಇಂಡಿಯಾ ರೀಡಿಸ್ಕವರ್ಡ್ (ನೆಹರೂ ಅವರ ಡಿಸ್ಕವರಿ ಆಫ್ ಇಂಡಿಯಾದ ಸಂಗ್ರಹರೂಪ), ಇಂಗ್ಲಿಷ್ ಸ್ಟಡೀಸ್ ಇನ್ ಇಂಡಿಯಾ, ನೆಹರೂ ಅವರ ಆತ್ಮ ಚರಿತ್ರೆಯ ಸಂಕ್ಷಿಪ್ತ ರೂಪ, ಇಂಡಿಯನ್ ಕ್ರಿಟಿಕಲ್ ಸೀನ್, ಆಂಥಾಲಜಿ ಆಫ್ ಕಾಮನ್‌ವೆಲ್ತ್ ಪೊಯೆಟ್ರಿ, ಎಫ್ ಆರ್ ಲೀವಿಸ್‌ನಂತಹ ಮಹತ್ವದ ಕೃತಿಗಳನ್ನು ಕೊಟ್ಟವರು ಸಿಡಿಎನ್. ದೇಶದ ಹಲವು ವಿಶ್ವವಿದ್ಯಾಲಯಗಳು (ಮೈಸೂರು, ಬೆಂಗಳೂರು ವಿಶ್ವವಿದ್ಯಾಲಯ ಸೇರಿ) ಅವರಿಗೆ ಗೌರವ ಡಾಕ್ಟರೇಟ್ ನೀಡಿ, ಪುರಸ್ಕರಿಸಿವೆ. ಪದ್ಮಭೂಷಣ ಪ್ರಶಸ್ತಿಯೂ ಅವರಿಗೆ ಸಂದಿದೆ.



ಸಿಡಿಎನ್ ಅವರು ಮೈಸೂರಿನಲ್ಲಿ ಸ್ಥಾಪಿಸಿದ ಧ್ವನ್ಯಾಲೋಕದ ನೋಟ ಚಿತ್ರ:ಎಸ್.ರಾಮಚಂದ್ರ

ಕ್ಯಾತಜ್ಜಿಯ ಬೆಳಕಿನ ಹಾದಿ



8ನೇ ಪುಟದಿಂದ...

ಕಣ್ಣಿಲ್ಲದಿದ್ದರೂ ಹಟ್ಟಿಯವರಿಗಾಗಿ ದೀಪ ಬೆಳಗುವ ಕ್ಯಾತಜ್ಜಿಯ ವರ್ತನೆ ಸೋಜಿಗದಂತೆ ನಮಗೆ ಕಾಣುತ್ತಿತ್ತು!

ಆಕೆಯ ಮಾತುಗಳಲ್ಲಿ ಹಳಹಳಿಕೆಯ ಭೂತಕಾಲವೂ ಇರುತ್ತಿರಲಿಲ್ಲ! ಹಾಗೆಯೇ ನಾಳಿನ ಭವಿಷ್ಯದ ಕಲ್ಪನೆಯೂ ಇರುತ್ತಿರಲಿಲ್ಲ. ಆಕೆ ಬದುಕುತ್ತಿದ್ದುದು ಅಚಲ ವರ್ತಮಾನದಲ್ಲಿ ಮಾತ್ರ. ತನ್ನ ಅಂಧತ್ವದ ಬಗ್ಗೆ ಆಕೆ ಎಂದೂ ನೈರಾಶ್ಯದಿಂದ ಮಾತನಾಡಿದ್ದನ್ನು ಹಟ್ಟಿಯವರು ಕೇಳಿರಲಿಲ್ಲ! ಯಾರನ್ನೂ ಆಶ್ರಯಿಸದೆ ತನ್ನ ಅಡುಗೆಯನ್ನು ತಾನೇ ಮಾಡಿಕೊಳ್ಳುತ್ತಿದ್ದಳು. ಅವಳಲ್ಲಿದ್ದ ಬದುಕುವ ಛಲ, ಸ್ವಾವಲಂಬನೆಯ ಬಾಳು ಇವೆಲ್ಲವನ್ನೂ ತುಂಬಾ ಹತ್ತಿರದಿಂದಲೇ ನಾವು ನೋಡಿದ್ದೆವು. ಮಮಕಾರವಿಲ್ಲದೆ ವರ್ತಮಾನದಲ್ಲಿ ಜೀವಿಸುವುದು, ಶ್ರದ್ಧೆ ಮತ್ತು ಸರಳತೆ ಅವಳ ಬದುಕಿನ ಮಂತ್ರವಾಗಿತ್ತು. ಇಡೀ ಹಟ್ಟಿ ಅವಳನ್ನು ಹಾಗೆಯೇ ಸ್ವೀಕರಿಸಿತ್ತು. ಸ್ವತಃ ಭೂಮಿ ಕಾಣಿ ಇಲ್ಲದ ಕ್ಯಾತಜ್ಜಿಗೆ ನೆರೆಹೊರೆಯವರು ಕೊಡುತ್ತಿದ್ದ ದವಸವೇ ಜೀವನಾಧಾರವಾಗಿತ್ತು. ಈ ವಿವರಗಳೆಲ್ಲಾ ಈಗಿನವರಿಗೆ ಆಶ್ಚರ್ಯ ತರಿಸುವ ಸಂಗತಿ ಎನಿಸಬಹುದು! ಆದರೆ ಇದೆಲ್ಲವೂ ಸೂರ್ಯನಷ್ಟೇ ಸತ್ಯ. ಸದಾ ಕತ್ತಲಿನ ಸಹವರ್ತಿಯಾಗಿ ಬದುಕುತ್ತಿದ್ದ ಕ್ಯಾತಜ್ಜಿಯ ಮುಖದಲ್ಲಿ ಹೊರಚೆಲ್ಲುತ್ತಿದ್ದ ಪ್ರಶಾಂತತೆ, ಪರಿಶುದ್ಧ ನಗು ಎಲ್ಲೆಡೆ ಹಬ್ಬುವ ಆಶಾವಾದದ ಬುಗ್ಗೆಯಂತೆ ನನಗೆ ಕಂಡಿದೆ.

ಆ ದಿನಗಳಲ್ಲಿ ನಾನು ಕಂಡ ಕ್ಯಾತಜ್ಜಿಯ ಬದುಕಿನ ವಿವರಗಳನ್ನು ಮತ್ತೊಮ್ಮೆ ಸ್ಮೃತಿಪಟಲದ ಮೇಲೆ ತಂದುಕೊಂಡರೆ, ಅವೆಲ್ಲವೂ ಕೇವಲ ದೈನಂದಿನ ಕ್ರಿಯೆಗಳೆಂದು ಹೇಳಲು ನನಗೆ ಬರುವುದಿಲ್ಲ! ಅವಳ ಪಾಲಿಗೆ ಹಗಲೂ ಒಂದೇ; ಕತ್ತಲೆಯೂ ಒಂದೇ. ಹೀಗಿರುವಾಗ ಕ್ಯಾತಜ್ಜಿ ದಿನವೂ ಬೆಳಗುತ್ತಿದ್ದ ದೀಪ ಯಾರಿಗಾಗಿ? ಈ ಹೊತ್ತಿಗೆ ಅದು ಒಂದು ರೂಪಕವಾಗಿಯೋ, ಸಂಕೇತವಾಗಿಯೋ ನನಗೆ ಕಾಣಿಸುತ್ತದೆ. ಅವಳ ವರ್ತನೆಯು ನನಗೆ ಅಂಥ ಸೂಫಿ ಸಂತರೊಬ್ಬರಿಗೆ ಸಂಬಂಧಿಸಿದ ಕತೆಯನ್ನು ನೆನಪಿಸಿತು: 'ಈ ಕಂದೀಲು ಹಿಡಿದು ನಡೆಯುತ್ತಿರುವುದು ನನಗಾಗಿ ಅಲ್ಲ; ಕತ್ತಲಲ್ಲಿ ನಡೆಯುತ್ತಿರುವವರಿಗೆ ದಾರಿ ಕಾಣಲಿ ಎಂದು!' ಕ್ಯಾತಜ್ಜಿಯ ಈ ಬದುಕು ಅವಳ ಜೀವನ ಪ್ರೀತಿಗೆ ರೂಪಕದಂತಿದೆ. ಈ ರೂಪಕವು ಹೆಚ್ಚುಕಡಿಮೆ ಜಗತ್ತಿನ ಎಲ್ಲ ನಿರ್ಭಾಗ್ಯರ ಬದುಕಿನ ಕೇಂದ್ರದಂತೆಯೇ ಇದೆ.

ಇದೇ ಹಟ್ಟಿಯ ಗಾರೆಮನೆ ಚಿಕ್ಕಣ್ಣ ಎಂದರೆ ಎಲ್ಲರಿಗೂ ಗೌರವ. ಅವರ ಮನೆತನವೇ ಉದಾರತೆಗೆ ಪ್ರಸಿದ್ಧಿಪಡೆದಿತ್ತು. ಹದಿನಾರು ಕಂಬಗಳ ಮೇಲೆ ನಿಂತಿದ್ದ ಮನೆ ಅದು. ಸುಮಾರು ಮೂವತ್ತು ಜನರಿದ್ದ ಕೂಡು ಕುಟುಂಬ. ಅಷ್ಟೇ ಸಂಖ್ಯೆಯ ದನ, ಕರ-ಎಮ್ಮೆಗಳು. ಆಳು-ಕಾಳುಗಳ ಸಂಖ್ಯೆಯೂ ದೊಡ್ಡದಾಗಿಯೇ ಇತ್ತು. ಚಿಕ್ಕಣ್ಣನವರ ಮುಖದ ಮೇಲೆ ಯಾವತ್ತೂ 'ನಾನು ಕೊಡುವವನು' ಎಂಬ ಅಹಮ್ಮಿನ ಗೆರೆಯನ್ನು ಹಟ್ಟಿಯವರಾಗಲಿ ಅಥವಾ ನೆರೆಹೊರೆಯ ಗ್ರಾಮಸ್ಥರಾಗಲಿ ಎಂದೂ ಕಂಡಿರಲಿಲ್ಲ. 'ಇರುವುದೆಲ್ಲವೂ ಕೊಡುವುದಕ್ಕಾಗಿಯೇ' ಎಂದು ನಂಬಿದ್ದ ಜೀವ ಅದು. ಕೊಟ್ಟಿದ್ದನ್ನು ಯಾರ ಮುಂದೆಯೂ ಹೇಳಿಕೊಳ್ಳದ, ತಮ್ಮಿಂದ ಪಡೆದುಕೊಂಡವರನ್ನು ಅಲ್ಪತನದಿಂದ ಕಾಣದ ದೊಡ್ಡ ಗುಣ ಅವರಲ್ಲಿತ್ತು. ಈ ಗುಣದಿಂದಾಗಿಯೇ ಅವರು ಪ್ರಸಿದ್ಧರಾಗಿದ್ದರು. ಚಿಕ್ಕಣ್ಣನವರ ಮನೆಯಲ್ಲಿ ವರ್ಷೊಂಬತ್ತು ಕಾಲವೂ ಕರಾವು ನಡೆಯೋದು. ನೆರೆಹೊರೆಯವರಿಗೆ ಕೊಡಲೆಂದೇ ಮನೆ ಮುಂದೆ ದೊಡ್ಡ ಗುಡಾಣದಲ್ಲಿ ಮಜ್ಜಿಗೆ ಇಟ್ಟಿರುತ್ತಿದ್ದರು. ಮನೆಗಳಲ್ಲಿ ಉದಕ ಮಾಡಿಲ್ಲದವರು ತಮ್ಮ ಮಕ್ಕಳಿಗೆ 'ಹೋಗ್ರಲೆ, ಗಾರೆಮನೆಯವರತ್ರ ಹೋಗಿ ವಸಿ ಮಜ್ಜಿಗೆ ತನ್ನಿ' ಎಂದು ಸ್ವಾರೆ ಕೊಟ್ಟು ಕಳುಹಿಸುತ್ತಿದ್ದರು. ಯಾರು ಹೋದರೂ, ಎಷ್ಟೊತ್ತಿಗೆ ಹೋದರೂ ಅವರ ಕುಟುಂಬದ ಹಿರಿಯರಾದ ಶಿವಜ್ಜಿ ಇಲ್ಲ ಎನ್ನದೆ ಮಜ್ಜಿಗೆ ಕೇಳಿದವರಿಗೆ ಮಜ್ಜಿಗೆ ಕೊಟ್ಟು, ಮಕ್ಕಳು- ಮರಿ ಇರುವ ಮನೆಯವರಿಗೆ ಹಾಲು ಕೊಡುತ್ತಿತ್ತು. ಹೀಗಾಗಿಯೇ ನೈತಿಕ, ಸಾಮಾಜಿಕ ಒಮ್ಮತವಿರುವ ಈ ಹಟ್ಟಿ ನನಗೆ ಸೇರಿದ್ದು, ಇದು ನಮ್ಮೆಲ್ಲರನ್ನೂ ಪೋಷಿಸುತ್ತದೆ ಎಂಬ ಗಾಢ ತಿಳಿವು ಅಲ್ಲಿನ ಮಕ್ಕಳ ಹೃದಯದಲ್ಲಿ ಹುಟ್ಟಿನಿಂದಲೇ ಬಂದಿದೆ.

ಪ್ರತೀ ಭಾನುವಾರ ಚಳ್ಳಕೆರೆ ಸಂತೆ. ಪುರ್ಲಹಳ್ಳಿ, ಗೋಸಿಕೆರೆ, ಚಿಕ್ಕಚೆಲ್ಲೂರು, ದೊಡ್ಡಚೆಲ್ಲೂರು, ಪರಶುರಾಂಪುರ ಮುಂತಾದ ಸುತ್ತಮುತ್ತಲ ಗ್ರಾಮದವರೆಲ್ಲಾ ಎತ್ತಿನ ಗಾಡಿಗಳಲ್ಲಿ ಸಂತೆಗೆ ಬರುತ್ತಿದ್ದರು. ಸಂತೆ ಮುಗಿಸಿ ದಿನಸಿ ಹೇರಿಕೊಂಡು ಹಳ್ಳಿಗೆ ಹೊರಡುವ ಮಾರ್ಗದಲ್ಲಿ ದೊಡ್ಡೇರಿಗೆ ಬರುತ್ತಿದ್ದಹಾಗೆಯೇ ಕತ್ತಲಾದರೆ, ಅವರೆಲ್ಲಾ ಗಾರೆಮನೆ ಚಿಕ್ಕಣ್ಣ ಅವರ ಕಣದಲ್ಲೇ ಆ ರಾತ್ರಿ ಉಳಿದುಕೊಳ್ಳುತ್ತಿದ್ದರು. ಅದೇ ಕಣದಲ್ಲಿ ದೊಡ್ಡ ಬಾರೆ ಹಣ್ಣಿನ ಮರವಿತ್ತು. ಹಟ್ಟಿಯ ಮಕ್ಕಳೆಲ್ಲಾ ಸದಾ ಕಾಲವೂ ಅದರ ನೆರಳನ್ನೇ ಹಿಡಿದು ಆಡುತ್ತಿದ್ದವು. ಆಗೆಲ್ಲಾ ಎತ್ತಿನ ಗಾಡಿಗಳು ಕಳ್ಳಕಾಕರ ಭಯದಿಂದಾಗಿ ನಿರ್ಭೀತಿಯಿಂದ ರಾತ್ರಿಹೊತ್ತು ಪ್ರಯಾಣ ಮಾಡುವ ಹಾಗಿರಲಿಲ್ಲ! ಹೀಗೆ ರಾತ್ರಿ ತಮ್ಮ ಎತ್ತು ಗಾಡಿಗಳೊಂದಿಗೆ ಕಣದಲ್ಲಿ ಉಳಿದುಕೊಂಡವರು ಯಾರ ಅಪ್ಪಣೆಗೂ ಕಾಯದೆ ಅಲ್ಲೇ ಇದ್ದ ಚಿಕ್ಕಣ್ಣನವರ ಬಣವೆಯಿಂದಲೇ ಹುಲ್ಲು ಹಿರಿದು, ತಮ್ಮ ಎತ್ತುಗಳಿಗೆ ಹಾಕುತ್ತಿದ್ದರು. ಚಿಕ್ಕಣ್ಣನವರ ಬಗ್ಗೆ ಅಷ್ಟೊಂದು ನಂಬಿಕೆ ಅವರಿಗೆ. ಅವರೆಲ್ಲರ ಆ ರಾತ್ರಿಯ ಊಟ ನಡೆಯುತ್ತಿದ್ದುದು ಚಿಕ್ಕಣ್ಣನವರ ಮನೆಯಲ್ಲಿಯೇ. ಇದು ಆ ಭಾಗದಲ್ಲಿ ಒಂದು ಸಂಪ್ರದಾಯವೇ ಆಗಿತ್ತು! ಹಟ್ಟಿಯವರು ಹಾಗೂ ನೆರೆಹೊರೆಯ ಗ್ರಾಮಸ್ಥರು ಹೇಳುವ ಪ್ರಕಾರ 'ಗಾರೆಮನೆ ಚಿಕ್ಕಣ್ಣನವರ ಮನೆಯ ಒಲೆಯಲ್ಲಿ ಉರಿಯುತ್ತಿದ್ದ ಬಂಗಾರದ ಕಿಡಿ ಎಂದೂ ಆರಿಲ್ಲ!' ನನ್ನ ಹೃದಯಕ್ಕೆ ತೀರ ಹತ್ತಿರವಾದ ಹಟ್ಟಿಯೊಂದರ ಮನಕರಗಿಸುವ ಇಂತಹ ಅನೇಕ ಜೀವಂತ ಚಿತ್ರಗಳು ಕಣ್ಣುಗಳಿಗೆ ಮರೆಯಲಾಗದ ಅನುಭವಗಳನ್ನು ನೀಡಿವೆ. ದ್ವೇಷ ವೈಷಮ್ಯಗಳಿಲ್ಲದೆ ಒಟ್ಟಿಗೆ ಕೂಡಿಬಾಳುವ ತತ್ತ್ವವನ್ನು ಪಾರಂಪರಿಕವಾಗಿ ತಮ್ಮ ತಾಯಂದಿರ ಎದೆಹಾಲಿನಿಂದ ದೊಡ್ಡೇರಿ ಗೊಲ್ಲರಹಟ್ಟಿಯವರು ಪಡೆದಿದ್ದಾರೆ ಎಂದು ನನಗೆ ಭಾಸವಾಗುತ್ತದೆ.

ಈಗ ಕಾಲ ನಿರ್ದಯವಾಗಿ ಮುಂದೆ ಸರಿದಿದೆ. ವಿಘಟನೆ ಮತ್ತು ವಿಸ್ಮೃತಿ ಎನ್ನುವುದೇ ಈಗ ಯುಗಧರ್ಮವಾಗಿದೆ. ಇಂತಹ ಹೊತ್ತಿನಲ್ಲಿ: ಇಂದು ಗಾರೆಮನೆ ಚಿಕ್ಕಣ್ಣನವರ ಕೂಡಿ ಬಾಳಿದ ಮನೆ ಒಡೆದು ಹಲವಾರು ಬಾಗಿಲುಗಳನ್ನು ಕಂಡಿದೆ. ಬಂಗಾರದ ಕಿಡಿಯಂತೆ ಉರಿಯುತ್ತಿದ್ದ ಅವರ ಮನೆಯ ಒಲೆ ಈಗ ನಂದಿಹೋಗಿದೆ. ಸುಣ್ಣ-ಬಣ್ಣಗಳನ್ನು ಕಾಣದೆ ಮನೆಯ ಗೋಡೆಗಳು ಹಿಂದಿನ ನೆನಪನ್ನು ಕಳೆದುಕೊಂಡಿವೆ! ಸದಾ ತೆರೆದಿರುತ್ತಿದ್ದ ಆ ಮನೆಯ ಮುಂಬಾಗಿಲು ಈಗ ಮೌನವಾಗಿ ಯಾವಾಗಲೂ ಮುಚ್ಚಿರುತ್ತದೆ. ನಿರಂತರವಾಗಿ ಅವರ ಮನೆಯ ಮುಂದೆ ಮಜ್ಜಿಗೆಯಿಂದ ತುಂಬಿರುತ್ತಿದ್ದ ಗುಡಾಣ ಇಂದು ಯಾರ ಕಣ್ಣಿಗೂ ಕಾಣಿಸುತ್ತಿಲ್ಲ. ಆ ಮನೆಯ ಹಿಟ್ಟುಂಡು ಬೆಳೆದವರು ಈಗಲೂ ಹಟ್ಟಿಯಲ್ಲಿದ್ದಾರೆ. ಚಿಕ್ಕಣ್ಣನವರ ಮನೆಯನ್ನು ನೋಡಿದಾಗಲೆಲ್ಲಾ ಅವರ ಕಣ್ಣುಗಳಲ್ಲಿ ನೀರಾಡುವುದನ್ನು ಕಂಡಿದ್ದೇನೆ. ಕ್ಯಾತಜ್ಜಿ ಬಾಳಿ ಬದುಕಿದ್ದ ಮನೆ ಗುರುತು ಸಿಗದಂತೆ ನೆಲಸಮವಾಗಿದೆ. ಆದರೂ ಹಟ್ಟಿಯ ಮಣ್ಣಿನಲ್ಲಿ ಬೆರೆತಿದ್ದ ಹೊಂದಾಣಿಕೆಯ ಬದುಕು ಇನ್ನೂ ಹಾಗೆಯೇ ಹಸುರಾಗಿದೆ.

ಈ ಎಲ್ಲ ಬದಲಾವಣೆಗಳ ನಡುವೆಯೂ ಗಾರೆಮನೆ ಚಿಕ್ಕಣ್ಣನವರ ಕಣದಲ್ಲಿದ್ದ ಬಾರೆಹಣ್ಣಿನ ಮರ ಈಗಲೂ ಹಟ್ಟಿಯ ಹುಡುಗರನ್ನು ತನ್ನತ್ತ ಸೆಳೆಯುತ್ತಲೇ ಇದೆ.

ಮುನ್ನೋಟ 23-05-2021 ರಿಂದ 29-05-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಸ್ವಯಂ ಉದ್ಯೋಗಿಗಳಿಗೆ ತುಂಬಾ ಆಶಾದಾಯಕವಾದ ಸಂದರ್ಭ ಇದಾಗಿದ್ದು ಅವರ ವ್ಯವಹಾರಗಳು ವಿಸ್ತರಿಸುತ್ತವೆ. ವ್ಯವಹಾರದ ವಿಷಯವಾಗಿ ದೂರ ಪ್ರಯಾಣ ಮಾಡುವಿರಿ. ಧನಾದಾಯ ಉತ್ತಮವಾಗಿರುತ್ತದೆ. ಅಪೇಕ್ಷಿಸಿದ ಸಾಲಗಳು ದೊರೆತು ಕಾರ್ಯ ಮುನ್ನಡೆಯುತ್ತದೆ. ವಿಶಿಷ್ಟವಾಗಿ ಆಲೋಚನೆ ಮಾಡಿ ನಿಮ್ಮ ಮನಸ್ಸಿನ ದುಗುಡವನ್ನು ಕಡಿಮೆ ಮಾಡಿಕೊಳ್ಳುವಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಬೇರೆಯವರ ವಿಚಾರದಲ್ಲಿ ತಲೆ ಕೆಡಿಸಿಕೊಳ್ಳುವುದನ್ನು ಬಿಟ್ಟು ನಿಮ್ಮ ಕಾರ್ಯದಲ್ಲಿ ಮಗ್ನರಾಗಿ ಕೆಲಸ ಮುಗಿಸಿರಿ. ನಿಧಾನವಾಗಿ ಆರ್ಥಿಕತೆಯು ಸ್ಥಿರತೆಯತ್ತ ಸಾಗುತ್ತದೆ. ಏಕಕಾಲದಲ್ಲಿ ಅನೇಕ ಕಾರ್ಯಗಳನ್ನು ಆರಂಭಿಸಬೇಡಿರಿ, ಆಗ ನಿಮ್ಮ ಮುಖ್ಯ ಕಾರ್ಯ ನಿಂತು ಹೋಗಬಹುದು. ಬಟ್ಟೆ ವ್ಯಾಪಾರಿಗಳಿಗೆ ಉತ್ತಮ ವ್ಯವಹಾರವಿರುತ್ತದೆ. ನಿಮಗೆ ನಿಮ್ಮ ಕುಟುಂಬದ ಸಹಕಾರ ಸಾಕಷ್ಟು ದೊರೆಯುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆರ್ಥಿಕ ಕ್ರೋಡೀಕರಣದತ್ತ ಆಲೋಚಿಸಿ ಕಾರ್ಯ ಮಗ್ನರಾಗುವಿರಿ. ಕೆಲವು ಕಾರ್ಯಗಳಲ್ಲಿ ವೈಫಲ್ಯವನ್ನು ಕಂಡರೂ ಧೃತಿಗೆಡುವುದು ಬೇಡ, ಸತತ ಪ್ರಯತ್ನದಿಂದ ಕಾರ್ಯಸಿದ್ಧಿ ಆಗುತ್ತದೆ. ಮಕ್ಕಳ ಬಗ್ಗೆ ಅತಿಯಾದ ಚಿಂತೆ ಬೇಡ. ಅವರಿಗೂ ಆಲೋಚಿಸಲು ಅವಕಾಶಕೊಡಿ. ಆರೋಗ್ಯದಲ್ಲಿ ಚೇತರಿಕೆ ಕಂಡು ಉಲ್ಲಾಸ ಮೂಡುತ್ತದೆ. ಹೊಸ ಯೋಜನೆಗಳನ್ನು ರೂಪಿಸುವ ಮುನ್ನ ಅದರ ಅವಲೋಕನ ಬಹಳ ಮುಖ್ಯ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಅವಿವಾಹಿತರಿಗೆ ಸಂಬಂಧಗಳು ಒದಗುವ ಸಮಯ. ಬಂಧುಗಳ ಸಹಾಯದಿಂದ ಸ್ಥಿರಾಸ್ತಿಯನ್ನು ಖರೀದಿ ಮಾಡಬಹುದು. ವೈದ್ಯರುಗಳಿಗೆ ಕಾರ್ಯದೊತ್ತಡ ಹೆಚ್ಚಾಗುವ ಸಂದರ್ಭವಿದೆ. ಸ್ತ್ರೀಯರಿಗೆ ವೃತ್ತಿಯಲ್ಲಿ ಅನುಕೂಲಕರ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಬರುವ ಎಲ್ಲಾ ಅವಕಾಶಗಳನ್ನು ತ್ಯಜಿಸುವುದು ಒಳಿತಲ್ಲ, ಸನ್ನಿಹಿತವಾದ ಬದಲಾವಣೆಗಳಿಗೆ ಹೊಂದಿಕೊಂಡು ಬರುವ ಅವಕಾಶಗಳನ್ನು ಬಳಸಿರಿ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಜಂಜಾಟದ ಪರಿಸ್ಥಿತಿಯು ನಿವಾರಣೆಯಾಗಿ ಮನಸ್ಸಿಗೆ ಸ್ವಲ್ಪ ಶಾಂತಿ ಮೂಡುತ್ತದೆ. ನಿಮ್ಮ ಶ್ರದ್ಧೆಯು ವೃತ್ತಿಯಲ್ಲಿ ಅನುಕೂಲವನ್ನು ತರುತ್ತದೆ. ಸರ್ಕಾರಿ ನೌಕರರಿಗೆ ಹಿರಿಯ ಅಧಿಕಾರಿಗಳಿಂದ ಸ್ವಲ್ಪ ಕಿರಿಕಿರಿ ಉಂಟಾಗುತ್ತದೆ, ಆದರೂ ತಾಳ್ಮೆಯಿಂದ ಇರುವುದು ಉತ್ತಮ. ವಿದ್ಯಾರ್ಥಿಗಳಿಗೆ ಅವರ ಸಾಧನೆಯನ್ನು ಹೊರಜಗತ್ತಿಗೆ ತೋರುವ ಕಾಲ ಇದು. ಶ್ರದ್ಧೆಯಿಂದ ಅಧ್ಯಯನ ಮಾಡಿರಿ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ವೃತ್ತಿಯ ಅನುಭವ ಮತ್ತು ಸಾಮರ್ಥ್ಯದಿಂದಾಗಿ ನಿಮ್ಮನ್ನು ಉದ್ಯೋಗದಾತರು ಉಳಿಸಿಕೊಳ್ಳುವರು. ಖಾಸಗಿ ಉದ್ಯೋಗದಲ್ಲಿರುವವರಿಗೆ ಸ್ವಲ್ಪ ಯಶಸ್ಸು ದೊರೆಯುತ್ತದೆ. ಹಣಕಾಸಿನ ಸ್ಥಿತಿಯು ಸ್ವಲ್ಪಮಟ್ಟಿಗೆ ಉತ್ತಮಗೊಳ್ಳುತ್ತದೆ. ಮಿತ್ರರ ಸಹಾಯದಿಂದ ವ್ಯವಹಾರದಲ್ಲಿ ಸ್ಥಿರತೆಯನ್ನು ಕಾಣಬಹುದು. ಪಾಲುದಾರರ ಜೊತೆ ಸಾಕಷ್ಟು ಚರ್ಚೆ ನಡೆದು ನಿಮ್ಮ ಪಾಲುದಾರಿಕೆ ಉಳಿಯುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ಯಾವುದೇ ರೀತಿಯ ಹಗಲುಗನಸನ್ನು ಕಾಣಲು ಹೋಗಬೇಡಿ, ಆಲಸ್ಯದಿಂದ ದೂರ ಉಳಿಯಿರಿ. ಅನಿವಾರ್ಯದ ಬದಲಾವಣೆಗೆ ಒಳಗಾಗಿ ನಿಮ್ಮತನವನ್ನು ಕಳೆದುಕೊಳ್ಳಬೇಡಿ. ಹಿರಿಯರ ಮಾರ್ಗದರ್ಶನವನ್ನು ಉಪೇಕ್ಷಿಸಬೇಡಿರಿ, ಅವರ ಮಾತನ್ನು ಪಾಲಿಸುವುದರಿಂದ ನಿಮಗೆ ಹೆಚ್ಚು ಅನುಕೂಲವಾಗುತ್ತದೆ. ಉದ್ಯೋಗ ಸ್ಥಳದಲ್ಲಿ ಕೆಲ ಜವಾಬ್ದಾರಿಗಳನ್ನು ಕೊಡಲು ಹಿರಿಯ ಅಧಿಕಾರಿಗಳು ನಿಶ್ಚಯಮಾಡುವರು.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ಕರಕುಶಲ ಕಾರ್ಮಿಕರಿಗೆ ಮನ್ನಣೆ ದೊರೆತು ಅವರ ಬೇಡಿಕೆಗಳು ಈಡೇರುತ್ತವೆ. ಸರ್ಕಾರದಿಂದ ಅವರಿಗೆ ಹೆಚ್ಚಿನ ಸವಲತ್ತುಗಳು ಒದಗಿಬರುತ್ತವೆ. ಉದ್ಯೋಗ ಸ್ಥಳದಲ್ಲಿ ಇದ್ದ ವಾದ-ವಿವಾದಗಳು ಮರೆಯಾಗಿ ಮನಸ್ಸಿಗೆ ನೆಮ್ಮದಿ ಮೂಡುತ್ತದೆ. ಕೆಲಸದ ಮೇಲೆ ಸಾಕಷ್ಟು ಓಡಾಟವಿರುತ್ತದೆ, ಇದು ನಿಮಗೆ ವೃತ್ತಿಯಲ್ಲಿ ಅಭಿವೃದ್ಧಿಯನ್ನು ಕೊಡುತ್ತದೆ.


ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಸ್ಫೂರ್ತಿ ತುಂಬಿದ ಜೀವನದೊಂದಿಗೆ ಉತ್ತಮ ನೆಲೆಯನ್ನು ಕಂಡುಕೊಳ್ಳುವಿರಿ. ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ಹಣವನ್ನು ಹಿತಮಿತವಾಗಿ ಬಳಸಿ ಆರ್ಥಿಕ ಸ್ಥಿರತೆಯನ್ನು ಸಾಧಿಸುವಿರಿ. ಕ್ರಿಯಾಶೀಲ ಹೃದಯವುಳ್ಳ ನಿಮಗೆ ಶುಭ ಫಲಗಳು ದೊರೆಯುತ್ತವೆ. ಹಿರಿಯರಿಗೆ ಮೂಳೆ ನೋವು ಬಾಧಿಸಬಹುದು. ಎಂತಹ ಒತ್ತಡದಲ್ಲಿಯೂ ಸಹ ತಾಳ್ಮೆಯಿಂದ ಇರುವ ಸ್ವಭಾವ ಮೈಗೂಡುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಹಣಕಾಸು ಸಂಸ್ಥೆಗಳಿಂದ ನೀವು ಅಪೇಕ್ಷಿಸಿದ್ದ ಸಾಲ ದೊರೆಯುತ್ತದೆ. ನಿಮ್ಮ ಸಹೋದ್ಯೋಗಿಗಳ ಸಹಾಯ ದೊರೆತು ಉದ್ಯೋಗದಲ್ಲಿ ಮೇಲ್ದರ್ಜೆಗೆ ಏರುವ ಸಂದರ್ಭವಿದೆ. ವಾಹನ ಖರೀದಿಸಲು ಆಸೆ ಪಡುತ್ತಿದ್ದವರು ಈಗ ಖರೀದಿ ಮಾಡಬಹುದು. ನಿವೃತ್ತರಿಗೆ ಬದಲಿ ಉದ್ಯೋಗ ದೊರೆಯುತ್ತದೆ. ಅನಗತ್ಯ ಕೋಪವನ್ನು ಕಡಿಮೆ ಮಾಡಿಕೊಳ್ಳಿರಿ. ಮಕ್ಕಳಿಂದ ನಿಮಗೆ ಗೌರವ ಹೆಚ್ಚುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಪತ್ರಿಕೋದ್ಯಮದಲ್ಲಿ ಕೆಲಸ ಮಾಡುತ್ತಿರುವವರಿಗೆ ಉತ್ತಮ ಗೌರವವಿರುತ್ತದೆ, ಅವರ ಲೇಖನಗಳಿಗೆ ಹೆಚ್ಚು ಪ್ರಚಾರ ಸಹ ಸಿಗುತ್ತದೆ. ಬಂಧುಗಳ ನಡುವಿನ ಹಣದ ವ್ಯವಹಾರಗಳಲ್ಲಿ ಮಧ್ಯಸ್ಥಿಕೆಯನ್ನು ಮಾಡಲು ಹೋಗುವುದು ಬೇಡ, ಮಾಡಲು ಹೋದರೆ ನಿಮಗೆ ಧನ ನಷ್ಟವಾಗುವುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ನಿಮ್ಮ ವ್ಯವಹಾರಗಳಲ್ಲಿ ಸ್ವಲ್ಪ ಹಿನ್ನಡೆ ಆಗುತ್ತದೆ. ಉದ್ಯೋಗ ಬದಲಾವಣೆಗೆ ಆತುರದ ನಿರ್ಧಾರ ಬೇಡ. ಬಹುದಿನಗಳಿಂದ ನೀವು ಆಸೆ ಪಡುತ್ತಿದ್ದ ಒಡವೆಯನ್ನು ಈಗ ಕೊಳ್ಳಬಹುದು. ಪತ್ರಕರ್ತರು ಸಾಕಷ್ಟು ಎಚ್ಚರಿಕೆಯಿಂದ ವರದಿ ಮಾಡುವುದು ಸೂಕ್ತ. ಸಾಂಸಾರಿಕ ನೆಮ್ಮದಿ ಇದ್ದರೂ ಆರ್ಥಿಕ ಸಂಕಷ್ಟ ಎದುರಾಗಬಹುದು.

ಪದಬಂಧ 2688



ಮೇಲಿನಿಂದ ಕೆಳಕ್ಕೆ
1. ಅಂತರಂಗದ ಅನಿಸಿಕೆಯಿಂದ ಕೂಡಿದ ಅಕ್ಕನ ಗಂಡ 4
2. ಧೃತರಾಷ್ಟ್ರನನ್ನು ಕಾಡಿದ ಅಂಧತ್ವ ತಲೆ ಕಳಗು 3
3. ಸುಸಂಸ್ಕೃತ ನಾಯಿ 3
4. ಲಕ್ಷ್ಮಣನಂತೆ ರೇಖೆ ಎಳೆದು ಸೀಮೆಯನ್ನು ಗುರುತಿಸು 4
6. ತನುಜಾಳ ಅಡ್ಡ ಹೆಸರು 2
8. ಕಳೆದು ಹೋದದ್ದು ಶೂನ್ಯದಲ್ಲಿ ಕೊನೆಯಾಗಿದೆ 2
10. ಸರೋವರದಂತಹ ಮಂದಿಯ ಮನಸ್ಸು 5
12. ಬದುಕಿನ ಜೊತೆಗಾತಿ 5
13. ವ್ಯಾಕರಣದಲ್ಲಿ ತಿಂಗಳಿಂದ ಕೂಡಿದ್ದು 3
14. ದನದ ದಂಕ್ತ ಪಂಕ್ತಿ 3
18. ತಾಯಿಯ ಹಾಲು ಕುಡಿವ ಕಂದ 4
19. ದಾಖಲೆಯನ್ನು ಪ್ರಮಾಣಿಸುವ ಸಹಿ 2
20. ಗ್ರಾಮ್ಯ ಭಾಷೆಯಲ್ಲಿ ಇಡು 2
21. ಶಿವಪುತ್ರನಿಗೆ ಶ್ರೇಷ್ಠ ಮಂಗಳ ವಾಚಕ 4
23. ಮೊದಲ ಪ್ರಧಾನಿಯ ಮನತನದ ಹೆಸರು 3
24. ಕುಡಿತದ ಅಮಲಿನಲ್ಲಿರುವ ಮದ್ಯವ್ಯಸನಿ 3

ಎಡದಿಂದ ಬಲಕ್ಕೆ
1. ಉಸುಕಿನ ಮರು ಭೂಮಿ 5
3. ಒಳ್ಳೆಯ ಕ್ಷಣ ಮೂಹರ್ತಕ್ಕೆ ಸೂಕ್ತ 5
5. ರೋಗದೊಂದಿಗೆ ಅಂಟಿಕೊಂಡ ವ್ಯಾಧಿ 3
6. ತರಾಸುರವರ ಹೊಳಪಿನ ಸ್ಥಳ 3
7. ಶಕ್ತಿ ದೇವತೆಯ ಕಳಶ ಮೆರವಣಿಗೆ 3
9. ವಜವಾಗುವ ತೂಕ 3
11. ಬೀಡಿ ಸಿಗರೇಟುಗಳ ಮೂಲ ಪದಾರ್ಥ 3
13. ಆಳ್ವಿಕೆಯ ದಾಹದಲ್ಲಿ ಎಲ್ಲವನ್ನು ಹಿಡಿದಿಡುವ ಅಲ್ಪ ಖಾರ 5
15. ಬೆಸವಿಲ್ಲದೆ ದೀರ್ಘವಾಗಿ ಒಟ್ಟಿಗೆ ಸೇರುವಿಕೆ 4
16. ಅನುಕಂಪ ತೋರುವ ಜನ ಸಂಘಟನೆ 4
17. ಸಂತ್ರಸ್ತರಿಗೆ ನೀಡುವ ನೆರವು ಹಣ 5
18. ಹೆಪ್ಪಾದ ಹಾಲು 3
20. ಶ್ರೀಕಾರದೊಂದಿಗೆ ಮುಕ್ತಾಯ 3
22. ಮಾಡಿದ ತಪ್ಪಿಗೆ ತೆತ್ತಬೇಕಾದ ದಂಡ 3
24. ಕೆಟ್ಟ ಕೆಲಸಕ್ಕೆ ನೀಡುವ ಪ್ರಚೋದನೆ 3
25. ಎಲ್ಲೆಡೆ ಹಬ್ಬು 3
26. ಒಟ್ಟಾದ ದೇವ ಮನಷ್ಯರು 5
27. ನಿಜದನಾಗರವ ಕೊಲ್ಲೆಂಬರು, ಆದರೆ ಇದನ್ನು ಪೂಜಿಸುವರು 5

ಪದಬಂಧ ಉತ್ತರ -2687

ಮೇಲಿಂದ ಕೆಳಕ್ಕೆ
1. ಸರಳಗತಿ 2. ಹೆಸರುವಾಸಿ 3.ರಮಸ 4. ಆಟಗಾರ 5. ದಯಾಗುಣ 7. ಮಹಿಳಾಮಣಿ 10. ಕ್ಷಣಿಕಸುಖ 11.ನೀಲಿಮಾ 13. ಕರಾಳ 15. ಮಧುರರಾಗ 16. ಬೆಳಕುಪಥ 17. ವರಕವಿ 18. ಗೆಣೆಕಾರ 21.ಸಾರಂಗ

ಎಡದಿಂದ ಬಲಕ್ಕೆ
1. ಸಲಹೆಗಾರ 4. ಆಲದಮರ 6. ರುದ್ರಸಮರ 8. ಗಡವಾ 9. ರಕ್ಷಣನೀತಿ 12. ಸಿಕ 14. ಮಾಮ 16. ಬೆಳವಣಿಗೆ 19. ಧುರುಳ 20. ದುಃಖಸಾಗರ 22. ಪದವೀಧರ 23. ಗಳಗನಾಥ

ಸಂಯಮದ ಪಯಣದಲ್ಲಿ ಅರಳಿದ ಕಾವ್ಯಪುಷ್ಪ

ಆರ್. ತಾರಿಣಿ ಶುಭದಾಯಿನಿ

‘ಮದರಂಗಿ ವೃತ್ತಾಂತ’ ಕೃತಿಯು ಎಚ್.ಎಲ್.ಪುಷ್ಪ ಅವರ ಸುಮಾರು ಇಪ್ಪತ್ತೆಂಟು ವರ್ಷಗಳ ಕಾವ್ಯ ಪಯಣ (ಇದರಲ್ಲಿ ‘ಅಮೃತಮತಿಯ ಸ್ವಗತ’, ‘ಗಾಜುಗೋಳ’, ‘ಲೋಹದ ಕಣ್ಣು’ ಹಾಗೂ ‘ಸೋಲಾಬರಸ್ ಹುಡುಗರು ಹಾಗೂ ಎಕ್ಕದ ಬೀಜ’ ಎಂಬ ನಾಲ್ಕು ಸಂಕಲನಗಳು ಅಡಕಗೊಂಡಿವೆ). ಈ ಪಯಣವು ಸಂಯಮದ ಪಯಣ. ಏಕೆಂದರೆ, ಪ್ರತೀ ಕಾವ್ಯ ಸಂಕಲನವು ಸಾಕಷ್ಟು ಅಂತರಗಳನ್ನು ಹೊಂದಿದೆ. ಕಾವ್ಯವನ್ನು ಧ್ಯಾನದಂತೆ ಭಾವಿಸಿ ಬದುಕಿನ ನಿಜವನ್ನು ಒಳಗಣ್ಣಿನಿಂದ ನೋಡುವುದಕ್ಕೆ ಸಾವಧಾನವೇ ಮಾರ್ಗ ಎಂದು ನಂಬುವುದು ಈಗಿನ ವೇಗದ ಉತ್ಕರ್ಷಗುಣಕ್ಕೆ ಹೊರತಾದುದು.

ನಿರ್ದಿಷ್ಟ ಪಂಥ ಅಥವಾ ಚಳವಳಿಯ ಸಂದರ್ಭದಲ್ಲಿ ಹುಟ್ಟುವ ಕಾವ್ಯವು ಕೇವಲ ಚಾರಿತ್ರಿಕತೆಯನ್ನು ಪಡೆದುಕೊಂಡರೆ ಅದನ್ನು ದಾಟಿ ಕಾವ್ಯವನ್ನು ಋಜುತ್ವದ ಶೋಧವೆಂದು ಭಾವಿಸಿ ಮುಂದುವರೆಯುವುದು ಉತ್ತಮ ಮಾರ್ಗವೆಂದು ಹೇಳಬಹುದು. ಪುಷ್ಪ ಅವರು ಸ್ತ್ರೀವಾದಿ ಪಂಥವು ಉತ್ಕರ್ಷದಲ್ಲಿದ್ದಾಗ ಕಾವ್ಯವನ್ನು ಬರೆಯಲಾರಂಭಿಸಿದವರು. ಅವರ ಮೊದಲ ಕವನ ಸಂಕಲನವಾದ ‘ಅಮೃತಮತಿಯ ಸ್ವಗತ’ವು ಒಂದು ಬಗೆಯ ಮ್ಯಾನಿಫ್ಯಾಸ್ಟೊ ತರದ ಕವಿತೆಗಳನ್ನು ಕೊಟ್ಟಿತ್ತು. ಆದರೆ ಪುಷ್ಪ ಅವರನ್ನು ಪಾಂಥಿಕ ಕವಿ ಎಂದು ಸೀಮಿತಗೊಳಿಸಲಾಗದು. ಅವರು ತಮ್ಮ ಕಾವ್ಯವನ್ನು ಸ್ತ್ರೀವಾದದ ಲಯಗಳೊಂದಿಗೆ ಬದುಕಿನ ಸತ್ಯದ ನೆಲೆಗಳನ್ನು ಅರಸುವ ಶೋಧವನ್ನಾಗಿ ಮಾಡಿಕೊಳ್ಳುತ್ತಾರೆ. ಅವರ ಕಾವ್ಯದೊಳಗಿನ ಸಾಮಾಜಿಕತೆಯು ಆಧ್ಯಾತ್ಮಿಕತೆಯ ಹರಹನ್ನು ಪಡೆದುಕೊಂಡು ಮುನ್ನಡೆಯುತ್ತದೆ. ಈ ದೃಷ್ಟಿಯಿಂದ ಅವರ ಕವಿತೆಗಳನ್ನು ಗಮನಿಸಬೇಕು. ದಟ್ಟವಾದ ಸ್ತ್ರೀವಾದೀ ಸತ್ವಗಳನ್ನು ತಮ್ಮದಾಗಿಸಿಕೊಳ್ಳುತ್ತಲೇ ಜಗದ ನೆಲೆಗಳನ್ನು ಅರಿಯುವ ನೆಲೆ ಇವರದು.

ಪುಷ್ಪ ಅವರ ಕಾವ್ಯದಲ್ಲಿ ಗಮನಿಸಬೇಕಾದ ಎರಡು ಮುಖ್ಯ ಅಂಶಗಳೆಂದರೆ ಒಂದು, ಅವರ ಕಾವ್ಯವು ವಾಚಾಳಿತನವನ್ನು ಬಿಟ್ಟುಕೊಟ್ಟು ಆತ್ಮಾವಲೋಕನಕ್ಕೆಡೆ ಮಾಡಿಕೊಡುವ ಸ್ವಗತವನ್ನು ಮೈಗೂಡಿಸಿಕೊಂಡಿರುವುದು; ಮತ್ತೊಂದು ಸುಳ್ಳಿನ ಗಾಜುಗೋಳಗಳನ್ನು ಒಡೆದುಕೊಂಡು ನಿಜದ ಅನಾವರಣ ಮಾಡಿಕೊಳ್ಳುವ ಗುರಿ ಹೊಂದಿರುವುದು. ಈ ಎರಡೂ ಅಂಶಗಳು ಆತ್ಮಿಕವಾಗಿ ಶೋಧವನ್ನು ಮಾಡುವುದಕ್ಕೆ ಇಂಬು ನೀಡುವಂತಹವು.

ಹೊರಗಿನ ಮಾತು ಮಾತುಗಳ ಜಿಜ್ಞಾಸೆಯನ್ನು ಸೀಮಿತಗೊಳಿಸಿ ತನ್ನಂತರಂಗದ ಮಾತುಗಳನ್ನು ಆಡಬೇಕೆನ್ನುವ ವಾಂಛೆಯಿಂದ ಹುಟ್ಟುವ ಸ್ವಗತವು ಒಳಮುಖವಾಗಿರುವಂಥದ್ದು. ಮಾತಿನ ಸತ್ವದ ಬಗ್ಗೆ ಕವಿಯ ಮೊದಲ ಕಾವ್ಯ ಸಂಕಲನವಾದ ‘ಅಮೃತಮತಿಯ ಸ್ವಗತ’ದಿಂದ ಆರಂಭವಾಗಿ ‘ಸೋಲಾಬರಸ್ ಹುಡುಗರು ಹಾಗೂ ಎಕ್ಕದ ಬೀಜ’ ಸಂಕಲನದ ತನಕ ಒಂದು ಧ್ಯಾಸ ಇರುವುದು ಕಾಣುತ್ತದೆ. ಅಂತೆಯೇ, ‘ಬೀದಿಗೆ ಬಂದಿದೆ ಮಾತು ಬಾಗಿಲು ತೆರೆದು/ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ತೆವಳುತ್ತಾ/ಅಕ್ಷರಗಳು ತೇಲಾಡುತ್ತಿವೆ’(ಎಕ್ಕದ ಬೀಜದಂತೆ ಮಾತು) ಎನ್ನುವ ಸಾಲುಗಳು ಬರುತ್ತವೆ. ಸ್ವಗತದಲ್ಲಿ ಆಡುವ ಮಾತುಗಳ ನಿಜವು ಬೀದಿಗೆ ಬಂದು ತೆವಳುವ ಮಾತಿಗೆ ಪ್ರತಿಯಾಗಿ ನಿಲ್ಲುತ್ತದೆ. ಈ ಅಂತರವನ್ನು ಗುರುತಿಸಿಕೊಳ್ಳುವುದು ಅವರ ಕಾವ್ಯಪಯಣದಲ್ಲಿ ಆಗಿರುವ ಬೆಳವಣಿಗೆ.



ಮದರಂಗಿ ವೃತ್ತಾಂತ
ಸಮಗ್ರ ಕಾವ್ಯ
ಲೇ: ಎಚ್.ಎಲ್.ಪುಷ್ಪ
ಪ್ರ: ಕಿರಂ ಪ್ರಕಾಶನ
ಸಂ: 98444 67351
ಪು: 336 ₹300

ಎರಡನೆಯದಾಗಿ, ಪುಷ್ಪ ಅವರು ಆಧ್ಯಾತ್ಮಿಕ ಹಸಿವಿನ ಕವಿ. ಅದಾಗಲೇ ಹೇಳಿದಂತೆ ಗಾಜುಗೋಳಗಳನ್ನು ಕಟ್ಟಿಕೊಂಡಿರುವ ಜಗತ್ತನ್ನು ಒಡೆದುಕೊಳ್ಳುವುದು ಮುಖ್ಯವಾದ ಆಧ್ಯಾತ್ಮಿಕ ಪ್ರಶ್ನೆ. ಗಾಜುಗೋಳಗಳು ಮಿಥ್ಯೆಗಳು. ಅವುಗಳನ್ನು ಸಾರಿ ಪಾರಾದವರ ಸಂತತಿಯನ್ನು ಪುಷ್ಪ ತಮ್ಮ ಕವಿತೆಗಳಲ್ಲಿ ಮಾತನಾಡಿಸುತ್ತಾ ಹೋಗುತ್ತಾರೆ. ಬುದ್ಧನಿಂದ ಮೊದಲುಗೊಂಡು, ಅಕ್ಕಮಹಾದೇವಿ, ದ್ರೌಪದಿ, ಗೆಲಿಲಿಯೊ ಮುಂತಾದ ನಿಜದ ಪರೀಕ್ಷೆಗೆ ನಿಂತವರನ್ನು ತಮ್ಮ ಕವಿತೆಗಳಲ್ಲಿ ಎತ್ತಿಕೊಳ್ಳುವ ಮೂಲಕ ತಮ್ಮ ನಿಲುವನ್ನು ಖಚಿತಗೊಳಿಸಿಕೊಳ್ಳುತ್ತಿದ್ದಾರೆ. ಮಿಥ್ಯೆ ಮತ್ತು ಸತ್ಯಗಳ ದ್ವಂದ್ವವು ಮಾಂಸ ಮತ್ತು ಆತ್ಮಗಳ ಪರಸ್ಪರ ದ್ವಿತ್ವದಿಂದ ಅಭಿವ್ಯಕ್ತಗೊಳ್ಳುವುದನ್ನು ಅವರ ಕಾವ್ಯದಲ್ಲಿ ಗುರುತಿಸಬಹುದು.

ಮಿಥ್ಯೆ ಎನ್ನುವುದು ಆಧ್ಯಾತ್ಮಿಕ ಪರಿಭಾಷೆಯಷ್ಟೇ ಅಲ್ಲ. ಅದು ಹೆಣ್ಣಿನ ಅಸ್ಮಿತೆಯ ಸಂದರ್ಭದಲ್ಲಿ ಸದಾ ಜಾಗೃತಗೊಳ್ಳುವ ಅಂಶವಾಗಿದೆ. ಸಾಮಾಜಿಕವಾಗಿ ನಿರ್ಧರಿಸಲ್ಪಡುವ ಹೆಣ್ಣಿನ ಅಸ್ಮಿತೆಯು ಸಿದ್ಧ ಚೌಕಟ್ಟುಗಳಲ್ಲಿ ಹೊರಹೊಮ್ಮುವುದು ಪುಷ್ಪ ಅವರಿಗೆ ಒಂದು ಮಿಥ್ಯೆ. ಅದನ್ನು ಮೀರಿ ಅವಳಿಗಿರುವ ಆಧ್ಯಾತ್ಮಿಕ ಹಸಿವು ಎಂದರೆ ತಾನು ಯಾರು ಎನ್ನುವುದನ್ನು ಕೇಳಿಕೊಳ್ಳುವುದು. ಸ್ತ್ರೀವಾದಿ ಓದುಗಳಲ್ಲಿ ಹೆಣ್ಣಿನ ಅಸ್ಮಿತೆಯು ಮೊದಲೇ ಭಾವಿಸಿಕೊಂಡಂತೆ ದಮನಕ್ಕೆ ಒಳಗಾಗಿರುತ್ತದೆ. ಅದು ಮಾತನಾಡಲಾರದು, ಏನನ್ನೂ ವಿಚಾರ ಮಾಡಿನೋಡಲು ಅಶಕ್ತವಾಗಿರುವಂಥದ್ದು. ಆದರೆ ಪುಷ್ಪ ಅವರು ಈ ಪೂರ್ವಗ್ರಹವನ್ನು ಬಿಡಿಸಿಕೊಳ್ಳಲೆತ್ನಿಸುತ್ತಾರೆ.

ಒಳನೋಟ

ಕವಿಯ ಪ್ರಕಾರ ತಾನು ಯಾರು? ಏಕೆ ಹೀಗಿದ್ದೇನೆ ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳುವುದು ಸತ್ಯದ ಹುಡುಕಾಟದ ಆರಂಭಿಕ ಹಂತ. ಆದುದರಿಂದಲೇ ಅಮೃತಮತಿ, ಮಾಧವಿ, ಕುಂಡಲಕೇಶಿಯರು ಅವರ ಕಾವ್ಯದ ಮುಖ್ಯಭೂಮಿಕೆಯಲ್ಲಿದ್ದಾರೆ. ‘ತನ್ನ ಚಿಪ್ಪೊಳಗೆ ನುಗ್ಗುವ ಆಮೆ/ ಎಂದು ಬಂದೀತು ಹೊರಕ್ಕೆ/ ನೀರ ಬಿಟ್ಟು ಮೇಲಕ್ಕೆ’ ಎಂದು ಅವರ ‘ಆಮೆಗಳು’ ಪದ್ಯದ ಸಾಲುಗಳು ಹೇಳುವಂತೆ ಅವರು ಆಶಿಸುವುದು ಸ್ವಂತವೆನಿಸಿಕೊಂಡಿದ್ದು ಹೊರಗೆ ಬರಬೇಕು. ಅದಕ್ಕೆ ಪೂರ್ವಪೀಠಿಕೆಯಾಗಿ ಸ್ವಗತವು ಬರುತ್ತದೆ.

ಪುಷ್ಪ ಅವರ ಕಾವ್ಯವು ಸ್ತ್ರೀತ್ವದ ಅಸ್ಮಿತೆಯನ್ನು ಗಂಡಿನ ಅಸ್ತಿತ್ವಕ್ಕೆ ಪ್ರತಿಯಾಗಿ ಕಲ್ಪಿಸುವುದಕ್ಕೆ ಸೀಮಿತವಾಗಿಲ್ಲ. ಗಂಡುಹೆಣ್ಣಿನ ಪ್ರೇಮ ಹಾಗೂ ಸಾಮರಸ್ಯಗಳು ಅವರ ಕಾವ್ಯದ ಭಾಗವಾಗಿರುವಂತೆಯೇ ಹೆಣ್ಣುಗಂಡುಗಳ ನಡುವಿನ ಸಂಘರ್ಷ, ಹಿಂಸೆಗಳು ಸಹ ಪ್ರಮುಖವಾದ ಅಂಗವೇ ಆಗಿವೆ. ಹೆಣ್ಣಿನ ಅಸ್ಮಿತೆಯಲ್ಲಿ ದೇಹವೇ ಕೇಂದ್ರವೆಂದು ನೋಡುವ ಸಮಾಜದ ದೃಷ್ಟಿಕೋನವು ಆಕೆಯ ಬುದ್ಧಿವಂತಿಕೆಯನ್ನು ಒಪ್ಪದು. ‘ಪ್ರಿಯೇ ನೀನೆಂದೂ ಬುದ್ಧಿವಂತಳಾಗುವುದು ಬೇಡ/ನೀ ಬುದ್ಧಿವಂತೆಯಾದರೆ ನನ್ನ ಬಗ್ಗೆ ತಿರಸ್ಕಾರ ಮೂಡಿ/ನಿನ್ನ ನುಣುಪು ಮುಖದ ಮೇಲೆ ದರಿದ್ರ ಬುದ್ಧಿರೇಖೆಗಳು ಮೂಡುತ್ತವೆ’ (ಪ್ರೇಮ ಸಿದ್ಧಾಂತಗಳು) ಎಂದು ಗಂಡು ಸಹಜವೆನ್ನುವಂತೆ ಹೇಳುವುದು ಹೆಣ್ಣು ಗಂಡಿನ ಹೊಡೆತಕ್ಕೆ ಕೇರೆ ಹೊರಳಿದಂತೆ ಹೊರಳುವುದು ಸಾಮಾನ್ಯವಾಗಿದೆ.

ಹೆಣ್ಣಿನ ಅಸ್ಮಿತೆಯಲ್ಲಿ ಕವಿಯ ಪ್ರಕಾರ ಮುಖ್ಯವಾಗುವುದು ತನ್ನತನವನ್ನು ನಿರ್ಧರಿಸುವುದು, ತನ್ನ ಆಸೆಗಳನ್ನು ನಿರಾಕರಿಸದೇ ಅವುಗಳನ್ನು ನೇರವಾಗಿ ಅಭಿವ್ಯಕ್ತಿಸುವುದು. ಹಾಗಾಗಿ ಅಮೃತಮತಿ ತನ್ನ ಲೈಂಗಿಕ ಆಸೆಗಳನ್ನು ದೇಹದ ಬಯಕೆಯಾಗಿಸಿಕೊಂಡಂತೆಯೇ ಸ್ವಾತಂತ್ರ್ಯದ ಬಯಕೆಯನ್ನಾಗಿಯೂ ಹೊಂದಿದ್ದಾಳೆ. ನಿರಂಕುಶಮತಿಯಾಗಿ ತನ್ನನ್ನು ತಾನು ನಿರೂಪಿಸಿಕೊಳ್ಳುವುದು ಒಂದು ದಿಟ್ಟತನದ ನಿಲುವು. ಇದು ‘ಗಾಜುಗೋಳ’ ಸಂಕಲನದ ಕುಂಡಲಕೇಶಿಯಲ್ಲೂ ಕಾಣುತ್ತದೆ. ಇದಕ್ಕಾಗಿ ಅವಮಾನ ನೋವುಗಳನ್ನು ಅನುಭವಿಸಿದರೂ ಅದಕ್ಕಾಗಿ ಹೋರಾಟ ಮಾಡುವುದು ಘನತೆಯ ಸಂಕೇತವಾಗುತ್ತದೆ. ಗಂಡು ಹೆಣ್ಣಿನ ಮಧ್ಯೆ ಏಳುವ ಹಿಂಸಾತ್ಮಕ ಸಂಘರ್ಷ ಹಾಗೂ ಹೊರಜಗತ್ತಿನ ಕ್ರೌರ್ಯವು ಒಂದಕ್ಕೊಂದು ಪೂರಕವಾಗಿರುವಂಥದ್ದು. ಆದುದರಿಂದಲೇ ಹೆಣ್ಣಿನ ಅಸ್ಮಿತೆ ಎಂದರೆ ಲೈಂಗಿಕ ಮುಕ್ತತೆಯಲ್ಲಾಗಲೀ ಸ್ವಾತಂತ್ರ್ಯದ ಸ್ವಪ್ನದಲ್ಲಾಗಲೀ ಆವಿರ್ಭವಿಸುವ ಸಂಗತಿಯಲ್ಲ. ಅದೊಂದು ಸಂಕೀರ್ಣವಾದ ಪ್ರಕ್ರಿಯೆ. ಆದುದರಿಂದಲೇ ಪುಷ್ಪ ಅವರ ಕಾವ್ಯದ ಸಾಲುಗಳು ಅನೇಕ ಬಾರಿ broken lines ಆಗಿರುತ್ತವೆ.

ಪುಷ್ಪ ಅವರ ಕಾವ್ಯ, ಅವರ ನೆಚ್ಚಿನ ಕವಿ ಗಂಗಾಧರ ಚಿತ್ತಾಲರಂತೆಯೇ ಗಾಢವಾದ ಬೌದ್ಧಿಕ ಅರಿವಿನ ಅನುಭವದ ಚಿಂತನೆಯ ವಿನ್ಯಾಸವುಳ್ಳದ್ದು. ಕನ್ನಡದಲ್ಲಿ ಹಾಸುಹೊಕ್ಕಾದ ಅಧ್ಯಾತ್ಮ/ಅನುಭಾವಗಳು ಹಾಗೂ ಸ್ತ್ರೀವಾದ/ಬಂಡಾಯದ ಪಾಂಥಿಕ ತಿಳಿವಳಿಕೆಗಳನ್ನು ಅವರ ಕಾವ್ಯ ಬಳಸಿಕೊಂಡಿದೆಯಾದರೂ ಮೈದುಂಬಿಕೊಂಡು ತನ್ನ ಹಾದಿಯ ತಾನೇ ಹುಡುಕಿಕೊಂಡು ಹರಿವ ನದಿಯ ಹರಿವಿನಂತೆ ಸಾಗಿದೆ.

ಕಥೆ

ಹೇಮಾ ಸದಾನಂದ್ ಅಮೀನ್ ಅವರು ಬರೆದ ಕಥೆ
ಗರ್ದಿಯಲ್ಲಿ ಗೋದಾವರಿ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವಿತೆ

ಭುವನಾ ಹಿರೇಮಠ ಅವರು ಬರೆದ ಕವಿತೆ
ಅರ್ಥ ಕಾಮ ಮೋಕ್ಷ ಮತ್ತು ಸ್ವರ್ಗಕ್ಕಾಗಿ
ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಸೊಂಡಿಲ ಮುಖಿ...

8ನೇ ಪುಟದಿಂದ...

ಸಕಲೇಶಪುರ-ಮಂಗಳೂರು ರೈಲಿಗೆ ಇತ್ತೀಚೆಗೆ ಸಿಕ್ಕ ನಮ್ಮ ಸಹಚರನ ಕಳೇಬರದ ಚಿತ್ರವನ್ನು ನೀವು ನೋಡಿರಬಹುದು. ಹೇಳಿ ಇದ್ಯಾವ ನ್ಯಾಯ? ಇನ್ನು ಈ ಅಸ್ಸಾಮಿನಲ್ಲಿ ಏನಾಗಿದೆ ಕೊಂಚ ನೋಡಿ.



ಕಾಡಿನ ಗಜಪಥಗಳೆಲ್ಲ ಮಾಯವಾಗುತ್ತಿರುವಾಗ ಆನೆಗಳಿಗೆ ಟಾರು ರಸ್ತೆಗೆ ಇಳಿಯದೆ ಬೇರೆ ಮಾರ್ಗ ಎಲ್ಲಿದೆ?

ಅಸ್ಸಾಂ ಕಾಜಿರಂಗ ವನ್ಯಜೀವಿ ಅಭಯಾರಣ್ಯದ ಹೊರವಲಯದ ಸೂಕ್ಷ್ಮ ಪ್ರದೇಶದಲ್ಲಿ ಅರಣ್ಯ ಇಲಾಖೆಯ ಎಲ್ಲಾ ನಿಯಮಗಳನ್ನು ಉಲ್ಲಂಘಿಸಿ ಎನ್.ಆರ್.ಎಲ್ ಹೆಸರಿನ ಪೆಟ್ರೋಲ್ ರಿಫೈನರಿ ತಲೆಯೆತ್ತಿದೆ. ಆ ಕಂಪನಿಯು ತನ್ನ ನೌಕರರ ಮನರಂಜನೆಗಾಗಿ ಒಂದು ಗಾಲ್ಫ್ ಕ್ಲಬ್ ನಿರ್ಮಿಸಿದೆ. ಗಾಲ್ಫ್ ಮೈದಾನದ ಗಡಿಯಂಚಿಗೆ ಬಲವಾದ ಕಾಂಕ್ರೀಟ್ ಗೋಡೆಯನ್ನೂ ಕೆಲವೆಡೆ ಕಟ್ಟಿ ನಿಲ್ಲಿಸಿತ್ತು. ಆದರೆ, ಈ ಮೈದಾನ ನಿರ್ಮಾಣವಾದ ಪ್ರದೇಶ ನಮ್ಮ ಪಾರಂಪರಿಕ ಪಥದ ನಡುವೆಯಿತ್ತು. ವಾಡಿಕೆಯಂತೆ, ಒಮ್ಮೆ ಆ ಮಾರ್ಗದಲ್ಲಿ ಹೋಗುತ್ತಿದ್ದ ನಮ್ಮ ಗುಂಪಿಗೆ ಅಚ್ಚರಿ ಕಾದಿತ್ತು. ಏಕೆಂದರೆ, ನಮ್ಮ ಪಥದಲ್ಲಿ ಎತ್ತರದ ಕಾಂಕ್ರೀಟ್ ಗೋಡೆ ಅಡ್ಡ ನಿಂತಿತ್ತಲ್ಲ?

ನಿಮ್ಮ ಪೋಷಕರು ಚಿಕ್ಕಂದಿನಲ್ಲಿ ನಿಮ್ಮನ್ನು ಶಾಲೆಗೆ ಕಳುಹಿಸುವಾಗ ಹೇಗೆ ರಸ್ತೆಯ ಎಡಬದಿಯಲ್ಲೇ ಸಾಗಬೇಕು ಎಂಬ ಪಾಠ ಹೇಳಿಕೊಡುತ್ತಾರೋ ಹಾಗೇ ನಮ್ಮ ಮರಿಗಳಿಗೂ ನಾವು, ‘ಇದು ನಮ್ಮ ನಡೆಯುವ ದಾರಿ. ಈ ದಾರಿಯನ್ನು ಬಿಟ್ಟು ಹೋಗಬಾರದು’ ಎಂಬ ಸೂಚನೆ ಕೊಟ್ಟಿರುತ್ತೇವೆ. ಬೇರೆ ದಾರಿಯಲ್ಲಿ ನಾವು ಸಾಮಾನ್ಯವಾಗಿ ಸಂಚರಿಸುವುದಿಲ್ಲ. ಪ್ರಾಯಕ್ಕೆ ಬಂದ ಗುಂಪಿನ ಸದಸ್ಯೆಯೊಬ್ಬಳು ಕಾಂಕ್ರೀಟ್ ಗೋಡೆಯನ್ನು ಕೆಡವಲು ತನ್ನ ತಲೆಯನ್ನು ಘಟ್ಟಿಸಿದಳು. ಕಾಂಕ್ರೀಟ್ ಗೋಡೆ ಜಗ್ಗಲಿಲ್ಲ. ಆಕೆ ಪದೇ ಪದೇ ತನ್ನ ಪ್ರಯತ್ನವನ್ನು ಮುಂದುವರೆಸಿದಳು. ತನಗೆ ಮತ್ತು ಕಾಯುತ್ತಿರುವ ತನ್ನ ಹಿಂಡಿಗೆ ದಾರಿ ಮಾಡುವ ಅವಳ ಪ್ರಯತ್ನ ಸಂಜೆಯ ಹೊತ್ತಿಗೆ ವಿಫಲವಾಯಿತು. ಮೆದುಳಿನಲ್ಲಿ ರಕ್ತಸ್ರಾವವಾಗಿ ಅವಳು ತೀರಿಕೊಂಡಳು.

ಯಾರೋ ಕೆಲವರು ಪುಣ್ಯಾತ್ಮರು ಎನ್.ಆರ್.ಎಲ್. ಘಟಕ ಸೂಕ್ಷ್ಮ ಪ್ರದೇಶದಲ್ಲಿ ನಡೆಸಿದ್ದ ಕಿತಾಪತಿಯ ವಿರುದ್ಧ ಕೋರ್ಟ್‌ಗೆ ಹೋದರು. ಹಸಿರು ನ್ಯಾಯಮಂಡಳಿಗೂ ದೂರು ಹೋಯಿತು. ನನ್ನ ಗುಂಪಿದೆಯಲ್ಲ, ಇಂತಹ ಇನ್ನೂ ಕೆಲವು ಹಿಂಡುಗಳು ಈ ಮಾರ್ಗದಲ್ಲಿ ಓಡಾಡುವುವು. ಆದರೆ, ಅಲ್ಲಿ ನಮ್ಮ ಪಥವೇ ಇಲ್ಲ ಎಂದು ವಕೀಲರು ವಾದಿಸಿದರಂತೆ. ನಾವೇನು ಇರುವೆಗಳೇ? ಯಾರಿಗೂ ಕಾಣಿಸದಿರಲು! ‘ಆ ಪ್ರದೇಶದಲ್ಲಿ ಆನೆಗಳೇ ಇಲ್ಲ’ ಎಂದೂ ಅವರು ವಾದಿಸಿದರಂತೆ. ಪಾಟೀಸವಾಲು ಹಾಕಲು ನಮಗೆ ಅವಕಾಶವಿದ್ದರೆ ಅದರ ಕಥೆಯೇ ಬೇರೆ ಇರುತ್ತಿತ್ತು. ಇರಲಿ, ಅಂತಿಮವಾಗಿ ಕಾಂಕ್ರೀಟ್ ಗೋಡೆ ನಿರ್ಮಾಣ ಮಾಡಿರುವುದು ತಪ್ಪು, ಅದನ್ನು ತೆರವುಗೊಳಿಸಬೇಕು ಎಂಬ ತೀರ್ಪು ಬಂತು. ನಮ್ಮ ಪರವಾಗಿ ಕೋರ್ಟ್ ಮೆಟ್ಟಿಲೇರಿದವರ ಹೊಟ್ಟೆ ತಣ್ಣಗಿರಲಿ. ಆದರೆ, ತೀರ್ಪು ಬರುವ ಮೊದಲು ಆದ ಅನಾಹುತ ಏನು ಕಡಿಮೆಯೇ? ಕಾಂಕ್ರೀಟ್ ಗೋಡೆಗೆ ತಲೆ ಘಟ್ಟಿಸಿಕೊಂಡು, ಮೆದುಳಿನಲ್ಲಿ ರಕ್ತಸ್ರಾವವಾಗಿ ನಮ್ಮ ಪರಿವಾರದ 12 ಸದಸ್ಯರು ಸತ್ತಿದ್ದರು.

ಕಳೆದ ವಾರ ಪತ್ರಿಕೆಗಳಲ್ಲಿ ನೀವು ಒಂದು ಸುದ್ದಿಯನ್ನು ಗಮನಿಸಿರಲಿಕ್ಕೆ ಸಾಕು, ‘ಸಿಡಿಲು ಬಡಿದು ಹದಿನೆಂಟು ಆನೆಗಳ ಸಾವು’ ಎಂದು ದಪ್ಪಕ್ಷರದಲ್ಲಿ ಪ್ರಕಟವಾಗಿತ್ತು. ಈ ಘಟನೆ ನಡೆದಿದ್ದು ಅಸ್ಸಾಮಿನ ಬಾಮುನಿ ಬೆಟ್ಟ ಪ್ರದೇಶದಲ್ಲಿ. ಸತ್ತ ನಮ್ಮ ಕುಟುಂಬದ ಸದಸ್ಯರಿಗೆ ಹೂಹಾಕಿ ಪೂಜಿಸುತ್ತಿರುವ ಫೋಟೊಗಳು ಎಲ್ಲೆಡೆ ಹರಿದಾಡಿದವು. ಸಿಡಿಲಿನಿಂದ ಅವರೆಲ್ಲ ಸತ್ತರು ಎಂದು ಅರಣ್ಯಾಧಿಕಾರಿಗಳು ಹೇಳಿದರು. ಕಾಡಿನಲ್ಲಿ ನಾವು ಎಂತೆಂಥ ಮಳೆಯಲ್ಲಿ ಓಡಾಡಿಲ್ಲ. ಕುವೆಂಪು ಅವರ ‘ಕಾನೂರು ಹೆಗ್ಗಡಿತಿ’ ಕೃತಿಯಲ್ಲೋ ಅಥವಾ ‘ಮಲೆಗಳಲ್ಲಿ ಮದುಮಗಳು’ ಕೃತಿಯಲ್ಲೋ ವರ್ಣಿಸಿರುವಂತೆ ಖಡ್ ಖಡಲ್ ಎನ್ನುವಂತಹ ಕುಂಭದ್ರೋಣ ಮಳೆ ಸುರಿದರೂ ಜಗ್ಗಿದವರಲ್ಲ ನಾವು. ಈಗ ಸಿಡಿಲಿಗೆ ನಮ್ಮ ಗಜಬಳಗದಲ್ಲಿ ಇಷ್ಟು ಸಾವಂತೆ! ವಿಷಪ್ರಾಶನದಿಂದ ಕೊಂದಿರಬಹುದು ಎಂದು ಪರಿಸರ ಪ್ರೇಮಿಗಳು ಅನುಮಾನ ವ್ಯಕ್ತಪಡಿಸಿದ ಕಡೆಗೆ ಸ್ವಲ್ಪ ಗಮನಕೊಡಿ. ಏನೋ ತನಿಖೆಯಂತೆ, ಹ್ಞೂಂ... ಕಾಯೋಣ.

ನಮ್ಮವರು ಹದಿನೆಂಟು ಮಂದಿ ಸತ್ತರಲ್ಲ? ಅದರಲ್ಲಿ 14 ಸಾವುಗಳು ಗುಡ್ಡದ ಮೇಲೆ ಸಂಭವಿಸಿದರೆ, ಇನ್ನುಳಿದ ನಾಲ್ಕು ಮರಿಗಳು –ಪಾಪ, ದೊಡ್ಡದಾಗಿ ಬೆಳೆದು, ಬಾಳಿ ಬದುಕಬೇಕಾದಂಥವು– ಗುಡ್ಡದ ಬುಡದಲ್ಲಿ ಪ್ರಾಣಬಿಟ್ಟಿವೆ. ಇದೇ ಪ್ರದೇಶದಲ್ಲಿ ವಾಸಿಸುವ ಕರ್ಬಿ ಆದಿವಾಸಿಗಳ ಕೃಷಿ ಜಮೀನನ್ನು ಸೌರ ವಿದ್ಯುತ್ ಕಂಪನಿಯೊಂದು ಅಕ್ರಮವಾಗಿ ಕಬಳಿಸಿದೆ ಎಂಬ ಗುಸು ಗುಸು ಕೇಳಿಬರುತ್ತಿದೆ. ವಿದ್ಯುತ್ ಘಟಕ ಇರುವ ಪ್ರದೇಶವೂ ನಮ್ಮ ಪಥವಾಗಿತ್ತು ಎಂಬುದನ್ನು ಲಿಯೊ ಸಲ್ಡಾನ ಎತ್ತಿ ತೋರಿದ್ದಾರೆ. ‘ಆನೆತಜ್ಞ’ರೆಂದೇ ಖ್ಯಾತರಾದ ವಿಜಯಾನಂದ ಚೌಧರಿಯವರು ‘ಸಿಡಿಲು ಬಡಿದ ಯಾವ ಕುರುಹುಗಳೂ ಮೃತಪಟ್ಟ ಆನೆಗಳ ಮೇಲೆ ಇಲ್ಲ. ಬಹುಶಃ ವಿಷಪ್ರಾಶನದಿಂದ ಅವುಗಳು ಸತ್ತಿರಬೇಕು’ ಎಂದಿರುವುದನ್ನೂ ನಿಮ್ಮ ಗಮನಕ್ಕೆ ತರುತ್ತಿದ್ದೇವೆ.

ವೀರಪ್ಪನ್ ತನ್ನ ಜೀವಿತಾವಧಿಯಲ್ಲಿ ನಮ್ಮ ಕುಲದ ಸಾವಿರಾರು ಗಂಡಾಳುಗಳನ್ನು ದಂತಕ್ಕಾಗಿ ಬೇಟೆಯಾಡಿದ್ದ. ಏಷ್ಯಾದಲ್ಲಿ ನಮ್ಮ ಗಂಡಾಳುಗಳಿಗೆ ಮಾತ್ರ ಹೊರಗೆ ಚಾಚಿದ ಕೋರೆಗಳಿರುತ್ತವೆ. ಅದೇ ಆಫ್ರಿಕಾದ ನಮ್ಮ ಬಾಂಧವರಲ್ಲಿ ಗಂಡು ಮತ್ತು ಹೆಣ್ಣು ಇಬ್ಬರಿಗೂ ಕೋರೆಗಳಿರುತ್ತವೆ. ದಂತಕ್ಕಾಗಿ ನೀವು ನಮ್ಮ ಗಂಡಾಳುಗಳನ್ನು ಬೇಟೆಯಾಡುತ್ತಿರುವುದರ ಪರಿಣಾಮದ ಕುರಿತು ಹೇಳಿಕೊಳ್ಳಲು ಮುಜುಗರವಾಗುತ್ತದೆ. ಈಗ ನಮ್ಮಲ್ಲಿ 80 ವಯಸ್ಕ ಹೆಣ್ಣಾನೆಗಳಿಗೆ ಒಂದು ಗಂಡಾಳು ಇರುವುದು. ಹೀಗಾದರೆ ನಮ್ಮ ಸಂತತಿ ಬೆಳೆಯುವುದು ಹೇಗೆ?

ಏಷ್ಯಾ ಆನೆಗಳಾದ ನಾವು ಹೆಚ್ಚಿನ ಸಂಖ್ಯೆಯಲ್ಲಿರುವುದು ಭಾರತದಲ್ಲಿಯೇ. ಉಳಿದಂತೆ ನೇಪಾಳ, ಬಾಂಗ್ಲಾದೇಶ, ಭೂತಾನ್, ಮ್ಯಾನ್ಮಾರ್, ಥಾಯ್ಲೆಂಡ್, ಲಾವೋಸ್, ಕಾಂಬೋಡಿಯಾ, ವಿಯೆಟ್ನಾಂ ದೇಶಗಳಲ್ಲಿ ನಮ್ಮ ಪರಿವಾರ ಇದೆ. ಭೌಗೋಳಿಕವಾಗಿ ನಿಮಗಿಂತ ಮೂರುಪಟ್ಟು ಹೆಚ್ಚು ಪ್ರದೇಶ ಹೊಂದಿದ ಚೀನಾದಲ್ಲಿ ನಮ್ಮವರ ಸಂಖ್ಯೆ 250 ಮಾತ್ರ. ಒಂದು ಕಾಲದಲ್ಲಿ ಭಾರತದ ಭಾಗವಾಗಿದ್ದ ಪಾಕಿಸ್ತಾನದಲ್ಲಿ ಈಗ ನಮ್ಮ ಪರಿವಾರದ ಒಬ್ಬರೂ ಇಲ್ಲ.

ಕೊನೆಯದಾಗಿ, ಜೀವಜಾಲದ ಸರಪಣಿಯಲ್ಲಿ ನಮ್ಮ ಪಾತ್ರ ಬಹುಮುಖ್ಯ. ನಮ್ಮಗಳ ಆವಾಸತಾಣಗಳು ಉಳಿದರೆ, ನಿಮ್ಮ ಸಂತತಿಗೂ ಕ್ಷೇಮ. ನಮ್ಮನ್ನು ಉಳಿಸಿಕೊಳ್ಳುವುದು ಅಥವಾ ಅಳಿಸಿಹಾಕುವುದು ನಿಮಗೆ ಬಿಟ್ಟಿದ್ದು. ಈ ನಿರ್ಧಾರ, ನಿಮ್ಮ ಅಳಿವು–ಉಳಿವಿನ ಪ್ರಶ್ನೆಗೂ ಉತ್ತರವಾಗಿರುತ್ತದೆ ಎಂಬುದನ್ನು ಮರೆಯಬೇಡಿ.

ನಮಸ್ಕಾರ



ಗುಡ್ಡದ ಮೇಲೆ ಹೋದಲ್ಲೆಲ್ಲ ಆನೆಗಳ ಕಳೇಬರಗಳು

ಎದ್ದುಕಾಣುವ ಪ್ರಬಂಧದ ಮನೋಲಹರಿ

ಎಸ್. ದಿವಾಕರ್

ಸ್ಮಿತಾ ಅಮೃತರಾಜ್ ಅವರ ಈ ಲಲಿತ ಪ್ರಬಂಧಗಳನ್ನು ಓದುತ್ತಿರುವಾಗ (ಮುನ್ನುಡಿ ಬರೆದಿರುವ ಪ್ರಸಾದ್ ರಕ್ಷಿದಿ ಇವುಗಳನ್ನು ಹಾಗೆಂದೇ ಕರೆದಿದ್ದಾರೆ) ನನಗೆ ಈ ಸಾಹಿತ್ಯ ಪ್ರಕಾರದ ಕುರಿತೇ ತುಸು ಯೋಚಿಸುವಂತಾಯಿತು. ಕಳೆದ ಕೆಲವು ವರ್ಷಗಳಲ್ಲಿ, ಲಲಿತ ಪ್ರಬಂಧದ ಹೆಸರಿನಲ್ಲಿ ಪ್ರಕಟವಾಗಿರುವ ಬರಹಗಳನ್ನು ನೋಡಿ: ನೆನಪುಗಳ ಮೆರವಣಿಗೆ, ಪ್ರಕೃತಿ ವರ್ಣನೆ, ಉದ್ದೇಶರಹಿತ ಜಿಜ್ಞಾಸೆ, ವ್ಯಕ್ತಿಚಿತ್ರ, ಹಾಸ್ಯೋದ್ದೀಪಕ ಹರಟೆ, ಇತ್ಯಾದಿ. ಆದರೆ, ಇವುಗಳ ಅಂಶಗಳು ಲಲಿತ ಪ್ರಬಂಧಗಳಲ್ಲಿ ಸೇರಿರಬಹುದಾದರೂ ಇವೇ ಲಲಿತ ಪ್ರಬಂಧಗಳಾಗುವುದಿಲ್ಲ. ಇಷ್ಟಕ್ಕೂ ಪ್ರಬಂಧ ಎಂದರೇನು? ಪ್ರಬಂಧಕಾರರು ಇತರ ಪ್ರಕಾರಗಳ ಲೇಖಕರು ಬರೆಯಲಾಗದ ಏನನ್ನು ಬರೆಯುತ್ತಾರೆ?

ಪ್ರಬಂಧಕಾರರಿಗೆ ಮುಖ್ಯವಾಗಿ ಒಂದು ವಸ್ತು ಅಥವಾ ವಿಷಯ ಬೇಕೇಬೇಕು. ಆ ವಸ್ತುವಿನ ಕುರಿತು ಅವರಿಗೆ ಏನೇನು ಗೊತ್ತಿದೆಯೋ, ಏನೇನು ಹೊಳೆಯುತ್ತದೆಯೋ ಅದೆಲ್ಲವೂ ಅವರ ಮನೋಲಹರಿಯ ಭಾಗವಾಗಬೇಕು. ಅಂದರೆ ಪ್ರಬಂಧ ಬರೆಯುವ ಕೆಲವರಿಗಾದರೂ ಕೆಲವು ವಿಷಯಗಳ ಬಗ್ಗೆ ತಮ್ಮದೇ ಆದ ವಿಚಾರವೋ ದೃಷ್ಟಿಕೋನವೋ ಇರಬಹುದಲ್ಲವೇ? ಅದಕ್ಕೂ ಅವರ ವ್ಯಕ್ತಿತ್ವಕ್ಕೂ ನಿಕಟವಾದ ಸಂಬಂಧವುಂಟು. ಪ್ರಬಂಧಕಾರರಾದವರು ಯಾವುದಾದರೊಂದು ವಿಷಯದ ಬಗ್ಗೆ ಬರೆಯಬೇಕೆಂದು ನಿರ್ಧರಿಸಿದಾಗಲೇ ಆ ವಿಷಯದೊಡನೆ ಅವರ ನಿಲುವೂ ಸೇರಿಕೊಳ್ಳುತ್ತದೆ.

ಲಲಿತ ಪ್ರಬಂಧವೆನ್ನುವುದು ವೈಯಕ್ತಿಕ ವಿಚಾರವಿಲಾಸವನ್ನು ಪ್ರತಿಫಲಿಸುವ, ಅಷ್ಟೇನೂ ದೀರ್ಘವಲ್ಲದ, ಅನೌಪಚಾರಿಕ ಸಾಹಿತ್ಯ ಪ್ರಕಾರ. ಅದಕ್ಕೆ ಅಷ್ಟೇನೂ ಅವಸರವಿಲ್ಲದ, ಲೋಕಾಭಿರಾಮ ಎನ್ನಬಹುದಾದ ಧಾಟಿಯಿರಬೇಕು. ಒಂದು ವ್ಯಕ್ತಿತ್ವದ ಧ್ವನಿಯೇ ಶೈಲಿಯೆನ್ನುವುದಾದರೆ ಒಳ್ಳೆಯದೊಂದು ಪ್ರಬಂಧದಲ್ಲಿ ಬರೆದವರ ವ್ಯಕ್ತಿವಿಶೇಷಗಳೆಲ್ಲವೂ ಮೇಳೈಸಿರಬೇಕು. ಬಹುಶಃ ಇದೇ ಕಾರಣದಿಂದ ಲಲಿತ ಪ್ರಬಂಧಗಳೆಲ್ಲವೂ ಬಹುಮಟ್ಟಿಗೆ ಉತ್ತಮ ಪುರುಷ ನಿರೂಪಣೆಯಲ್ಲೇ ಇರುತ್ತವೆ.

ಈ ಪ್ರಕಾರದ ಮೂಲಪುರುಷ ಮಾಂಟೇನ್. ಅವನ ಬಗ್ಗೆ ಫ್ರಾನ್ಸಿನ ಇನ್ನೊಬ್ಬ ಮುಖ್ಯ ಲೇಖಕ ವಾಲ್ಟೇರ್ ‘ಮಾಂಟೇನ್ ತನ್ನನ್ನೇ ತಾನು ಚಿತ್ರಿಸಿಕೊಳ್ಳುವ ಮೂಲಕ ಇಡೀ ಮಾನವೀಯತೆಯನ್ನು ಚಿತ್ರಿಸಿಬಿಟ್ಟ’ ಎಂದಿದ್ದಾನೆ. ಈ ಮಾತಿನಲ್ಲಿ ಯಾವುದು ವೈಯಕ್ತಿಕ ಅಥೆಂಟಿಸಿಟಿಯುಳ್ಳದ್ದೋ ಅದು ಸಾರ್ವತ್ರಿಕವೂ ಆಗಿರುತ್ತದೆ ಎಂಬ ಧ್ವನಿಯಿದೆ.

ಸ್ಮಿತಾ ಅಮೃತರಾಜ್ ಅವರ ಈ ಸಂಕಲನದಲ್ಲಿ ಒಟ್ಟು 31 ಬರಹಗಳಿವೆ. ಎಲ್ಲವನ್ನೂ ಪರಿಪೂರ್ಣ ಲಲಿತ ಪ್ರಬಂಧಗಳೆಂದು ಕರೆಯಲಾಗದು. ‘ಇದು ಕಲಿಗಾಲವಲ್ಲ ಇಲಿಗಾಲ’, ‘ಪಾದುಕ ಪ್ರಸಂಗ’, ಈ ಬರಹಗಳಲ್ಲಿರುವುದು ಲಾಗಾಯತಿನಿಂದ ನಮ್ಮ ಹಾಸ್ಯ ಲೇಖಕರು ಬರೆದೂ ಬರೆದೂ ಸವಕಲಾಗಿರುವ ವಸ್ತುಗಳು. ಹಾಗಾಗಿ ಇವುಗಳಲ್ಲಿ ಹೊಸ ದೃಷ್ಟಿಯಿದ್ದೂ ಅದು ಹಳೆಯ ಪ್ರಸಂಗಗಳಲ್ಲಿ ಕಳೆದುಹೋಗಿದೆ ಎನ್ನಬೇಕು.

ವಿಮರ್ಶೆ

‘ಮಳೆಯ ತಾನನ.... ನೆನಪುಗಳ ರಿಂಗಣ’, ‘ಮಳೆಯೆಂದರೆ.... ಬರೆ ಮಳೆಯಲ್ಲ’, ‘ಹೊಯ್ಯುತ್ತಿದೆ ಮಳೆ ಇಲ್ಲಿ ನಿಮಗೆಂದೆ....’, ಇವು ಒಂದೇ ಪ್ರಬಂಧದ ಬಿಡಿ ಭಾಗಗಳಂತಿವೆ. ಮಳೆಗಾಲದ ಮಡಿಕೇರಿಯ ಸೌಂದರ್ಯವನ್ನು ಕುರಿತ ಕೊನೆಯ ಬರಹವಂತೂ ಪ್ರವಾಸಿಗರನ್ನು ಆಕರ್ಷಿಸುವ ಒಂದು ನುಡಿಚಿತ್ರಕ್ಕಿಂತ ಹೆಚ್ಚಿನದೇನನ್ನೂ ಸಾಧಿಸಲಾಗಿಲ್ಲ. ‘ಅರೆಯುವ ಕಲ್ಲಿನ ಮುಂದೆ ಅರಳುವ ಕವಿತೆ’, ‘ಒಗ್ಗರಣೆಯೆಂಬ ಕಾಡುವ ಸಂಗತಿ’, ‘ಅಡುಗೆ ಕೋಣೆಯೊಳಗಿನ ಎಡವಟ್ಟುಗಳು’, ‘ಏನ್ ತಿಂಡಿ’, ‘ಒಲೆಯ ಉರಿಯ ಮುಂದೆ’ ಮುಂತಾದ ಬಿಡಿಬಿಡಿಯಾಗಿ ಅಪೂರ್ಣವೆನ್ನಿಸುವ ಬರಹಗಳು ಹೆಣ್ಣಿನ ಅಂತರಂಗದ ಮಾಧುರ್ಯ, ಪಾಕಪ್ರಾವೀಣ್ಯ, ದುಡಿಮೆಯ ಆಯಾಮ, ಕುಟುಂಬ ನಿರ್ವಹಣೆ ಇತ್ಯಾದಿಯನ್ನು ಸಾಂಕೇತಿಕವಾಗಿ ಸೇರಿಸಿಕೊಂಡು ಒಂದೇ ಧ್ವನಿಪೂರ್ಣ ಪ್ರಬಂಧವಾಗಬಹುದಾಗಿದ್ದವೋ ಏನೋ.

ಈಗ ಈ ಸಂಕಲನದ ಶೀರ್ಷಿಕೆಯಾಗಿರುವ ‘ಒಂದು ವಿಳಾಸದ ಹಿಂದೆ’ ಪ್ರಬಂಧವನ್ನು ನೋಡೋಣ. ವ್ಯಕ್ತಿಗೆ ವಿಳಾಸವೊಂದು ಯಾಕೆ ಬೇಕು ಎಂಬಲ್ಲಿಂದ ಪ್ರಾರಂಭವಾಗುವ ಈ ಪ್ರಬಂಧ ಮದುವೆಗೆ ಮೊದಲು, ಮದುವೆಯ ನಂತರ ಹೆಣ್ಣುಮಕ್ಕಳಿಗೆ ವಿಳಾಸ ಯಾಕಿರುವುದಿಲ್ಲ ಎಂಬ ಪ್ರಶ್ನೆಯನ್ನು ಮುಂದಿಡುತ್ತದೆ.

ಮದುವೆ, ಮುಂಜಿ, ನಾಮಕರಣ, ಜಾತ್ರೆ ಮುಂತಾದವುಗಳ ಆಮಂತ್ರಣ ಪತ್ರಿಕೆಗಳು, ಕೆಲವೊಮ್ಮೆ ಹೆಣ್ಣು ತನ್ನ ಅಸ್ಮಿತೆಯನ್ನು ಸಾರಿಕೊಳ್ಳಬೇಕಾದ ಅನಿವಾರ್ಯತೆ, ಶಾಲೆಯಲ್ಲಿ ಕಲಿಸಿದ ಪತ್ರಲೇಖನ, ನಗರಗಳಲ್ಲಿ ವಿಳಾಸ ಹುಡುಕುವ ಪಾಡು, ಸಂಬಂಧಗಳನ್ನು ಬೆಳೆಸುವ ಪರಿ, ಒಂದೇ ಹೆಸರಿನ ಇಬ್ಬರಿದ್ದರೆ ಆಗುವ ಫಜೀತಿ, ‘ಅವರು ಮನೆಯಲ್ಲಿದ್ದರೆ ನನಗೊಂದು ವಿಳಾಸವಾದರೂ ಇರುತ್ತಿತ್ತಲ್ಲ’ ಎಂದು ಅಲವತ್ತುಕೊಳ್ಳುವ ಗೆಳತಿಯೊಬ್ಬಳ ಪ್ರಸಂಗ, ವಿಳಾಸ ಮರೆತ ಹುಚ್ಚಿ, ಕಸದ ತೊಟ್ಟಿಯ ಬಳಿ ನಿಂತ ಅನಾಥ ಮಗು, ಹೀಗೆ ಕಣ್ಣಿಗೆ ಕಟ್ಟುವಂಥ ಹಲವು ಪ್ರಕರಣಗಳನ್ನು ಧ್ಯಾನಿಸುತ್ತಾ ಬದುಕಿನ ಬಗ್ಗೆ ಒಂದು ತಾತ್ವಿಕ ಜಿಜ್ಞಾಸೆಯನ್ನೇ ಮೂಡಿಸಿಬಿಡುತ್ತದೆ. ಇಂಥ ಇತರ ಸೊಗಸಾದ ಪ್ರಬಂಧಗಳೆಂದರೆ ‘ಈ ಹೊತ್ತಿನಲ್ಲಿ’, ‘ಜೇಡನ ಜತೆಗೂಡಿ ಒಂದು ಸುತ್ತು’ ಮತ್ತು ‘ಭಾವಚಿತ್ರಗಳ ಭಾವನಾ ಲೋಕದಲ್ಲಿ’.

ಸ್ಮಿತಾ ಅವರ ಭಾಷೆಗೆ ಕಾವ್ಯದ ಚಿತ್ರಕಶಕ್ತಿಯಿದ್ದು ಅದು ಅನುಭವವನ್ನು ಒಂದು ಸೊಗಸಾದ ಚೌಕಟ್ಟಿನೊಳಗಿಟ್ಟು ತೋರಿಸುತ್ತದೆ. ಉದಾಹರಣೆಗೆ ಈ ಸಾಲುಗಳು: ‘ಅವರ ಅಚಾನಕ್ ಹೊಗಳಿಕೆ ನನ್ನ ಕವಿತೆಯೆಂಬ ಮರಿ ಹಕ್ಕಿಗೆ ರೆಕ್ಕೆ ಪುಕ್ಕ ಹುಟ್ಟಿ ಮತ್ತೆ ಮೇಲೆ ಹಾರಲು ಹವಣಿಸಿದ್ದು ಸುಳ್ಳಲ್ಲ. ಆದರೆ ನನ್ನ ಕವಿತೆಯೆಂಬ ಹಕ್ಕಿಗೆ ಎತ್ತರಕ್ಕೆ ಹಾರಲು ಮತ್ತಷ್ಟು ಬಲ ಬರಲೇ ಇಲ್ಲ ಎಂಬುದು ಇನ್ನೂ ನನಗೆ ಬೇಸರದ ಸಂಗತಿ’; ‘ಕವಿತೆ ನಾವು ಅಂದುಕೊಂಡಷ್ಟು ಸರಳವಲ್ಲ. ಎಲ್ಲರ ಕಣ್ಣೋಟದ ಹಿಂದಿನ ಭಾವವನ್ನು, ಮನದಾಳದ ಇಂಗಿತವನ್ನು ಸುಲಭವಾಗಿ ಗ್ರಹಿಸಿಕೊಂಡು, ಏನೂ ಅರ್ಥವಾಗದ ಹಾಗೆ ಮೊನಾಲಿಸಾ ನಗುವ ಬೀರುತ್ತಾ ನಿಂತುಕೊಳ್ಳುತ್ತದೆ’; ‘ಕವಿತೆ ಪುಟ್ಟ ಮಗುವೇ ತಾನೆ? ಕವಿತೆಯೆಂದರೆ ಮಗುವಿನ ತುಟಿಯಂಚಿನಲ್ಲಿ ಉಳಿದುಕೊಂಡ ನಗುವಲ್ಲವೇ?



ಒಂದು ವಿಳಾಸದ ಹಿಂದೆ
ಲೇ: ಸ್ಮಿತಾ ಅಮೃತರಾಜ್ ಸಂಪಾಜೆ
ಪ್ರ: ಭಾವಸಿಂಚನಾ ಪ್ರಕಾಶನ, ಕುಣಿಗಲ್
ಸಂ: 9036402083
ಪು: 196 ₹200

ಈ ಲೇಖಕಿಗೆ ಪ್ರಬಂಧಕ್ಕೆ ಅಗತ್ಯವಾದ ಮನೋಲಹರಿಯನ್ನು ಹಲವು ದಿಕ್ಕುಗಳತ್ತ ಹರಿಸಬಲ್ಲ ಪ್ರತಿಭೆಯಿದೆ. ಪ್ರಬಂಧದ ಧಾಟಿ ಎಷ್ಟು ಅತಿಶಯವಾದರೆ ಉದ್ದೇಶಿತ ಆಶಯ ಎಷ್ಟೆಲ್ಲ ಆಯಾಮಗಳನ್ನು ಪಡೆದುಕೊಳ್ಳಬಹುದೆಂಬ ಪರಿಜ್ಞಾನವಿದೆ. ಅವರು ಒಂದು ವಿಷಯದ ಆಸುಪಾಸನ್ನು ಸಮೀಕ್ಷಿಸುತ್ತಿರುವಾಗಲೇ ಅದರ ಅಂತರಾರ್ಥವನ್ನು ಹೇಗೋ ಹಾಗೆ ಅದರ ಒಟ್ಟು ಧ್ವನಿಯನ್ನೂ ಪಡಿಮೂಡಿಸಬಲ್ಲರು. ಅವರ ಪ್ರಬಂಧಗಳಿಗೆ ಅವರದೇ ಬುದ್ಧಿಭಾವಗಳ ಛಾಪಿದೆ. ಅದು ಅವರ ವಿಶಿಷ್ಟ ವ್ಯಕ್ತಿತ್ವವನ್ನು ಸ್ಫುಟಗೊಳಿಸುವುದರ ಜೊತೆಗೆ ಅವರ ವೈಚಾರಿಕ ನೆಲೆಯನ್ನೂ ಪ್ರಕಟಗೊಳಿಸುತ್ತದೆ.

ಪುಸ್ತಕದಲ್ಲಿ ಕೆಲವು ವ್ಯಾಕರಣ ದೋಷಗಳ ಜೊತೆಗೆ ಅನೇಕ ಅಕ್ಷರದೋಷಗಳೂ ಇವೆ. ಇವುಗಳನ್ನು ನಿವಾರಿಸಬಹುದಿತ್ತು.

ತ್ಯಾಗ, ಸ್ವಾಭಿಮಾನದ ಅನ್ವರ್ಥಕನಾಮ ಸೆಲ್ವಿ



ಕಲೆ: ಗುರು ನಾವಳ್ಳಿ

ವಿ.ಕೆ. ನಟರಾಜ್

ಡಾ. ಪಿ. ಸೆಲ್ವಿ ದಾಸ್ (1932-2021) ಮೈಸೂರು ವಿಶ್ವವಿದ್ಯಾಲಯದ ಪ್ರಥಮ ಹಾಗೂ ಇಲ್ಲಿಯವರೆಗಿನ ಏಕೈಕ ಮಹಿಳಾ ಕುಲಪತಿ. ರಾಜ್ಯದಲ್ಲಿ ಇವರು ಎರಡನೆಯ ಮಹಿಳಾ ಕುಲಪತಿ ಹಾಗೂ ಕಾಲೇಜು ಶಿಕ್ಷಣ ವಿಭಾಗದ ಎರಡನೆಯ ಮಹಿಳಾ ನಿರ್ದೇಶಕರಾದವರು. ಈ ಎರಡೂ ಸ್ಥಾನಗಳಲ್ಲಿ ಅಧಿಕಾರ ನಿರ್ವಹಿಸಿದ ಮೊದಲನೆಯ ಮಹಿಳೆ ಎಂ. ಜಯಲಕ್ಷ್ಮಮ್ಮಣ್ಣಿಯವರು.

ಸೆಲ್ವಿ ದಾಸ್ ಅವರು ಅನೇಕ ತೊಂದರೆಗಳನ್ನು, ಅನನುಕೂಲಗಳನ್ನು ಅನುಭವಿಸಿ ಮುಂದೆ ಬಂದವರು. ಅವರದು ದೊಡ್ಡ ಕುಟುಂಬ - ಒಟ್ಟು ಹತ್ತು ಜನ ಮಕ್ಕಳು, ಐವರು ಗಂಡು ಮತ್ತು ಐವರು ಹೆಣ್ಣು ಮಕ್ಕಳು. ಇವರ ತಂದೆ ಕೆ.ಜಿ.ಎಫ್‌ನಲ್ಲಿ ಕಂಟ್ರಾಕ್ಟರ್ ಆಗಿದ್ದರು. ಅವರೂ ತಮ್ಮ ಜನಾಂಗದಲ್ಲಿ ಮೊತ್ತಮೊದಲ ಪದವೀಧರರಾಗಿದ್ದರು. ದುರ್ದೈವ ಎಂದರೆ ಸೆಲ್ವಿ ದಾಸ್ ಅವರು ಚಿಕ್ಕವಯಸ್ಸಿನಲ್ಲಿದ್ದಾಗ, 1959ರಲ್ಲಿ ಅವರ ತಂದೆ ತೀರಿಕೊಂಡರು.

ದೊಡ್ಡ ಕುಟುಂಬವನ್ನು ಸಾಕಿ ಸಲಹುವ ಸಂಪೂರ್ಣ ಜಬಾಬ್ದಾರಿ ಇವರ ಮೇಲೆ ಬಂತು. ಅವರೇ ಒಂದು ಸಾರಿ ಹೇಳಿದ ಮಾತನ್ನು ಇಲ್ಲಿ ಉಲ್ಲೇಖಿಸಬೇಕು: ‘ನೋಡಿ ಸಂಸಾರದ ಹೊಣೆ ನನ್ನ ಮೇಲೆ ಬಿದ್ದ ಸಮಯದಲ್ಲೇ ನಾನು ಒಂದು ನಿರ್ಧಾರ ತೆಗೆದುಕೊಂಡೆ. ಏನೆಂದರೆ ನಾನು ಮದುವೆ, ನನ್ನ ಸಂಸಾರ ಇವುಗಳನ್ನು ಮರೆಯಬೇಕು. ನನ್ನ ವೈಯಕ್ತಿಕ ಸುಖಕ್ಕೆ ನಾನು ಗಮನಕೊಟ್ಟರೆ ನನ್ನ ತಂಗಿಯರು, ತಮ್ಮಂದಿರನ್ನು ನೋಡಿಕೊಳ್ಳುವುದು ಕಷ್ಟ’. ಈ ಗಂಭೀರ ನಿರ್ಧಾರವನ್ನು ಅವರು ಪಾಲಿಸಿಕೊಂಡು ಬಂದರು. ಆಗಿನ ಕಾಲಘಟ್ಟದಲ್ಲಿ ಅವರಿಗೆ ಎರಡು ದೊಡ್ಡ ತೊಂದರೆಗಳು – ಒಂದು ಮಹಿಳೆಯಾಗಿರುವುದು, ಮತ್ತೊಂದು ದಲಿತರಾಗಿರುವುದು – ಎರಡೂ ರೀತಿಯ ಶೋಷಣೆಗಳನ್ನು ಮೆಟ್ಟಿನಿಂತವರು.

ಸೆಲ್ವಿ ಅವರ ಸಾಧನೆಗಳನ್ನು ನೋಡಿದಾಗ ನಮಗೆ ಅವರ ದಿಟ್ಟತನ, ಆತ್ಮವಿಶ್ವಾಸ ಮತ್ತು ಛಲ ಎಲ್ಲವೂ ಗೋಚರವಾಗುತ್ತವೆ. ಪದವೀಧರೆಯಾದ ನಂತರ ಕೆಲಕಾಲ ಮೈಸೂರಿನ ಸಿ.ಎಫ್.ಟಿ.ಆರ್.ಐನಲ್ಲಿ ಉದ್ಯೋಗ. ಅಮೆರಿಕಕ್ಕೆ ಪ್ರವಾಸ, ಅಲ್ಲಿ ಉನ್ನತ ಶಿಕ್ಷಣ. ಮತ್ತೆ ಕೆಲ ವರ್ಷಗಳ ನಂತರ ಅಮೆರಿಕದ ಕ್ವಾಲೆರಾಡೊ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದರು. ಆಮೇಲೆ ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಸೇವೆ. ಈಗ ಎಲ್ಲರಿಗೂ ಚಿರಪರಿಚಿತವಾಗಿರುವ ಗೃಹ ವಿಜ್ಞಾನ ಸಂಸ್ಥೆಯ ಸ್ಥಾಪನೆಗೆ ಅವರು ಶ್ರಮಿಸಿದರು. ಸಂಸ್ಥೆಯ ಪ್ರಾಂಶುಪಾಲರಾಗಿ ಕೆಲಸ ನಿರ್ವಹಿಸಿದರು. ಗೃಹವಿಜ್ಞಾನದಲ್ಲಿ ಆಹಾರ ಮತ್ತು ಪೌಷ್ಟಿಕತೆ– ಈಗ ಈ ವಿಷಯವನ್ನು Food Science and Nutrition ಎಂದು ಕರೆಯುತ್ತಾರೆ– ಸ್ನಾತಕೋತ್ತರ ತರಗತಿಗಳನ್ನು ಆರಂಭಿಸಿದ್ದು ಇವರೇ.

ಸೆಲ್ವಿ ದಾಸ್ ಅವರು 1988ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಅಧಿಕಾರ ವಹಿಸಿಕೊಂಡರು. ಆ ವೇಳೆಗೆ ನಾನು ಅಧ್ಯಾಪಕರ ಸಂಘದ ಅಧ್ಯಕ್ಷನಾಗಿದ್ದೆ. ಇಂಗ್ಲಿಷ್ ವಿಭಾಗದಲ್ಲಿ ಪ್ರವಾಚಕರಾಗಿದ್ದ ಡಾ.ಕೆ.ಸಿ. ಬೆಳ್ಳಿಯಪ್ಪ –ಮುಂದೆ ಅರುಣಾಚಲಪ್ರದೇಶದ ಕೇಂದ್ರ ವಿಶ್ವವಿದ್ಯಾಲಯದ ಕುಲಪತಿಯಾದರು- ನಮ್ಮ ಕಾರ್ಯದರ್ಶಿಗಳು. ಸೆಲ್ವಿ ಅವರು ಕುಲಪತಿಗಳಾದ ಒಂದು ವರ್ಷದ ಮೇಲೆ ಬೆಳ್ಳಿಯಪ್ಪ ಅವರನ್ನು ಉಪಕುಲಸಚಿವರನ್ನಾಗಿ ನೇಮಿಸಿದರು. ಇದಾದ ಹಲವು ತಿಂಗಳ ಮೇಲೆ ನನ್ನನ್ನು ಕುಲಸಚಿವನನ್ನಾಗಿ ನೇಮಿಸಿದರು. ನನಗೆ ತಿಳಿದಮಟ್ಟಿಗೆ ಅಧ್ಯಾಪಕರ ಸಂಘದ ಹಾಲಿ ಮತ್ತು ಮಾಜಿ ಪದಾಧಿಕಾರಿಗಳಿಗೆ ಆಡಳಿತದಲ್ಲಿ ಪ್ರಮುಖ ಸ್ಥಾನಗಳನ್ನು ಕೊಡುವುದು ಅತಿ ವಿರಳ. ಮೈಸೂರು ವಿಶ್ವವಿದ್ಯಾಲಯದಲ್ಲಿ ಈ ರೀತಿಯ ಬೆಳವಣಿಗೆ ಅದುವರೆಗೆ ನಡೆದಿರಲಿಲ್ಲ.

ಸ್ಮರಣೆ

ಸೆಲ್ವಿ ದಾಸ್ ಅವರು ಕುಲಪತಿಯಾಗಿದ್ದಾಗ ಒಂದು ಸ್ನಾತಕೋತ್ತರ ವಿಭಾಗದಲ್ಲಿ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿದ್ದರು. ಎಲ್ಲಾ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸದೇ ಇದ್ದರೂ ಪಾಠ ಪ್ರವಚನಗಳು ನಡೆಯುತ್ತಿರಲಿಲ್ಲ. ಕುಲಸಚಿವನಾಗಿ ಇದನ್ನು ನಿಭಾಯಿಸುವ ಜವಾಬ್ದಾರಿ ನನ್ನದಾಗಿತ್ತು. ಪ್ರತೀ ಹಂತದಲ್ಲೂ ಕುಲಪತಿಯವರ ಮಾರ್ಗದರ್ಶನದ ಸೌಲಭ್ಯ ನನಗಿತ್ತು. ಅವರ ಅಪಾರವಾದ ಅನುಭವ, ವಿದ್ಯಾರ್ಥಿಗಳೊಡನೆ ಸಮಾಲೋಚನೆ ಮಾಡುವಾಗ ತೋರುತ್ತಿದ್ದ ತಾಳ್ಮೆ, ಅಗತ್ಯವಿದ್ದಾಗ ಕಟ್ಟುನಿಟ್ಟಿನ ನಿಲುವು ಇವೆಲ್ಲವೂ ಎದ್ದು ಕಾಣುತ್ತಿದ್ದವು. ಅನೇಕ ವಾರಗಳು ಕಳೆದ ನಂತರ ಆ ಸಮಸ್ಯೆ ಬಗೆಹರಿಯಿತು. ಇದರಲ್ಲಿ ಕುಲಪತಿಯವರ ನಾಯಕತ್ವ ಬಹಳ ಮುಖ್ಯಪಾತ್ರವನ್ನು ವಹಿಸಿತ್ತು.

ಒಮ್ಮೆ ಆಡಳಿತ ವರ್ಗದ ಸಿಬ್ಬಂದಿ ಕೆಲವು ಬೇಡಿಕೆಗಳನ್ನು ಮುಂದಿಟ್ಟು ಒಂದು ರೀತಿಯ ಮುಷ್ಕರವನ್ನು ಪ್ರಾರಂಭಿಸಿದ್ದರು. ನಾನು ಅಧ್ಯಾಪಕರ ಸಂಘದ ಅಧ್ಯಕ್ಷನಾಗಿ ಕುಲಪತಿಯವರಿಗೆ ಈ ಸಮಸ್ಯೆಯನ್ನು ನಿವಾರಣೆ ಮಾಡುವ ನಿಟ್ಟಿನಲ್ಲಿ ಹಲವು ಸಲಹೆಗಳನ್ನು ಕೊಟ್ಟೆ. ಅಧ್ಯಾಪಕೇತರ ಸಂಘದ ನೌಕರರ ಪ್ರತಿನಿಧಿಗಳೊಡನೆ ಚರ್ಚಿಸುವುದಕ್ಕೆ ನನಗೆ ಅನುಮತಿಯನ್ನು ಕೊಟ್ಟರು. ಗೊಂದಲ ನಿವಾರಣೆಯಾಯಿತು. ಒಳ್ಳೆಯ ಸಲಹೆಗಳು ಯಾವ ದಿಕ್ಕಿನಿಂದ ಬಂದರೂ ಅವುಗಳನ್ನು ಸ್ವೀಕರಿಸಲು ಅವರು ತಯಾರಾಗಿದ್ದರು.

ಅವರ ಅಧಿಕಾರ ಅವಧಿಯಲ್ಲಿ ನಡೆದ ಇನ್ನೊಂದು ಬಹುಮುಖ್ಯವಾದ ಬೆಳವಣಿಗೆ ಎಂದರೆ, ವಿಶ್ವವಿದ್ಯಾಲಯದ ಮುದ್ರಣಾಲಯಕ್ಕೆ ಸಂಬಂಧಪಟ್ಟಿದ್ದು. ಅಲ್ಲಿನ ಸಿಬ್ಬಂದಿಗೆ ಭವಿಷ್ಯನಿಧಿ ಬದಲು ಪಿಂಚಣಿ ಸೌಲಭ್ಯ ಒದಗಿಸುವ ನಿರ್ಧಾರವನ್ನು ಅವರು ದಿಟ್ಟತನದಿಂದ ತೆಗೆದುಕೊಂಡರು. ಅದು ಕಾರ್ಯಗತವಾಗುವುದಕ್ಕೆ ಸುಮಾರು ಕಾಲ ಹಿಡಿಯಿತು. ಆದರೆ ಇದರ ತಳಹದಿಯಾದ ಈ ನಿರ್ಧಾರವನ್ನು ತೆಗೆದುಕೊಂಡಿದ್ದು ಸೆಲ್ವಿಯವರು.

ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರ ಸೆಲ್ವಿ ಅವರ ಕೊಡುಗೆ. 1989-90ರ ಸಾಲಿನಲ್ಲಿ ಇದನ್ನು ಸ್ಥಾಪಿಸಿ ಆರಂಭದಲ್ಲಿ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಒಂದು ಭಾಗವಾಗಿ ಮಾಡಿದರು. ರಾಜ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳು ಅನುಭವಿಸುತ್ತಿರುವ ಆರ್ಥಿಕ ಕೊರತೆ ಮೈಸೂರು ವಿಶ್ವವಿದ್ಯಾಯಲವನ್ನೂ ಕಾಡದೆ ಬಿಟ್ಟಿಲ್ಲ. ಹಾಗಾಗಿ ಮಹಿಳಾ ಅಧ್ಯಯನ ಕೇಂದ್ರಕ್ಕೆ ಒದಗಬೇಕಾಗಿರುವ ಸಂಪನ್ಮೂಲಗಳು ಒದಗಿಬಂದಿಲ್ಲ. ಆದರೆ, ಸೆಲ್ವಿ ಅವರ ಅಧಿಕಾರ ಅವಧಿಯಲ್ಲಿ ವಿಶ್ವವಿದ್ಯಾಲಯದ ಅಮೃತ ಮಹೋತ್ಸವ ವರ್ಷದ ಉದ್ಘಾಟನೆ ನಡೆಯಿತು. ಆ ಸಂದರ್ಭದಲ್ಲಿ ಕುಲಪತಿಯವರು ವಿಶ್ವವಿದ್ಯಾಲಯಕ್ಕೆ ಒಂದು ವಿಶೇಷವಾದ ಅನುದಾನ ಸರ್ಕಾರದಿಂದ ಬರಬೇಕು ಎಂದು ಕುಲಾಧಿಪತಿಗಳು ಮತ್ತು ಉನ್ನತ ಶಿಕ್ಷಣ ಸಚಿವರ ಮುಂದೆ ಮನವಿಯನ್ನು ಸಲ್ಲಿಸಿದರು.

ಅಮೃತ ಮಹೋತ್ಸವ ಉದ್ಘಾಟನೆಯಾದ ನಂತರ ವಿಜ್ಞಾನ ವಸ್ತುಪ್ರದರ್ಶನವನ್ನು ಮಾನಸ ಗಂಗೋತ್ರಿಯಲ್ಲಿ ಏರ್ಪಡಿಸಲಾಯಿತು. ಇದರ ಉದ್ಘಾಟನೆಯನ್ನು ಮಾಡಿದ್ದು ಹೆಸರಾಂತ ಭೌತಶಾಸ್ತ್ರಜ್ಞ ಡಾ. ರಾಜಾರಾಮಣ್ಣನವರು. ಮತ್ತೊಂದು ಗಮನಾರ್ಹವಾದ ಬೆಳವಣಿಗೆ ಎಂದರೆ ಇವರ ನೇತೃತ್ವದಲ್ಲಿ ವಿಶ್ವವಿದ್ಯಾಲಯವು ಕೆಲವು ಉನ್ನತ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಿದ್ದು. ಮೈಸೂರು ವಿಶ್ವವಿದ್ಯಾಲಯದ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಎಸ್. ಚಂದ್ರಶೇಖರ್, ಭಾರತ ರತ್ನ ಪ್ರಶಸ್ತಿಗೆ ಭಾಜನರಾಗಿರುವ ಸಿ.ಎನ್.ಆರ್. ರಾವ್, ಪರಮಾಣು ಶಕ್ತಿ ಆಯೋಗದಲ್ಲಿ ದೊಡ್ಡಸ್ಥಾನದಲ್ಲಿದ್ದ ಡಾ.ಎಂ.ಆರ್. ಶ್ರೀನಿವಾಸನ್, ಆಗ ಕೇಂದ್ರದಲ್ಲಿ ಸಚಿವರಾಗಿದ್ದ ಮಾರ್ಗರೇಟ್ ಆಳ್ವಾ ಮತ್ತು ಸುತ್ತೂರು ಮಠದ ಹಿಂದಿನ ಪೀಠಾಧಿಪತಿ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ.

ಕುಲಪತಿಗಳಾಗಿ ತಮ್ಮ ಅಧಿಕಾರ ಅವಧಿ ಮುಗಿದಮೇಲೆ ಸೆಲ್ವಿ ಅವರು ಕೇಂದ್ರ ಲೋಕಸೇವಾ ಆಯೋಗದ ಸದಸ್ಯರಾಗಿ ಆರು ವರ್ಷ ಸೇವೆ ಸಲ್ಲಿಸಿದರು. ಅದು ಮುಗಿದಮೇಲೆ ರಾಜ್ಯಸಭೆಯಲ್ಲಿ ನಾಮನಿರ್ದೇಶಿತ ಸದಸ್ಯರಾಗಿ ಕೆಲಸ ಮಾಡಿದರು. ಮೂರು ಪ್ರತಿಷ್ಠಿತ ಹುದ್ದೆಗಳನ್ನು ಈ ರೀತಿ ಅಲಂಕರಿಸಿದವರು ಪ್ರಾಯಶಃ ಇವರೊಬ್ಬರೇ.

ದೇವರು, ದೆವ್ವ ಮತ್ತು ಆ ಎರಡು ಸಿನಿಮಾ!

ಡಾ.ಕೆ.ಎಸ್. ಪವಿತ್ರ

'ದೇವರು ಮೈ ಮೇಲೆ ಬರುವುದು' ಎಂಬ ಪ್ರಕ್ರಿಯೆ ಗೊತ್ತಲ್ಲ? ಇದನ್ನು ಮನೋವೈದ್ಯಕೀಯ ವಿಜ್ಞಾನ 'Possession Syndrome' ಎಂದು ಕರೆಯುತ್ತದೆ. ಸಿನಿಮಾಗಳಿಗೂ ಈ ದೇವರು-ದೆವ್ವ ಬರುವುದಕ್ಕೂ ಬಹಳ ವಿಶಿಷ್ಟ ನಂಟು ಇದೆ. ಅದರ ಬಗ್ಗೆ ಯೋಚಿಸುವಾಗ ನಾನು ಬಾಲ್ಯದಲ್ಲಿ ನೋಡಿದ್ದ ಎರಡು ಸಿನಿಮಾಗಳು ನನಗೆ ನೆನಪಾಗುತ್ತವೆ. ಹಲವು ಸಿನಿಮಾಗಳು 'ದೇವರು-ದೆವ್ವ-ಆತ್ಮಗಳು' ಮನುಷ್ಯರ ಮೇಲೆ ಬರುವುದನ್ನು ಚಿತ್ರಿಸುತ್ತವೆ. ಆದರೆ, ಅವುಗಳ ಹಿಂದೆ ವೈಜ್ಞಾನಿಕತೆಯ ಕಿಂಚಿತ್ ಅಂಶವೂ ಇರುವುದಿಲ್ಲ. ಮನುಷ್ಯ ಕಲ್ಪನೆಗಳು ಚಿತ್ರದ ಮೂಲಕ ಬಂದಾಗ ಅದು ಎಷ್ಟು ಪ್ರಬಲವಾಗಿ ಪ್ರಭಾವ ಬೀರುತ್ತದೆ ಎಂದರೆ ಕೇವಲ 'ರಂಜನೆ'ಯುಂಟು ಮಾಡುವ ಬದಲು 'ಅನುಸರಣೆ'ಗೆ ಅದು ದಾರಿಯಾಗಿಬಿಡುತ್ತದೆ. ನಾನು ಹೇಳುತ್ತಿರುವ ಎರಡು ಚಿತ್ರಗಳು ಇದಕ್ಕೆ ಹೊರತಾದವು ಎನ್ನುವುದು ವಿಶೇಷ.

ಬಾಲ್ಯದಲ್ಲಿ ನಮಗೆ ಎರಡು ಮುಖ್ಯ ಸಿನಿಮಾ ಮೂಲಗಳು. ಒಂದು ನಾವು ಥಿಯೇಟರ್‌ಗೆ ಹೋಗಿ ನೋಡುತ್ತಿದ್ದದ್ದು, ಇನ್ನೊಂದು ಮನೆಯಲ್ಲಿ ಬರುತ್ತಿದ್ದ ದೂರದರ್ಶನ. ಥಿಯೇಟರ್‌ಗೆ ನಾವು ಹೋಗಿ ನೋಡುತ್ತಿದ್ದದ್ದು ಬಹು ಬಾರಿ ಕನ್ನಡ ಸಿನಿಮಾಗಳಾದರೆ, ಕೆಲಬಾರಿ ಹಿಂದಿ ಸಿನಿಮಾಗಳು. ದೂರದರ್ಶನದಲ್ಲಿ ಹಾಗಲ್ಲ. ಹಿಂದಿಯ ಜೊತೆಗೆ ಬೇರೆ ಭಾಷೆಯ ಸಿನಿಮಾಗಳೂ ಸಿಕ್ಕುತ್ತಿದ್ದವು. ಅದರಲ್ಲಿಯೂ ಒಮ್ಮೆ ನಮ್ಮ ಭಾರತೀಯ ಚಿತ್ರರಂಗಕ್ಕೆ 75 ವರ್ಷಗಳಾದ ಸವಿನೆನಪಿಗೆ ಒಂದು ವಾರ ಪೂರ್ತಿ ಮೂರು ಮೂರು ಸಿನಿಮಾಗಳು ಪ್ರತಿದಿನ ತಡರಾತ್ರಿಯವರೆಗೆ ಪ್ರಸಾರವಾಗಿದ್ದವು. ಆಗಲೇ ಬಹುಶಃ ಸತ್ಯಜಿತ್ ರೇ (ರಾಯ್) ನಿರ್ದೇಶನದ, ನಾವು ಹಿಂದಿ ಸಿನಿಮಾಗಳಲ್ಲಿ ನೋಡಿದ್ದ ಶರ್ಮಿಳಾ ಟ್ಯಾಗೋರ್‌ರ ಅಭಿನಯದ 'ದೇವಿ' ಚಿತ್ರವನ್ನು ನಾನು ನೋಡಿದ್ದು.

> ಅಂಧಶ್ರದ್ಧೆಯ ಹಿಂದೆ ಜನ ಓಡುವುದರ ದುರಂತವನ್ನು ತೆರೆದಿಡುವ ಈ ಎರಡು ಸಿನಿಮಾಗಳು, ದಶಕಗಳ ಹಿಂದೆಯೇ ಬಂದಿದ್ದರೂ ಅವುಗಳ ನೆನಪು ಇನ್ನೂ ಹಸಿರಾಗಿದೆ. ದೇವರಾಗಲೀ ಧರ್ಮವಾಗಲೀ ಜನರ ಸಾಮಾಜಿಕ–ಮಾನಸಿಕ ಹಿತಕ್ಕಾಗಿ ಇರುವಂಥವು ಎನ್ನುವುದೇ ಈ ಸಿನಿಮಾಗಳ ಸಂದೇಶ

ಬಂಗಾಲಿ ಭಾಷೆಯ, ಕಪ್ಪು-ಬಿಳುಪಿನ ಚಿತ್ರದಲ್ಲಿ ನನಗೆ ಆಗ ಆಕರ್ಷಕ ಅನ್ನಿಸಿದ್ದು ಬಂಗಾಲಿ ದೊಡ್ಡ ಕೆಂಪು ಕುಂಕುಮ ಹೊತ್ತ, ದೊಡ್ಡ ಕಣ್ಣುಗಳ ಶರ್ಮಿಳಾರ ಮುಖ ಅಷ್ಟೆ. ಆದರೂ ಚಿತ್ರ ನೋಡಬೇಕೆನ್ನಿಸುವ ಹಟದಿಂದ ನೋಡಿ ಮುಗಿಸಿದ್ದೆ. ಆಗ ಅರ್ಥವಾಗಿದ್ದು ಇಷ್ಟೆ. 'ಒಬ್ಬಳು ಮಹಿಳೆಯ ಮೇಲೆ ದೇವಿ ಬರುತ್ತಿರುತ್ತಾಳೆ. ಕೊನೆಗೆ ಜನರ ನಂಬಿಕೆಯಿಂದ ಆಕೆಗೆ ಅದರಿಂದ ಹೊರಬರುವುದೇ ಸಾಧ್ಯವಾಗುವುದಿಲ್ಲ. ಅಂಧಶ್ರದ್ಧೆಗೆ ಒಬ್ಬ ಬಾಲಕ ಬಲಿಯಾಗುವ ಘಟನೆಯೊಂದಿಗೆ ಚಿತ್ರ ಟ್ರ್ಯಾಜಿಡಿ' ಎಂಬುದು. ನಾನಾಗ ಓದುತ್ತಿದ್ದ ಮೂರು-ನಾಲ್ಕನೇ ತರಗತಿಗೆ ಇನ್ನೂ ಹೆಚ್ಚು ಹೊಳೆದಿರಲಿಲ್ಲ.

1959ರಲ್ಲಿ ಚಿತ್ರಿಸಲ್ಪಟ್ಟ ಚಿತ್ರ 'ದೇವಿ'. ನಾಯಕಿಯಾಗಿ ನಟಿಸಿದ್ದ ಶರ್ಮಿಳಾ ಅವರ ವಯಸ್ಸು ಆಗ 14 ವರ್ಷಗಳು. 1860ರ ಹೊತ್ತಿನ ಬಂಗಾಲದ ಚಿತ್ರಣ. ಅಂಧಶ್ರದ್ಧೆ-ಮೂಢನಂಬಿಕೆ-ಅದಕ್ಕೆ ಎದುರಾಗುವ ಕ್ರಾಂತಿಕಾರಕ ಬೌದ್ಧಿಕತೆಗಳ ತಾಕಲಾಟವೇ ಇಲ್ಲಿನ ಮುಖ್ಯವಸ್ತು. ರವೀಂದ್ರನಾಥ ಟ್ಯಾಗೋರ್ ಅವರ ನಿಕಟವರ್ತಿ ಪ್ರಭಾತ್‌ಕುಮಾರ್ ಮುಖ್ಯೋಪಾಧ್ಯಾಯ ಅವರು ಬರೆದ ಕಥೆ 'ದೇವಿ'ಯನ್ನು ಇದು ಆಧರಿಸಿದೆ. ಕಥೆಯ ಹಂದರ ಬಂಗಾಲದ ಜಮೀನ್ದಾರ ಕಾಳಿಂಕರ್ ಚೌಧರಿಯ ಕುಟುಂಬದ ಸುತ್ತ. ಕಾಳಿಂಕರ್‌ನ ಇಬ್ಬರು ಗಂಡು ಮಕ್ಕಳು ತಾರಾಪ್ರಸಾದ್ ಮತ್ತು ಉಮಾಪ್ರಸಾದ್. ಕಿರಿಯವನಾದ ಉಮಾಪ್ರಸಾದನ ಪತ್ನಿ 'ದಯಾಮಯಿ'ಯೇ ಇಲ್ಲಿ ಕೇಂದ್ರ ಪಾತ್ರ.



ದೇವಿ ಚಿತ್ರದಲ್ಲಿ ಶರ್ಮಿಳಾ ಟ್ಯಾಗೋರ್

ದಯಾಮಯಿ ಒಂದು ಮಾತನ್ನೂ ಎದುರಾಡದ, ಎಲ್ಲವನ್ನೂ ನೋಡಿಕೊಳ್ಳುವ, ತಾರಾಪ್ರಸಾದ್‌ನ ಮಗ 'ಖೋಕಾ'ನನ್ನು ಪ್ರೀತಿಯಿಂದ ನೋಡಿಕೊಳ್ಳುವ 'ಆದರ್ಶ ಗೃಹಿಣಿ'. ಆಕೆಯ ಪತಿಯಿರುವುದು ಕಲ್ಕತ್ತೆಯಲ್ಲಿ. ಒಂದು ರಾತ್ರಿ ಕಾಳಿಂಕರ್ ಚೌಧರಿಗೆ 'ಕಾಳಿ'ಯ ಕನಸು. ಕಾಳಿಯ ಮುಖ ಬಂದು ದಯಾಮಯಿಯ ಮುಖದಲ್ಲಿ ನೆಲೆಸಿದಂತೆ ಭಾಸವಾಗುತ್ತದೆ. ಬೆಳಿಗ್ಗೆ ಎದ್ದವನೇ ಸೊಸೆಯ ಕಾಲಿಗೆ ಬಂದು ಬೀಳುತ್ತಾನೆ. ಅಲ್ಲಿಂದ ದಯಾಮಯಿ ದೇವಿಯಾಗುತ್ತಾಳೆ!

ಬಡವನೊಬ್ಬನ ಮೊಮ್ಮಗನನ್ನು ಕಾಯಿಲೆಯಾಗಿದೆ ಎಂದು ಕರೆತಂದಾಗ, ದಯಾಮಯಿಯ ಚರಣಾಮೃತದಿಂದ ಆತ ಬದುಕುಳಿಯುತ್ತಾನೆ! ಇದು ದೇವಿಯಲ್ಲಿನ ನಂಬಿಕೆಯನ್ನು ಮತ್ತಷ್ಟು ದೃಢವಾಗಿಸುತ್ತದೆ. ದಯಾಮಯಿಯ ಪತಿ ಉಮಾಪ್ರಸಾದ ಕಲ್ಕತ್ತೆಯಿಂದ ಬಂದು, ತನ್ನ ಪತ್ನಿಯನ್ನು ದೇವಿಯಾಗಿಸುವುದರ ವಿರುದ್ಧ ದನಿಯೆತ್ತಿದರೂ ಅದು ಸಫಲವಾಗುವುದಿಲ್ಲ. ಖೋಕಾ ಕಾಯಿಲೆ ಬಿದ್ದಾಗಲೂ ಕಾಳಿಂಕರ್ ಚೌಧರಿ ದೇವಿಯನ್ನೇ ನಂಬಿ, ಯಾವ ಚಿಕಿತ್ಸೆಯನ್ನೂ ಮಾಡುವುದಿಲ್ಲ. ಪೂರ್ತಿ ರಾತ್ರಿ ನರಳುವ ಖೋಕಾ ದಯಾಮಯಿಯ ಮಡಿಲಲ್ಲಿ ಸಾಯುತ್ತಾನೆ. ದಯಾಮಯಿ ಅಸ್ವಸ್ಥಳಾಗಿ ನದಿಯ ಕಡೆಗೆ ಧಾವಿಸುವುದರೊಂದಿಗೆ ಕಥೆ ಮುಗಿಯುತ್ತದೆ.

ಈ ಚಿತ್ರಕ್ಕೆ ಸಾಕಷ್ಟು ಕಟು ವಿಮರ್ಶೆ ಎದುರಾಗಿತ್ತು. 'ಹಿಂದೂ ಧರ್ಮದ ಅವಹೇಳನ', 'ಸಂಪ್ರದಾಯಸ್ಥ ಸಮಾಜದ ವಿರುದ್ಧದ ನಡವಳಿಕೆ'ಯನ್ನು ಪ್ರಚೋದಿಸುವಂತಹದ್ದು ಎಂಬ ಆರೋಪಕ್ಕೆ ಈ ಸಿನಿಮಾ ಗುರಿಯಾಗಿತ್ತು. ಆದರೆ, ದೇವರಾಗಲೀ ಧರ್ಮವಾಗಲೀ ಮಾನಸಿಕ-ಸಾಮಾಜಿಕ ಹಿತಕ್ಕೆ ಇರುವಂತಹವು ಎಂಬುದನ್ನು ಪರೋಕ್ಷವಾಗಿ ಈ ಚಿತ್ರ ಬಿಂಬಿಸುತ್ತದೆ ಎಂದು ನನಗನ್ನಿಸುತ್ತದೆ. ಮಾನವರು ದೇವರೆಂಬ ನಂಬಿಕೆಯನ್ನು ಹೇಗೆ ಶೋಷಿಸಲು ಸಾಧ್ಯವಿದೆ, ಅಂಧಶ್ರದ್ಧೆಯ ಹಿಂದೆ ಇಡೀ ಸಮಾಜವು ಓಡುವುದರ ದುರಂತವನ್ನು ಈ ಚಿತ್ರ ತೆರೆದಿಡುತ್ತದೆ. ಬಂಗಾಲದ ಸಮಾಜದಲ್ಲಿ ಒಂದೆಡೆ ಅವ್ಯಾಹತವಾಗಿ ನಡೆಯುತ್ತಿದ್ದ ಬಾಲ್ಯವಿವಾಹ, ದಾಸ್ಯ, ಮಹಿಳೆಯರ ಮೇಲಿನ ಹಲವು ಕಟ್ಟುಪಾಡುಗಳು, ಇನ್ನೊಂದೆಡೆ ನಿಧಾನವಾಗಿ ಏಳುತ್ತಿದ್ದ ವೈಜ್ಞಾನಿಕವಾಗಿ ಏನು -ಏಕೆ-ಹೇಗೆ ಎಂದು ಪ್ರಶ್ನೆ ಕೇಳುವ ಮನೋಭಾವ ಇವುಗಳ ನಡುವೆ ಗೊಂದಲದಲ್ಲಿ ಸಿಲುಕಿದ್ದ ಮನಸ್ಸುಗಳು ಇಲ್ಲಿ ಚಿತ್ರಿತವಾಗಿವೆ. ಸತ್ಯಜಿತ್ ಅವರ ಜನ್ಮಶತಾಬ್ದಿಯ ಈ ಸಂದರ್ಭದಲ್ಲಿ ಚಿತ್ರ ಪ್ರಸ್ತುತವಾಗಿದೆ.

ಪದ್ಧತಿ-ಸಂಸ್ಕೃತಿ-ಗೌರವ-ಭಕ್ತಿ ಇವು ಸರಳ ಪದಗಳಲ್ಲ. ಅವುಗಳ ವಿಶ್ಲೇಷಣೆ ಬಹು ಸಂಕೀರ್ಣ. ಆದರೆ ಅವು ಶೋಷಣೆ-ನರಳುವಿಕೆ-ಅಪಾಯಗಳಿಗೆ ಕಾರಣಗಳಾಗುವುದನ್ನು ಮಾನವೀಯತೆಯಿಂದ ನಾವು ತಡೆಯಬೇಕು.

ಬಾಲ್ಯದಲ್ಲಿ ನಾನು ನೋಡಿದ ಇನ್ನೊಂದು ಸಿನಿಮಾ ದೂರದರ್ಶನದಲ್ಲಿ ಪ್ರಸಾರವಾದ, 1988ರಲ್ಲಿ ನಿರ್ಮಾಣವಾದ ಗಿರೀಶ್ ಕಾಸರವಳ್ಳಿಯವರ ನಿರ್ದೇಶನದ 'ಬಣ್ಣದ ವೇಷ'. ನಾನಾಗ ಸುಮಾರು ಐದನೇ ತರಗತಿಯಲ್ಲಿದ್ದೆ ಅನಿಸುತ್ತದೆ. ಆಗಷ್ಟೇ ನೃತ್ಯ ಕಲಿಯಲಾರಂಭಿಸಿದ್ದೆ. ಈ ಚಿತ್ರ ನೋಡಲು ಪ್ರಮುಖ ಕಾರಣ, ಅದರ ನಾಯಕನಟ ಶ್ರೀಧರ್ ಅವರಿಗೆ ನೃತ್ಯ ಬರುತ್ತಿತ್ತು ಎಂಬುದು. ಮೂಲತಃ ಸಾಗರ-ಶಿರಸಿ ಪ್ರದೇಶದ ಹವ್ಯಕ ಸಮುದಾಯಕ್ಕೆ ಸೇರಿದ ನಮ್ಮ ಕುಟುಂಬದವರಿಗೆ ಯಕ್ಷಗಾನ ಬಲು ಪ್ರೀತಿಯ ಕಲೆಯಾಗಿತ್ತು ಎಂಬುದು ಮತ್ತೊಂದು ಕಾರಣ. ಆಗ ಶಂಭುವಿನ ಕಥೆ ನೋಡಿ, ಮತ್ತೊಂದು ಸಿನಿಮಾ ಎಂಬಂತೆ ನೋಡಿ ಮುಗಿಸಿದ್ದೆವು ಅಷ್ಟೆ. ಆದರೆ ಬಾಲ್ಯದಲ್ಲಿ ನೋಡಿದ್ದ ಆ ಸಿನಿಮಾವನ್ನು ಈಗ ವಿಶ್ಲೇಷಿಸಲು ಕಾರಣ, ಕಲಾಕ್ಷೇತ್ರವನ್ನು ತುಂಬಾ ಹತ್ತಿರದಿಂದ ನೋಡಿರುವ ನನ್ನ ಅನುಭವ, ಕಲಾವಿದರ ಮೇಲಿರುವ ಮಾನಸಿಕ ಒತ್ತಡ ಮತ್ತು ಕಲೆ-ಧರ್ಮ-ಮನಸ್ಸುಗಳ ನಡುವೆ ಇರುವ ನಂಟು ಇವೆಲ್ಲದರ ಬಗೆಗಿನ ನನ್ನ ಗ್ರಹಿಕೆ-ಅಧ್ಯಯನ.

ಯಕ್ಷಗಾನದ ಮೇಳವೊಂದರಲ್ಲಿ ವೇಷ ಹಾಕುವ ಶಂಭು ಈ ಚಿತ್ರದ ನಾಯಕ. ಕೆಳವರ್ಗದ ಆತನಿಗೆ ತನಗೆ ನಾಯಕ ಪಾತ್ರಗಳು ದೊರೆಯದಿರುವ ಬಗ್ಗೆ ಅಸಮಾಧಾನ. ಹಿರಿಯ ವೇಷಧಾರಿ, ಮೇಲ್ವರ್ಗದ ಶೇಷಪ್ಪನಿಗೇ ಮೊದಲ ಆದ್ಯತೆ. ನಟನೆಯ ಪರಿಣತಿಯೂ ಶೇಷಪ್ಪನಿಗೆ ಹೆಚ್ಚು. ತನ್ನ ತರಲೆಗಳಿಗಾಗಿ ಶೇಷಪ್ಪನನ್ನು ಕ್ಷಮೆ ಕೇಳಬೇಕಾಗಿ ಬಂದಾಗ ಬೇಸರ-ಹತಾಶೆಗಳಿಂದ ಶಂಭು ಮೇಳವನ್ನೇ ತೊರೆಯುತ್ತಾನೆ. ಹೊಸತೊಂದು ಮೇಳ ಸಿದ್ಧತೆಯಲ್ಲಿರುತ್ತದೆ. ಜುಂಜುಟ್ಟಿ ಎಂಬ ಭೂತದ ವೇಷಕ್ಕಾಗಿ ಶಂಭು ಸೇರುತ್ತಾನೆ. ಕುಣಿತದ ದಣಿವಿನಿಂದ ರಂಗದಲ್ಲಿ ಕುಸಿದು ಬೀಳುವ ಶಂಭುವಿನ ಮೇಲೆ ಜುಂಜುಟ್ಟಿಯ ಆವಾಹನೆಯೇ ಆಗಿದೆ ಎಂದು ಜನ ನಂಬುತ್ತಾರೆ. ಈ ಆವಾಹನೆಯೇ ತರುವ ಆರ್ಥಿಕ ಲಾಭದ ಜೊತೆಗೇ ಅದು ತರುವ ಇತರ ಕಷ್ಟಗಳೂ ಒಂದೊಂದಾಗಿ ತೆರೆದುಕೊಳ್ಳುತ್ತವೆ.

ಶಂಭುವಿನ ಜೊತೆ ಜನ ಮಾತನಾಡಲು ಹೆದರುತ್ತಾರೆ, ಕಾಯಿಲೆ ಬಿದ್ದ ಅಣ್ಣನ ಮಗನನ್ನು ನೋಡಲು ತಾಯಿ ಬಿಡುವುದಿಲ್ಲ, ಆಸಕ್ತಿಯಿಂದ ಮಾತನಾಡಿಸುತ್ತಿದ್ದ ಹುಡುಗಿ ಮಾತನಾಡಿಸಲು ಅಂಜುತ್ತಾಳೆ. ಭೂತದ ಪಾತ್ರ ಬಿಡುತ್ತೇನೆಂದರೂ ಲಾಭದ ರುಚಿ ಹತ್ತಿದ ಮ್ಯಾನೇಜರ್ ಬಿಡುವುದಿಲ್ಲ. ಆತ ಹೇಳುವ 'ಜನ ಬರುವುದು ನಿನ್ನ ವೇಷ, ಅದರ ಹಿಂದಿರುವ ಭೂತದ ಮಹಿಮೆಯನ್ನು ನೋಡಿ, ನಿನ್ನ ನಟನೆ-ಕುಣಿತವನ್ನಲ್ಲ' ಎಂಬ ಮಾತುಗಳು ಶಂಭುವನ್ನು ಗೊಂದಲಕ್ಕೀಡು ಮಾಡುತ್ತವೆ. ಆಗ ಶಂಭು, 'ನಾನು ಜುಂಜುಟ್ಟಿಯಲ್ಲ, ನಾನು ನಟನೂ ಅಲ್ಲ! ಹಾಗಾದರೆ ನಾನು ಯಾರು?' ಎಂಬ ಹತಾಶೆಗೆ ಒಳಗಾಗುತ್ತಾನೆ.

ಕಲಾವಿದನ ಪ್ರತಿಭೆ, ಸಾಧನೆ, ಮಹತ್ವಾಕಾಂಕ್ಷೆಗಳು, ಪ್ರಕ್ಷುಬ್ಧ ಮನಃಸ್ಥಿತಿಯಲ್ಲಿ ಆತನ ಮನಸ್ಸು ದೇವ-ದೆವ್ವಗಳನ್ನು ಒಪ್ಪಿಕೊಳ್ಳುವ ರೀತಿ, ಆರ್ಥಿಕ ಲಾಭಕ್ಕಾಗಿ ಅದನ್ನು ಶೋಷಿಸುವ ಇತರರು, ಬುದ್ಧಿಯಿಂದ ವಿಶ್ಲೇಷಿಸದೆ 'ದೇವರು-ದೆವ್ವ'ಗಳ ಭಯದಿಂದ ಯಾವುದನ್ನೂ ನಂಬುವ ಸಮಾಜದ ಅಜ್ಞಾನ ಇವುಗಳನ್ನು ಚಿತ್ರದ ಕಥೆ ನಮ್ಮೆದುರು ತೆರೆದಿಡುತ್ತದೆ. ಶಂಭುವಿನ ಬಗ್ಗೆ ಮರುಕ ಹುಟ್ಟುತ್ತದೆ. ಆತನನ್ನು ಗೇಲಿ ಮಾಡುವ, ನಂತರ ಹೆದರುವ-ಏರಿಸುವ ಸಮಾಜ, ಆತನಿಗೆ ಸಾಧನೆಯ-ಕಲಿಕೆಯ ಹಾದಿ ತೋರಿಸುವ ಪ್ರಯತ್ನ ಮಾಡಿದ್ದರೆ ಅಂತ್ಯ ಬೇರೆಯೇ ಆಗಬಹುದಿತ್ತು ಎನಿಸುತ್ತದೆ.

ಈ ಎರಡೂ ಚಿತ್ರಗಳನ್ನು ನಾನು ನೋಡಿದ್ದು ಸುಮಾರು 30 ವರ್ಷಗಳ ಹಿಂದೆ. ಆಗೇನೂ ನಾನು ಮನೋವೈದ್ಯೆಯಾಗಿರಲಿಲ್ಲ. ನಾನು ನೋಡಿದ ಹಲವು ಸಿನಿಮಾಗಳಲ್ಲಿ ಅವೂ ಸೇರಿದ್ದವು ಅಷ್ಟೆ. ಆದರೂ ಅವು ಎಷ್ಟು ಪ್ರಬಲವಾಗಿ ಮನಸ್ಸನ್ನು ತಲುಪಿದ್ದವು ಎಂದರೆ, ಈಗಲೂ ದೇವರು-ದೆವ್ವ ಮೈ ಮೇಲೆ ಬರುವ ವ್ಯಕ್ತಿಗಳಿಗೆ ನಾನು ಚಿಕಿತ್ಸೆ ನೀಡುವ ಸಮಯದಲ್ಲಿ ಈ ಚಿತ್ರಗಳು ಮನಸ್ಸಿಗೆ ಥಟ್ಟನೆ ಹೊಳೆಯುವಷ್ಟು. ವೈದ್ಯಳಾಗಿ ಪ್ರತೀ ರೋಗಿಯ ಧಾರ್ಮಿಕ ನಂಬಿಕೆಗಳು, ಅಗತ್ಯಗಳನ್ನು ಗೌರವಿಸಬೇಕಾದದ್ದು ನನ್ನ ಕರ್ತವ್ಯ. ಆದರೆ ಅಂಧ ಶ್ರದ್ಧೆಗಳೇ ಮೇಲುಗೈ ಪಡೆದು ಅನಾರೋಗ್ಯದತ್ತ ವ್ಯಕ್ತಿ ಧಾವಿಸುವಾಗ ಮಾನವೀಯತೆಯ ಧರ್ಮದಿಂದ, ಜಾಣ್ಮೆಯಿಂದ ನಂಬಿಕೆಗಳನ್ನು ಹೀಗಳೆಯದೇ, ಆರೋಗ್ಯದ ದಾರಿ ತೋರಿಸುವುದರತ್ತ ಪ್ರಯತ್ನಿಸಬೇಕು. ಅಂಥ ಕೌಶಲ ಕಲಿಯಲು 30 ವರ್ಷಗಳ ಹಿಂದೆ ನೋಡಿದ ಎರಡು ಸಿನಿಮಾಗಳು ನನ್ನಲ್ಲಿ ಅರಿವು ಮೂಡಿಸಿವೆ ಎನ್ನುವುದೇ ವಿಶೇಷ ಅಲ್ಲವೇ?

ಬಿಕ್ಕಟ್ಟಿನಲ್ಲಿ ಅರಳುವ...



> ಕುಟುಂಬ ಸದಸ್ಯನ ಅಗಲಿಕೆಯ ನೋವೇನು ರಾತ್ರಿ ಬೆಳಗಾಗುವಷ್ಟರಲ್ಲಿ ಕಳೆದು ಹೋಗುವಂಥದೇ? ಮಾಸ್ಕ್ ಹಿಂದಿನ ಆಕ್ರಂದನ ಮಂಜುಗಡ್ಡೆಯಂತೆ ಹೆಪ್ಪುಗಟ್ಟಿದೆ

8ನೇ ಪುಟದಿಂದ...

ಅದೊಂದು ತರಹ ಕುರುಕ್ಷೇತ್ರದಲ್ಲಿ ವೃದ್ಧ ತಂದೆ-ತಾಯಿ, ಮಕ್ಕಳು ಹಾಗೂ ಮಹಿಳೆಯರು, ತಮ್ಮ ಆಪ್ತರ ಕಳೇಬರಗಳನ್ನು ಹುಡುಕಾಡುವ ಸನ್ನಿವೇಶ. ಅಂತಹ ಹೊತ್ತಲ್ಲಿ 'ನನ್ನ ಅಪ್ಪನಂತಹ ಸಂವೇದನಾಶೂನ್ಯ ವ್ಯಕ್ತಿ ಕುಟುಂಬದಲ್ಲಿದ್ದರೆ ಆ ಕುಟುಂಬಕ್ಕಷ್ಟೆ ಹಾನಿಯಾಗುತ್ತದೆ. ಆದರೆ ಈ ಸಂವೇದನಾಶೂನ್ಯತೆ ಸಮಾಜದ ಅಥವಾ ಪ್ರಭುತ್ವದ ಸಹಜ ಸ್ವಭಾವವಾಗಿಬಿಟ್ಟರೆ ದೊಡ್ಡ ದುರಂತವಾಗುತ್ತದೆ' ಎಂದು ತಾಹು ಸೂಚಿಸುತ್ತಾನೆ. ಕೆಲವು ಕಾಲ ಜನಪರ ಚಳವಳಿಗಳಲ್ಲಿದ್ದ ಆತ, ದುರ್ಬಲರ ಪರವಾಗಿ ನಿಲ್ಲುವ ಉದ್ದೇಶದಲ್ಲಿ ಚಳವಳಿಗಳು ಮಾಡುವ ಕೊಲೆಯೂ ಸ್ವೀಕಾರಾರ್ಹವಲ್ಲ ಎಂದೂ ಪ್ರತಿಪಾದಿಸುತ್ತಾನೆ.

ಒಂದು ದೇಶವನ್ನು ಅದರಿಚ್ಛೆಗೆ ವಿರುದ್ಧವಾಗಿ ಆಕ್ರಮಿಸಿಕೊಳ್ಳುವ ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿ ವ್ಯವಸ್ಥೆಗಳು ಕೂಡ ರೋಗಗಳೇ ('ಪ್ಲೇಗ್' ಕಥೆ ನಡೆಯುವುದು ಫ್ರಾನ್ಸಿನ ವಸಾಹತುವಾಗಿದ್ದ ಅಲ್ಜೀರಿಯಾದ ಓರಾನ್ ಪಟ್ಟಣದಲ್ಲಿ); ಲಾಭವೇ ಪರಮಮೌಲ್ಯವಾದ ಬಂಡವಾಳವಾದ, ಮತ್ತೊಬ್ಬರನ್ನು ದ್ವೇಷಿಸುವ ಮೂಲಕವೇ ದೇಶಕಟ್ಟುವ ರಾಷ್ಟ್ರವಾದ, ತನ್ನ ಧರ್ಮ ಜನಾಂಗ ಜಾತಿಗಳೇ ಶ್ರೇಷ್ಠವೆಂಬ ಸಿದ್ಧಾಂತಗಳು, ಕಪ್ಪುಜನರು ಕೀಳೆಂಬ ವರ್ಣಭೇದನೀತಿ, ನಾನು ಹೆಣ್ಣಿಗಿಂತ ಮೇಲೆ ಗಂಡುವಾದ-ಎಲ್ಲವೂ ಬೇರೆಬೇರೆ ನಮೂನೆಯ ರೋಗಗಳೇ. ಯಾರಾದರೂ 'ನಾವು ಉಳಿದವರಿಗಿಂತ ಶ್ರೇಷ್ಠರು' ಎಂದು ಭಾವಿಸಿದೊಡನೆ ಕ್ರೌರ್ಯಕ್ಕೆ ಬೇಕಾದ ಮನಃಸ್ಥಿತಿ ಮೊಳೆಯುತ್ತದೆ. ತಾವು ಮೌಲ್ಯಾದರ್ಶ ಎಂದು ಭಾವಿಸಿರುವುದು ಮತ್ತೊಬ್ಬರ ದೃಷ್ಟಿಯಲ್ಲಿ ರೋಗವಾಗಿದೆಯೆಂದು ಅವರಿಗೆ ಅರ್ಥವೇ ಆಗುವುದಿಲ್ಲ. ಹೀಗಾಗಿ ಶತಮಾನಕ್ಕೊಮ್ಮೆ ಬಂದುಹೋಗುವ ಕಾಯಿಲೆಗಳ ವಿರುದ್ಧ ಹೋರಾಡಿ ಜಯಿಸುವುದು ಸುಲಭ. ಸಂಸ್ಕೃತಿ, ಧರ್ಮರಕ್ಷಣೆ, ದೇಶಭಕ್ತಿ, ಶೌರ್ಯ, ಆದರ್ಶಗಳ ಕವಚಗಳಲ್ಲಿ ಅಡಗಿಕೊಂಡು, ನಮ್ಮ ಜತೆಯಲ್ಲೇ ಇರುವ ಸಾಮಾಜಿಕ ರಾಜಕೀಯ ಧಾರ್ಮಿಕ ರೋಗಗಳು ಹೆಚ್ಚು ಘಾತಕವಾದವು ಎಂದೆಲ್ಲ ತಾಹುವಿನ ಚಿಂತನೆ ಹೊಳೆಸುತ್ತದೆ.

ಹಿಂದೊಮ್ಮೆ ಬಂಗಾಳ ಕೊಲ್ಲಿಯಲ್ಲೆದ್ದ ಚಂಡಮಾರುತವು, ಆಂಧ್ರದ ಕರಾವಳಿಯ ಊರುಗಳನ್ನು ಧ್ವಂಸಗೈದಿತು. ಆಗ ನಗರ ಮಧ್ಯದಲ್ಲಿ ನಿಲ್ಲಿಸಲಾಗಿದ್ದ ಒಂದು ಮರಗುದುರೆಗೆ ಏನೂ ಆಗಿರಲಿಲ್ಲವಂತೆ. (ಓರಾನ್ ನಗರದ ವರ್ಣನೆಯೂ ಎರಡು ಕಂಚಿನ ಸಿಂಹಪ್ರತಿಮೆಗಳಿಂದ ಶುರುವಾಗುತ್ತದೆ.) ಆ ಮರಗುದುರೆಯನ್ನು ಜನರ ನೋವಿಗೆ ಸ್ಪಂದಿಸದ ಅಧಿಕಾರ ವ್ಯವಸ್ಥೆಯ ರೂಪಕವನ್ನಾಗಿ ಪರಿಭಾವಿಸಿದ ನಗ್ನಮುನಿ, 'ಕೊಯ್ಯಂ ಗುರ್‍ರಂ' ಖಂಡಕಾವ್ಯ ರಚಿಸಿದರು. ಚಂಡಮಾರುತ, ಪ್ರವಾಹ, ಭೂಕಂಪ, ಸಾಂಕ್ರಾಮಿಕ ರೋಗಗಳಂತಹ ವಿಕೋಪಗಳು ಮತ್ತು ನಾಡನಾಳುವ ಮಂದಿ ಹುಟ್ಟುಹಾಕುವ ಯುದ್ಧಗಳು, ಸಮಾಜದಲ್ಲಿ ವಿಚಿತ್ರ ಬಿಕ್ಕಟ್ಟುಗಳನ್ನು ಸೃಷ್ಟಿಸುತ್ತವೆ. ಈ ಬಿಕ್ಕಟ್ಟುಗಳು ಮನುಷ್ಯರ ಆಂತರ್ಯದಲ್ಲಿ ಸುಪ್ತವಾಗಿರುವ ಪ್ರೀತಿ, ವಿಶ್ವಾಸ, ಕರುಣೆ, ಮಾನವತೆಗಳನ್ನು ಉದ್ದೀಪಿಸುತ್ತವೆ; ಜತೆಗೆ ಅವರೊಳಗಿನ ಸಣ್ಣತನ, ದ್ವೇಷ, ದುಷ್ಟತನ, ಹಿಂಸಾಪ್ರವೃತ್ತಿಗಳನ್ನೂ ಹೊರಚೆಲ್ಲುತ್ತವೆ.

ನೈಸರ್ಗಿಕ ವಿಕೋಪ ಮತ್ತು ಸಾಂಕ್ರಾಮಿಕ ಬೇನೆಗಳು, ಕೆಲವೊಮ್ಮೆ ಮನುಷ್ಯರ ಹಿಡಿತದಾಚೆಗಿನವು, ದಿಟ. ನಾವು ಅವನ್ನು ಮಾತ್ರ ದೂಷಿಸುತ್ತಿರುತ್ತೇವೆ. ಅವು ಎರಗಿದಾಗ ಅವನ್ನು ಎದುರಿಸುವ ವ್ಯವಸ್ಥೆ ಮತ್ತು ಮಿಡಿವ ಸಮಾಜ ಇದ್ದಿದ್ದರೆ ಪರಿಣಾಮ ದಾರುಣವಾಗುತ್ತಿರಲಿಲ್ಲ ಎಂಬುದನ್ನು ಮರೆಯುತ್ತೇವೆ. ವ್ಯಕ್ತಿಯ ಅಥವಾ ವ್ಯವಸ್ಥೆಯ ಇತಿಮಿತಿಗಳು ಶಾಂತಿಕಾಲದಲ್ಲಿ ಅಲ್ಲ, ತುರ್ತು ಸನ್ನಿವೇಶಗಳಲ್ಲಿ ಹೆಚ್ಚು ನಿಚ್ಚಳವಾಗಿ ಪ್ರಕಟವಾಗುತ್ತವೆ. ಹೀಗಾಗಿ, ವಿಪತ್ತುಗಳು ಸಮಾಜದ ದೋಷಗಳನ್ನು ಕಾಣಿಸುವ ಕನ್ನಡಿಗಳೂ ಚರಿತ್ರೆ ಕಲಿಸುವ ಪಾಠಗಳೂ ಆಗಿವೆ. ಈ ಹಿನ್ನೆಲೆಯಲ್ಲಿ ತಾಹು-ರಿಯೂ ಮಾತುಕತೆಯು, ದುರಂತ ಸನ್ನಿವೇಶದಲ್ಲಿ ಅರಳುವ ಮನುಷ್ಯತ್ವದ ಪ್ರತೀಕದಂತೆ ತೋರುತ್ತದೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಶಬ್ದಗಳಲ್ಲಿ ಸರಸ...

ಇಲ್ಲಿ ಕೊಟ್ಟಿರುವ ಅಪೂರ್ಣ ಪದಗಳಿಗೆ ಮಧ್ಯದಲ್ಲಿ ಅಕ್ಷರಪಟ್ಟಿಯಿಂದ ಆರಿಸಿ ಸೂಕ್ತವಾದುದನ್ನು ತುಂಬಿದರೆ ಎಲ್ಲಪದಗಳೂ ಗತಪ್ರತ್ಯಾಗತ (ಹೇಗಾದರೂ ಓದುವ) ಪದಗಳಾಗುತ್ತವೆ. ಪ್ರಯತ್ನಿಸಿ

ಅಕ್ಷರಪಟ್ಟಿ

ದ ಬ ಟ ರ ಕು

ಜೇ ನ ಗೌ ಕ ನೆ

1. ರವಾ __ ವಾರ
2. ನವ__ವನ
3. ವರ__ರವ
4. ಸಮಾ__ಮಾಸ
5. ನವ__ವನ
6. ರಮಾ__ಮಾರ
7. ನಿಜ__ಜನಿ
8. ವಿಕ__ಕವಿ
9. ಕಂಬ__ಬಂಕ
10. ಗಜ__ಜಗ

ಗಣಿತದಲ್ಲಿ ಗರ್ದಿ ಗಮ್ಮತ್ತು


ಆಟಕ್ಕೂ ಉಂಟು–ಲೆಕ್ಕಕ್ಕೂ ಉಂಟು

ಬೇರೆ ಬೇರೆಯಾಗಿರುವ ನಾಲ್ಕು ಸಂಖ್ಯೆಗಳನ್ನು ಬರೆದುಕೊಳ್ಳಿ. ಈಗ ಮೊದಲ ಸಂಖ್ಯೆಯಲ್ಲಿ ಎರಡನೇ ಸಂಖ್ಯೆಯನ್ನು, ಎರಡನೇ ಸಂಖ್ಯೆಯಲ್ಲಿ ಮೂರನೇ ಸಂಖ್ಯೆಯನ್ನು, ಮೂರನೇ ಸಂಖ್ಯೆಯಲ್ಲಿ ನಾಲ್ಕನೇ ಸಂಖ್ಯೆಯನ್ನು, ನಾಲ್ಕನೇ ಸಂಖ್ಯೆಯಲ್ಲಿ ಮೊದಲ ಸಂಖ್ಯೆಯನ್ನು ಕಳೆದು ಕೆಳಗೆ ಬರೆಯುತ್ತಾ ಹೋಗಿರಿ. ಈಗ ನಿಮಗೆ ಮತ್ತೆ ನಾಲ್ಕು ಹೊಸ ಸಂಖ್ಯೆಗಳು ಸಿಗುತ್ತವೆ. ಈಗ ಮೊದಲಿನಂತೆ ಮತ್ತೆ ಕಳೆಯುತ್ತಾ ಹೋಗಿ, ಕೆಳಗೆ ಬರೆಯುತ್ತಾ ಹೋಗಿರಿ. ಕೆಲವೇ ಹಂತಗಳಲ್ಲಿ ನಿಮಗೆ ಎಲ್ಲ ಸಂಖ್ಯೆಗಳೂ ಒಂದೇ ತೆರನಾಗಿ ಬಂದಿರುವುದು ತಿಳಿಯುತ್ತದೆ. ನೀವು ಸಂಖ್ಯೆ ಕಳೆಯುವಾಗ ಸಣ್ಣ ಸಂಖ್ಯೆಯಲ್ಲಿ ದೊಡ್ಡ ಸಂಖ್ಯೆ ಕಳೆಯುವ ಪ್ರಸಂಗ ಬಂದರೆ ದೊಡ್ಡ ಸಂಖ್ಯೆಯಲ್ಲಿ ಸಣ್ಣ ಸಂಖ್ಯೆ ಕಳೆಯಿರಿ..


48	65	37	14
(65-48)	(65-37)	(37-14)	(48-14)
17	28	23	34
(28-17)	(28-23)	(34-23)	(34-17)
11	5	11	17
(11-5)	(11-5)	(17-11)	(17-11)
6	6	6	6

ಅಲಿಬಾಬಾ & 40 ಕಳ್ಳರು

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಒಂದೂರಿನಲ್ಲಿ ಅಲಿಬಾಬಾ ಮತ್ತು ಕಾಸಿಂ ಎಂಬ ಸಹೋದರರಿದ್ದರು. ಅವರ ತಂದೆ ತೀರಿಹೋದ ಮೇಲೆ ಇಬ್ಬರೂ ಬೇರೆಯಾದರು. ಕಾಸಿಂ ಮದುವೆಯಾಗಿ, ವ್ಯಾಪಾರ ಮಾಡುತ್ತಾ ಸುಖವಾಗಿದ್ದ



ಅಲಿಬಾಬಾ ಸಹ ಮದುವೆಯಾದ. ಆದರೆ, ತನ್ನ ಅಣ್ಣನಂತೆ ಅವನಿಗೆ ಸುಖ ಜೀವನ ನಡೆಸಲು ಆಗಲಿಲ್ಲ. ಹೊಟ್ಟೆಪಾಡಿಗಾಗಿ ಕಾಡಿಗೆ ಹೋಗಿ, ಕಷ್ಟಪಟ್ಟು ಕಟ್ಟಿಗೆ ಕಡಿದು ತಂದು ಆತ ಮಾರಾಟ ಮಾಡುತ್ತಿದ್ದ




ಅಲಿಬಾಬಾ ಎಂದಿನಂತೆ ಮರವೇರಿ ಕಟ್ಟಿಗೆ ಕಡಿಯುತ್ತಿರಬೇಕಾದರೆ ಒಂದು ವಿಚಿತ್ರ ಕಂಡ. 40 ಜನರ ತಂಡವೊಂದು ಗುಹೆಯ ಮುಂಭಾಗದಲ್ಲಿ ನಿಂತು ಏನನ್ನೋ ಹೇಳುತ್ತಿರುವುದನ್ನು ಆತ ಗಮನಿಸಿದ



40 ಜನರ ತಂಡ ಕತ್ತೆಗಳ ಮೇಲೆ ಗಂಟು ತಂದಿದ್ದನ್ನೂ 'ಖುಲ್ ಝಾ ಸಿಮ್ ಸಿಮ್' ಎಂದಿದ್ದನ್ನೂ ಕೇಳಿಸಿಕೊಂಡ ಅಲಿಬಾಬಾ, ಅವರು ಹೋದಮೇಲೆ ತಾನೂ ಹಾಗೇ ಹೇಳಿದ. ಒಳಗೆ ತುಂಬಿದ್ದ ಐಶ್ವರ್ಯವನ್ನೂ ಕಂಡ



ತನ್ನ ಕತ್ತೆಗಳ ಮೇಲೆ ಧನ–ಕನಕದ ಎರಡು ಗಂಟುಗಳನ್ನು ಮನೆಗೆ ಸಾಗಿಸಿದ. ತೂಕಮಾಡಲು ಕಾಸಿಂ ಮನೆಯಿಂದ ತಕ್ಕಡಿ ತಂದ. ಏನು ತೂಕ ಮಾಡುವನೆಂದು ಕಾಸಿಂ ತಕ್ಕಡಿಗೆ ಅಂಟು ಅಂಟಿಸಿದ. ಅಲಿಬಾಬಾನ ನಿಧಿಯ ವಿಷಯ ತಿಳಿದ



ಕಾಸಿಮನೂ ಕನಕ ತರಲು ಹೋದ. ಕಳ್ಳರಿಗೆ ಸಿಕ್ಕುಬಿದ್ದು ಸತ್ತ. ಅಲಿಬಾಬಾನನ್ನು ಪತ್ತೆ ಮಾಡಿದ ಕಳ್ಳರು, 40 ಪಾತ್ರೆಗಳಲ್ಲಿ ಅಡಗಿ ಅವನ ಮನೆಗೆ ಬಂದರು. ಕಾದ ಎಣ್ಣೆ ಹೊಯ್ದು ಎಲ್ಲರನ್ನೂ ಇಲ್ಲವಾಗಿಸಿದ ಅಲಿಬಾಬಾ ಸುಖವಾಗಿದ್ದ

ಟ್ವೆಂಟಿ – 20 ಮ್ಯಾಚ್

ಕಾವ್ಯದ ಸಾಲುಗಳಿಗೂ ಕವಿಗಳಿಗೂ ಹೊಂದಿಸಿರಿ

1.	ಜಗವೆಲ್ಲ ನಗುತಿರಲಿ	A.	ಕುವೆಂಪು
2.	ಹಚ್ಚೇವು ಕನ್ನಡದ ದೀಪ	B.	ಜಿ.ಪಿ.ರಾಜರತ್ನಂ
3.	ಜೋಗದ ಸಿರಿ ಬೆಳಕಿನಲ್ಲಿ	C.	ಚೆನ್ನವೀರ ಕಣವಿ
4.	ಉದಯವಾಗಲಿ ನಮ್ಮ ಚೆಲುವ	D.	ಕೆ.ಎಸ್.ನಿಸಾರ್ ಅಹಮದ್
5.	ವಿಶ್ವ ವಿನೂತನ ವಿದ್ಯಾಚೇತನ	E.	ಚಿ.ಉದಯಶಂಕರ್
6.	ಬಾರಿಸು ಕನ್ನಡ ಡಿಂಡಿಮವ	F.	ಹಂಸಲೇಖ
7.	ಇಳಿದು ಬಾ ತಾಯಿ ಇಳಿದು ಬಾ	G.	ಈಶ್ವರ ಕಮ್ಮಾರ
8.	ಒಂದು ಎರಡು ಬಾಳೆಲೆ ಹರಡು	H.	ಹುಯಿಲಗೋಳ ನಾರಾಯಣರಾವ್
9.	ನಾವು ಎಳೆಯರು ನಾವು ಗೆಳೆಯರು	I.	ಎಂ.ಎಸ್.ಪೂಜಾರ
10.	ಆಗದು ಎಂದು ಕೈಕಟ್ಟಿ ಕುಳಿತರೆ	J.	ಕನಕದಾಸರು
11.	ನಾಗರಹಾವೇ ಹಾವೊಳು ಹೂವೇ	K.	ಬಸವಣ್ಣ
12.	ಇಟ್ಟರೆ ಸೆಗಣಿಯಾದೆ ತಟ್ಟಿದರೆ ಕುರುಳಾದೆ	L.	ಅಕ್ಕಮಹಾದೇವಿ
13.	ಸ್ವರ್ಗದ ತುಣುಕು ಭೂಮಿಗೆ ಬಂದು ಬಿತ್ತು	M.	ಈಶ್ವರ ಸಣಕಲ್ಲ
14.	ಜನಗಣಮನ ಅಧಿನಾಯಕ	N.	ಜನಪದ
15.	ಬ್ಯಾಸಗಿ ದಿವಸಕ್ಕ ಬೇವಿನ ಮರ ತಂಪ	O.	ರವೀಂದ್ರನಾಥ್ ಟ್ಯಾಗೋರ್
16.	ಹುಟ್ಟಿದರೆ ಕನ್ನಡ ನಾಡಲಿ ಹುಟ್ಟಬೇಕು	P.	ದ.ರಾ.ಬೇಂದ್ರೆ
17.	ಜ್ಞಾನಪೀಠ ಪ್ರಶಸ್ತಿ ಪಡೆದವರ ನೀನ ಬಲ್ಲೇನ	Q.	ಪಂಜೆ ಮಂಗೇಶರಾಯರು
18.	ನಾನೊಂದ ಕನಸ ಕಂಡೆ	R.	ಮುಪ್ಪಿನ ಷಡಕ್ಷರಿ
19.	ಕುಲಕುಲವೆಂದು ಹೊಡೆದಾಡದಿರಿ	S.	ಶಂಗು ಬಿರಾದಾರ್
20.	ಕಳಬೇಡ ಕೊಲಬೇಡ	T.	ಡಿ.ಎಸ್.ಕರ್ಕಿ

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ಹ ಕೆ ಸಿ ಟೆ ಮ

ಜಿ ದಿ ಒ ಹ ಗ

	ಂ	
	ಂ	
	ಂ	
	ಂ	
	ಂ	

ಮೇಲಿನ ಅಕ್ಷರಗಳನ್ನು ಬಳಸಿ ಐದು ಪ್ರಾಣಿಗಳ ಹೆಸರು ರಚಿಸಿ

ಮಜ ಮಜ ಮಜಕೂರದ ಮೇ 16ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ

1 ಸುಂಕ, 2. ಉಂಡಿ, 3. ಗಿಂಡಿ, 4 ಬೂಂದಿ, 5 ತುಂಡು

ಶಬ್ದಗಳಲ್ಲಿ ಸರಸ

ಕಣಕ, ಕರಕ, ಕಟಕ, ಕಟುಕ, ಕಳಂಕ, ಕನಕ

ಟ್ವೆಂಟಿ- 20 ಉತ್ತರಗಳು

1-K, 2-T, 3-H, 4-F, 5-L, 6-I, 7- N, 8-P, 9-R, 10-O, 11-M, 12-Q, 13-R, 14-J, 15-G, 16-E, 17-C, 18-B, 19-D, 20-A

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ಮಾದೇಶ್ ಬಿಲ್ಕರ್, ವಿಜಯಪುರ



ಗೌತಮಿ ನಾಯಕ್, ಶಿರಸಿ



ಗೌತಮ್ ಎನ್. ಕೋಲಾರ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಅಂತರರಾಷ್ಟ್ರೀಯ ಒಲಿಂಪಿಕ್ ಸಂಸ್ಥೆಯ ಮುಖ್ಯಸ್ಥರ ಪ್ರತಿಪಾದನೆ

ನಿಗದಿಯಂತೆ ಒಲಿಂಪಿಕ್ಸ್: ಬಾಕ್

ನವದೆಹಲಿ (ಪಿಟಿಐ): ಜಪಾನ್‌ನ ಬಹುತೇಕ ಜನರ ವಿರೋಧದ ನಡುವೆಯೂ ನಿಗದಿತ ವೇಳಾಪಟ್ಟಿಯ ಪ್ರಕಾರವೇ ಒಲಿಂಪಿಕ್ಸ್ ನಡೆಯಲಿದೆ ಎಂದು ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ (ಐಒಸಿ) ಮುಖ್ಯಸ್ಥ ಥಾಮಸ್ ಬಾಕ್ ಶನಿವಾರ ಹೇಳಿದ್ದಾರೆ.

‘2020ರ ಟೋಕಿಯೊ ಕೂಟವನ್ನು ಕೋವಿಡ್ ಹಿನ್ನೆಲೆಯಲ್ಲಿ ಈಗಾಗಲೇ ಒಂದು ವರ್ಷ ಮುಂದೂಡಲಾಗಿದೆ. ಕೂಟವನ್ನು ಈ ಬಾರಿ ಆಯೋಜಿಸುವುದರಿಂದ ಗಾಢ ಕತ್ತಲಿನಾಚೆಯೂ ಬೆಳಕಿದೆ ಎಂಬ ಸಂದೇಶವನ್ನು ಸಾರಿದಂತಾಗುತ್ತದೆ’ ಎಂದು ಬಾಕ್ ಪ್ರತಿಪಾದಿಸಿದ್ದಾರೆ.

ಆನ್‌ಲೈನ್ ಮೂಲಕ ನಡೆದ ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನ (ಎಫ್‌ಐಎಚ್) 47ನೇ ಅಧಿವೇಶನವನ್ನುದ್ದೇಶಿ ಅವರು ಮಾತನಾಡಿದರು.

‘ಟೋಕಿಯೊ ಒಲಿಂಪಿಕ್ಸ್‌ಗೆ ಕ್ಷಣಗಣನೆ ಆರಂಭವಾಗಿದೆ. ಬಿಕ್ಕಟ್ಟಿನ ಸಂದರ್ಭದಲ್ಲಿ ನಾವು ಏಕತೆ, ವೈವಿಧ್ಯತೆಯ ಸಂದೇಶಗಳನ್ನು ನೀಡಬೇಕಿದೆ. ಟೋಕಿಯೊ ಕೂಟವು ಕತ್ತಲಿನಾಚೆಯೂ ಬೆಳಕಿದೆ ಎಂಬುದನ್ನು ತೋರಿಸಿಕೊಡಲಿದೆ’ ಎಂದು ಬಾಕ್ ಹೇಳಿದ್ದಾರೆ.



ಥಾಮಸ್ ಬಾಕ್–ರಾಯಿಟರ್ಸ್ ಚಿತ್ರ

ಇನ್ನೆರಡು ತಿಂಗಳುಗಳ ನಂತರ ಟೋಕಿಯೊ ಮತ್ತು ಜಪಾನಿನ ಕೆಲವು ನಗರಗಳಲ್ಲಿ ಕೋವಿಡ್ ತುರ್ತು ಪರಿಸ್ಥಿತಿ ಇದ್ದರೂ ಒಲಿಂಪಿಕ್ಸ್ ಆಯೋಜಿಸಲಾಗುವುದು ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ)ಯ ಪ್ರಭಾರಿ ಉಪಾಧ್ಯಕ್ಷ ಜಾನ್ ಕೋಟ್ಸ್ ಶುಕ್ರವಾರ ಹೇಳಿದ್ದರು. ಅದಕ್ಕೆ ಪೂರಕವಾಗಿ ಬಾಕ್ ಈ ಮಾತುಗಳನ್ನಾಡಿದ್ದಾರೆ.

ಜಪಾನ್‌ನ ಬಹುತೇಕ ಜನತೆ ಒಲಿಂಪಿಕ್ಸ್ ಆಯೋಜನೆಯ ಪರವಾಗಿ ಇಲ್ಲ. ಕೋವಿಡ್ ಹಿನ್ನೆಲೆಯಲ್ಲಿ, ವೈದ್ಯಕೀಯ ಮೂಲಸೌಕರ್ಯಗಳ ಮೇಲೆ ಇದು ಪರಿಣಾಮ ಬೀರಲಿದೆ ಎಂಬ ಅಭಿಪ್ರಾಯ ಅವರದು. ಆದರೆ ಕೂಟ ಆಯೋಜನೆಯ ವಿಷಯದಲ್ಲಿ ಐಒಸಿ ಅಚಲವಾಗಿದೆ.

‘ಎಲ್ಲರ ಸುರಕ್ಷತೆ ನಮ್ಮ ಮೊದಲ ಆದ್ಯತೆ. ಜಪಾನ್‌ನಲ್ಲಿರುವ ನಮ್ಮ ಸಹ ಸಂಸ್ಥೆಯ ಅಧಿಕಾರಿಗಳೊಂದಿಗೆ ಸೇರಿ ಕೂಟಕ್ಕೆ ಸುರಕ್ಷಿತ ವಾತಾವರಣ ಕಲ್ಪಿಸಿಕೊಡುವುದನ್ನು ಖಚಿತಪಡಿಸಿಕೊಳ್ಳಬೇಕಿದೆ. ಶೇಕಡಾ 70ರಷ್ಟು ಅಥ್ಲೀಟ್‌ಗಳು ಹಾಗೂ ಅಧಿಕಾರಿಗಳು ಈಗಾಗಲೇ ಲಸಿಕೆ ಪಡೆದುಕೊಂಡಿದ್ದಾರೆ. ಈ ಸಂಖ್ಯೆ ಬರುಬರುತ್ತಾ ಹೆಚ್ಚಾಗಲಿದೆ. ಲಸಿಕೆ ನೀಡಲು ಮೂರು ಉತ್ಪಾದಕ ಕಂಪನಿಗಳಿಂದ ಬೇಡಿಕೆ ಬಂದಿದೆ’ ಎಂದು ಬಾಕ್ ನುಡಿದರು.

ಕೆನಡಾ ಈಜು ತಂಡದ ಅಭ್ಯಾಸ ರದ್ದು

ಟೋಕಿಯೊ (ರಾಯಿಟರ್ಸ್): ಕೆನಡಾದ ಈಜು ತಂಡ ಟೋಕಿಯೊ ಒಲಿಂಪಿಕ್ಸ್‌ಗೂ ಮೊದಲು ಜಪಾನ್‌ನಲ್ಲಿ ನಡೆಸಲು ಉದ್ದೇಶಿಸಿದ್ದ ತರಬೇತಿಯನ್ನು ಕೋವಿಡ್ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರದ್ದುಗೊಳಿಸಿದೆ ಎಂದು ವರದಿಯಾಗಿದೆ. ಒಲಿಂಪಿಕ್ಸ್‌ಗೆ ಸಂಬಂಧಿಸಿ ಅನೇಕ ದೇಶಗಳ ತಂಡಗಳು ಈಗಾಗಲೇ ತರಬೇತಿಯನ್ನು ರದ್ದುಗೊಳಿಸಿವೆ.

ಈಜುಪಟುಗಳು ಮತ್ತು ಕೋಚ್‌ಗಳು ಒಳಗೊಂಡ ಸುಮಾರು 60 ಮಂದಿಯ ತಂಡ ಟೋಕಿಯೊದಿಂದ ಸುಮಾರು 250 ಕಿಲೋಮೀಟರ್ ದೂರ ಇರುವ ಟೊಯೊಟಾ ನಗರದಲ್ಲಿ ನೆಲೆಯೂರಿ ಅಭ್ಯಾಸ ನಡೆಸಬೇಕಾಗಿತ್ತು. ಜುಲೈ ಒಂಬತ್ತರಂದು ಈ ಶಿಬಿರ ಆರಂಭವಾಗಬೇಕಾಗಿತ್ತು.

ಬೇಸ್‌ಬಾಲ್ ಟೂರ್ನಿ ಸ್ಥಳಾಂತರ

ತೈಪೆ (ಎಎಫ್‌ಪಿ): ಕೋವಿಡ್ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಒಲಿಂಪಿಕ್ಸ್ ಬೇಸ್‌ಬಾಲ್ ಅರ್ಹತಾ ಟೂರ್ನಿಯನ್ನು ತೈವಾನ್‌ನಿಂದ ಮೆಕ್ಸಿಕೊಗೆ ಸ್ಥಳಾಂತರಿಸಲಾಗಿದೆ.

ಗೋಕುಲಂ ಕೇರಳ ಆಟಗಾರನಿಂದ ನೆರವು

ಐ–ಲೀಗ್ ಪ್ರಶಸ್ತಿ ಗೆದ್ದ ತಂಡದಲ್ಲಿ ಗೋಲ್‌ಕೀಪರ್ ಆಗಿದ್ದ ಉಬೈದ್, ಸಂಗ್ರಹವಾದ ಹಣವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಕೊಟ್ಟಿದ್ದಾರೆ.

ಕೋವಿಡ್: ನಿಧಿಗಾಗಿ ಉಬೈದ್ ಜೆರ್ಸಿ ಹರಾಜು

ಕೊಚ್ಚಿ (ಪಿಟಿಐ): ಗೋಕುಲಂ ಕೇರಳ ಫುಟ್‌ಬಾಲ್ ಕ್ಲಬ್‌ನ ಗೋಲ್‌ಕೀಪರ್ ಉಬೈದ್ ಸಿ.ಕೆ. ಅವರು ತಮ್ಮ ಜೆರ್ಸಿ ಹರಾಜು ಮಾಡಿದ್ದು, ₹ 33 ಸಾವಿರ ಸಂಗ್ರಹಿಸಿ ಕೋವಿಡ್ ವಿರುದ್ಧ ರಾಜ್ಯದ ಹೋರಾಟಕ್ಕೆ ಕೈಜೋಡಿಸಿದ್ದಾರೆ.

‘ಐ–ಲೀಗ್ ಪ್ರಶಸ್ತಿ ಗಳಿಸಿದ್ದು ಕೇರಳಕ್ಕೆ ಸಂಬಂಧಿಸಿ ಐತಿಹಾಸಿಕ ಗಳಿಗೆ. ಈ ಪ್ರಶಸ್ತಿ ನನ್ನ ಕನಸು ಕೂಡ ಆಗಿತ್ತು. ಮಲಯಾಳಿಯಾಗಿದ್ದು, ನನ್ನ ರಾಜ್ಯದ ತಂಡವೊಂದಕ್ಕೆ ಈ ಪ್ರಶಸ್ತಿ ಗೆಲ್ಲಿಸಿಕೊಡಲು ಸಾಧ್ಯವಾದದ್ದು ನನ್ನ ಪಾಲಿಗೆ ಮರೆಯಲಾಗದ ಸಂಗತಿ’ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ ವೆಬ್‌ಸೈಟ್‌ಗೆ ಉಬೈದ್ ತಿಳಿಸಿದ್ದಾರೆ.



’ಪ್ರಶಸ್ತಿ ಗೆದ್ದ ಪಂದ್ಯದಲ್ಲಿ ತೊಟ್ಟ ಜೆರ್ಸಿಯೂ ನನಗೆ ವಿಶೇಷವಾದದ್ದು. ಅದು ನನ್ನ ಹೃದಯಾಂತರಾಳದಲ್ಲಿ ನೆಲೆನಿಂತಿದೆ. ಆದರೆ ಸದ್ಯ ಎಲ್ಲಕ್ಕಿಂತ ಮಿಗಿಲಾಗಿರುವುದು ಕೋವಿಡ್ ರೋಗಿಗಳ ಚಿಕಿತ್ಸೆ ಮತ್ತು ಅದಕ್ಕೆ ಬೇಕಾದ ಸೌಲಭ್ಯ. ಹಿಗಾಗಿ ಜೆರ್ಸಿಯನ್ನು ಹರಾಜು ಮಾಡಲಾಗಿದೆ’ ಎಂದು ಅವರು ವಿವರಿಸಿದ್ದಾರೆ.

‘ಪ್ರತಿಯೊಬ್ಬರೂ ಯಾವುದಾದರೂ ಬಗೆಯಲ್ಲಿ ಈ ನಿಧಿಗೆ ಹಣ ನೀಡಿದರೆ ದೊಡ್ಡ ಮಟ್ಟದ ಪರಿಣಾಮ ಬೀರಲಿದೆ. ಇಂಥ ವೇಳೆ ಪರಸ್ಪರ ಸಹಾಯ ಮಾಡಿದರೆ ಸಮಸ್ಯೆಯಿಂದ ಹೊರಬರಲು ಸಾಧ್ಯ. ಹೀಗಾಗಿ ಪ್ರತಿಯೊಬ್ಬರೂ ಇನ್ನೊಬ್ಬರ ಕಾಳಜಿ ವಹಿಸಲು ಮುಂದಾಗಿ’ ಎಂದು ಅವರು ಸಲಹೆ ನೀಡಿದ್ದಾರೆ.

ಬಾಕ್ಸಿಂಗ್: ದುಬೈಗೆ ಭಾರತ ತಂಡ

ನವದೆಹಲಿ (ಪಿಟಿಐ): ಮೇರಿ ಕೋಮ್ ಹಾಗೂ ಅಮಿತ್ ಪಂಘಾಲ್ ಅವರನ್ನೊಳಗೊಂಡ ಭಾರತದ ಬಾಕ್ಸಿಂಗ್ ತಂಡವು ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲು ಶನಿವಾರ ದುಬೈ ತಲುಪಿತು. ಆಡಳಿತಾತ್ಮಕ ದಾಖಲೆಗಳ ಸಮಸ್ಯೆಯಿಂದಾಗಿ ಬಾಕ್ಸರ್‌ಗಳಿದ್ದ ವಿಮಾನವು ನಿಲ್ದಾಣದಲ್ಲಿ ಲ್ಯಾಂಡ್ ಆಗಲು ವಿಳಂಬವಾಗಿತ್ತು. ಹೀಗಾಗಿ ನಿಗದಿಗಿಂತ ಹೆಚ್ಚು ಹೊತ್ತು ಅದು ಆಗಸದಲ್ಲಿ ಹಾರಾಡಿತ್ತು.

ಸೋಮವಾರ ಈ ಟೂರ್ನಿಯು ಆರಂಭವಾಗಬೇಕಿದೆ. ಜುಲೈನಲ್ಲಿ ನಿಗದಿಯಾಗಿರುವ ಒಲಿಂಪಿಕ್ಸ್‌ಗೂ ಮೊದಲು ನಡೆಯಲಿರುವ ಪ್ರಮುಖ ಬಾಕ್ಸಿಂಗ್ ಟೂರ್ನಿ ಇದು.



ಮೇರಿ ಕೋಮ್ –ಪಿಟಿಐ ಚಿತ್ರ

‘ಪ್ರವಾಸಕ್ಕೆ ಅನುಮೋದನೆ ಪಡೆಯುವ ವಿಷಯದಲ್ಲಿ ಸ್ವಲ್ಪ ಗೊಂದಲ ಮೂಡಿತ್ತು. ಅದು ಈಗ ಪರಿಹರಿಸಲ್ಪಟ್ಟಿದೆ. ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿರುವ ಭಾರತೀಯ ರಾಯಭಾರಿ ಕಚೇರಿ ಅಧಿಕಾರಿಗಳಿಗೆ ಕೃತಜ್ಞತೆಗಳು. ವಿಮಾನ ಲ್ಯಾಂಡ್ ಆಗಲು ಸ್ವಲ್ಪ ಸಮಯ ತೆಗೆದುಕೊಂಡರೂ ಬಾಕ್ಸರ್‌ಗಳು ಈಗ ಹೋಟೆಲ್ ತಲುಪಿದ್ದಾರೆ. ಬಾಕ್ಸರ್‌ಗಳಿಗೆ ಕೋವಿಡ್ ಪರೀಕ್ಷೆಯನ್ನೂ ಮಾಡಲಾಗಿದೆ‘ ಎಂದು ತಂಡದ ಮೂಲಗಳು ಹೇಳಿವೆ.

ವಿನೋದ್‌ಗೆ ಕೋವಿಡ್: 49 ಕೆಜಿ ವಿಭಾಗದಲ್ಲಿ ಸ್ಪರ್ಧಿಸಬೇಕಿದ್ದ ವಿನೋದ್ ತನ್ವರ್ ಅವರಿಗೆ ಕೋವಿಡ್ ಖಚಿತಪಟ್ಟಿದೆ. ಹೀಗಾಗಿ ಅವರು ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

‘ಬಯೋಬಬಲ್ ಪರಿಣಾಮಕಾರಿಯಾಗಿರಲಿಲ್ಲ’

ಕೋಲ್ಕತ್ತ (ಪಿಟಿಐ): ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಬಯೋಬಬಲ್, ಹೋದ ವರ್ಷ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ (ಯುಎಇ) ಇದ್ದಷ್ಟು ಪರಿಣಾಮಕಾರಿಯಾಗಿರಲಿಲ್ಲ ಎಂದು ಭಾರತ ತಂಡದ ವಿಕೆಟ್ ಕೀಪರ್ ವೃದ್ಧಿಮಾನ್ ಸಹಾ ಅಭಿಪ್ರಾಯಪಟ್ಟಿದ್ದಾರೆ. ಈ ಮೂಲಕ ಬಯೋಬಬಲ್‌ನ ಭದ್ರತೆಯನ್ನು ಸೂಕ್ಷ್ಮವಾಗಿಯಾದರೂ, ಬಹಿರಂಗವಾಗಿ ಪ್ರಶ್ನಿಸಿದ ಭಾರತದ ಮೊದಲ ಆಟಗಾರ ಎನಿಸಿಕೊಂಡಿದ್ದಾರೆ.

14ನೇ ಆವೃತ್ತಿಯ ಐಪಿಎಲ್, ಕೋವಿಡ್ ಕಾರಣದಿಂದ ಅನಿರ್ದಿಷ್ಟಾವಧಿಗೆ ಸ್ಥಗಿತಗೊಳ್ಳುವ ಮೊದಲು ಸಹಾ ಮತ್ತಿತರ ಆಟಗಾರರಿಗೆ ಸೋಂಕು ಖಚಿತಪಟ್ಟಿತ್ತು. ಕೆಲವು ಸಿಬ್ಬಂದಿಯಲ್ಲೂ ದೃಢಪಟ್ಟಿತ್ತು.



ವೃದ್ಧಿಮಾನ್ ಸಹಾ

ಈ ಕುರಿತು ಸುದ್ದಿ ಸಂಸ್ಥೆಗೆ ಸಂದರ್ಶನ ನೀಡಿರುವ ಸಹಾ, ‘ಹೋದವರ್ಷದಂತೆ ಐಪಿಎಲ್ ಈ ಬಾರಿಯೂ ಯುಎಇಯಲ್ಲಿ ನಡೆದಿದ್ದರೆ ಚೆನ್ನಾಗಿತ್ತು. ಟೂರ್ನಿಯ ಭಾಗೀದಾರರು ಬಯೋಬಬಲ್ ಕುರಿತು ಮೇಲ್ವಿಚಾರಣೆ ನಡೆಸಬೇಕು. ಯುಎಇಯಲ್ಲಿ ನಮ್ಮ ಅಭ್ಯಾಸದ ಸಂದರ್ಭದಲ್ಲಿ ಮೈದಾನ ಸಿಬ್ಬಂದಿ ಸೇರಿ ಯಾರಿಗೂ ಪ್ರವೇಶವಿರಲಿಲ್ಲ. ಆದರೆ ಭಾರತದಲ್ಲಿ ಕೆಲವು ಜನರು, ಮಕ್ಕಳು ಕ್ರೀಡಾಂಗಣದ ಹತ್ತಿರದ ಗೋಡೆಗಳಿಂದ ಇಣುಕುತ್ತಿದ್ದರು. ಈ ಬಗ್ಗೆ ನಾನು ಹೆಚ್ಚು ಹೇಳಲಾರೆ. ಈ ವರ್ಷ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಸಮಯದಲ್ಲೇ ಟೂರ್ನಿಯಲ್ಲಿ ಆರಂಭಿಸಲಾಗಿತ್ತು’ ಎಂದು ಹೇಳಿದ್ದಾರೆ.

ಪ್ಯಾರಾಲಿಂಪಿಕ್ಸ್‌ಗೆ ಪಲಕ್–ಪಾರುಲ್

ನವದೆಹಲಿ (ಪಿಟಿಐ): ಪಲಕ್ ಕೊಹ್ಲಿ ಹಾಗೂ ಪಾರುಲ್ ಪರಮಾರ್ ಅವರು ಶುಕ್ರವಾರ ಟೋಕಿಯೊ ಪ್ಯಾರಾಲಿಂಪಿಕ್ಸ್ ಅರ್ಹತೆ ಗಳಿಸಿದ ಭಾರತದ ಮೊದಲ ಪ್ಯಾರಾ ಬ್ಯಾಡ್ಮಿಂಟನ್ ಆಟಗಾರ್ತಿಯರು ಎನಿಸಿಕೊಂಡಿದ್ದಾರೆ. ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಈ ಕುರಿತು ಮಾಹಿತಿ ನೀಡಿದೆ.

ಇವರಿಬ್ಬರು ಎಸ್‌ಎಲ್3–ಎಸ್‌ಯು5 ಮಹಿಳಾ ಡಬಲ್ಸ್ ವಿಭಾಗದಲ್ಲಿ ಈ ಜೋಡಿ ಅರ್ಹತೆ ಗಳಿಸಿದ್ದಾರೆ.

ಪಲಕ್ (18 ವರ್ಷ) ಟೋಕಿಯೊ ಟಿಕೆಟ್ ಗಳಿಸಿದ ವಿಶ್ವದ ಅತಿ ಕಿರಿಯ ಪ್ಯಾರಾ ಬ್ಯಾಡ್ಮಿಂಟನ್ ಆಟಗಾರ್ತಿ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹530
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹532

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1560)
ಸೋಯಾ (ರಿಫೈನ್ಡ್)	₹1437 (1450)
ಸೂರ್ಯಕಾಂತಿ (ರಿಫೈನ್ಡ್)	₹1660 (1660)
ಪಾಮೋಲಿನ್	₹1325 (1343)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹200-370
ದ್ವಿತಳಿ (ಬಿ.ವಿ)	₹295-405

ನಾಳೆಯಿಂದ ಚಿನ್ನದ ಬಾಂಡ್‌ನ 2ನೇ ಕಂತು: ನೀಡಿಕೆ ಬೆಲೆ ಗ್ರಾಂಗೆ ₹ 4,842

ಮುಂಬೈ (ಪಿಟಿಐ): 2021–22ನೇ ಸಾಲಿನ ಚಿನ್ನದ ಬಾಂಡ್‌ನ ಎರಡನೇ ಕಂತು ಸೋಮವಾರ ಆರಂಭವಾಗಲಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೀಡಿಕೆ ಬೆಲೆಯನ್ನು ಪ್ರತಿ ಗ್ರಾಂಗೆ ₹ 4,842ರಷ್ಟು ನಿಗದಿಪಡಿಸಿದೆ.

ಬಾಂಡ್ ಖರೀದಿಸಲು ಆನ್‌ಲೈನ್ ಮೂಲಕ ಹಣ ಪಾವತಿಸುವವರಿಗೆ ಪ್ರತಿ ಗ್ರಾಂಗೆ ₹ 50ರಂತೆ ವಿನಾಯಿತಿ ಸಿಗಲಿದೆ. ಹೀಗಾಗಿ ಇಂತಹ ಹೂಡಿಕೆದಾರರಿಗೆ ನೀಡಿಕೆ ಬೆಲೆ ₹ 4,792 ಇರಲಿದೆ.

ಸೋಮವಾರದಿಂದ ಶುಕ್ರವಾರದವರೆಗೆ ಬಾಂಡ್ ಖರೀದಿಸಲು ಅವಕಾಶ ಇರಲಿದೆ. ಮೇ 25ರಂದು ಬಾಂಡ್ ವಿತರಣೆ ಆಗಲಿದೆ.



ಬ್ಯಾಂಕುಗಳು (ಕಿರು ಹಣಕಾಸು ಬ್ಯಾಂಕ್ ಮತ್ತು ಪೇಮೆಂಟ್ ಬ್ಯಾಕ್ಸ್ ಹೊರತುಪಡಿಸಿ), ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ, ಅಂಚೆ ಕಚೇರಿ, ಬಿಎಸ್‌ಇ ಮತ್ತು ಎನ್‌ಎಸ್‌ಇ ಮೂಲಕ ಚಿನ್ನದ ಬಾಂಡ್ ಮಾರಾಟ ನಡೆಯಲಿದೆ.

ಕನಿಷ್ಠ ಹೂಡಿಕೆ 1 ಗ್ರಾಂ ಇರಲಿದೆ. ವೈಯಕ್ತಿಕ ಖರೀದಿದಾರರಿಗೆ ಮತ್ತು ಹಿಂದೂ ಅವಿಭಕ್ತ ಕುಟುಂಬಕ್ಕೆ 4 ಕೆ.ಜಿ ಹಾಗೂ ಟ್ರಸ್ಟ್‌ಗಳಿಗೆ 20 ಕೆ.ಜಿಯ ಗರಿಷ್ಠ ಮಿತಿ ನೀಡಲಾಗಿದೆ.

ಮೇ ತಿಂಗಳಿನಿಂದ ಸೆಪ್ಟೆಂಬರ್‌ವರೆಗಿನ ಅವಧಿಯಲ್ಲಿ ಒಟ್ಟು ಆರು ಕಂತುಗಳಲ್ಲಿ ಚಿನ್ನದ ಬಾಂಡ್ ವಿತರಣೆ ನಡೆಯಲಿದೆ ಎಂದು ಆರ್‌ಬಿಐ ಹೇಳಿದೆ.

ಭೌತಿಕ ರೂಪದ ಚಿನ್ನದ ಬೇಡಿಕೆ ತಗ್ಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು 2015ರಲ್ಲಿ ಚಿನ್ನದ ಬಾಂಡ್ ಯೋಜನೆ ಜಾರಿಗೆ ತಂದಿತ್ತು.

ಉಚಿತ ಸೇವಾ ಅವಧಿ ವಿಸ್ತರಣೆ: ಹುಂಡೈ

ಬೆಂಗಳೂರು: ಕೋವಿಡ್–19 ಸಂದರ್ಭದಲ್ಲಿ ಗ್ರಾಹಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಲಾಕ್‌ಡೌನ್ ಇರುವ ನಗರಗಳು ಮತ್ತು ರಾಜ್ಯಗಳಲ್ಲಿನ ಗ್ರಾಹಕರಿಗೆ ವಾರಂಟಿ ಮತ್ತು ಉಚಿತ ಸೇವೆಗಳ ಅವಧಿಯನ್ನು ಎರಡು ತಿಂಗಳವರೆಗೆ ವಿಸ್ತರಣೆ ಮಾಡಿರುವುದಾಗಿ ಹುಂಡೈ ಮೋಟರ್ ಇಂಡಿಯಾ ಕಂಪನಿ ತಿಳಿಸಿದೆ.

ಹುಂಡೈ ಕಂಪನಿಯು ತನ್ನೆಲ್ಲಾ ಗ್ರಾಹಕರಿಗೆ ತುರ್ತು ಸಂದರ್ಭಗಳಲ್ಲಿ ಸಹಾಯ ಮಾಡಲು 24X7 ರಸ್ತೆ ಬದಿಯ ನೆರವು ಕಾರ್ಯಕ್ರಮವನ್ನೂ ಹಮ್ಮಿಕೊಂಡಿದೆ ಎಂದು ಕಂಪನಿಯ ಮಾರುಕಟ್ಟೆ ಮತ್ತು ಸೇವೆಗಳ ವಿಭಾಗದ ನಿರ್ದೇಶಕ ತರುಣ್ ಗರ್ಗ್ ತಿಳಿಸಿದ್ದಾರೆ.

ಸಂಪರ್ಕ ರಹಿತ ಮತ್ತು ಡಿಜಿಟಲ್ ಸೇವೆಗಳನ್ನು ನೀಡಲಾಗುತ್ತಿದೆ. ಆನ್‌ಲೈನ್ ಸರ್ವಿಸ್ ಬುಕಿಂಗ್, ವಾಹನದ ಸ್ಥಿತಿಯ ಅಪ್‌ಡೇಟ್, ಆನ್‌ಲೈನ್ ಪಾವತಿ ವ್ಯವಸ್ಥೆ ಹಾಗೂ ಮನೆ ಅಥವಾ ಕಚೇರಿಯಿಂದ ವಾಹನವನ್ನು ಕೊಂಡೊಯ್ಯುವ ಮತ್ತು ತಂದುಬಿಡುವ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದರು.

ಹೂಡಿಕೆದಾರರ ಸಂಪತ್ತು ₹ 7.45 ಲಕ್ಷ ಕೋಟಿ ವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಷೇರುಪೇಟೆಗಳ ವಾರದ ವಹಿವಾಟು ಸಕಾರಾತ್ಮಕವಾಗಿ ಅಂತ್ಯವಾಗಿದೆ. ಹೂಡಿಕೆದಾರರ ಸಂಪತ್ತು ₹ 7.45 ಲಕ್ಷ ಕೋಟಿಗಳಷ್ಟು ಹೆಚ್ಚಾಗಿದೆ. ಇದರಿಂದಾಗಿ ಮುಂಬೈ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ₹ 218.05 ಲಕ್ಷ ಕೋಟಿಗಳಿಗೆ ಏರಿಕೆಯಾಗಿದೆ.

ಕೋವಿಡ್–19 ಪ್ರಕರಣಗಳು ಕಡಿಮೆ ಆಗುತ್ತಿರುವುದು ಹಾಗೂ ಕಂಪನಿಗಳ ತ್ರೈಮಾಸಿಕ ಫಲಿತಾಂಶವು ಮಾರುಕಟ್ಟೆಯ ನಿರೀಕ್ಷೆಗೆ ಅನುಗುಣವಾಗಿ ಇರುವುದು ಸಕಾರಾತ್ಮಕ ವಹಿವಾಟಿಗೆ ಕಾರಣವಾಗಿವೆ.

2020–21ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಪ್ರಮುಖ ಕಂಪನಿಗಳ ಹಣಕಾಸು ಸಾಧನೆಯು ಮಾರುಕಟ್ಟೆಯ ನಿರೀಕ್ಷೆಯಂತೆಯೇ ಉತ್ತಮವಾಗಿದೆ. ಇದು ಆಯಾ ಕಂಪನಿಗಳ ಷೇರುಗಳ ಬೆಲೆಯಲ್ಲಿ ಏರಿಕೆಗೆ ಕಾರಣವಾಗುತ್ತಿದೆ. ಮುಖ್ಯವಾಗಿ ನಿಫ್ಟಿ ಮಿಡ್‌ಕ್ಯಾಪ್ ಸೂಚ್ಯಂಕವು ಮೇ ತಿಂಗಳಿನಲ್ಲಿ ಇದುವರೆಗೆ ಶೇ 4.5ರಷ್ಟು ಏರಿಕೆ ಕಂಡಿವೆ. ಆದರೆ ನಿಫ್ಟಿ ಸೂಚ್ಯಂಕವು ಶೇ 2ರಷ್ಟು ಮಾತ್ರವೇ ಏರಿಕೆಯಾಗಿದೆ. ಈ ಪ್ರವೃತ್ತಿಯು ಮುಂದುವರಿಯುವ ಸಾಧ್ಯತೆ ಇದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವೀಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಮಾರುಕಟ್ಟೆಯಲ್ಲಿ ಸದ್ಯ, ಬ್ಯಾಂಕಿಂಗ್ ವಲಯವು ದುರ್ಬಲ ಆಗಿದೆ. ಕೋವಿಡ್ ಸಾಂಕ್ರಾಮಿಕದಿಂದಾಗಿ ವಸೂಲಾಗದ ಸಾಲ (ಎನ್‌ಪಿಎ) ಹೆಚ್ಚಾಗುವ ಆತಂಕ ಮತ್ತು ಸಾಲ ನೀಡಿಕೆಯಲ್ಲಿನ ನಿಧಾನಗತಿಯ ಬೆಳವಣಿಗೆಯು ಉತ್ತಮ ಬ್ಯಾಂಕ್‌ಗಳ ಷೇರುಗಳನ್ನೂ ಸಹ ಒತ್ತಡಕ್ಕೆ ಸಿಲುಕುವಂತೆ ಮಾಡಿವೆ ಎಂದು ಅವರು ತಿಳಿಸಿದ್ದಾರೆ. ಸರ್ಕಾರಿ ಸಾಲಪತ್ರಗಳ ಮೇ ತಿಂಗಳ ವಾಯಿದಾ ವಹಿವಾಟು ಗುರುವಾರ ಮುಕ್ತಾಯ ಆಗಲಿದ್ದು, ಷೇರುಪೇಟೆಯ ವಹಿವಾಟಿನಲ್ಲಿ ಹೆಚ್ಚಿನ ಏರಿಳಿತ ಉಂಟುಮಾಡುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ.

ವಾರದ ವಹಿವಾಟಿನಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು 46 ಪೈಸೆಗಳಷ್ಟು ಏರಿಕೆ ಕಂಡಿದೆ.

ಮುಂಬೈ ಧಾರಣೆ

ಶೇಂಗಾ

22-5-2021

ಜಾವಾ 70/80(ಹೊಸ)	9700-9750
ಜಾವಾ 80/90(ಹೊಸ)	9200-9250
ದಪ್ಪ ಮಧ್ಯಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	9350-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1570)
ಒಂದು ವಾರದ ಡೆಲಿವರಿ	1555 (1565)
ಸೋಯಾ ಕಚ್ಚಾ	1400 (1400)
ಪಾಮ್ ವಾರದ ಡೆಲಿವರಿ	1323 (1341)
ಸೂರ್ಯಕಾಂತಿ ಎಣ್ಣೆ ಕಚ್ಚಾ	1620 (1620)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,300 (48,400)
ಬೆಳ್ಳಿ ಕೆ.ಜಿ 71,000 (71,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ತಾಲೀಮು ಆರಂಭಿಸಿದ ಭಾರತ

ಫುಟ್‌ಬಾಲ್: ವಿಶ್ವಕಪ್, ಏಷ್ಯಾಕಪ್ ಜಂಟಿ ಅರ್ಹತಾ ಟೂರ್ನಿ

ನವದೆಹಲಿ (ಪಿಟಿಐ) :2022ರ ವಿಶ್ವಕಪ್ ಹಾಗೂ 2023ರ ಏಷ್ಯಾಕಪ್ ಜಂಟಿ ಅರ್ಹತಾ ಟೂರ್ನಿಯ ಪಂದ್ಯಗಳಲ್ಲಿ ಪಾಲ್ಗೊಳ್ಳಲು ಕತಾರ್‌ಗೆ ತೆರಳಿರುವ ಭಾರತ ಫುಟ್‌ಬಾಲ್ ತಂಡದ ಆಟಗಾರರು ಕೋವಿಡ್ ಪರೀಕ್ಷೆಗೆ ಒಳಗಾಗಿದ್ದು, ಎಲ್ಲರ ವರದಿ ‘ನೆಗೆಟಿವ್’ ಬಂದಿದೆ. ಹೀಗಾಗಿ ಮುಂದಿನ ತಿಂಗಳು ಆರಂಭವಾಗಲಿರುವ ಪಂದ್ಯಗಳಿಗೆ ಶನಿವಾರ ಅವರು ತಾಲೀಮು ಆರಂಭಿಸಿದರು.

ಭಾರತ ತಂಡದ ಆಟಗಾರರು ಬುಧವಾರ ದೋಹಾ ತಲುಪಿದ್ದರು. ಕೋವಿಡ್–19ಕ್ಕೆ ಸಂಬಂಧಿಸಿದ ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಒಳಗಾದ ನಂತರ ಫಲಿತಾಂಶಕ್ಕಾಗಿ ಕಾಯುತ್ತಿದ್ದರು.

‘ಎಲ್ಲ 28 ಆಟಗಾರರು ಹಾಗೂ ನೆರವು ಸಿಬ್ಬಂದಿಯ ಪರೀಕ್ಷೆಯ ವರದಿ ನೆಗೆಟಿವ್ ಬಂದಿದೆ’ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ (ಎಐಎಫ್‌ಎಫ್) ಪ್ರಧಾನ ಕಾರ್ಯದರ್ಶಿ ಕುಶಲ್ ದಾಸ್ ಹೇಳಿದ್ದಾರೆ.

ಕೋವಿಡ್‌ನಿಂದ ಚೇತರಿಸಿಕೊಂಡಿರುವ ನಾಯಕ ಸುನಿಲ್ ಚೆಟ್ರಿ ಮರಳಿದ್ದರಿಂದ ತಂಡದ ಬಲ ವೃದ್ಧಿಸಿದೆ. ಜೂನ್ 3ರಂದು ನಡೆಯುವ ಆತಿಥೇಯ ಕತಾರ್ ಎದುರಿನ ಪಂದ್ಯಕ್ಕೂ ಮೊದಲು ಬಬಯೋಬಬಲ್‌ನಲ್ಲಿ ಪೂರ್ವಸಿದ್ಧತಾ ಶಿಬಿರದಲ್ಲಿ ಭಾರತದ ಆಟಗಾರರು ಪಾಲ್ಗೊಳ್ಳಲಿದ್ದಾರೆ. ಜೂನ್ 7ರಂದು ಬಾಂಗ್ಲಾದೇಶ ಎದುರು, 15ರಂದು ಅಫ್ಗಾನಿಸ್ತಾನ ವಿರುದ್ಧ ಪಂದ್ಯಗಳು ನಿಗದಿಯಾಗಿವೆ.



ಕೋಚ್ ಇಗರ್ ಸ್ಟಿಮ್ಯಾಚ್ ನೇತೃತ್ವದಲ್ಲಿ ತರಬೇತಿ ನಿರತ ಭಾರತ ಫುಟ್‌ಬಾಲ್ ತಂಡದ ಆಟಗಾರರು– ಎಐಎಫ್‌ಎಫ್ ಟ್ವಿಟರ್ ಚಿತ್ರ

‘ಮುಂದಿನ ಸವಾಲುಗಳಿಗೆ ಸಿದ್ಧ. ಭಾರತದ ಆಟಗಾರರ ಮೊದಲ ಅವಧಿಯ ತರಬೇತಿಯು ದೋಹಾದಲ್ಲಿ ಆರಂಭವಾಗಿದೆ’ ಎಂದು ಎಐಎಫ್‌ಎಫ್ ಟ್ವೀಟ್ ಮಾಡಿದೆ. ಇದರೊಂದಿಗೆ ಮುಖ್ಯ ಕೋಚ್ ಇಗರ್ ಸ್ಟಿಮ್ಯಾಚ್ ಅವರ ನೇತೃತ್ವದಲ್ಲಿ ತಂಡವು ಅಭ್ಯಾಸನಿರತವಾಗಿರುವ ಚಿತ್ರವನ್ನು ಹಂಚಿಕೊಂಡಿದೆ.

ಟೂರ್ನಿಯ ‘ಇ’ ಗುಂಪಿನಲ್ಲಿ ಭಾರತ ತಂಡವು ನಾಲ್ಕನೇ ಸ್ಥಾನದಲ್ಲಿದ್ದು, ವಿಶ್ವಕಪ್ ಅರ್ಹತೆಯ ಅವಕಾಶವನ್ನು ಈಗಾಗಲೇ ಕಳೆದುಕೊಂಡಿದೆ. ಆದರೆ ಚೀನಾದಲ್ಲಿ 2023ರಲ್ಲಿ ನಡೆಯುವ ಏಷ್ಯಾಕಪ್ ಟೂರ್ನಿಗೆ ಅರ್ಹತೆ ಪಡೆಯಲು ಸ್ಪರ್ಧಿಸಲಿದೆ.

ಲಾಂಗ್‌ಜಂಪ್: ವಿದೇಶದಲ್ಲಿ ಸ್ಪರ್ಧೆಗೆ ಶ್ರೀಶಂಕರ್ ಕಾತರ

ಮುಂಬೈ (ಪಿಟಿಐ): ಫೆಡರೇಷನ್ ಕಪ್ ಕ್ರೀಡಾಕೂಟದಲ್ಲಿ ಗಳಿಸಿದ ಅನುಭವದ ಆಧಾರದಲ್ಲಿ ಅಭ್ಯಾಸ ಮಾಡುತ್ತಿದ್ದು ವಿದೇಶದಲ್ಲಿ ಯಾವುದಾದರೂ ಕೂಟದಲ್ಲಿ ಪಾಲ್ಗೊಳ್ಳಲು ಕಾತರನಾಗಿರುವುದಾಗಿ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ಲಾಂಗ್‌ಜಂಪ್ ಪಟು ಮುರಳಿ ಶ್ರೀಶಂಕರ್ ತಿಳಿಸಿದ್ದಾರೆ.

ಕೇರಳದ 22 ವರ್ಷದ ಶ್ರೀಶಂಕರ್ ಮಾರ್ಚ್‌ನಲ್ಲಿ ಪಟಿಯಾಲದಲ್ಲಿ ನಡೆದ ಫೆಡರೇಷನ್ ಕಪ್ ಕೂಟದಲ್ಲಿ 8.26 ಮೀಟರ್ ದೂರ ಜಿಗಿದು ತಮ್ಮದೇ ರಾಷ್ಟ್ರೀಯ ದಾಖಲೆ ಮುರಿಯುವುದರೊಂದಿಗೆ ಒಲಿಂಪಿಕ್ಸ್‌ಗೆ ಆಯ್ಕೆಯಾಗಿದ್ದರು.

‘ಫೆಡರೇಷನ್ ಕಪ್ ಮುಗಿದ ಕೂಡಲೇ ನಾನು ಮತ್ತು ಕೋಚ್ ಕುಳಿತು ಚರ್ಚಿಸಿ ಎಲ್ಲ ದೌರ್ಬಲ್ಯಗಳನ್ನು ಪಟ್ಟಿ ಮಾಡಿದೆವು. ತಾಂತ್ರಿಕವಾಗಿ ಯಾವ ರೀತಿಯ ಸಮಸ್ಯೆಗಳಿಗೆ ಎಂಬುದನ್ನು ತಿಳಿದುಕೊಳ್ಳುವ ಪ್ರಯತ್ನ ನಡೆಸಿದೆವು. ಅದರ ಆಧಾರದಲ್ಲಿ ಈಗ ಅಭ್ಯಾಸ ನಡೆಯುತ್ತಿದೆ’ ಎಂದು ಭಾರತ ಕ್ರೀಡಾ ಪ್ರಾಧಿಕಾರ ಶನಿವಾರ ಆಯೋಜಿಸಿದ್ದ ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ಅವರು ತಿಳಿಸಿದ್ದಾರೆ.

‘ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದೆ. ಆದರೆ ಭಾರತದ ಅಥ್ಲೀಟ್‌ಗಳಿಗೆ ವಿದೇಶ ಪ್ರಯಾಣ ನಿರ್ಬಂಧಗಳಿರುವುದರಿಂದ ದೇಶದಿಂದ ಹೊರಗೆ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳಲು ಅಗುತ್ತಿಲ್ಲ ಎಂಬ ಕೊರಗು ಕಾಡುತ್ತಿದೆ. ಈ ಸವಾಲು ಮೀರಿ ಮುಂದೆ ಸಾಗಬೇಕಾಗಿದೆ’ ಎಂದರು.

ಸಂಕ್ಷಿಪ್ತ ಸುದ್ದಿ

ಎಫ್‌ಐಎಚ್ ಅಧ್ಯಕ್ಷರಾಗಿ ಬಾತ್ರಾ ಪುನರಾಯ್ಕೆ



ನರಿಂದರ್ ಬಾತ್ರಾ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಅಧ್ಯಕ್ಷರಾಗಿ ನರಿಂದರ್ ಬಾತ್ರಾ ಪುನರಾಯ್ಕೆಯಾಗಿದ್ದಾರೆ. ಶನಿವಾರ ವರ್ಚುವಲ್ ಆಗಿ ನಡೆದ ಫೆಡರೇಷನ್‌ನ 47ನೇ ಸಮಾವೇಶದಲ್ಲಿ ಆಯ್ಕೆ ನಡೆಯಿತು. ಅವರ ಅಧಿಕಾರ ಅವಧಿ 2024ರ ವರೆಗೆ ಇರುತ್ತದೆ.

ಭಾರತ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷರೂ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಸದಸ್ಯರೂ ಆಗಿರುವ ಬಾತ್ರಾ ಪ್ರತಿಸ್ಪರ್ಧಿ ಬೆಲ್ಜಿಯಂ ಹಾಕಿ ಫೆಡರೇಷನ್‌ನ ಅಧ್ಯಕ್ಷ ಮಾರ್ಕ್ ಕೊಡ್ರಾನ್ ಎರಡು ಮತಗಳಿಂದ ಮಣಿಸಿದರು.

ಆನ್‌ಲೈನ್ ಮೂಲಕ ನಡೆದ ಮತದಾನದಲ್ಲಿ 124 ಸದಸ್ಯ ಸಂಸ್ಥೆಗಳು ಪಾಲ್ಗೊಂಡಿದ್ದವು. ಬಾತ್ರಾ ಅವರಿಗೆ 63 ಮತಗಳು ಲಭಿಸಿದ್ದವು.

148 ಅಥ್ಲೀಟ್‌ಗಳಿಗೆ ಲಸಿಕೆ: ಒಲಿಂಪಿಕ್ಸ್‌ಗೆ ಅರ್ಹತೆ ಪಡೆದವರು ಸೇರಿದಂತೆ ದೇಶದ 148 ಕ್ರೀಡಾಪಟುಗಳು ಕೋವಿಡ್–19 ಲಸಿಕೆ ಪಡೆದುಕೊಂಡಿದ್ದಾರೆ ಎಂದು ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಅಧ್ಯಕ್ಷ ನರೀಂದರ್ ಬಾತ್ರಾ ತಿಳಿಸಿದ್ದಾರೆ.

‘148ರ ಪೈಕಿ 17 ಮಂದಿ ಎರಡನೇ ಡೋಸ್ ಸ್ವೀಕರಿಸಿದ್ದರೆ, 131 ಅಥ್ಲೀಟ್‌ಗಳು ಮೊದಲ ಡೋಸ್ ಪಡೆದುಕೊಂಡಿದ್ದಾರೆ‘ ಎಂದು ಬಾತ್ರಾ ಮಾಹಿತಿ ನೀಡಿದರು.

ಟೋಕಿಯೊ ಪ್ಯಾರಾಲಿಂಪಿಕ್ಸ್‌ಗೆ ತೆರಳಲಿರುವ 13 ಅಥ್ಲೀಟ್‌ಗಳಿಗೂ ಲಸಿಕೆಯ ಮೊದಲ ಡೋಸ್ ನೀಡಲಾಗಿದೆ.

ಇದುವರೆಗೆ ಭಾರತದ 90ಕ್ಕೂ ಹೆಚ್ಚು ಅಥ್ಲೀಟ್‌ಗಳು ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದಾರೆ.

ಫುಟ್‌ಬಾಲ್ ಆಟಗಾರ ಸುಸೈನಾಥನ್ ನಿಧನ

ಬೆಂಗಳೂರು: ರಾಷ್ಟ್ರೀಯ ಜೂನಿಯರ್ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಸುಸೈನಾಥನ್ (63) ನಗರದ ಪಿಳ್ಳಣ್ಣ ಗಾರ್ಡನ್‌ನಲ್ಲಿರುವ ನಿವಾಸದಲ್ಲಿ ಶುಕ್ರವಾರ ರಾತ್ರಿ ನಿಧನರಾದರು ಎಂದು ಬಿಡಿಎಫ್‌ಎ ತಿಳಿಸಿದೆ. ಅವರಿಗೆ ಮೂವರು ಪುತ್ರರಿದ್ದಾರೆ.



ಸುಸೈನಾಥನ್

ಯಂಗ್ ಜೆಮ್ಸ್ ಎಫ್‌ಸಿ, 515ಎಬಿಡಬ್ಲ್ಯುಎಸ್ ಎಫ್‌ಸಿ, ಪಿ ಆ್ಯಂಡ್ ಟಿ–ಐಟಿಐ ಜೂನಿಯರ್ ಕ್ಲಬ್‌ಗಳಲ್ಲಿ ಆಡಿದ್ದ ಅವರು 1977ರಲ್ಲಿ ಕೋಲ್ಕತ್ತದಲ್ಲಿ ನಡೆದ ಬಿ.ಸಿ.ರಾಯ್ ಟ್ರೋಫಿ ಟೂರ್ನಿಯಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿದ್ದರು.

1983ರಲ್ಲಿ ಶ್ರೀನಗರದಲ್ಲಿ ನಡೆದ ಅಖಿಲ ಭಾರತ ಫುಟ್‌ಬಾಲ್ ಟೂರ್ನಿಯಲ್ಲಿ ಆಡಿದ್ದ ಬಿಡಿಎಫ್‌ಎ ಇಲೆವನ್ ತಂಡದಲ್ಲಿ ಅವರಿದ್ದರು. ಆಗ ತಂಡ ಸೆಮಿಫೈನಲ್ ತಲುಪಿತ್ತು.



